ಭಾನುವಾರ, ಜುಲೈ 25, 2021 | ಬೆಂಗಳೂರು | ₹ 6.00 | ಸಂಪುಟ 74 | ಸಂಚಿಕೆ 206 | ಪುಟ 26
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಭಾನುವಾರದ ಪುರವಣಿ
ಹಲವು ದೇಶಗಳನ್ನು ಸುತ್ತಿ ಮಾನವೀಯ ಬಿಂಬಗಳನ್ನು ಸೆರೆ ಹಿಡಿದಿದ್ದ ದೇಶದ ಅಸಾಮಾನ್ಯ ಛಾಯಾಗ್ರಾಹಕ ದಾನಿಶ್ ಸಿದ್ದಿಕಿ ಅವರ ಸಾಹಸಗಾಥೆ

ಜಮ್ಮು-ಕಾಶ್ಮೀರ, ದೆಹಲಿಯಲ್ಲಿ ಸಿಬಿಐ ದಾಳಿ 15
ಸಿದ್ದರಾಮಯ್ಯ, ಡಿಕೆಶಿ ಹೊರಗಿಟ್ಟು ಸಭೆ 12
ಮುಖ್ಯಮಂತ್ರಿ ಯಡಿಯೂರಪ್ಪ ಅಳಲು
‘ನೆಮ್ಮದಿಯ ಆಡಳಿತ ನಡೆಸಲು ಸಾಧ್ಯವಾಗಲಿಲ್ಲ’ 12



‘ಸಕ್ರಮ’ದ ಹೆಸರಲ್ಲಿ ‘ಅಕ್ರಮ’

• ವಿ.ಎಸ್. ಸುಬ್ರಹ್ಮಣ್ಯ

ಒಳನೋಟ
ಗಣಿ ಕಂಪನ
ಪ್ರತಿಕ್ರಿಯಿಸಿ: 9606038256
feedback@prajavani.co.in

ಬೆಂಗಳೂರು: ರಾಜ್ಯದಲ್ಲಿ ಸುಮಾರು ಒಂದು ದಶಕದಷ್ಟು ಕಾಲ ಸ್ಥಗಿತವಾಗಿದ್ದ ಕಬ್ಬಿಣದ ಅದಿರು ಗಣಿಗಾರಿಕೆ, ಈಗ ಬಿಗಿ ಕಣ್ಗಾವಲಿನ ನಡುವೆ ಬಹುತೇಕ ಪೂರ್ಣ ಪ್ರಮಾಣದಲ್ಲಿ ಆರಂಭವಾಗಿದೆ. ಆದರೆ, ಕಬ್ಬಿಣದ ಅದಿರು ಗಣಿಗಾರಿಕೆ ನಿಯಂತ್ರಣಕ್ಕೆ ಬಂದ ಬೆನ್ನಲ್ಲೇ ಕಟ್ಟಡ ಕಲ್ಲು, ಗ್ರಾನೈಟ್ ಮತ್ತು ಮರಳು ಗಣಿಗಾರಿಕೆಯಲ್ಲಿ ಅಕ್ರಮ ಹೆಚ್ಚಿದೆ. ರಾಜ್ಯದ ಉದ್ದಗಲಕ್ಕೂ ಆರ್ಭಟಿಸುತ್ತಿರುವ ‘ಅಕ್ರಮ ಗಣಿ ಮಾಫಿಯಾ’ದ ಜತೆ ರಾಜಕೀಯ ಪ್ರಭಾವವೂ ಮೇಳೈಸಿಕೊಂಡು ಸರ್ಕಾರವನ್ನೇ ಅಸಹಾಯಕ ಸ್ಥಿತಿಗೆ ತಂದು ನಿಲ್ಲಿಸಿವೆ!

ಈ ವರ್ಷದ ಜನವರಿ 22ರ ರಾತ್ರಿ ಶಿವಮೊಗ್ಗ ಜಿಲ್ಲೆಯ ಹುಣಸೋಡು ಬಳಿ ಕ್ರಷರ್‌ವೊಂದಕ್ಕೆ ತಂದಿದ್ದ ಜಿಲೆಟಿನ್ ಸೇರಿದಂತೆ ಸ್ಫೋಟಕ ತುಂಬಿದ್ದ ಲಾರಿ ಸ್ಫೋಟವಾಗಿ ಆರು ಮಂದಿ ಮೃತಪಟ್ಟು, ಹಲವರು ಕಣ್ಮರೆಯಾಗಿದ್ದರು. ಫೆಬ್ರುವರಿ 21ರ ರಾತ್ರಿ ಚಿಕ್ಕಬಳ್ಳಾಪುರ ಜಿಲ್ಲೆಯ ನಾಗವಲ್ಲಿ ಬೆಟ್ಟದಲ್ಲಿ ಕಲ್ಲು ಗಣಿಯೊಂದರಲ್ಲಿದ್ದ ಸ್ಫೋಟಕ ಸಾಗಿಸುವಾಗ ಸಿಡಿದು ಆರು ಮಂದಿ ಸಾವಿಗೀಡಾಗಿದ್ದರು. ಆಗ, ರಾಜ್ಯದಲ್ಲಿ ಅಕ್ರಮ ಗಣಿಗಾರಿಕೆ ಕುರಿತು ಬಿರುಸಿನ ಚರ್ಚೆ ನಡೆದಿತ್ತು. ಬಿಗಿ ಕ್ರಮಗಳ ಭರವಸೆಯ ಜತೆಗೆ ಅಲ್ಲಲ್ಲಿ ಅನುಷ್ಠಾನವೂ ಆರಂಭವಾಗಿತ್ತು.

ಆದರೆ, ಕೆಲವೇ ತಿಂಗಳುಗಳಲ್ಲಿ ಮತ್ತೆ ಅಕ್ರಮ ಗಣಿಗಾರಿಕೆ ಚಟುವಟಿಕೆ ಜೋರಾಗಿ ಆರ್ಭಟಿಸಲಾರಂಭಿಸಿದೆ. ಮಂಡ್ಯದ ಕೃಷ್ಣರಾಜ ಸಾಗರ (ಕೆಆರ್‌ಎಸ್) ಅಣೆಕಟ್ಟೆಯಿಂದ ಕೆಲವೇ ಕಿಲೋಮೀಟರ್‌ಗಳಷ್ಟು ದೂರವಿರುವ ಬೇಬಿಬೆಟ್ಟದಲ್ಲಿ ನಡೆಯುತ್ತಿರುವ ಕಲ್ಲು ಗಣಿಗಾರಿಕೆಯಲ್ಲಿನ ಅಕ್ರಮಗಳ ಕುರಿತು ಸ್ಥಳೀಯ ಸಂಸದೆ ಸುಮಲತಾ ಅಂಬರೀಷ್ ಎತ್ತಿರುವ ಪ್ರಶ್ನೆಯಿಂದಾಗಿ ಮತ್ತೆ ‘ಅಕ್ರಮ ಗಣಿಗಾರಿಕೆ’ಯ ಚರ್ಚೆ ಮುನ್ನೆಲೆಗೆ ಬಂದಿದೆ.

7ನೇ ಪುಟ ನೋಡಿ

ವಿಡಿಯೋ ನೋಡಲು ಈ ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ಅಕ್ರಮಕ್ಕೆ ಎಂ–ಸ್ಯಾಂಡ್ ನಂಟು

ರಾಜ್ಯದಲ್ಲಿ 120ಕ್ಕೂ ಹೆಚ್ಚು ಕ್ರಷರ್‌ಗಳು ಮತ್ತು 100ಕ್ಕೂ ಹೆಚ್ಚು ಎಂ–ಸ್ಯಾಂಡ್ ಘಟಕಗಳಿವೆ. ಅವುಗಳಲ್ಲಿ ಬಹುತೇಕ ಘಟಕಗಳಿಗೆ ರಾಜಕಾರಣಿಗಳೇ ಮಾಲೀಕರು. ಉಳಿದ ಕೆಲವೆಡೆ ಬೇನಾಮಿ ಹೆಸರುಗಳಲ್ಲಿ ಘಟಕಗಳನ್ನು ತೆರೆದಿದ್ದಾರೆ.

‘ಕ್ರಷರ್ ಮತ್ತು ಎಂ–ಸ್ಯಾಂಡ್ ಘಟಕಗಳಲ್ಲಿನ ಒಟ್ಟು ಉತ್ಪಾದನೆ ಮೇಲೆ ನಿಗಾ ಇಡುವ ವ್ಯವಸ್ಥೆಯೇ ಇಲ್ಲ. ಅಲ್ಲಿಗೆ ಯಾವ ಮೂಲದಿಂದ ಕಲ್ಲು ಪೂರೈಸಲಾಗುತ್ತಿದೆ ಎಂಬುದನ್ನು ಪತ್ತೆ ಮಾಡಿದರೆ ಅಕ್ರಮ ಗಣಿಗಾರಿಕೆಗೆ ಕಡಿವಾಣ ಹಾಕಲು ಸಾಧ್ಯ. ಅಲ್ಲದೇ ಸರಿಯಾದ ತಪಾಸಣೆ ನಡೆಸಿದರೆ ರಾಜ್ಯದ ಬೊಕ್ಕಸಕ್ಕೆ ನೂರಾರು ಕೋಟಿ ರೂಪಾಯಿ ರಾಜಧನ, ತೆರಿಗೆ, ಮೇಲುಸುಂಕ ಸಂದಾಯವಾಗುತ್ತದೆ’ ಎನ್ನುತ್ತಾರೆ ಡಾ.ಯು.ವಿ. ಸಿಂಗ್.

ದೇವನಹಳ್ಳಿ ತಾಲ್ಲೂಕಿನ ಕುಂದಾಣ ಹೋಬಳಿಯಲ್ಲಿ ನಡೆಸಲಾಗುತ್ತಿರುವ ಕಲ್ಲು ಗಣಿಗಾರಿಕೆ –ಸಾಂದರ್ಭಿಕ ಚಿತ್ರ

ದೂಳು ತಿನ್ನುತ್ತಿದೆ ಪಾಟೀಲರ ವರದಿ!

• ರಾಜೇಶ್ ರೈ ಚಟ್ಲ

ಬೆಂಗಳೂರು: ರಾಜ್ಯದಲ್ಲಿ 2006ರಿಂದ 2010ರ ಅವಧಿಯಲ್ಲಿ 2.98 ಕೋಟಿ ಟನ್‌ನಷ್ಟು ಅದಿರು ಅಕ್ರಮವಾಗಿ ರಫ್ತಾಗಿ, ಬೊಕ್ಕಸಕ್ಕೆ ₹ 12,228 ಕೋಟಿ ನಷ್ಟ ಉಂಟಾಗಿದೆ ಎಂದು ಲೋಕಾಯುಕ್ತ ವರದಿಯಲ್ಲಿ ಅಂದಾಜಿಸಲಾಗಿದೆ. ಆದರೆ, ಅಕ್ರಮವಾಗಿ 35 ಕೋಟಿ ಟನ್ ಸಾಗಣೆಯಾಗಿ ₹ 1.50 ಲಕ್ಷ ಕೋಟಿ ನಷ್ಟ ಉಂಟಾಗಿದೆ ಎಂದು ಸಿದ್ದರಾಮಯ್ಯ ಸರ್ಕಾರದಲ್ಲಿ ಸಚಿವರಾಗಿದ್ದ ಎಚ್.ಕೆ. ಪಾಟೀಲರ ನೇತೃತ್ವದ ಸಂಪುಟ ಉಪ ಸಮಿತಿ ಅಂದಾಜಿಸಿತ್ತು!

ರಾಜ್ಯ ಕಂಡ ಈ ಅತೀ ದೊಡ್ಡ ಭ್ರಷ್ಟಾಚಾರ ಪ್ರಕರಣದ ಆಳ-ಅಗಲವನ್ನು ಮತ್ತಷ್ಟು ವಿಸ್ತರಿಸಿ, ಅಗಾಧ ಪ್ರಮಾಣದ ನಷ್ಟವನ್ನು ಬಹಿರಂಗಪಡಿಸಿದ್ದ ಪಾಟೀಲರ ವರದಿ ದೂಳು ತಿನ್ನುತ್ತಿದೆ.

ಬಿಜೆಪಿ ಸರ್ಕಾರದ ಅವಧಿಯಲ್ಲಿ ನಡೆದ ಅಕ್ರಮ ಗಣಿಗಾರಿಕೆ ವಿರುದ್ಧ ಸಿದ್ದರಾಮಯ್ಯ ನೇತೃತ್ವದಲ್ಲಿ ಬೆಂಗಳೂರಿನಿಂದ ಬಳ್ಳಾರಿವರೆಗೆ ಕಾಂಗ್ರೆಸ್ ನಾಯಕರು ಪಾದಯಾತ್ರೆ ನಡೆಸಿದ್ದರು. 2013ರ ವಿಧಾನಸಭೆ ಚುನಾವಣೆಯಲ್ಲಿ ಈ ವಿಚಾರವನ್ನೇ ಅಸ್ತ್ರವನ್ನಾಗಿ ಬಳಸಿಕೊಂಡಿದ್ದ ಅವರು, ‘ನಾವು ಅಧಿಕಾರಕ್ಕೆ ಬಂದರೆ ಲೋಕಾಯುಕ್ತ ವರದಿ ಆಧರಿಸಿ ತಪ್ಪಿತಸ್ಥರ ವಿರುದ್ಧ ಕ್ರಮ ತೆಗೆದುಕೊಳ್ಳುತ್ತೇವೆ. ಬೊಕ್ಕಸಕ್ಕೆ ಆಗಿರುವ ನಷ್ಟವನ್ನು ಲೂಟಿಕೋರರಿಂದ ವಸೂಲು ಮಾಡುತ್ತೇವೆ’ ಎಂದು ಸಾರಿದ್ದರು. 2013ರ ಮೇ 13ರಂದು ಸಿದ್ದರಾಮಯ್ಯ ಅಧಿಕಾರದ ಗದ್ದುಗೆ ಏರಿದರು. ಆನಂತರ ಲೋಕಾಯುಕ್ತರು ನೀಡಿದ್ದ ವರದಿಗಳಲ್ಲಿನ ಶಿಫಾರಸುಗಳ ಅನುಷ್ಠಾನ ಮತ್ತು ವಿವಿಧ ಇಲಾಖೆಗಳು ತೆಗೆದುಕೊಳ್ಳಬಹುದಾದ ಕ್ರಮಗಳ ಕುರಿತು ಮೇಲುಸ್ತುವಾರಿಗೆ ಪಾಟೀಲರ ನೇತೃತ್ವದಲ್ಲಿ ಸಂಪುಟ ಉಪ ಸಮಿತಿ ರಚಿಸಲಾಗಿತ್ತು.

7ನೇ ಪುಟ ನೋಡಿ
ಇನ್ನಷ್ಟು ಸುದ್ದಿಗಳು 7

ಧಾರ್ಮಿಕ ಸ್ಥಳಗಳಲ್ಲಿ ಸೇವೆಗೆ ಅವಕಾಶ

ಬೆಂಗಳೂರು: ದೇವಸ್ಥಾನ, ಮಸೀದಿ, ಚರ್ಚ್, ಗುರುದ್ವಾರ ಸೇರಿದಂತೆ ಎಲ್ಲ ಬಗೆಯ ಧಾರ್ಮಿಕ ಸ್ಥಳಗಳಲ್ಲಿ ಭಕ್ತರು ಸೇವೆ ಸಲ್ಲಿಸುವುದಕ್ಕೆ ಭಾನುವಾರದಿಂದ ಅವಕಾಶ ನೀಡಲಾಗಿದೆ.

ಲಾಕ್‌ಡೌನ್ ವೇಳೆ ಧಾರ್ಮಿಕ ಸ್ಥಳಗಳಿಗೆ ಭಕ್ತರ ಪ್ರವೇಶ ನಿಷೇಧಿಸಲಾಗಿತ್ತು. ದರ್ಶನಕ್ಕೆ ಸೀಮಿತಗೊಳಿಸಿ ಜುಲೈ ಮೊದಲ ವಾರ ಆದೇಶ ಹೊರಡಿಸಲಾಗಿತ್ತು. ಆದರೆ, ಯಾವುದೇ ರೀತಿಯ ಪೂಜೆ ಅಥವಾ ಸೇವೆಗೆ ಅವಕಾಶ ಇರಲಿಲ್ಲ.

‘ಕೋವಿಡ್ ಮಾರ್ಗಸೂಚಿಯನ್ನು ಪಾಲಿಸಿಕೊಂಡು ಧಾರ್ಮಿಕ ಸ್ಥಳಗಳಲ್ಲಿ ಸೇವೆಗೆ ಅವಕಾಶ ನೀಡಲಾಗಿದೆ. ಜಾತ್ರೆ, ದೇವಸ್ಥಾನದ ಹಬ್ಬಗಳು, ಮೆರವಣಿಗೆ ಮತ್ತು ಸಮಾವೇಶಗಳಿಗೆ ಅನುಮತಿ ಇಲ್ಲ’ ಎಂದು ಕಂದಾಯ ಇಲಾಖೆಯ ಪ್ರಧಾನ ಕಾರ್ಯದರ್ಶಿ ಎನ್. ಮಂಜುನಾಥ್ ಪ್ರಸಾದ ಈ ಕುರಿತ ಆದೇಶದಲ್ಲಿ ತಿಳಿಸಿದ್ದಾರೆ.

ಮನರಂಜನಾ ಪಾರ್ಕ್‌ಗಳನ್ನು ತೆರೆಯಬಹುದು. ಜಲಕ್ರೀಡೆಗೆ ಸಂಬಂಧಿಸಿದ ಯಾವುದೇ ಚಟುವಟಿಕೆಗಳನ್ನು ನಡೆಸದಂತೆ ನಿರ್ಬಂಧ ವಿಧಿಸಲಾಗಿದೆ ಎಂದು ಆದೇಶ ಹೇಳಿದೆ.

ಮೀರಾಬಾಯಿ ಚಾನು –ಎಎಫ್‌ಪಿ ಚಿತ್ರ

ಮೀರಾಬಾಯಿಗೆ ಬೆಳ್ಳಿ ಪದಕ

ಟೋಕಿಯೊ: ಮಣಿಪುರದ ಮೀರಾಬಾಯಿ ಚಾನು ಭಾರತಕ್ಕೆ ಒಲಿಂಪಿಕ್ಸ್‌ನಲ್ಲಿ ಮೊದಲ ದಿನವೇ ಪದಕ ಗೆದ್ದುಕೊಟ್ಟರು. ಮಹಿಳೆಯರ 49 ಕೆಜಿ ವಿಭಾಗದ ವೇಟ್‌ಲಿಫ್ಟಿಂಗ್‌ನಲ್ಲಿ ಅವರು ಬೆಳ್ಳಿ ಗೆದ್ದು ಸಂಭ್ರಮಿಸಿದರು. ಚೀನಾದ ಹೌ ಜಿಹುಯಿ ಚಿನ್ನದ ಪದಕ ಮತ್ತು ಇಂಡೊನೇಷ್ಯಾದ ಐಸಹಾ ವಿಂಡಿ ಕಾಂಟಿಕಾ ಕಂಚಿನ ಪದಕ ಗಳಿಸಿದರು.

ಸ್ನ್ಯಾಚ್‌ನಲ್ಲೂ ಕ್ಲೀನ್ ಆ್ಯಂಡ್ ಜರ್ಕ್‌ನಲ್ಲೂ ಮೊದಲ ಎರಡು ಪ್ರಯತ್ನಗಳಲ್ಲಿ ಯಶಸ್ಸು ಕಂಡ ಮೀರಾಬಾಯಿ ಕೊನೆಯ ಪ್ರಯತ್ನದಲ್ಲಿ ವೈಫಲ್ಯ ಅನುಭವಿಸಿದರು. ಆದರೆ ಇದು, ಬೆಳ್ಳಿ ಪದಕ ಗೆಲ್ಲುವ ಹಾದಿಗೆ ಅಡ್ಡಿಯಾಗಲಿಲ್ಲ.

ವಿಶೇಷ ಪುಟಗಳು 16,17

ಪದಕ ವಿಜೇತರು ಎತ್ತಿದ ಒಟ್ಟು ಭಾರ	
ಹೌ ಜಿಹುಯಿ	210 ಕೆಜಿ
ಮೀರಾಬಾಯಿ	202 ಕೆಜಿ
ವಿಂಡಿ ಕಾಂಟಿಕಾ	194 ಕೆಜಿ

ಮೊದಲ ದಿನ ಭಾರತದ ಸಾಧನೆಗಳು	
ಪುರುಷರ ಹಾಕಿ	ನ್ಯೂಜಿಲೆಂಡ್ ವಿರುದ್ಧ ಗೆಲುವು
ಟೆನಿಸ್	ಪುರುಷರ ಸಿಂಗಲ್ಸ್‌ನಲ್ಲಿ ಸುಮಿತ್ ನಗಾಲ್‌ಗೆ ಜಯ
ಟೇಬಲ್ ಟೆನಿಸ್	ಮಣಿಕಾ ಭಾತ್ರಾ, ಸುತೀರ್ಥ ಮುಖರ್ಜಿಗೆ ಜಯ
ಬ್ಯಾಡ್ಮಿಂಟನ್	ಡಬಲ್ಸ್‌ನಲ್ಲಿ ಸಾತ್ವಿಕ್–ಚಿರಾಗ್ ಜೋಡಿಗೆ ಗೆಲುವು

ಒಳ ಪುಟಗಳು

ಪಾಕ್ ಡ್ರೋನ್ ಚಟುವಟಿಕೆ ಪ್ರತಿಭಟನೆ ದಾಖಲಿಸಿದ ಭಾರತ 15
‘ಹೆಚ್ಚಿನ ವಿದೇಶಿ ಹೂಡಿಕೆ ಆಕರ್ಷಣೆ’ 14
ಸದ್ಯದಲ್ಲೇ ಮಕ್ಕಳಿಗೆ ಕೋವಿಡ್ ಲಸಿಕೆ ಲಭ್ಯ 15

ವರಿಷ್ಠರ ಹೊಯ್ದಾಟ: ಬಿಎಸ್‌ವೈ ಹೊಸ ಆಟ?

• ವೈ.ಗ. ಜಗದೀಶ್

ಸುದ್ದಿ ವಿಶ್ಲೇಷಣೆ

ಬೆಂಗಳೂರು: ‘ವರಿಷ್ಠರು ಹೇಳಿದ ಕೂಡಲೇ ರಾಜೀನಾಮೆ ಕೊಡುವೆ’ ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಬಹಿರಂಗವಾಗಿಯೇ ಘೋಷಿಸಿದ್ದಾರೆ. ಆದರೂ, ಬಿಜೆಪಿಯ ಸೂತ್ರಧಾರಿಗಳಾದ ಪ್ರಧಾನಿ ನರೇಂದ್ರ ಮೋದಿ ಮತ್ತು ಗೃಹ ಸಚಿವ ಅಮಿತ್ ಶಾ ಅವರು ‘ಸೂಚನೆ’ ರವಾನಿಸುವ ವಿಷಯದಲ್ಲಿ ನಿಧಾನಿಸುತ್ತಿರುವುದು ಕಮಲ ಪಾಳಯದ ನಾಯಕರನ್ನೇ ಗೊಂದಲಕ್ಕೆ ದೂಡಿದೆ.

ಯಡಿಯೂರಪ್ಪ

ತಮ್ಮ ಪಕ್ಷ ಪ್ರತಿನಿಧಿಸುವ ವಿವಿಧ ರಾಜ್ಯ ಸರ್ಕಾರಗಳ ನಾಯಕತ್ವವನ್ನು ಕ್ಷಣ ಮಾತ್ರದಲ್ಲಿ ಬದಲಿಸುವ (ಉತ್ತರ ಪ್ರದೇಶ ಬಿಟ್ಟು), ಅನ್ಯ ಪಕ್ಷಗಳ ಸರ್ಕಾರ ಇರುವ ಕಡೆ ರಾತ್ರೋರಾತ್ರಿ ಕಾರ್ಯಾಚರಣೆ ನಡೆಸಿ ರಾಜಕೀಯದ ದಿಕ್ಕುಗಳನ್ನೇ ಬದಲಿಸುವ ‘ಚಾಣಕ್ಯರು’ ಕರ್ನಾಟಕದ ಮಟ್ಟಿಗೆ ಹೊಯ್ದಾಟದ ಗುಂಗಿನಿಂದ ಹೊರಬಂದಂತೆ ಕಾಣುತ್ತಿಲ್ಲ. ಪಕ್ಷದ ಅತ್ಯಂತ ಹಿರೀಕರಲ್ಲಿ ಒಬ್ಬರಾದ ಯಡಿಯೂರಪ್ಪ, ಬೀದಿಯಲ್ಲೇ ಬಂದು ನಿಂತು ಸವಾಲು ಕೂಗಿದರೂ ಮುಂದಡಿ ಇಡಲಾಗದ ಇಕ್ಕಟ್ಟಿಗೆ ‘1-2’ ನಾಯಕರು ಸಿಲುಕಿದ್ದಾರೆಯೇ ಎಂಬ ಸಂಶಯ ಪಕ್ಷದ ಮುಖಂಡರಲ್ಲಿ ಮೂಡಲು ಶುರುವಾಗಿದೆ.

‘ಇದೇ 25ಕ್ಕೆ ಸಂದೇಶ ಬರುವ ನಿರೀಕ್ಷೆ ಇದೆ. ಬಂದ ಕೂಡಲೇ ರಾಜೀನಾಮೆ ಕೊಡುವೆ’ ಎಂದು ಯಡಿಯೂರಪ್ಪ ಹೇಳಿದ್ದರು. 26ಕ್ಕೆ ಅವರು ರಾಜೀನಾಮೆ ಕೊಡಲಿದ್ದಾರೆ ಎಂದೂ ಹೇಳಲಾಗಿತ್ತು.

12ನೇ ಪುಟ ನೋಡಿ

ಇಂದಿನ ಪಾಡ್‌ಕಾಸ್ಟ್ ವಿಶೇಷ
ವೈದ್ಯ ಮಿತ್ರ ಕಥಾ ಸಾಗರ
ಪ್ರತೀ ದಿನ: ದಿನದ ಸೂಕ್ತಿ, ವಚನವಾಣಿ ಸಂಪಾದಕೀಯ, ಪ್ರಚಲಿತ
Prajavani.net/podcast

ಮೂವರ ಸಾವು: ಹಲವೆಡೆ ಭೂಕುಸಿತ
ತಗ್ಗಿದ ಮಳೆ, ತಪ್ಪದ ಪ್ರವಾಹ ಭೀತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಶನಿವಾರ ಮಳೆ ಅಬ್ಬರ ತಗ್ಗಿದೆ. ಆದರೆ, ಬೆಳಗಾವಿ, ಬಾಗಲಕೋಟೆ, ಉತ್ತರಕನ್ನಡ, ಗದಗ, ಹಾವೇರಿ, ವಿಜಯಪುರ, ಶಿವಮೊಗ್ಗ ಜಿಲ್ಲೆಗಳಲ್ಲಿ ನದಿಗಳಿಗೆ ಹೆಚ್ಚಿನ ನೀರು ಹರಿದು ಬರುತ್ತಿರುವುದು ಮತ್ತು ಜಲಾಶಯಗಳಿಂದ ಹೊರಹರಿವಿನ ಪ್ರಮಾಣ ಏರಿಕೆಯಾಗಿರುವ ಪರಿಣಾಮ ತೀರದ ಪ್ರದೇಶಗಳಲ್ಲಿ ಪ್ರವಾಹದ ಭೀತಿ ಹೆಚ್ಚಾಗಿದೆ.

ಮಳೆಯಿಂದಾಗಿ ಸಂಭವಿಸಿದ ಪ್ರತ್ಯೇಕ ಘಟನೆಗಳಲ್ಲಿ ರಾಜ್ಯದಲ್ಲಿ ಮೂವರು ಸಾವಿಗೀಡಾಗಿದ್ದಾರೆ. ಹೊಳೆಹೊನ್ನೂರಿನಿಂದ ಹೊಳೆಭೈರನಹಳ್ಳಿ ಗ್ರಾಮಕ್ಕೆ ಹೋಗುವ ರಸ್ತೆಗೆ ಅಡ್ಡಲಾಗಿ ಹರಿಯುವ ಹಳ್ಳದಲ್ಲಿ ಮಹಿಳೆಯೊಬ್ಬರು ಮತ್ತು ಉತ್ತರ ಕನ್ನಡ ಜಿಲ್ಲೆಯ ಹಾಸಣಗಿ ಗ್ರಾಮದ ಆಲವಾಡದ ಕಬ್ಬಿನಗದ್ದೆ ಸೇತುವೆ ದಾಟುತ್ತಿದ್ದ ಆನಂದ ನಾಗಾ ಮೋಗೇರ ಎಂಬುವವರು ನೀರಿನಲ್ಲಿ ಕೊಚ್ಚಿ ಹೋಗಿದ್ದಾರೆ.

ಖಾನಾಪುರ ತಾಲ್ಲೂಕಿನ ಲೋಂಡಾ ಸಮೀಪ ರಾಷ್ಟ್ರೀಯ ಹೆದ್ದಾರಿ-4ಎರ ಸೇತುವೆ ಕುಸಿದಿದ್ದು, ಬೆಳಗಾವಿ–ಉತ್ತರ ಕನ್ನಡ ಜಿಲ್ಲೆಗಳ ಸಂಪರ್ಕ ಕಡಿತಗೊಂಡಿದೆ. ಬೆಳಗಾವಿ, ಚಿಕ್ಕಮಗಳೂರು ಸೇರಿದಂತೆ ಹಲವು ಜಿಲ್ಲೆಗಳಲ್ಲಿ ಅತಿವೃಷ್ಟಿಯಿಂದ ಬೆಳೆಗಳಿಗೆ ಅಪಾರ ಹಾನಿಯಾಗಿದೆ. ಕೊಡಗಿನಲ್ಲಿ ಸುರಿಯುತ್ತಿರುವ ನಿರಂತರ ಮಳೆಗೆ ಮಡಿಕೇರಿ–ಸೋಮವಾರಪೇಟೆ ರಾಜ್ಯ ಹೆದ್ದಾರಿಯ ಹಟ್ಟಿಹೊಳೆ ಎಂಬಲ್ಲಿ ರಸ್ತೆ ಬಿರುಕು ಬಿಟ್ಟಿದ್ದು, ಬೃಹತ್ ವಾಹನ ಸಂಚಾರ ನಿರ್ಬಂಧಿಸಲಾಗಿದೆ.

ಗಂಗಾವಳಿ ನದಿಯ ಪ್ರವಾಹದಿಂದ ಅಂಕೋಲಾ ತಾಲ್ಲೂಕಿನ ಗುಳ್ಳಾಪುರದ ಸೇತುವೆ ಮಧ್ಯಭಾಗದಿಂದ ಕೊಚ್ಚಿ ಹೋಗಿರುವುದು

ಇನ್ನಷ್ಟು ಸುದ್ದಿಗಳು 6

ಚಿನಕುರಳಿ
ಪ್ರಕಾಶ್ ಶೆಟ್ಟಿ

ಅಪ್‌ಡೇಟ್ ಮಾಡುವ ಮೂಲಕ ಎಲ್ಲ ಆನ್‌ಲೈನ್ ಎಲ್‌ಐಸಿ ಸೇವೆಗಳನ್ನು ಪಡೆದುಕೊಳ್ಳಿ
ಪ್ಯಾನ್ ಕಾರ್ಡ್ ವಿವರಗಳು
ಮೊಬೈಲ್ ಕ್ರಮಾಂಕ
ಈ-ಮೇಲ್ ಐಡಿ

ಆನ್‌ಲೈನ್ ಸೇವೆಗಳು ಮತ್ತು ಅಪ್‌ಡೇಶನ್‌ಗಾಗಿ (ವಿವರ ನವೀಕರಣ) www.licindia.in ಗೆ ಭೇಟಿ ನೀಡಿ.
ನಿಮ್ಮ ನಗರದ ಹೆಸರನ್ನು SMS ಮಾಡಿ 56767474ಗೆ
ಕಾಲ್ ಸೆಂಟರ್ ಸೇವೆಗಳು (022) 6827 6827
ಡೌನ್‌ಲೋಡ್ ಮಾಡಿ ಎಲ್‌ಐಸಿಯ ಮೊಬೈಲ್ ಆಪ್ "MyLIC"
ನಮ್ಮೊಂದಿಗೆ ಸೇರಿಕೊಳ್ಳಿ: LIC India Forever
IRDAI Regn No.: 512
ಮೋಸದ ದೂರವಾಣಿ ಕರೆಗಳು ಮತ್ತು ಕಾಲ್ಪನಿಕ/ಕೃತ್ರಿಮ ಆಫರ್‌ಗಳಿಂದ ಜಾಗರೂಕರಾಗಿರಿ!
ಐಆರ್‌ಡಿಎಐ ಯಾವತ್ತೂ ವಿಮಾ ಪಾಲಿಸಿಗಳ ಮಾರಾಟ, ಬೋನಸ್‌ಗಳ ಘೋಷಣೆ ಅಥವಾ ಪ್ರೀಮಿಯಮ್‌ಗಳ ಹೂಡಿಕೆ ಮುಂತಾದ ಚಟುವಟಿಕೆಗಳಲ್ಲಿ ತೊಡಗುವುದಿಲ್ಲ. ಈ ಬಗೆಯ ಫೋನ್ ಕರೆಗಳನ್ನು ಪಡೆಯುವ ಸಾರ್ವಜನಿಕರು ಪೋಲೀಸರಲ್ಲಿ ದೂರು ಸಲ್ಲಿಸಬೇಕೆಂದು ಕೋರಿಕೊಳ್ಳುತ್ತೇವೆ.
ಅಪಾಯ ಅಂಶಗಳು, ಷರತ್ತು ಮತ್ತು ನಿಬಂಧನೆಗಳ ಕುರಿತು ಹೆಚ್ಚಿನ ಮಾಹಿತಿಗಾಗಿ, ಮಾರಾಟವನ್ನು ಮುಕ್ತಾಯಗೊಳಿಸುವ ಮುನ್ನ ದಯವಿಟ್ಟು ಮಾರಾಟ ಪುಸ್ತಿಕೆಯನ್ನು ಜಾಗರೂಕತೆಯಿಂದ ಓದಿಕೊಳ್ಳಿರಿ.
LIC
ಲೈಫ್ ಇನ್‌ಶೂರನ್ಸ್ ಕಾರ್ಪೊರೇಷನ್ ಆಫ್ ಇಂಡಿಯಾ
LIFE INSURANCE CORPORATION OF INDIA
ಜೀವನದ ಜೊತೆಗೂ, ಜೀವನದ ಬಳಿಕವೂ.
LIC/MUD/2021-22/10/Kan

ಕೋವಿಡ್ ಸೋಲಿಸಿದ ಕೌಶಲ್ಯಾಸ್ತ್ರ



ಕೋವಿಡ್ ಬಿಕ್ಕಟ್ಟು: ಜನರ ಕ್ಷೇಮಕ್ಕೆ ಕುಶಲತೆಯ ಚೌಕಟ್ಟು

ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಯವತಿಯಿಂದ ಇತ್ತೀಚೆಗೆ ನಡೆದ 'ವಿಶ್ವ ಯುವ ಕೌಶಲ' ದಿನಾಚರಣೆಯಲ್ಲಿ ಅಂಗವಿಕಲರೊಬ್ಬರನ್ನು ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಅಭಿನಂದಿಸಿದರು.

ಗ್ರಾಮೀಣ ಪ್ರದೇಶಗಳಲ್ಲಿ ಸಾಮಾಜಿಕ ಸಮಾನತೆ ಮತ್ತು ಆರ್ಥಿಕ ಸ್ವಾವಲಂಬನೆಗೆ ಮೌಲಿಕ ಕಾಣಿಕೆ ನೀಡುತ್ತಿರುವ ಕೌಶಲ್ಯಾಭಿವೃದ್ಧಿ ಮತ್ತು ಉದ್ಯಮಶೀಲತಾ ಇಲಾಖೆಗಳು ಕೋವಿಡ್ ಸಂಕಷ್ಟ ಕಾಲದಲ್ಲೂ ಅತಿಹೆಚ್ಚು ಕ್ರಿಯಾಶೀಲವಾಗಿ ಕೆಲಸ ಮಾಡಿವೆ. ಬಿ.ಎಸ್.ಯಡಿಯೂರಪ್ಪ ನೇತೃತ್ವದ ಬಿಜೆಪಿ ಸರ್ಕಾರದಲ್ಲಿ ಉಪಮುಖ್ಯಮಂತ್ರಿಯಾಗಿರುವ ಡಾ. ಸಿ.ಎನ್. ಅಶ್ವತ್ಥನಾರಾಯಣ, ಎರಡೂ ಇಲಾಖೆಗಳನ್ನು ಅತ್ಯಂತ ಸಮರ್ಥವಾಗಿ ಮುನ್ನಡೆಸುತ್ತಿದ್ದಾರೆ.

ಗ್ರಾಮೀಣ ಆರ್ಥಿಕ ವ್ಯವಸ್ಥೆಯಲ್ಲಿ ನಿರ್ಣಾಯಕ ಪಾತ್ರವಹಿಸಿರುವ ಉದ್ಯಮಶೀಲತೆ ಇಲಾಖೆ ಹಾಗೂ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಕುಶಲತೆಯ ಮೂಲಕ ಉತ್ತಮ ಸಾಧನೆ ಮಾಡುತ್ತಿರುವ ಕೌಶಲ್ಯಾಭಿವೃದ್ಧಿ ಇಲಾಖೆ ಹತ್ತು ಹಲವು ರೀತಿಯಲ್ಲಿ ಗಮನ ಸೆಳೆದಿದೆ. ಕೋವಿಡ್ ಸಂಕಷ್ಟದಲ್ಲಿ ರಾಜ್ಯದಲ್ಲಿ ಆರ್ಥಿಕ ಚಟುವಟಿಕೆಗಳು ಕುಸಿದಿವೆ. ಉದ್ಯೋಗಾವಕಾಶದ ಮೇಲೂ ಪರಿಣಾಮಬೀರಿದೆ. ಈ ಹಿನ್ನೆಲೆಯಲ್ಲಿ ಸರ್ಕಾರ 2025ರ ಹೊತ್ತಿಗೆ ಕೌಶಲ್ಯ ಮತ್ತು ಉದ್ಯಮಶೀಲತಾ ವಲಯದಲ್ಲಿ 1ಕೋಟಿ ಆರ್ಥಿಕ ಅವಕಾಶಗಳನ್ನು ಸೃಷ್ಟಿಸುವ ಗುರಿ ಇಟ್ಟುಕೊಂಡಿದೆ. ಈ ನಿಟ್ಟಿನಲ್ಲಿ ಉಪ ಮುಖ್ಯಮಂತ್ರಿ ಡಾ.ಸಿ.ಎನ್.ಅಶ್ವತ್ಥನಾರಾಯಣ ಅವರು ಈಗಾಗಲೇ ಮೊದಲ ಸುತ್ತಿನ ಸಭೆ ನಡೆಸಿ ಅಧಿಕಾರಿಗಳಿಗೆ ಸ್ಪಷ್ಟ ನಿರ್ದೇಶನ ನೀಡಿದ್ದಾರೆ.

ಆರ್ಥಿಕ ಚಟುವಟಿಕೆ ಮತ್ತು ಉದ್ಯೋಗ ಕ್ಷೇತ್ರ ಎರಡನ್ನೂ ಸುಧಾರಿಸುವ ಸರ್ಕಾರ 'ಮಿಷನ್ ಯುವ ಸಮೃದ್ಧಿ' ಯೋಜನೆ ರೂಪಿಸಿದೆ. ರಾಜ್ಯದ ಮೈಸೂರು, ಮಂಗಳೂರು, ರಾಮನಗರ, ಬೆಂಗಳೂರು ಗ್ರಾಮಾಂತರ, ಕೋಲಾರ, ರಾಯಚೂರು, ಕೊಪ್ಪಳ, ಧಾರವಾಡ ಜಿಲ್ಲೆಗಳಲ್ಲಿ ಮೊದಲ ಹಂತದಲ್ಲಿ ಪ್ರಾಯೋಗಿಕವಾಗಿ ಕೈಗೆತ್ತಿಕೊಳ್ಳಲಾಗುತ್ತಿದೆ.

ಅಂಗೈನಲ್ಲೇ ಉದ್ಯೋಗ ಮಾಹಿತಿ

ಕೋವಿಡ್ ನಂತರ 'ಉದ್ಯೋಗ ಕೊಂಡಿ'ಯನ್ನು ಮರುಸ್ಥಾಪಿಸುವುದು ಮತ್ತು ಆರ್ಥಿಕ, ಕೈಗಾರಿಕಾ ಚಟುವಟಿಕೆಗಳಿಗೆ ಉತ್ತೇಜನ ನೀಡುವ ನಿಟ್ಟಿನಲ್ಲಿ ಸರ್ಕಾರ 'ಸ್ಕಿಲ್ ಕನೆಕ್ಟ್' ವೆಬ್‌ಪೋರ್ಟಲ್ ರೂಪಿಸಿದೆ. ಇದು 'ಕೌಶಲ್ಯ ಸಂಪರ್ಕ ವೇದಿಕೆ' ಪೋರ್ಟಲ್. ಸರ್ಕಾರ ಕೈಗೊಂಡ ಈ ಅತ್ಯುತ್ತಮ ಉಪಕ್ರಮ ವಲಸೆ ಕಾರ್ಮಿಕರಿಗೆ ವರದಾನವಾಗಿದೆ.

ಈ ಪೋರ್ಟಲ್ನಲ್ಲಿ ಎಲ್ಲೆಲ್ಲಿ ಕೆಲಸಗಳು ಲಭ್ಯವಿವೆ? ಯಾರಿಗೆ ಕೆಲಸದ ಅಗತ್ಯವಿದೆ? ಎಂಬ ಮಾಹಿತಿ ಅಂಗೈಯಲ್ಲೇ ಲಭ್ಯ. ಉದ್ಯೋಗದಾತರು ಮತ್ತು ಉದ್ಯೋಗಾಕಾಂಕ್ಷಿ ನಡುವೆ ಇದು ಸಂಪರ್ಕ ಕೊಂಡಿಯಾಗುತ್ತದೆ. ಜತೆಗೆ, ಲಭ್ಯವಿರುವ ಉದ್ಯೋಗಗಳಿಗೆ ಅಗತ್ಯ ತರಬೇತಿ ಯನ್ನೂ ನೀಡಿ ಆ ಅಭ್ಯರ್ಥಿಗಳಿಗೆ ಕೌಶಲ್ಯತೆ ಕಲಿಸಿ ಸಂಬಂಧಿತ ಕಂಪನಿಗೆ ಕಳಿಸುವುದು ಇಲ್ಲಿ ನಡೆಯುತ್ತಿದೆ. ಉದ್ಯೋಗದ ಬೇಡಿಕೆಗೆ ಅನುಗುಣವಾಗಿ ತಂತ್ರಾಂಶವನ್ನು ಬಳಸಿ ಉದ್ಯೋಗಿಗಳ ಕೌಶಲ್ಯಕ್ಕೆ ತಕ್ಕ ಉದ್ಯೋಗವನ್ನು ಪೋರ್ಟಲ್ ಹೊಂದಾಣಿಕೆ ಮಾಡಲಿದೆ.

ವೆಬ್‌ಪೋರ್ಟಲ್ ವಿಳಾಸ:
https://skillconnect.kaushalkar.com

ಪ್ರಸ್ತುತಿ: ಪಿ.ವಿ. ಬ್ರ್ಯಾಂಡ್ ಸ್ಪಾಟ್

ಅಂತರರಾಷ್ಟ್ರೀಯ ವಲಸೆ ಕೇಂದ್ರ, ಉದ್ಘಾಟನಾ ಸಮಾರಂಭದಲ್ಲಿ ಸಚಿವ ಡಾ. ಸಿ.ಎನ್. ಅಶ್ವತ್ಥನಾರಾಯಣ ಮತ್ತಿತರರು ಹಾಜರಿದ್ದರು

150 ಐಟಿಐಗಳ ಉನ್ನತೀಕರಣ

ಅಭಿವೃದ್ಧಿ ಕಾಣದೆ ನನೆಗುದಿಗೆ ಬಿದ್ದಿದ್ದ ರಾಜ್ಯದ 150 ಐಟಿಐ ಸಂಸ್ಥೆಗಳನ್ನು ಸರ್ಕಾರ ಮತ್ತು ಟಾಟಾ ಟೆಕ್ನಾಲಜೀಸ್ ನೇತೃತದ ಖಾಸಗಿ ಸಹಭಾಗಿತ್ವದಲ್ಲಿ ಅತ್ಯಾಧುನಿಕವಾಗಿ ಅಭಿವೃದ್ಧಿಪಡಿಸಲಾಗುತ್ತಿದೆ. ಈ ಯೋಜನೆಗೆ ಸರ್ಕಾರ ₹800 ಕೋಟಿ ನೀಡುತ್ತಿದ್ದು, ಖಾಸಗಿ ಕ್ಷೇತ್ರವು ₹4ಸಾವಿರ ಕೋಟಿಗಳಿಗೂ ಹೆಚ್ಚು ಹಣವನ್ನು ವೆಚ್ಚ ಮಾಡುತ್ತಿದೆ.

ಕೌಶಲ್ಯ ಶಿಕ್ಷಣಕ್ಕೆ ಒತ್ತು ನೀಡಲು ಐಟಿಐ ಪರೀಕ್ಷೆ ಉಸ್ತುವಾರಿ ಪರೀಕ್ಷಾ ಪ್ರಾಧಿಕಾರಕ್ಕೆ ಹಸ್ತಾಂತರ ಮಾಡಲಾಗುತ್ತಿದೆ. ಹಿಂದೆ ಐಟಿಐ (ಎನ್‌ಸಿವಿಟಿ ಮತ್ತು ಎಸ್‌ಸಿವಿಟಿ) ಪರೀಕ್ಷೆಗಳನ್ನು ರಾಜ್ಯ ವೃತ್ತಿಪರ ತರಬೇತಿ ಸಂಸ್ಥೆ ನಡೆಸುತ್ತಿತ್ತು. ಆ ಪರೀಕ್ಷಾ ವಿಧಾನದ ಬಗ್ಗೆ ತೀವ್ರ ಆಕ್ಷೇಪಗಳಿದ್ದವು. ಹಾಗಾಗಿ ವೃತ್ತಿಪರ ಶಿಕ್ಷಣದಲ್ಲಿ ಕುಶಲತೆ ವೃದ್ಧಿಸಲು ಸರ್ಕಾರ ಕೈಗೊಂಡ ಸುಧಾರಣೆ ಇದು.

ಜಾಗತಿಕ ಕೈಗಾರಿಕಾ ಅಗತ್ಯಗಳಿಗೆ ಹಾಗೂ ಪ್ರಸ್ತುತ ಕೈಗಾರಿಕಾ ಕ್ಷೇತ್ರದಲ್ಲಾಗಿರುವ ಬದಲಾವಣೆಗೆ ಪೂರಕವಾಗಿ ವಿದ್ಯಾರ್ಥಿಗಳ ಕಲಿಕಾ ಮಟ್ಟ ಹೆಚ್ಚಿಸಲು ಸರ್ಕಾರ ಹಾಲಿ ಡಿಪ್ಲೊಮಾ ಕೋರ್ಸ್‌ಗಳಲ್ಲಿರುವ ಪಠ್ಯಗಳನ್ನು ಪರಿಷ್ಕರಿಸಿದೆ. ಎಐಸಿಟಿ ಮಾನದಂಡದ ಪ್ರಕಾರ ಐಟಿಐ, ಜಿಟಿಟಿಸಿ, ಡಿಪ್ಲೊಮಾ ಪಠ್ಯವನ್ನು ಆಮೂಲಾಗ್ರವಾಗಿ ಪರಿಷ್ಕರಣೆ ಮಾಡಲಾಗಿದ್ದು, ಹೊಸ ಪಠ್ಯದಲ್ಲಿಯೇ ಈಗ ವಿದ್ಯಾರ್ಥಿಗಳು ಕಲಿಯುತ್ತಿದ್ದಾರೆ.

ರಾಜ್ಯದಲ್ಲಿ ಸದ್ಯಕ್ಕೆ 24 ಜಿಟಿಟಿಸಿ(ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರಗಳು)ಗಳಿದ್ದು, ಇನ್ನೂ ನಾಲ್ಕು ಹೊಸ ಜಿಟಿಟಿಸಿ ಕೇಂದ್ರಗಳನ್ನು ತೆರೆಯುತ್ತಿದೆ. ಚಿತ್ರದುರ್ಗ, ಚಳ್ಳಕೆರೆ, ಯಾದಗಿರಿ ಮತ್ತು ಕೊಪ್ಪಳದಲ್ಲಿ ತಲಾ ಒಂದೊಂದರಂತೆ ನಾಲ್ಕು ಹೊಸ ಜಿಟಿಟಿಸಿಗಳನ್ನು ತೆರೆಯಲು, ಈಗಾಗಲೇ ಅನುಮೋದನೆ ನೀಡಲಾಗಿದೆ. ಹಾಗೆಯೇ ರಾಜ್ಯದಲ್ಲಿ ಐದು ಕರ್ನಾಟಕ-ಜರ್ಮನಿ ತಾಂತ್ರಿಕ ಸಂಸ್ಥೆಗಳಿವೆ. ಇನ್ನು ಎರಡು ಹೊಸ ಸಂಸ್ಥೆಗಳನ್ನು ಸ್ಥಾಪಿಸಲಾಗುತ್ತಿದೆ. ಒಟ್ಟಾರೆ ಕೈಗಾರಿಕೆ ವಲಯದ ಬೇಡಿಕೆಗೆ ತಕ್ಕಂತೆ ಉದ್ಯೋಗ ತರಬೇತಿ ನೀಡಲಾಗುತ್ತಿದೆ. ರಾಜ್ಯದ ಯಾವುದೇ ಕೌಶಲ್ಯ ಸಂಸ್ಥೆಯಲ್ಲಿ ವ್ಯಾಸಂಗ ಮಾಡಿದರೂ ಖಚಿತವಾಗಿ ಉದ್ಯೋಗ ಸಿಗುವಂತೆ ಮಾಡಲು ಸರ್ಕಾರ ನಿಶ್ಚಯ ಮಾಡಿದೆ.

ಪ್ರಾಥಮಿಕ ಹಂತದಲ್ಲೇ 'ಕೌಶಲ್ಯಾಭಿವೃದ್ಧಿ'

ಪೀಣ್ಯ ಕೈಗಾರಿಕೆ ಪ್ರದೇಶದಲ್ಲಿನ ಕೈಗಾರಿಕೆಗಳ ಅಗತ್ಯಕ್ಕೆ ಅನುಗುಣವಾಗಿ ಐಟಿಐ ಸಂಸ್ಥೆಗಳಲ್ಲಿ ತರಬೇತಿ ಪಡೆದ ವಿದ್ಯಾರ್ಥಿಗಳು ಹಾಗೂ ಕೌಶಲ್ಯರಹಿತ ಯುವಜನರಿಗೆ ತರಬೇತಿ ನೀಡುವ ಮತ್ತು ಉದ್ಯೋಗ ಕಲ್ಪಿಸುವ ಸಂಬಂಧ ಪೀಣ್ಯ ಕೈಗಾರಿಕೆಗಳ ಸಂಘ ಹಾಗೂ ಕೈಗಾರಿಕಾ ತರಬೇತಿ-ಉದ್ಯೋಗ ಆಯುಕ್ತಾಲಯ ಹಾಗೂ ಕರ್ನಾಟಕ ಕೌಶಲ್ಯಾಭಿವೃದ್ಧಿ ನಿಗಮಗಳ ನಡುವೆ ಒಪ್ಪಂದವಾಗಿದೆ. ಈ ಒಪ್ಪಂದದಿಂದ ಲಕ್ಷಾಂತರ ಯುವಜನರಿಗೆ ಕೆಲಸ ಸಿಗಲಿದೆ.

ಹೆಚ್ಚಿನ ಅಪ್ರೆಂಟಿಶಿಪ್ ಸ್ಥಾನಗಳನ್ನು ಗುರುತಿಸಲು, ರಾಜ್ಯದಲ್ಲಿ ವಿದ್ಯಾರ್ಥಿಗಳಿಗೆ ಅಪ್ರೆಂಟಿಶಿಪ್ ನೀಡಲು ಟೀಮ್‌ಲೀಸ್ ಸ್ಕಿಲ್ಸ್ ವಿಶ್ವವಿದ್ಯಾಲಯ ಹಾಗೂ ಕೈಗಾರಿಕಾ ತರಬೇತಿ-ಉದ್ಯೋಗ ಆಯುಕ್ತಾಲಯದ ನಡುವೆ ಒಡಂಬಡಿಕೆ ಆಗಿದೆ. ಈ ಒಪ್ಪಂದದ ಮೂಲಕ ವಿದ್ಯಾರ್ಥಿಗಳ ಕೌಶಲ್ಯವನ್ನು ಹೆಚ್ಚಿಸಲು ಹೆಚ್ಚು ಅನುಕೂಲವಾಗಲಿದೆ. ಸರ್ಕಾರಿ ಐಟಿಐ ವಿದ್ಯಾರ್ಥಿಗಳಿಗೆ ಎಂಟರ್‌ಪ್ರಿನ್ಯೂರಿಯಲ್ ಮೈಂಡ್‌ಸೆಟ್ ಕಾರ್ಯಕ್ರಮ ನೀಡುವ ಕುರಿತು ಉದ್ಯಮ್ ಲರ್ನಿಂಗ್ ಫೌಂಡೇಷನ್ (ಉದ್ಯಮ್) ಹಾಗೂ ಕೈಗಾರಿಕಾ ತರಬೇತಿ ಹಾಗೂ ಉದ್ಯೋಗ ಆಯುಕ್ತಾಲಯಗಳ ನಡುವೆ ಒಪ್ಪಂದ ಆಗಿದೆ.

ಗುಣಮಟ್ಟದ ಶಿಕ್ಷಣ ನೀಡುವುದು ಒಂದು ಸಾರ್ಥಕತೆಯಾದರೆ, ಓದಿಗೆ ತಕ್ಕ ಉದ್ಯೋಗ ನೀಡುವುದು ಇನ್ನೊಂದು ಧನ್ಯತೆ ಎಂಬುದು ಯಡಿಯೂರಪ್ಪ ನೇತೃತ್ವದ ಸರ್ಕಾರದ ಆಶಯ. ಇದನ್ನು ಸಾಕಾರಗೊಳಿಸಲು ಮುಂದಿನ ಐದು ವರ್ಷಗಳಲ್ಲಿ 10 ದಶಲಕ್ಷಕ್ಕೂ ಹೆಚ್ಚು ಉದ್ಯೋಗ ಸೃಷ್ಟಿಸುವ ಗುರಿ ಇಟ್ಟುಕೊಂಡಿದೆ. ಈ ದಿಸೆಯಲ್ಲಿಈಗಾಗಲೇ ತಜ್ಞರ ಜತೆ ನಿರಂತರವಾಗಿ ಸಮಾಲೋಚನೆ ನಡೆಯುತ್ತಿದೆ. ತಂತ್ರಜ್ಞಾನವನ್ನು ಬಳಸಿಕೊಂಡು, ನಗರ, ಜಿಲ್ಲೆ, ಪಟ್ಟಣ, ತಾಲ್ಲೂಕು, ಹೋಬಳಿ, ಗ್ರಾಮ ಮಟ್ಟದಲ್ಲಿ ಶೀಘ್ರದಲ್ಲೇ ಹೊಸ ತಲೆಮಾರಿನ ಉದ್ಯೋಗಗಳನ್ನು ಸೃಷ್ಟಿಸಿ, ಬಹುತೇಕವಾಗಿ ನಿರುದ್ಯೋಗ ಸಮಸ್ಯೆ ನಿವಾರಿಸುವುದು ಈ ಯೋಜನೆ ಉದ್ದೇಶವಾಗಿದೆ. ❖

ಬ್ರಿಟನ್‌ನತ್ತ ಸಾವಿರ ನರ್ಸಿಂಗ್ ಸಿಬ್ಬಂದಿ

ರಾಜ್ಯದ ಯುವ ಸಮೂಹಕ್ಕೆ ವಿದೇಶಗಳಲ್ಲೂ ಅವಕಾಶ ಸೃಷ್ಟಿಸಲಾಗುತ್ತಿದೆ. ಬ್ರಿಟನ್‌ನ ರಾಷ್ಟ್ರೀಯ ಆರೋಗ್ಯ ಇಲಾಖೆ (ಎನ್‌ಎಚ್‌ಎಸ್) ಯಿಂದ 1 ಸಾವಿರ ಶುಶ್ರೂಷಕರಿಗೆ ಬೇಡಿಕೆ ಬಂದಿದೆ. ಈ ಸಂಬಂಧ ಕೌಶಲ್ಯಾಭಿವೃದ್ಧಿ ಇಲಾಖೆ ಹಾಗೂ ಎನ್‌ಎಚ್‌ಎಸ್ ನಡುವೆ ಒಪ್ಪಂದ ಆಗಿದೆ. ನಮ್ಮ ರಾಜ್ಯದ ಶುಶ್ರೂಷಕರಿಗೆ ವರ್ಷಕ್ಕೆ ₹20 ಲಕ್ಷ ಪ್ಯಾಕೇಜ್ ಸಿಗಲಿದೆ. ಇದೊಂದು ತರಹ ಬಂಪರ್ ಆಫರ್. ಮೊದಲ ಹಂತದಲ್ಲಿ 1,000 ಶುಶ್ರೂಶಕಿಯರಿಗೆ ಅವಕಾಶವಿದೆ.

ಬ್ರಿಟನ್‌ಗೆ ತೆರಳಲಿರುವ ಎಲ್ಲ ಶುಶ್ರೂಷಕರಿಗೆ ಅಲ್ಲಿನ ವ್ಯವಸ್ಥೆಗೆ ಒಗ್ಗಿ ಕೆಲಸ ಮಾಡುವುದಕ್ಕೆ ಬೇಕಾದ ಭಾಷೆ, ಸಂವಹನ ಕಲೆ, ಸೇವಾ ಮನೋಭಾವ ಇತ್ಯಾದಿಗಳ ಬಗ್ಗೆ ಸರ್ಕಾರ ತರಬೇತಿ ನೀಡುತ್ತಿದೆ. ಇದಲ್ಲದೆ, ರಾಜ್ಯದಲ್ಲಿ ಕುಶಲತೆಯುಳ್ಳ ಮಾನವ ಸಂಪನ್ಮೂಲ ವಿಪುಲವಾ ಗಿದ್ದು, ನಿರುದ್ಯೋಗಿ ಯುವಜನರಿಗೆ ಜಾಗತಿಕ ಮಟ್ಟದಲ್ಲಿ ಅವಕಾಶಗಳನ್ನು ಕಲ್ಪಿಸುವ ಉದ್ದೇಶದಿಂದ 'ವಲಸೆ ಕೇಂದ್ರ'ವನ್ನೂ ಸ್ಥಾಪಿಸಲಾಗಿದೆ.

ಶುಶ್ರೂಶಕಿಯರ ಜತೆಗೆ ಕರ್ನಾಟಕ ವೃತ್ತಿ ತರಬೇತಿ ಮತ್ತು ಕೌಶಲ್ಯಾಭಿವೃದ್ಧಿ ನಿಗಮವು (ಕೆವಿಟಿಎಸ್‌ಡಿಸಿ) ಕುವೈತ್‌ನ ಅರೆ ಸರ್ಕಾರಿ ಸಂಸ್ಥೆಯಾದ ಅಲ್-ದುರಾ ಮ್ಯಾನ್‌ಪವರ್ ಸಪ್ಲೈ (Al-Durra Manpower Supply) ಜತೆ ಒಪ್ಪಂದ ಮಾಡಿಕೊಂಡಿದೆ. ಕುವೈತ್‌ನಲ್ಲಿ ರಾಜ್ಯದ ಅನುಭವಿ ಚಾಲಕರು, ಹೌಸ್ ಬಾಯ್ಸ್, ಅಡುಗೆಯವರಿಗೆ ಅವಕಾಶಗಳು ಸೃಷ್ಟಿಯಾಗುತ್ತಿವೆ. ಜತೆಗೆ, ಕೆವಿಟಿಎಸ್‌ಡಿಸಿ ಮತ್ತು ಕೆನಡಾ ಸರ್ಕಾರದ ನಡುವೆ ಹೊಸ ಒಪ್ಪಂದದ ಮಾತುಕತೆ ಪ್ರಗತಿಯಲ್ಲಿದೆ. ಅದರ ಪ್ರಕಾರ ಐಟಿ, ವಿಡಿಯೊ ಗೇಮ್ ಮತ್ತು ಎಐ (ಆರ್ಟಿಫಿಶಿಯಲ್ ಇಂಟಲಿಜೆನ್ಸ್) ವಲಯಕ್ಕೆ ಸಂಬಂಧಿಸಿದ ಅರ್ಹ ಅಭ್ಯರ್ಥಿಗಳನ್ನು ಗುರುತಿಸುವ ಪ್ರಕ್ರಿಯೆ ಪ್ರಾರಂಭಿಸಲಾಗಿದೆ.

ಜಿಟಿಟಿಸಿಯ ಉನ್ನತೀಕರಣ

ಇಸ್ರೊ, ಎಚ್‌ಎಎಲ್ ಸೇರಿದಂತೆ ಇನ್ನೂ ಹಲವಾರು ಪ್ರತಿಷ್ಠಿತ ಸಂಸ್ಥೆಗಳಿಗೆ ಉಪಗ್ರಹಗಳ, ಲಘು ಮತ್ತು ಸುಧಾರಿತ ಯುದ್ಧ ವಿಮಾನಗಳ ಬಿಡಿಭಾಗಗಳನ್ನು ತಯಾರಿಸಿ ಕೊಡಲು ಬೆಂಗಳೂರಿನ ಜಿಟಿಟಿಸಿ(ಸರ್ಕಾರಿ ಉಪಕರಣಾಗಾರ ಮತ್ತು ತರಬೇತಿ ಕೇಂದ್ರ) ಸೇವಾ ಕೇಂದ್ರದ ಸಾಮರ್ಥ್ಯವನ್ನು ₹20 ಕೋಟಿ ವೆಚ್ಚದಲ್ಲಿ ಉನ್ನತೀಕರಿಸುವ ಕೆಲಸ ನಡೆಯುತ್ತಿದೆ.

ಸರ್ಕಾರಿ ಮತ್ತು ಖಾಸಗಿ ಸಹಭಾಗಿತ್ವದಡಿ ಏಳು ಜಿಟಿಟಿಸಿ ಕೇಂದ್ರಗಳಲ್ಲಿ 'ಉತ್ಕೃಷ್ಟತಾ ಕೇಂದ್ರ'ಗಳನ್ನು ಸ್ಥಾಪಿಸಿ 12,600 ವಿದ್ಯಾರ್ಥಿಗಳಿಗೆ ಅತ್ಯುತ್ತಮ ತರಬೇತಿ ನೀಡಿ ಅರ್ಹ ಉದ್ಯೋಗಕ್ಕೆ ನಿಯೋಜಿಸುವ ಕಾರ್ಯಕ್ರಮ ಸರ್ಕಾರ ಹಮ್ಮಿಕೊಂಡಿದೆ.

ಕುಶಲತೆ ಎನ್ನುವುದು ಈಗ ರಾಷ್ಟ್ರೀಯ ಅಗತ್ಯ

ಕೌಶಲ್ಯನಾವೀನ್ಯ: ಬಿಜೆಪಿಯ ಧ್ಯೇಯ

ಐಟಿಐ ಉನ್ನತೀಕರಿಸುವ ಸಂಬಂಧ ಕರ್ನಾಟಕ ಸರ್ಕಾರ ಮತ್ತು ಟಾಟಾ ಟೆಕ್ ಲಿ. ನಡುವೆ ಒಡಂಬಡಿಕೆಗೆ ಸಹಿಹಾಕಿದ ಸಂದರ್ಭ

ರಾಜ್ಯದ ಬಿಜೆಪಿ ಸರ್ಕಾರಕ್ಕೆ ಈಗ ಎರಡು ವರ್ಷದ ಸಂಭ್ರಮ. ಈ ಅವಧಿಯಲ್ಲಿ ಸರ್ಕಾರದ ಕೌಶಲ್ಯಾಭಿವೃದ್ಧಿ ಮತ್ತು ಉದ್ಯಮಶೀಲತೆ-ಜೀವನೋಪಾಯ ಇಲಾಖೆಗಳು ಗ್ರಾಮೀಣ ಭಾಗದ ಜನ–ಜೀವನದಲ್ಲಿ ಗಮನಾರ್ಹ ಬದಲಾವಣೆ ತಂದಿವೆ. ಈ ಇಲಾಖೆಗಳನ್ನು ಮುನ್ನಡೆಸುತ್ತಿರುವ ಉಪ ಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥನಾರಾಯಣ ಅವರು, ಎರಡೂ ಇಲಾಖೆಗಳ ಕೆಲಸಗಳ ಬಗ್ಗೆ ಇಲ್ಲಿ ಮುಕ್ತವಾಗಿ ಮಾತನಾಡಿದ್ದಾರೆ..

ಡಿಸಿಎಂ ಸದರ್ಶನ

- **ಪ್ರಶ್ನೆ: ಕೌಶಲ್ಯಾಭಿವೃದ್ಧಿ ಮತ್ತು ಉದ್ಯಮಶೀಲತೆ-ಜೀವನೋಪಾಯ ಇಲಾಖೆಗಳು ಹೇಗೆ ಕೆಲಸ ಮಾಡುತ್ತಿವೆ?**

ಉತ್ತರ: ಎರಡೂ ಇಲಾಖೆಗಳು ಬಹಳ ಚೆನ್ನಾಗಿ ಕೆಲಸ ಮಾಡುತ್ತಿವೆ. ಸಮಾಜದ ಅತ್ಯಂತ ತಳಮಟ್ಟದಲ್ಲಿ ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆಗಳು ತರುತ್ತಿರುವ ಬದಲಾವಣೆಯನ್ನು ಹಳ್ಳಿಗಳಿಗೆ ಹೋಗಿಯೇ ನೋಡಬೇಕು. ಇನ್ನು, ಕುಶಲತೆ ಅನ್ನುವುದು ಇವತ್ತು ರಾಷ್ಟ್ರೀಯ ಅಗತ್ಯ. ಕುಶಲತೆ ಇಲ್ಲದ ಯಾವ ಉದ್ಯಮವೂ ಯಸ್ವಿಯಾಗುವುದಿಲ್ಲ, ಅಲ್ಲವೇ ?

- **ಪ್ರಶ್ನೆ: ಕೌಶಲ್ಯಾಭಿವೃದ್ಧಿಯ ಪ್ರಗತಿ ಹೇಗಿದೆ? ಎರಡು ವರ್ಷಗಳ ಅವಧಿಯಲ್ಲಿ ಮಾಡಿರುವ ಸುಧಾರಣೆಗಳೇನು?**

ಉತ್ತರ: ಕೋವಿಡ್ ಬಿಕ್ಕಟ್ಟು ಇಲಾಖೆಯಲ್ಲಿನ ಅಭಿವೃದ್ಧಿ ಕಾರ್ಯಗಳಿಗೆ ಅಡ್ಡಿಯುಂಟು ಮಾಡಿದ್ದು ನಿಜ. ಆದರೆ, ಸಮಸ್ಯೆಗಳ ವಿರುದ್ಧ ಈಜಿ ಗೆಲ್ಲುವುದನ್ನು ನಮ್ಮ ಪಕ್ಷ ಮತ್ತು ನಮ್ಮ ನಾಯಕರು ಕಲಿಸಿದ್ದಾರೆ. ನಾನು ಇದೇ ದಿಕ್ಕಿನಲ್ಲಿ ಕೆಲಸ ಮಾಡಿದೆ. ಪರಿಣಾಮವಾಗಿ, ಇಲಾಖೆಯಲ್ಲಿ ಈ ಎರಡು ವರ್ಷಗಳಲ್ಲಿ ಅನೇಕ ಸುಧಾರಣೆ ಕಾಣಲು ಸಾಧ್ಯವಾಯಿತು. ಉದ್ಯೋಗದಾತರು -ಉದ್ಯೋಗಾಕಾಂಕ್ಷಿಗಳ ನಡುವೆ ಕೊಂಡಿಯಾಗಿ ಕೆಲಸ ಮಾಡುವ 'ಸ್ಕಿಲ್ ಕನೆಕ್ಟ್' ಸ್ಥಾಪನೆಯಾಯಿತು. ಡಿಪ್ಲೊಮಾ ಪಠ್ಯ ಪರಿಷ್ಕರಣೆಯಾಯಿತು. 150 ಐಟಿಐಗಳ ಉನ್ನತೀಕರಣ, ಖಾಸಗಿ ಉದ್ಯಮಗಳ ಸಹಭಾಗಿತ್ವ ಗುಣಮಟ್ಟ ಮತ್ತು ಜಾಗತಿಕ ಸ್ಪರ್ಧಾತ್ಮಕತೆಗೆ ಒತ್ತು, ವೃತ್ತಿಪರ ಶಿಕ್ಷಣ ಸಂಸ್ಥೆಗಳಿಗೆ ಪೂರ್ಣ ಸ್ವಾಯತ್ತತೆ, ಪ್ರಾಥಮಿಕ ಶಿಕ್ಷಣದಲ್ಲೇ ಕೌಶಲ್ಯತೆ ಬೋಧನೆ, ಜಾಗತಿಕ ವಲಸೆ ಕೇಂದ್ರ ಸ್ಥಾಪನೆ ಸೇರಿದಂತೆ ಅನೇಕ ಸುಧಾರಣೆಗಳಾದವು. ಇನ್ನೂ ಕೆಲ ಮಹತ್ವದ ಕಾರ್ಯಕ್ರಮ ಗಳು ಜಾರಿ ಹಂತದಲ್ಲಿವೆ.

- **ಪ್ರಶ್ನೆ: ಜೀವನೋಪಾಯ ಮತ್ತು ಉದ್ಯಮಶೀಲತೆ ಇಲಾಖೆಯಲ್ಲಾಗಿರುವ ಸುಧಾರಣೆಗಳೇನು?**

ಉತ್ತರ: ಗ್ರಾಮ ಮಟ್ಟದ ಸಂಜೀವಿನಿ ಘಟಕಗಳಡಿ ಕಾರ್ಯನಿರ್ವಹಿಸುವ 17,121 ಮಹಿಳಾ ಸ್ವಸಹಾಯ ಗುಂಪುಗಳಿಗೆ ₹149 ಕೋಟಿ ಸಮುದಾಯ ಬಂಡವಾಳ ನಿಧಿಯನ್ನು ಬಿಡುಗಡೆ ಮಾಡಲಾಗಿದೆ. ಪ್ರಸಕ್ತ ವರ್ಷದಲ್ಲಿ ಈ ಉದ್ದೇಶಕ್ಕಾಗಿ ಸರ್ಕಾರ ಒಟ್ಟು ₹400 ಕೋಟಿ ಒದಗಿಸುತ್ತಿದೆ. ಗ್ರಾಮೀಣ ಪ್ರದೇಶದ ಮಹಿಳೆಯರಲ್ಲಿ ಉದ್ಯಮಶೀಲತಾ ಮನೋಭಾವವನ್ನು ಬೆಳೆಸುತ್ತಿದೆ. ಮಾತ್ರವಲ್ಲ, ಅವರನ್ನು ಸಾಮಾಜಿಕ, ಆರ್ಥಿಕವಾಗಿ ಮುಂಚೂಣಿಗೆ ತರುವಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತಿದೆ.

- **ಪ್ರಶ್ನೆ: ಸಂಜೀವಿನಿ ಸ್ವಸಹಾಯ ಗುಂಪುಗಳು ಯಾವ ರೀತಿ ಆರ್ಥಿಕ ಸ್ವಾವಲಂಬನೆ ಸಾಧಿಸುತ್ತವೆ?**

ಉತ್ತರ: ಗ್ರಾಮ ಮಟ್ಟದ ಸಂಜೀವಿನಿ ಘಟಕಗಳ ಅಡಿಯಲ್ಲಿ ರಚನೆಯಾಗುವ ಮಹಿಳಾ ಸ್ವಸಹಾಯ ಗುಂಪುಗಳ ಸದಸ್ಯರಿಗೆ, ತಮಗೆ ಆಸಕ್ತಿ ಇರುವ ಕಿರು ಉದ್ಯಮ ನಡೆಸಲು ಅತ್ಯಂತ ಕಡಿಮೆ ಬಡ್ಡಿಗೆ ಸಾಲ ನೀಡುತ್ತದೆ. ಉದಾಹರಣೆಗೆ; ಹೈನುಗಾರಿಕೆ, ಮೀನು ಸಾಕಣೆ, ಜೇನು ಸಾಕಣೆ, ಪಶು ಸಂಗೋಪನೆ, ಟೈಲರಿಂಗ್, ಅಂಗಡಿ, ಸಿರಿಧಾನ್ಯ ಮಾರಾಟ, ಸಿದ್ಧ ಆಹಾರೋದ್ಯಮ, ಅಣಬೆ ಬೇಸಾಯ, ರೊಟ್ಟಿ ತಯಾರಿಕೆ, ಕರಕುಶಲ ವಸ್ತು ತಯಾರಿಕೆಯಂತಹ ಕಿರು ಉದ್ಯಮ ಸ್ಥಾಪನೆಗೆ ಹಣಕಾಸು ನೆರವು ನೀಡುತ್ತದೆ. ಜತೆಗೆ, ಉದ್ಯಮ ನಡೆಸಲು ತರಬೇತಿ, ತಯಾರಿಸಿದ ಉತ್ಪನ್ನಗಳಿಗೆ ಮಾರುಕಟ್ಟೆ ಒದಗಿಸಲಾಗುವುದು. ❖

ಕೌಶಲ್ಯಾಭಿವೃದ್ಧಿ ಯೋಜನೆಯ ವೆಬ್ ಪೋರ್ಟಲ್‌ಗೆ ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಚಾಲನೆ ನೀಡಿದರು.

ಜಿಟಿಟಿಸಿ ಕೇಂದ್ರವೊಂದಕ್ಕೆ ಭೇಟಿ ನೀಡಿರುವ ಉಪ ಮುಖ್ಯಮಂತ್ರಿ ಡಾ. ಸಿ.ಎನ್. ಅಶ್ವತ್ಥನಾರಾಯಣ

ಅಂತರರಾಷ್ಟ್ರೀಯ ವಲಸೆ ಕೇಂದ್ರದ ಮೂಲಕ ಅಬುಧಾಬಿಯ ಆಸ್ಪತ್ರೆಯೊಂದರಲ್ಲಿ ವಾರ್ಷಿಕ ₹1 ಕೋಟಿ ಪ್ಯಾಕೇಜ್ ಉದ್ಯೋಗ ಪಡೆದ ಚಿಂತಾಮಣಿಯ ಶ್ವಾಸಕೋಶ ತಜ್ಞ ಡಾ. ಗಂಗಿರೆಡ್ಡಿ ಅವರು, ಕೌಶಲ್ಯಾಭಿವೃದ್ಧಿ ಇಲಾಖೆಯ ಕಾರ್ಯದರ್ಶಿ ಡಾ. ಸೆಲ್ವಕುಮಾರ್ ಅವರಿಂದ ಉದ್ಯೋಗಕ್ಕೆ ಸಂಬಂಧಿಸಿದ ದಾಖಲೆ ಪತ್ರಗಳನ್ನು ಸ್ವೀಕರಿಸಿದರು. ಈ ಸಂದರ್ಭದಲ್ಲಿ ಇಲಾಖೆಯ ವ್ಯವಸ್ಥಾಪಕ ನಿರ್ದೇಶಕ ಅಶ್ವಿನ್ ಗೌಡ ಹಾಜರಿದ್ದರು.

ಪ್ರಮೀಳೆಯರಿಗೆ ಅಭಯ- ಬಲ ತಂದ ಸ್ವಸಹಾಯ

ಯಡಿಯೂರಪ್ಪ ನೇತೃತ್ವದ ಬಿಜೆಪಿ ಸರ್ಕಾರ ಎರಡು ವರ್ಷಗಳಲ್ಲಿ ಗ್ರಾಮೀಣ ಭಾಗದ ಆರ್ಥಿಕತೆ ಶಕ್ತಿಯಾಗಿರುವ ಮಹಿಳಾ ಸ್ವಸಹಾಯ ಸಂಘಗಳ ಬಲವರ್ಧನೆಯತ್ತ ಮಹತ್ವದ ಹೆಜ್ಜೆ ಇಟ್ಟಿದೆ. ಸ್ವ ಉದ್ಯೋಗದಿಂದ ಆರ್ಥಿಕ ಸ್ವಾವಲಂಬನೆ ಸಾಧಿಸುತ್ತಿರುವ, ಗ್ರಾಮ ಮಟ್ಟದ ಸಂಜೀವಿನಿ ಘಟಕಗಳಡಿ ಕಾರ್ಯನಿರ್ವಹಿಸುವ 17,121 ಮಹಿಳಾ ಸ್ವಸಹಾಯ ಗುಂಪುಗಳಿಗೆ 'ಡೇ-ಎನ್‌ಆರ್‌ಎಲ್‌ಎಂ (ರಾಷ್ಟ್ರೀಯ ಜೀವನೋಪಾಯ ಇಲಾಖೆ) ಮತ್ತು ಎನ್‌ಆರ್‌ಇಟಿಪಿ (ನ್ಯಾಷನಲ್ ರೂರಲ್ ಎಕನಾಮಿಕ್ ಟ್ರಾನ್ಸ್‌ಫಾರ್ಮೇಷನ್ ಪ್ರಾಜೆಕ್ಟ್) ಕಾರ್ಯಕ್ರಮ ಗಳ ಅಡಿಯಲ್ಲಿ ಕೆಲ ದಿನಗಳ ಹಿಂದೆಯಷ್ಟೇ ₹149 ಕೋಟಿ ಸಮುದಾಯ ಬಂಡವಾಳ ನಿಧಿ ಬಿಡುಗಡೆ ಮಾಡಲಾಗಿದೆ.

ರಾಜ್ಯದಲ್ಲಿ ಎನ್‌ಆರ್‌ಎಲ್‌ಎಂ ಯೋಜನೆಯ ಅಡಿಯಲ್ಲಿ 5.33 ಲಕ್ಷ ಬಡ ಮಹಿಳೆಯರನ್ನು ಒಗ್ಗೂಡಿಸಿ 53314 ಸ್ವ ಸಹಾಯ ಗುಂಪು ಗಳನ್ನು ರಚಿಸಲಾಗಿದೆ. ಈ ಪೈಕಿ 39383 ಸ್ವ ಸಹಾಯ ಗುಂಪುಗಳಿಗೆ ಈಗಾಗಲೇ ₹ 381.47 ಕೋಟಿಯಷ್ಟು ಸಮುದಾಯ ಬಂಡವಾಳ ನಿಧಿ ಕೊಡಲಾಗಿದೆ.

ದೀನ್ ದಯಾಳ್ ಅಂತ್ಯೋದಯ ಯೋಜನೆ--ರಾಷ್ಟ್ರೀಯ ನಗರ ಜೀವನೋಪಾಯ ಅಭಿಯಾನ (ಡೇ ನಲ್ಮ್) ಅಡಿಯಲ್ಲಿ ಈಗಾಗಲೇ ರಾಜ್ಯದ ನಗರ ಪ್ರದೇಶಗಳಲ್ಲಿ 22075 ಮಹಿಳಾ ಸ್ವ ಸಹಾಯ ಗುಂಪುಗಳನ್ನು ರಚನೆ ಮಾಡಿ ₹22.07 ಕೋಟಿ ಆವರ್ತ ನಿಧಿ ಕೊಡಲಾಗಿದೆ. ಜತೆಗೆ, 762 ನಗರ ಪ್ರದೇಶದ ಒಕ್ಕೂಟಗಳನ್ನೂ ರಚಿಸಲಾಗಿದ್ದು ಅವುಗಳಿಗೆ ತಲಾ ₹50,000 ದಂತೆ ₹3.81 ಕೋಟಿ ಆವರ್ತ ನಿಧಿಯನ್ನು ವಿತರಿಸಲಾಗಿದೆ. ಈ ನೆರವು ಮಹಿಳೆಯರ ಆರ್ಥಿಕ ಸಬಲೀಕರಣಕ್ಕೆ ನೆರವಾಗಿದೆ.

ಅಲ್ಲದೆ, ಇದೇ ಅಭಿಯಾನದಡಿ ಸ್ವಯಂ ಉದ್ಯೋಗ ಕಾರ್ಯಕ್ರಮಕ್ಕಾಗಿ ವೈಯಕ್ತಿಕ ಕಿರು ಉದ್ಯಮ ಸ್ಥಾಪಿಸಲು ಈಗಾಗಲೇ 15087 ಫಲಾನುಭವಿಗಳಿಗೆ ₹ 226.30 ಕೋಟಿ ಹಾಗೂ ಕಿರು ಉದ್ಯಮ ಸ್ಥಾಪಿಸಲು 579 ಫಲಾನುಭವಿಗಳಿಗೆ ಬ್ಯಾಂಕ್ ಮೂಲಕ ₹24.31 ಕೋಟಿ ಸಾಲಸೌಲಭ್ಯ ವಿತರಿಸಲಾಗಿದೆ.

ಕೋವಿಡ್ ಕಾಲದಲ್ಲೂ ಕ್ರಿಯಾಶೀಲವಾಗಿದ್ದ ಸ್ವಸಹಾಯ ಗುಂಪುಗಳು!!

- 2020ರಲ್ಲಿ ಕೋವಿಡ್ ಮೊದಲ ಅಲೆ ರಾಜ್ಯಕ್ಕೆ ಅಪ್ಪಳಿಸಿದಾಗ ದಿಢೀರನೆ ಮಾಸ್ಕ್ ಬೇಡಿಕೆ ಹೆಚ್ಚಾಯಿತು. ಮಾರುಕಟ್ಟೆಯಲ್ಲಿ ಮಾಸ್ಕ್‌ಗಳ ಕೊರತೆ ಉಂಟಾಯಿತು. ಆ ವೇಳೆ ರಾಜ್ಯದಾದ್ಯಂತ ಸಂಜೀವಿನಿ ಅಭಿಯಾನದ ಅಡಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದ 17,121 ಮಹಿಳಾ ಸ್ವಸಹಾಯ ಸಂಘಗಳಲ್ಲಿ ಟೈಲರಿಂಗ್ ಮಾಡುತ್ತಿದ್ದವರು ಅಪಾರ ಪ್ರಮಾಣದಲ್ಲಿ ಮಾಸ್ಕ್‌ಗಳನ್ನು ಹೊಲಿದು ಕೊಟ್ಟರು. ಲಕ್ಷಾಂತರ ಸಂಖ್ಯೆಯಷ್ಟು ಮಾಸ್ಕ್‌ಗಳು ಜನರಿಗೆ ಲಭ್ಯವಾದವು.
- ಕೋವಿಡ್‌ನಿಂದಾಗಿ ಇಡೀ ದೇಶವೇ ಸ್ತಬ್ಧವಾಗಿದ್ದಾಗಲೂ ಹಳ್ಳಿಗಳಲ್ಲಿ ಸಂಜೀವಿನಿ ಸ್ವಸಹಾಯ ಗುಂಪುಗಳು ಕ್ರಿಯಾಶೀಲವಾಗಿದ್ದವು. ಈ ಗುಂಪುಗಳ ಮಹಿಳೆಯರು ಫಿನಾಯಲ್‌ನಂಥ ಕ್ರಿಮಿನಾಶಕ, ಮಾಸ್ಕ್ ಹೊಲಿಗೆ, ಗ್ರಾಮ ಮಟ್ಟದಲ್ಲಿ ಜಾಗೃತಿ ಮೂಡಿಸುವುದು ಸೇರಿದಂತೆ ಅನೇಕ ಕಾರ್ಯಗಳಲ್ಲಿ ತೊಡಗಿಸಿಕೊಂಡಿದ್ದರು.

ಕ್ಷೀರ ಸಂಜೀವಿನಿ ಎಂಬ ವರದಾನ

ಗ್ರಾಮೀಣ ಕಡು ಬಡ ಮಹಿಳೆಯರಿಗೆ ವರದಾನವಾಗಬಲ್ಲ 'ಕ್ಷೀರ ಸಂಜೀವಿನಿ ಯೋಜನೆ'ಯ ಒಪ್ಪಂದವು ಕರ್ನಾಟಕ ರಾಜ್ಯ ಗ್ರಾಮೀಣ ಜೀವನೋಪಾಯ ಸಂವರ್ಧನ ಸಂಸ್ಥೆ-ಸಂಜೀವಿನಿ ಹಾಗೂ ಕರ್ನಾಟಕ ಸಹಕಾರಿ ಹಾಲು ಉತ್ಪಾದಕರ ಮಹಾಮಂಡಳಿ (ಕೆಎಂಎಫ್) ನಡುವೆ ಏರ್ಪಟ್ಟಿದೆ. ಈ ಯೋಜನೆ ₹10.32 ಕೋಟಿ ವೆಚ್ಚದಲ್ಲಿ ಕಾರ್ಯಗತವಾಗುತ್ತಿದೆ. 5,000 ಕ್ಕೂ ಹೆಚ್ಚು ಬಡ ಮಹಿಳೆಯರಿಗೆ ಅನುಕೂಲವಾಗಲಿದೆ.

ಈಗಾಗಲೇ ಈ ಯೋಜನೆಯ ಮೊದಲ ಹಂತವು ಜಾರಿಯಾಗಿದ್ದು, ಅರ್ಹ ಬಡ ಮತ್ತು ಕಡುಬಡ ಕುಟುಂಬಗಳ ಮಹಿಳೆಯರನ್ನು ಗುರುತಿಸಿ 250 ಮಹಿಳಾ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಮೂಲಕ ಸಂಘಟಿಸಿ ಈ ಎಲ್ಲ ಮಹಿಳೆಯರಿಗೆ ಹೈನುಗಾರಿಕೆ ಕುರಿತಂತೆ ವಿವಿಧ ಬಗೆಯ ತಾಂತ್ರಿಕ ತರಬೇತಿ, ಶೈಕ್ಷಣಿಕ ಪ್ರವಾಸ, ಬ್ಯಾಂಕ್ ಮೂಲಕ ಸಾಲ ಸೌಲಭ್ಯ ಕಲ್ಪಿಸುವುದು ಮತ್ತು 9,945 ಆರೋಗ್ಯವಂತ ಹೈನು ರಾಸುಗಳನ್ನು ಖರೀದಿಸಿ ವಿಮೆ ಮಾಡಿಸಲಾಗಿದೆ. ❖



ಬಿಡದಿಯಲ್ಲಿನ ಟೊಯೊಟಾ, ಘಟಕಕ್ಕೆ ಸಚಿವ ಡಾ. ಸಿ.ಎನ್. ಅಶ್ವತ್ಥನಾರಾಯಣ ಭೇಟಿ ನೀಡಿದ ಕ್ಷಣ

ನಿಧನ ವಾರ್ತೆ

ಸೋಮಶೇಖರ್

ಬೆಂಗಳೂರು: ಬಿಬಿಎಂಪಿ ನಿವೃತ್ತ ಕಂದಾಯ ಪರಿವೀಕ್ಷಕ ಎನ್. ಸೋಮಶೇಖರ್ (74) ಶುಕ್ರವಾರ ರಾತ್ರಿ ನಿಧನರಾದರು.

ಬನಶಂಕರಿ ಮೂರನೇ ಹಂತದ ಕತ್ರಿಗುಪ್ಪೆಯಲ್ಲಿ ವಾಸವಿದ್ದ ಇವರಿಗೆ ಪತ್ನಿ, ಇಬ್ಬರು ಪುತ್ರರು ಹಾಗೂ ಇಬ್ಬರು ಪುತ್ರಿಯರು ಇದ್ದಾರೆ. ವಿಲ್ಸನ್ ಗಾರ್ಡನ್ ಚಿತಾಗಾರದಲ್ಲಿ ಅಂತ್ಯಕ್ರಿಯೆ ಶನಿವಾರ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಇಂದು ಉಚಿತ ಆರೋಗ್ಯ ಶಿಬಿರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜರಾಜೇಶ್ವರಿ ನಗರ ವಿಕಾಸ ಚಾರಿಟಬಲ್ ಟ್ರಸ್ಟ್ ವತಿಯಿಂದ ಶಾಸಕ ಎಂ.ಮುನಿರತ್ನ ಅವರ ಹುಟ್ಟುಹಬ್ಬದ ಅಂಗವಾಗಿ ಸುಂಕದಕಟ್ಟೆಯ ಎಂ.ಇ.ಎಸ್ ಪಬ್ಲಿಕ್ ಶಾಲೆಯಲ್ಲಿ ಇದೇ 25 ರಂದು (ಭಾನುವಾರ) ಬೆಳಿಗ್ಗೆ 9.30ರಿಂದ ಆರೋಗ್ಯ ತಪಾಸಣಾ ಉಚಿತ ಶಿಬಿರ ಆಯೋಜಿಸಲಾಗಿದೆ.

'ಕಣ್ಣಿನ ಶಸ್ತ್ರಚಿಕಿತ್ಸೆ, ಉಚಿತ ಕನ್ನಡಕ ವಿತರಣೆ ಮತ್ತು ಮೆಡಿಸ್ಕೋಪ್ ಬ್ಲಡ್ ಬ್ಯಾಂಕ್ ವತಿಯಿಂದ ಬೃಹತ್ ರಕ್ತದಾನ ಶಿಬಿರವನ್ನು ಹಮ್ಮಿಕೊಳ್ಳಲಾಗಿದೆ' ಎಂದು ವಿಕಾಸ ಚಾರಿಟೆಬಲ್ ಟ್ರಸ್ಟನ ಅಧ್ಯಕ್ಷ ಕೆ.ಎಸ್.ಯೋಗೇಶ್ ತಿಳಿಸಿದ್ದಾರೆ. **ಸಂಪರ್ಕ:** 8095293430

ಹೊರಗೆ ಹೋಗುವಾಗ ಮುಖಗವಸು ಧರಿಸಿ

ಹುತಾತ್ಮ ಆರೋಗ್ಯ ಕಾರ್ಯಕರ್ತರ ಮಕ್ಕಳಿಗೆ 2 ಲಕ್ಷ ರೂ. ವಿದ್ಯಾರ್ಥಿ ವೇತನ ಹಾಗೂ ಉದ್ಯೋಗ ಕೊಡಿಸುವ ಭರವಸೆ

ಕೋವಿಡ್ ಸಂದರ್ಭದಲ್ಲಿ ಪ್ರಾಣದ ಹಂಗು ತೊರೆದು ಹಗಲಿರುವ ಶ್ರಮಿಸುತ್ತಿರುವ ಆರೋಗ್ಯ ಪ್ರತಿನಿಧಿಗಳಿಗೆ ಎಷ್ಟು ಧನ್ಯವಾದ ಸಲ್ಲಿಸಿದರೂ ಕಡಿಮೆಯೇ. ಕಾವೇರಿ ಆಸ್ಪತ್ರೆಯವರು ಈ ಎಲ್ಲಾ ಕಾರ್ಯಕರ್ತರನ್ನು ಗುರುತಿಸಿ ಸನ್ಮಾನಿಸುವ ಉದ್ದೇಶದಿಂದ ಕೃತಜ್ಞ ಕಾರ್ಯಕ್ರಮವನ್ನು ಏರ್ಪಡಿಸಿದ್ದಾರೆ.

ಇದೇ ಜುಲೈ 19ರಂದು ಈ ಕೃತಜ್ಞ ಕಾರ್ಯಕ್ರಮದ ಭಾಗವಾಗಿ 5 ಕೃತಜ್ಞ ರಥಗಳಿಗೆ ಚಾಲನೆ ನೀಡಲಾಯಿತು. ಚಲನಚಿತ್ರ ನಟರಾದ ರಮೇಶ್ ಅರವಿಂದ್ ಅವರು ಈ ವಾಹನಗಳಿಗೆ ಚಾಲನೆ ನೀಡಿದರು. ಈ ಕೃತಜ್ಞ ವಾಹನಗಳು ನಗರದಾದ್ಯಂತ ಒಟ್ಟು 300ಕ್ಕೂ ಹೆಚ್ಚು ಸರ್ಕಾರಿ ಹಾಗೂ ಖಾಸಗಿ ಆಸ್ಪತ್ರೆಗಳಿಗೆ ತೆರಳಿ ಅಲ್ಲಿ ಕಾರ್ಯನಿರ್ವಹಿಸುತ್ತಿರುವ ವೈದ್ಯರ, ನರ್ಸ್‌ಗಳು, ಆಂಬುಲೆನ್ಸ್ ಡ್ರೈವರ್ ಹೀಗೆ ಆರೋಗ್ಯ ಕ್ಷೇತ್ರದಲ್ಲಿ ಸೇವೆ ಸಲ್ಲಿಸುವ ಯೋಧರನ್ನು ಗುರುತಿಸಿ ಸ್ಥಳದಲ್ಲೇ ಸನ್ಮಾನಿಸಿ ಗೌರವಿಸಲಾಗುತ್ತದೆ. ಇದು ಒಟ್ಟು 12 ದಿನಗಳ ಕಾಲ ನಡೆಯಲಿದ್ದು ಜುಲೈ 31ರಂದು ಇದರ ಸಮಾರೋಪ ಸಮಾರಂಭ ಜರುಗಲಿದೆ. ಮಾನ್ಯ ಉಪಮುಖ್ಯಮಂತ್ರಿ ಡಾ.ಅಶ್ವತ್ಥ ನಾರಾಯಣ ಅವರು ಉದ್ಘಾಟಿಸಲಿದ್ದಾರೆ.

ಕೃತಜ್ಞ ವಾಹನಗಳಿಗೆ ಚಾಲನೆ ನೀಡಿ ಮಾತನಾಡಿದ ನಟ ರಮೇಶ್ ಅರವಿಂದ, ಆರೋಗ್ಯ ಕ್ಷೇತ್ರದಲ್ಲಿ ಕೆಲಸ ಮಾಡುವವರ ತ್ಯಾಗ ದೊಡ್ಡದು. ನಾವು ಈ ಎರಡು ವರ್ಷದಲ್ಲಿ ಧನ್ಯವಾದ ಹೇಳಲೇ ಬೇಕಾದ ವರ್ಗವೆಂದರೆ ಅದು ಆರೋಗ್ಯ ಕ್ಷೇತ್ರದಲ್ಲಿ ಕೆಲಸ ಮಾಡವವರಿಗೆ. ಇಂದು ಕೋವಿಡ್‌ಗೆ ಲಸಿಕೆ ದೊರೆತಿರಬಹುದು. ಆದರೆ, ಅದನ್ನು ಹಾಕಲೂ ಸಹ ಆರೋಗ್ಯ ಕಾರ್ಯಕರ್ತರೇ ಬೇಕು. ಹೀಗಾಗಿ ಪ್ರತಿಯೊಬ್ಬ ಫ್ರಂಟ್ ಲೈನ್ ವಾರಿಯರ್ಸ್‌ಗಳಿಗೆ ಧನ್ಯವಾದ ಅರ್ಪಿಸೋಣ ಎಂದರು.

ಕಾವೇರಿ ಆಸ್ಪತ್ರೆ ಅಧ್ಯಕ್ಷರು ಹಾಗೂ ಸಂಘಟನಾ ನಿರ್ದೇಶಕರಾದ ಡಾ. ವಿಜಯ ಭಾಸ್ಕರನ್ ಮಾತನಾಡಿ, ಕಾವೇರಿ ಆಸ್ಪತ್ರೆ ವತಿಯಿಂದ ಆರೋಗ್ಯ ಕಾರ್ಯಕರ್ತರಿಗೆ ಧನ್ಯವಾದ ಅರ್ಪಿಸುವ ಸಾಮಾಜಿಕ ಕಳಕಳಿಯ ಕಾರ್ಯಕ್ರಮ ಹಮ್ಮಿಕೊಂಡಿದ್ದೇವೆ. ಜುಲೈ 31ರಂದು ಇದರ ಅದ್ಧೂರಿ ಕಾರ್ಯಕ್ರಮ ನಡೆಯಲಿದೆ. ಹುತಾತ್ಮ ಆರೋಗ್ಯ ಕಾರ್ಯಕರ್ತರ ಮಕ್ಕಳ ವಿದ್ಯಾಭ್ಯಾಸಕ್ಕಾಗಿ 2 ಲಕ್ಷ ರೂಪಾಯಿವರೆಗೆ ವಿದ್ಯಾರ್ಥಿ ವೇತನ ಹಾಗೂ

ನಟ ರಮೇಶ್ ಅವರು ಕೃತಜ್ಞ ವಾಹನಗಳಿಗೆ ಚಾಲನೆ ನೀಡಿದರು. ಸಂಘಟನಾ ಸಮಿತಿ ಅಧ್ಯಕ್ಷ ಹಾಗೂ ಕಾವೇರಿ ಆಸ್ಪತ್ರೆ ಕಾರ್ಯನಿರ್ವಾಹಕ ನಿರ್ದೇಶಕ ಡಾ. ವಿಜಯ ಭಾಸ್ಕರನ್ ಉಪಸ್ಥಿತರಿದ್ದರು

ಆರೋಗ್ಯ ಕಾರ್ಯಕರ್ತರನ್ನು ಗುರುತಿಸಿ ಸನ್ಮಾನಿಸುವ ಕೃತಜ್ಞ ಕಾರ್ಯಕ್ರಮದ ಅಂಗವಾಗಿ ಮೊದಲ ದಿನ ಕೃತಜ್ಞ ವಾಹನದಲ್ಲಿ ತೆರಳಿದ ಕಾವೇರಿ ಆಸ್ಪತ್ರೆಯ ತಂಡವು ವಿಕ್ಟೋರಿಯಾ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕರಾದ ಡಾ. ರಮೇಶ್ ಕೃಷ್ಣ ಅವರನ್ನು ಭೇಟಿ ಮಾಡಿ ಸನ್ಮಾನಿಸಿ, ಪಶಸ್ತಿ ಪದಕ ವಿತರಿಸಲಾಯಿತು.

ಪದವೀಧರ ಮಕ್ಕಳಿಗೆ ಉದ್ಯೋಗ ಕೊಡಿಸುವ ಯೋಜನೆ ಹಾಕಿಕೊಂಡಿದ್ದೇವೆ. ಈ ಕೃತಜ್ಞ ಕಾರ್ಯಕ್ರಮದ ಮೂಲಕ ಆರೋಗ್ಯ ಕಾರ್ಯಕರ್ತರಿಗೆ ಅರ್ಥಪೂರ್ಣ ಧನ್ಯವಾದ ಹೇಳುವುದು ನಮ್ಮ ಉದ್ದೇಶವಾಗಿದೆ ಎಂದರು. ಈಗಾಗಲೇ ವಾಹನಗಳು ನಗರದ ಎಲ್ಲಾ ಆಸ್ಪತ್ರೆಗಳಿಗೆ ತೆರಳಿ ಅಲ್ಲಿನ ಸಿಬ್ಬಂದಿಗೆ ಸನ್ಮಾನ ಮಾಡುವ ಕೆಲಸ ನಡೆಯುತ್ತಿದೆ. ಎಲ್ಲಾ ಆಸ್ಪತ್ರೆಗಳಿಗೂ ತೆರಳುತ್ತಿರುವುದು ಅತ್ಯಂತ ಸಂತೋಷ ನೀಡುತ್ತಿದೆ. ಅಲ್ಲಿನ ಸಿಬ್ಬಂದಿಗಳ ಅನುಭವ ಕೇಳಿದರೆ ರೋಮಾಂಚನವೆನಿಸಿ, ನಮ್ಮ ಈ ಕೆಲಸ ಸಾರ್ಥಕವೆನಿಸುತ್ತದೆ ಎಂದರು.

ಕಾವೇರಿ ಆಸ್ಪತ್ರೆ ಫಿಸಿಲಿಟಿ ಡೈರೆಕ್ಟರ್ ವಿಲ್ಫ್ರೆಡ್ ಸ್ಯಾಮ್ಸನ್ ಮಾತನಾಡಿ, ಈ ಕೃತಜ್ಞ ಕಾರ್ಯಕ್ರಮದ ಮತ್ತೊಂದು ವಿಶೇಷವೆಂದರೆ, ಕೋವಿಡ್ ಚಿಕಿತ್ಸೆಗಾಗಿ ವಿವಿಧ ಆವಿಷ್ಕಾರ ಮಾಡಿದ ಆಸ್ಪತ್ರೆಗಳನ್ನು ಗುರುತಿಸಿ ಪ್ರಶಸ್ತಿ ನೀಡಲಿದ್ದೇವೆ ಎಂದರು. ಉದಾಹರಣೆಗೆ, ಸ್ವಯಂ ಆಕ್ಸಿಜನ್ ಪ್ಲಾಂಟ್ ನಿರ್ಮಾಣ, ಇರುವ ವೈದ್ಯಕೀಯ ವ್ಯವಸ್ಥೆಯನ್ನು ಮೇಲ್ದರ್ಜೆಗೇರಿಸಿರುವುದು ಸೇರಿದಂತೆ ಅನೇಕ ರೀತಿಯ ಆವಿಷ್ಕಾರಗಳು ನಡೆದಿವೆ. ಇಂಥಹ ಆಸ್ಪತ್ರೆಗಳನ್ನು ಗುರುತಿಸಿ ಪ್ರಶಸ್ತಿಗೆ ಆಯ್ಕೆ ಮಾಡಲಾಗುತ್ತದೆ. ಇದಕ್ಕೆ ಕೆಲ ಮಾನದಂಡಗಳು ಅನ್ವಯವಾಗಲಿದೆ ಎಂದು ಹೇಳಿದರು.

ಈ ಸಾಮಾಜಿಕ ಕಳಕಳಿ ಕಾರ್ಯಕ್ರಮಕ್ಕೆ ನಗರ ಪೊಲೀಸ್ ಆಯುಕ್ತರಾದ ಕಮಲ್ ಪಂತ್, ಬಿಬಿಎಂಪಿ ಆಯುಕ್ತರಾದ ಗೌರವ್ ಗುಪ್ತ ಸೇರಿದಂತೆ ವಿವಿಧ ಕ್ಷೇತ್ರದ ಗಣ್ಯರು, ಸಿನಿಮಾ ಕ್ಷೇತ್ರದ ನಟರು ಶುಭಕೋರಿ, ಶ್ಲಾಘನೆ ವ್ಯಕ್ತಪಡಿಸಿದ್ದಾರೆ. ಈ ಕಾರ್ಯಕ್ರಮಕ್ಕೆ ನರ್ಸಿಂಗ್ ಹೋಮ್ಸ್ ಅಸೋಸಿಯೇಷನ್ (ಫನಾ) ಹಾಗೂ ಭಾರತೀಯ ವೈದ್ಯಕೀಯ ಸಂಘ (ಐಎಂಎ) ಅವರ ಸಹಭಾಗಿತ್ವವಿದೆ.

ಕಾವೇರಿ ಆಸ್ಪತ್ರೆ ವತಿಯಿಂದ ನೀಡಲಾಗುತ್ತಿರುವ ವಿದ್ಯಾರ್ಥಿ ವೇತನ ಹಾಗೂ ಉದ್ಯೋಗವಕಾಶಕ್ಕೆ ಕೋವಿಡ್‌ನಿಂದ ಮೃತಪಟ್ಟ ಆರೋಗ್ಯ ಕಾರ್ಯಕರ್ತರ ಅರ್ಹ ಮಕ್ಕಳು ಅರ್ಜಿ ಸಲ್ಲಿಸಬಹುದು.

ಪ್ರಸ್ತುತಿ: ಪಿ.ವಿ, ಬ್ರ್ಯಾಂಡ್ ಸ್ಪಾಟ್

ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ: **8925509222**, http://www.kritagnya.org

|| jai sri gurudev ||

ADICHUNCHANAGIRI UNIVERSITY
(Estd. under Karnataka Act No.18 of 2013)

Adichunchanagiri University established in the year 2018 having more than 5000 students and catering multi- disciplinary courses under its six constituent colleges. Currently looking for Faculty of Medicine for its constituent college

Adichunchanagiri Institute of Medical Sciences

for augmenting the faculty requirement to cater for enhanced intake in UG & PG courses.

RECRUITMENT OF FACULTY: Professor / Associate Professor / Assistant Professor / Senior Residents / Tutors

Sl.No.	DEPARTMENT	POSTS
1.	Anatomy	Assistant Professor
2.	General Medicine	Associate Professor / Assistant Professor / Senior Resident
3.	Emergency Medicine	Professor / Associate Professor Assistant Professor / Senior Resident
4.	Paediatrics	Associate Professor Assistant Professor
5.	Psychiatry	Professor / Junior Resident
6.	Respiratory Medicine	Professor / Associate Professor Assistant Professor / Senior Resident
7.	General Surgery	Associate Professor / Assistant Professor / Senior Resident
8.	Ophthalmology	Associate Professor Senior Resident
9.	Anaesthesiology	Associate Professor / Assistant Professor / Senior Resident
10.	Radio-diagnosis	Associate Professor / Assistant Professor / Senior Resident
11.	Obstetrics & Gynaecology	Associate Professor / Assistant Professor / Senior Resident

Additional Information:
- Qualifications are as per NMC norms & requirement.
- There are more than one position open in Clinical disciplines.
- Salary will be paid as per the AICTE/ACU pay scale
- Salary will not be constraint for super speciality professionals
- Candidates may apply on or before 09.08.2021
- TA/DA will not be paid for attending Interview
- Transportation facility available for faculty travelling from Bengaluru, Mysuru & Mandya
- Preference will be given to faculty willing to reside in B G Nagara, financial assistance will be provided for accommodation.

Application should be sent by mentioning the post applied to HR Head, Adichunchanagiri institute of Medical Sciences, B G Nagara-571448. by post by email to hr@bgsaims.edu.in Call 98451 07851

RAMRAJ
face mask
WASHABLE & REUSABLE
WOVEN FABRIC
MADE IN INDIA
2 LAYER | FIT TO ALL | ANTI DUST | PERFECT FIT | ANTI BACTERIAL | ANTI POLLUTION
UNISEX DESIGN | SOFT ELASTIC EARLOOP | SOFT TOUCH CARBON FINISH FABRIC
Special concession for all corporate order.
Contact : 73730 45147
SHOWROOMS
KEMPEGOWDA ROAD | MALLESHWARAM | KORAMANGALA | BASAVESHWAR NAGAR | RR NAGAR | YESHWANTHPUR
VIJAYA NAGAR | RAJAJI NAGAR | BASAVANAGUDI | JAYA NAGAR | HOSPET | BANASHANKARI | R.T NAGAR
KANAKAPURA | TUMKUR | RAMNAGARA | HESARAGATTA | NELAMANGALA | RAMAMURTHY NAGAR | JP NAGAR | CHINTAMANI
Available at company showroom & all leading textile shops / www.ramrajcotton.in

ಭಾಷಾ ನೀತಿ ಅಗತ್ಯ

ಲೇಖಕ ಡಾ. ಪುರುಷೋತ್ತಮ ಬಿಳಿಮಲೆ ಅಭಿಮತ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಭಾರತಕ್ಕೆ ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯ ಬದಲಿಗೆ ರಾಷ್ಟ್ರೀಯ ಭಾಷಾ ನೀತಿಯ ಅಗತ್ಯ ಇದೆ' ಎಂದು ಲೇಖಕ ಡಾ. ಪುರುಷೋತ್ತಮ ಬಿಳಿಮಲೆ ಅಭಿಪ್ರಾಯಪಟ್ಟರು.

'ರಾಷ್ಟ್ರೀಯ ಶಿಕ್ಷಣ ನೀತಿ ಮತ್ತು ಪ್ರಾದೇಶಿಕ ಅಸ್ಮಿತೆ' ಎಂಬ ವಿಷಯದ ಕುರಿತ ವೆಬಿನಾರ್‌ನಲ್ಲಿ ಶನಿವಾರ ಮಾತನಾಡಿದ ಅವರು, 'ಭಾರತದಲ್ಲಿ 19,569 ಭಾಷೆಗಳಿವೆ. ಅವುಗಳಲ್ಲಿ 22 ಭಾಷೆಗಳನ್ನು ಮಾತ್ರ ಸಂವಿಧಾನದ 8ನೇ ಪರಿಚ್ಛೇದದಲ್ಲಿ ಅಂಗೀಕರಿಸಲಾಗಿದೆ. ಅವುಗಳಲ್ಲಿ ಉತ್ತರ ಭಾರತದ 18 ಭಾಷೆಗಳು ಮತ್ತು ದಕ್ಷಿಣ ಭಾರತದ ನಾಲ್ಕು (ಕನ್ನಡ, ತಮಿಳು, ತೆಲುಗು, ಮಲಯಾಳ) ಭಾಷೆಗಳಿವೆ' ಎಂದು ಹೇಳಿದರು.

ಪುರುಷೋತ್ತಮ ಬಿಳಿಮಲೆ

'ಸದ್ಯ 99 ಭಾಷೆಗಳು ಅಂಗೀಕಾರಕ್ಕೆ ಕಾದಿವೆ. ಇನ್ನೂ ಶೇ 98ರಷ್ಟು ಭಾಷೆಗಳು ಸಂವಿಧಾನದ ಅಂಗೀಕಾರವನ್ನೇ ಪಡೆಯದೆ ಮೂಲೆಗುಂಪಾಗಿವೆ. ಈ ರೀತಿಯ ಭಾಷಾ ಅಸಮಾನತೆಗೆ ಹೊಸ ಶಿಕ್ಷಣ ನೀತಿಯಲ್ಲಿ ಏನು ಉತ್ತರವಿದೆ' ಎಂದು ಪ್ರಶ್ನಿಸಿದರು.

'ಈ ಅಸಮಾನತೆ ನಿವಾರಿಸಬೇಕೆಂದರೆ ಭಾಷಾ ಮಡಿವಂತಿಕೆ ಬಿಡಬೇಕಾಗುತ್ತದೆ. ಒಂದು ಭಾಷೆಯನ್ನು ಮೇಲೆತ್ತಲು ಉಳಿಸಲು ಉಳಿದ ಭಾಷೆಗಳನ್ನು ಕಡೆಗಣಿಸುವುದು ಭಾಷಾ ಅಸ್ಪೃಶ್ಯತೆ. ಈ ಆಧುನಿಕ ಅಸ್ಪೃಶ್ಯತೆ ನಾಶವಾಗಬೇಕೆಂದರೆ ಭಾರತಕ್ಕೊಂದು ರಾಷ್ಟ್ರೀಯ ಭಾಷಾ ನೀತಿ ಅತ್ಯಗತ್ಯ' ಎಂದು ಅವರು ಪ್ರತಿಪಾದಿಸಿದರು.

'ಯಾವುದೇ ಭಾಷೆಯನ್ನೂ ಉಪಭಾಷೆ ಎನ್ನಲಾಗದು. ಯಾರಿಗೆ ಅದು ತಾಯಿ ನುಡಿ ಆಗಿರುತ್ತದೋ, ಅವರಿಗೆ ಅದೇ ಪ್ರಮುಖ ಭಾಷೆ. ಎಲ್ಲಾ ಭಾಷೆಗಳನ್ನೂ ಸಮಾನವಾಗಿ ಕಾಣುವುದೇ ನಿಜವಾದ ಅಸ್ಮಿತೆ' ಎಂದರು.

'ದೇಶದಲ್ಲಿ 19,569 ಭಾಷೆಗಳಿವೆ ಎಂದರೆ, ಅಷ್ಟೇ ಸಂಸ್ಕೃತಿಗಳಿವೆ ಎಂದರ್ಥ. ಭಾರತ ಉಳಿದಿರುವುದೇ ಬಹುತ್ವದ ತಳಹದಿಯಲ್ಲಿ. ಹೊಸ ನೀತಿಗಳಿಂದ ಬಹುತ್ವಕ್ಕೆ ಪೆಟ್ಟು ಬಿದ್ದರೆ ಪ್ರಾದೇಶಿಕ ಅಸ್ಮಿತೆ ಘಾಸಿಗೊಳ್ಳಲಿದೆ' ಎಂದು ಎಚ್ಚರಿಸಿದರು.

'ಹೊಸ ಶಿಕ್ಷಣ ನೀತಿಯು ಹೆಣ್ಣು ಮಕ್ಕಳ ಶಿಕ್ಷಣ ಹಕ್ಕನ್ನು ಕಸಿದುಕೊಳ್ಳುವ ಸಾಧ್ಯತೆ ಇದೆ' ಎಂದು ಶಾಕಿರಾ ಖಾನಮ್ ಕಳವಳ ವ್ಯಕ್ತಪಡಿಸಿದರು.

ಶಿಕ್ಷಣ ತಜ್ಞರಾದ ಡಾ. ಪಿ.ಡಿ. ಶ್ರೀಶರ್, ಡಾ. ಮಲ್ಲಿಕಾರ್ಜುನ ಮೇತ್ರಿ, ನಾಗೇಂದ್ರಪ್ಪ ಔರಾದ, ಶಂಕರ ವಾಲೀಕರ, ಸಮುದಾಯ ಕರ್ನಾಟಕದ ಕೆ.ಎಸ್.ವಿಮಲಾ ಮಾತನಾಡಿದರು.

@SudhaWeekly

ಸುಧಾ ಸದಾ ನಿಮ್ಮ ಸಂಗಾತಿ

ಈ ವಾರದ ವಿಶೇಷ

ಅರವತ್ತು ವರ್ಷಗಳ ನಂತರ ಸಾಮಾನ್ಯವಾಗಿ ಕಾಣಿಸಿಕೊಳ್ಳುತ್ತಿದ್ದ ರಕ್ತದೊತ್ತಡ, ಸಕ್ಕರೆ ಕಾಯಿಲೆಗಳು ಈಗ ನಲವತ್ತರ ಆಸುಪಾಸಿನಲ್ಲೇ ಕಾಣಿಸಿಕೊಳ್ಳುತ್ತಿವೆ. ಗಟ್ಟಿಮುಟ್ಟಾಗಿರುವ ಯುವಜನ ಹೃದಯಾಘಾತಕ್ಕೆ ಒಳಗಾಗುತ್ತಿದ್ದಾರೆ. ಮಕ್ಕಳಲ್ಲಿ ಬೊಜ್ಜು, ಮಧುಮೇಹ ಕಾಣಿಸಿಕೊಳ್ಳುತ್ತಿದೆ. ಇದಕ್ಕೆಲ್ಲ ಏನು ಕಾರಣ? ಮತ್ತೇನಿಲ್ಲ, ನಮ್ಮ ಜೀವನಶೈಲಿಯಲ್ಲಿ ಏರುಪೇರಾಗಿರುವುದು ಹಾಗೂ ಆಹಾರದ ಶಿಸ್ತು ತಪ್ಪಿರುವುದೇ ಅಕಾಲಿಕ ಅನಾರೋಗ್ಯದ ಮೂಲ. ಹಳಿತಪ್ಪಿದ ಜೀವನಶೈಲಿಯೊಂದಿಗೆ ಕೊರೊನಾ ಸೋಂಕು ಕೂಡ ಅನಾರೋಗ್ಯದ ಸಮಸ್ಯೆಗಳನ್ನು ಹೆಚ್ಚಿಸುತ್ತಿದೆ. 'ನಮ್ಮ ಆರೋಗ್ಯ ನಮ್ಮ ಕೈಯಲ್ಲಿ' ಎನ್ನುವ ದೇಹಸ್ವಾಸ್ಥ್ಯದ ಪ್ರಾಥಮಿಕ ಪಾಠ ನೆನಪಿಸಿಕೊಳ್ಳಲು ಇದು ಸಕಾಲ.

ಅಸಹಜ ಜೀವನಶೈಲಿ ಅನಾರೋಗ್ಯಕ್ಕೆ ಮೂಲ!

ರಾಗ ದ್ವೇಷಗಳಾಚೆ ಜೀವನ ಸೌಂದರ್ಯ

ನಡೆದು ನೋಡಿ ಬ್ರುಸೆಲ್ಸ್

ಟೆನಿಸ್ ದೊರೆ ಜೊಕೊವಿಚ್

ಜೀವನ್ಮುಖಿ ಅಮೃತಬಳ್ಳಿ

ಗುರುಪ್ರಸಾದ್ ಕಂಟಲಗೆರೆ ಅವರ ಕಥೆ

ನಾಟಿ ಹುಂಜ

ಲೆಹಂಗಾ ಶರ್ಟ್ ಟ್ರೆಂಡ್

ರುಚಿಕರ, ಆರೋಗ್ಯಕರ ಮರಕೆಸು

ಕಾವ್ಯಾ ಉದಯ ವಾಹಿನಿಯ 'ನಯನತಾರಾ' ದೀಪಾ ಸಂದರ್ಶನ

ನಟನೆಯ ಒಲವಿನ ಪೂಜಾ ಫಲ!



ವಿಜಯ್ ಫಹಾದ್ ಕಮಲ್ ಮಹಾಸಂಗಮ

feedback@sudha.co.in

ಇದೀಗ ಮಾರುಕಟ್ಟೆಯಲ್ಲಿ

Attention!!

Schools / Colleges / Institutions

You can use this space as a navigator tool to guide students who looking out for best education institutes/ options for their future.

DOUBLE POWER PACK
Deccan Herald + Prajavani Education Supplement.
Special rates for admission ads

DH Education Your window to the world of learning Every Tuesday

ಪ್ರಜಾವಾಣಿ ಶಿಕ್ಷಣ Every Monday

For Advertisements booking contact: BANGALORE : Mr. Dinesh Nayak -9986006598
MYSORE : Mr. Rajeev -9606912246 | MANGALORE : Mr. Uday - 99453 37587
DAVANAGERE: Mr. Pramod Bhagawat -9986377083 | HUBLI : Mr. Divakar - 94484 68405
DHARWAD : Mr. Ravi Kulkarni - 9449356126 | GULBARGA: Mr. Guruprakash - 93436 84455

ಬಾಂಗ್ಲಾಗೆ 200 ಟನ್ ಆಮ್ಲಜನಕ

ನವದೆಹಲಿ(ಪಿಟಿಐ): ಭಾರತೀಯ ರೈಲ್ವೆ ಭಾನುವಾರ ಬಾಂಗ್ಲಾದೇಶಕ್ಕೆ 200 ಟನ್ ದ್ರವೀಕೃತ ವೈದ್ಯಕೀಯ ಆಮ್ಲಜನಕವನ್ನು ತಲುಪಿಸಲಿದೆ.

ದೇಶದ ಹೊರಗೆ ಇದೇ ಮೊದಲ ಬಾರಿ ಆಮ್ಲಜನಕವನ್ನು ಪೂರೈಸಲಾಗುತ್ತಿದೆ. 10 ಕಂಟೈನರ್‌ಗಳನ್ನು ಒಳಗೊಂಡ ರೈಲು ಜಾರ್ಖಂಡ್‌ನ ಟಾಟಾನಗರದಿಂದ ಶನಿವಾರ ಸಂಚಾರ ಆರಂಭಿಸಿದ್ದು, ಬಾಂಗ್ಲಾದೇಶದ ಬೆನಾಪೋಲ್ ಅನ್ನು ಭಾನುವಾರ ಬೆಳಿಗ್ಗೆ ತಲುಪುವ ನಿರೀಕ್ಷೆ ಇದೆ.

ಕೋವಿಡ್ ಎರಡನೇ ಅಲೆಯ ಸಂದರ್ಭದಲ್ಲಿ ಆಮ್ಲಜನಕದ ಕೊರತೆಯಾಗಿದ್ದಾಗ ರೈಲ್ವೆ ಇಲಾಖೆ 'ಆಕ್ಸಿಜನ್ ಎಕ್ಸ್‌ಪ್ರೆಸ್' ರೈಲುಗಳನ್ನು ಆರಂಭಿಸಿತ್ತು.

ಜಯನಗರದ ನಂಜನಗೂಡು ಶ್ರೀರಾಘವೇಂದ್ರ ಸ್ವಾಮಿ ಮಠದಲ್ಲಿ ವಿಶೇಷ ಪೂಜೆ ನಡೆಯಿತು

ಗಾಂಧಿನಗರದ ಮಹಾಬೋಧಿ ಸೊಸೈಟಿಯಲ್ಲಿ ಗುರುಪೂರ್ಣಿಮಾ ಅಂಗವಾಗಿ ಬುದ್ಧನ ಮೂರ್ತಿಗೆ ಜನರು ಪ್ರಾರ್ಥನೆ ಸಲ್ಲಿಸಿದರು –ಪ್ರಜಾವಾಣಿ ಚಿತ್ರ (ಎಡಚಿತ್ರ) ಮಲ್ಲೇಶ್ವರದ ಸಾಯಿ ಮಂದಿರದಲ್ಲಿ ಉಪಮುಖ್ಯಮಂತ್ರಿ ಡಾ.ಸಿ.ಎನ್.ಅಶ್ವತ್ಥನಾರಾಯಣ ಪೂಜೆ ಸಲ್ಲಿಸಿದರು

ಭಕ್ತರ ದರ್ಶನಕ್ಕೆ ವಿಶೇಷ ವ್ಯವಸ್ಥೆ • ಕೋವಿಡ್ ನಿಯಮಗಳ ಪಾಲನೆ

ಗುರು ಪೂರ್ಣಿಮಾ: ವಿಶೇಷ ಪೂಜೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗುರು ಪೂರ್ಣಿಮಾ ಪ್ರಯುಕ್ತ ನಗರದ ದೇವಸ್ಥಾನಗಳಲ್ಲಿ ಶನಿವಾರ ವಿಶೇಷ ಪೂಜಾ ಕೈಂಕರ್ಯಗಳು ನೆರವೇರಿದವು. ದೇವರಿಗೆ ವಿಶೇಷ ಅಲಂಕಾರಗಳನ್ನು ಮಾಡಿದ್ದರಿಂದ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ದೇವಸ್ಥಾನಗಳಿಗೆ ಬಂದು ದರ್ಶನ ಮಾಡಿಕೊಂಡರು.

ಭಕ್ತಾದಿಗಳ ಸುರಕ್ಷತಾ ದೃಷ್ಟಿಯಿಂದ ದೇವಸ್ಥಾನಗಳಲ್ಲಿ ಬ್ಯಾರಿಕೇಡ್‌ಗಳನ್ನು ಜೋಡಿಸುವ ಮೂಲಕ ಅಂತರ ಕಾಯ್ದುಕೊಂಡು, ದೇವರ ದರ್ಶನಕ್ಕೆ ಅವಕಾಶ ಕಲ್ಪಿಸಲಾಗಿತ್ತು. ಕೆಲವು ದೇವಸ್ಥಾನ ಮಂಡಳಿಗಳು ಭಕ್ತರಿಗೆ ಸೋಂಕು ನಿವಾರಕ ದ್ರಾವಣ ನೀಡುವ ಹಾಗೂ ದೇಹದ ಉಷ್ಣಾಂಶ ತಪಾಸಣೆ ನಡೆಸುವ ವ್ಯವಸ್ಥೆ ಮಾಡಿದ್ದವು. ಮಾಸ್ಕ್ ಧರಿಸಿದವರಿಗೆ ಮಾತ್ರ ದೇವಾಲಯದ ಒಳಗೆ ಪ್ರವೇಶ ಕಲ್ಪಿಸಲಾಗಿತ್ತು.

ಕೆಲವು ದೇವಸ್ಥಾನಗಳಲ್ಲಿ ದೂರದಿಂದಲೇ ದೇವರ ದರ್ಶನ ಮಾಡುವಂತೆ ಭಕ್ತರಿಗೆ ಸೂಚಿಸಲಾಗಿತ್ತು. ಗುರು ಪೂರ್ಣಿಮಾ ಅಂಗವಾಗಿ ಭಕ್ತಾದಿಗಳಿಗೆ ಪ್ರಸಾದ ವಿತರಣೆ ನಡೆಯಿತು. ವಿಶೇಷ ಭಜನೆಗಳು, ಸಂಗೀತ ಕಾರ್ಯಕ್ರಮಗಳೂ ಏರ್ಪಾಡಾಗಿದ್ದವು.

ಮಲ್ಲೇಶ್ವರ, ಯಶವಂತಪುರ, ರಾಜಾನುಕುಂಟೆ, ಆರ್.ಟಿ.ನಗರ, ನಾಯಂಡಹಳ್ಳಿ, ತ್ಯಾಗರಾಜನಗರದ ಶ್ರೀಸಾಯಿ ಬಾಬಾ ದೇವಸ್ಥಾನಗಳಲ್ಲಿ ದೇವರಿಗೆ ವಿಶೇಷ ಅಲಂಕಾರ ಮಾಡಲಾಗಿತ್ತು. ಉದ್ದಂಡಹಳ್ಳಿಯ ಸಾಯಿಬಾಬಾ ಮಂದಿರದಲ್ಲಿ ಸದ್ಗುರು ಸಾಯಿ ಭಜನಾ ಮಂಡಳಿಯಿಂದ ಭಜನೆ ಹಾಗೂ ದೀಪೋತ್ಸವ ವಿಶೇಷವಾಗಿತ್ತು.

ಜಯನಗರದ ನಂಜನಗೂಡು ಶ್ರೀರಾಘವೇಂದ್ರ ಸ್ವಾಮಿ ಮಠದಲ್ಲಿ ಹಿರಿಯ ವ್ಯವಸ್ಥಾಪಕ ಆರ್.ಕೆ. ವಾದೀಂದ್ರ ಆಚಾರ್ಯರ ನೇತೃತ್ವದಲ್ಲಿ ಗುರು ಪೂರ್ಣಿಮಾ ಪ್ರಯುಕ್ತ ರಾಯರ ಬೃಂದಾವನಕ್ಕೆ ಕ್ಷೀರಾಭಿಷೇಕ ನಡೆಯಿತು. ಹೂವಿನ ಅಲಂಕಾರ ಹಾಗೂ ಗುರುರಾಯರ ಪಾದಪೂಜೆ, ಪುಷ್ಪಾರ್ಚನೆ, ಕನಕಾಭಿಷೇಕಗಳನ್ನು ಭಕ್ತರು ಕಣ್ತುಂಬಿಕೊಂಡರು. ಸತ್ಯ ನಾರಾಯಣ ವ್ರತಗಳಲ್ಲಿ ಭಾಗವಹಿಸಿದರು.

ವಿಶೇಷ ಪೂಜೆ ಸಲ್ಲಿಸಿದ ಅಶ್ವತ್ಥ ನಾರಾಯಣ: ಗುರು ಪೂರ್ಣಿಮಾ ಪ್ರಯುಕ್ತ ಉಪಮುಖ್ಯಮಂತ್ರಿ ಡಾ. ಸಿ.ಎನ್.ಅಶ್ವತ್ಥನಾರಾಯಣ ಅವರು ವಿವಿಧ ದೇವಾಲಯಗಳಿಗೆ ಭೇಟಿ ನೀಡಿ ಪೂಜೆ ಸಲ್ಲಿಸಿದರು.

ಮಲ್ಲೇಶ್ವರದ ಯತಿರಾಜ ಮಠಕ್ಕೆ ಭೇಟಿ ನೀಡಿ ಯದುಗಿರಿ ಯತಿರಾಜ ನಾರಾಯಣ ರಾಮಾನುಜ ಜೀಯರ್ ಸ್ವಾಮೀಜಿಯ ಆಶೀರ್ವಾದ ಪಡೆದರು. ರಾಜಾಜಿನಗರದ ಶನಿ ಮಹಾತ್ಮ ದೇವಸ್ಥಾನ, ಸಂಪಿಗೆ ರಸ್ತೆಯ ಸಾಯಿ ಮಂದಿರಗಳಲ್ಲಿ ಪ್ರಾರ್ಥನೆ ಸಲ್ಲಿಸಿದರು.

11 ಭಾಷೆಗಳಲ್ಲಿ 'ಆನ್‌ಲೈನ್ ಪ್ರವಚನ'

ಸನಾತನ ಸಂಸ್ಥೆ ಹಾಗೂ ಹಿಂದೂ ಜನಜಾಗೃತಿ ಸಮಿತಿಯು ಜಂಟಿಯಾಗಿ ಆನ್‌ಲೈನ್ ವೇದಿಕೆಯಲ್ಲಿ 'ಗುರುಪೂರ್ಣಿಮಾ ಮಹೋತ್ಸವ' ಹಮ್ಮಿಕೊಂಡಿತ್ತು.

ಸ್ವಯಂರಕ್ಷಣೆ, ನೆರೆಹಾವಳಿ, ಮನೆ ಔಷಧದ ಪ್ರಾಮುಖ್ಯತೆ, ತುರ್ತು ಚಿಕಿತ್ಸೆ, ನೈಸರ್ಗಿಕ ವಿಕೋಪಗಳ ವೇಳೆ ಸಿದ್ಧತೆ, ಆಪತ್ಕಾಲದಲ್ಲಿ ರಕ್ಷಣೆಗೆ ಧಾವಿಸುವ ಕುರಿತು ರಾಜ್ಯ ಸನಾತನ ಸಂಸ್ಥೆಯ ಧರ್ಮಪ್ರಚಾಕರ ರಮಾನಂದ ಗೌಡ ಪ್ರವಚನ ನೀಡಿದರು.

ಸನಾತನ ಸಂಸ್ಥೆಯ 'ಧರ್ಮ ಕಾರ್ಯಕ್ಕಾಗಿ ಜಾಹೀರಾತು, ಇತ್ಯಾದಿ ಅರ್ಪಣೆ ಪಡೆಯುವುದು ಸಮಷ್ಟಿ ಸಾಧನೆ!' ಎಂಬ ಗ್ರಂಥವನ್ನು ರಮಾನಂದ ಗೌಡ ಬಿಡುಗಡೆ ಮಾಡಿದರು.

ಕನ್ನಡ, ಮರಾಠಿ, ತೆಲುಗು, ಕನ್ನಡ, ತಮಿಳು, ಮಲಯಾಳಿ, ಇಂಗ್ಲಿಷ್, ಹಿಂದಿ, ಗುಜರಾತಿ ಸೇರಿದಂತೆ ಒಟ್ಟು 11 ಭಾಷೆಗಳಲ್ಲಿ ಪ್ರವಚನ ನೀಡಲಾಯಿತು. ಯೂಟ್ಯೂಬ್ ವಾಹಿನಿ ಮುಖಾಂತರ ಕಲ್ಪಿಸಿದ್ದ ನೇರಪ್ರಸಾರದಲ್ಲಿ ವಿವಿಧ ರಾಜ್ಯಗಳಿಂದ 90 ಸಾವಿರಕ್ಕೂ ಹೆಚ್ಚು ಭಕ್ತಾದಿಗಳು ಭಾಗವಹಿಸಿದ್ದರು.

ಸಾಯಿ ಮಂದಿರದಲ್ಲಿ 'ವೈದ್ಯಕೀಯ ಅಲಂಕಾರ'

ಜೆ.ಪಿ.ನಗರದ ಶ್ರೀಸತ್ಯ ಸಾಯಿ ಗಣಪತಿ ದೇವಸ್ಥಾನದಲ್ಲಿ ದೇವರಿಗೆ ವೈದ್ಯಕೀಯ ವಸ್ತುಗಳಿಂದ ವಿಶೇಷ ಅಲಂಕಾರ ಮಾಡಲಾಗಿತ್ತು. ಅಲಂಕಾರಕ್ಕೆ 3 ಲಕ್ಷ ಮಾತ್ರೆಗಳು, 10 ಸಾವಿರ ಮಾಸ್ಕ್, 2 ಸಾವಿರ ಸ್ಯಾನಿಟೈಸರ್, ದಿನಸಿ ಪದಾರ್ಥಗಳು ಬಳಸಿದ್ದು ಗಮನ ಸೆಳೆಯಿತು.

'ಕೋವಿಡ್ ಮೂರನೇ ಅಲೆಯ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸುವುದು ಹಾಗೂ ಅಲಂಕಾರದಿಂದ ಜನರಿಗೆ ಉಪಯುಕ್ತವಾಗಬೇಕು ಎನ್ನುವ ಉದ್ದೇಶದಿಂದ ಮಾತ್ರೆಗಳನ್ನು ಪ್ರಧಾನವಾಗಿ ಅಲಂಕಾರಕ್ಕೆ ಬಳಕೆ ಮಾಡಲಾಗಿತ್ತು' ಎಂದು ಶ್ರೀಸತ್ಯ ಸಾಯಿ ಗಣಪತಿ ದೇವಸ್ಥಾನದ ಟ್ರಸ್ಟಿ ರಾಮ ಮೋಹನ ರಾಜ್ ತಿಳಿಸಿದರು.

'ಈ ವಿಶೇಷ ಅಲಂಕಾರಕ್ಕಾಗಿ ನಾಲ್ಕು ದಿನಗಳಿಂದ ತಯಾರಿ ನಡೆಸಿದ್ದೆವು. ಇಲ್ಲಿ ಬಳಸಲಾಗಿರುವ ಎಲ್ಲ ವಸ್ತುಗಳನ್ನು ಒಂದು ವಾರದ ನಂತರ ಅಗತ್ಯವಿರುವ ಜನರಿಗೆ ವಿತರಿಸಲಾಗುವುದು' ಎಂದರು.ದೇವಸ್ಥಾನಕ್ಕೆ ಭೇಟಿ ನೀಡಿದ ಸಂಸದ ತೇಜಸ್ವಿ ಸೂರ್ಯ,' ಲಕ್ಷಾಂತರ ಹಣ ಖರ್ಚು ಮಾಡಿ, ಮರುಬಳಕೆಯಾಗದ ವಸ್ತುಗಳಿಂದ ಅಲಂಕಾರ ಮಾಡುವುದರಿಂದ ಉಪಯೋಗವಿಲ್ಲ. ಈ ರೀತಿ ಭಿನ್ನ ಆಲೋಚನೆಯಿಂದ ದೇವರಿಗೆ ಅಲಂಕಾರವೂ ಆಗುತ್ತದೆ. ಜನರಿಗೂ ಅನುಕೂಲವೂ ಆಗುತ್ತದೆ' ಎಂದರು.

'ಪರಿಶುದ್ಧ ಜೀವನದಿಂದ ಗುರುವಿಗೆ ಗೌರವ'

ಪ್ರಜಾವಾಣಿ ವಾರ್ತೆ

ಕೆಂಗೇರಿ: 'ಪ್ರತಿ ವಿಚಾರದಲ್ಲೂ ಸಕಾರಾತ್ಮಕ ಅಂಶಗಳನ್ನು ಹೆಕ್ಕಿ ತೆಗೆದು, ದೈನಂದಿನ ಬದುಕಿನಲ್ಲಿ ಅಳವಡಿಸಿಕೊಳ್ಳಲು ಸಹಾಯ ಮಾಡುವವನೇ ಗುರು' ಎಂದು ವಿನಯ್ ಗುರೂಜಿ ಅಭಿಪ್ರಾಯಪಟ್ಟರು.

ಉತ್ತರಹಳ್ಳಿ ರಸ್ತೆಯ ಬಿಜಿಎಸ್ ಕಾಲೇಜಿನಲ್ಲಿ ಶನಿವಾರ ನಡೆದ ಗುರು ಪೂರ್ಣಿಮಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ವಿಶ್ವವೇ ಒಂದು ಪಾಠಶಾಲೆ. ಜೀವನದಲ್ಲಿ ಪ್ರತಿಯೊಬ್ಬರೂ ಒಂದಲ್ಲ ಒಂದು ವಿಷಯಗಳನ್ನು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಕಲಿಸುತ್ತಾರೆ. ಒಳ್ಳೆಯ ಅಂಶ ಪರಿಶುದ್ಧ ಜೀವನದತ್ತ ಹೆಜ್ಜೆಗಳನ್ನು ಅಳವಡಿಸಿಕೊಳ್ಳುವ ಮೂಲಕ ಇಡಬೇಕು. ಆ ಮೂಲಕ ಗುರುಗಳನ್ನು ಗೌರವಿಸಬೇಕು' ಎಂದು ಹೇಳಿದರು.

ಬಿಜಿಎಸ್ ಸಮೂಹ ಸಂಸ್ಥೆಯ ಪ್ರಕಾಶನಾಥ ಸ್ವಾಮೀಜಿ ಬಾಲಗಂಗಾಧರನಾಥರ ಮೂರ್ತಿಗೆ ಆರತಿ ಬೆಳಗುವ ಮೂಲಕ ಗುರುವಂದನೆ ಸಲ್ಲಿಸಿದರು. ವಿನಯ್ ಗುರೂಜಿ ಇದ್ದಾರೆ

ಬಿಜಿಎಸ್ ಸಮೂಹ ಶಿಕ್ಷಣ ಸಂಸ್ಥೆಯ ವ್ಯವಸ್ಥಾಪಕ ನಿರ್ದೇಶಕ ಪ್ರಕಾಶನಾಥ ಸ್ವಾಮೀಜಿ,'ಪ್ರತಿಯೊಬ್ಬರಲ್ಲೂ ವಿಭಿನ್ನ ಶಕ್ತಿ ಇರುತ್ತದೆ. ಅವರ ಸೇವೆಯನ್ನು ಗುರುತಿಸಿ ಸನ್ಮಾನಿಸಲು ಸಂಸ್ಥೆಯ ಬೋಧಕೇತರ ಸಿಬ್ಬಂದಿ ಸೇರಿದಂತೆ ಹಲವರಿಗೆ ವಸ್ತ್ರದಾನ ಮಾಡಲಾಗುತ್ತಿದೆ' ಎಂದರು.

ಸತ್ಯ ಸಾಯಿಬಾಬಾ ಟ್ರಸ್ಟ್ ಮುಖ್ಯಸ್ಥೆ ಜಯಲಕ್ಷ್ಮಿ, ಪ್ರಾಂಶುಪಾಲ ಡಾ. ಅಜಯ್ ಚಂದ್ರನ್, ಅಮರನಾಥ್, ರಂಗನಾಥ್, ಕಿರಣ್ ಕುಮಾರ್ ಭಾಗವಹಿಸಿದ್ದರು.

ಯುನೈಟೆಡ್ ಸ್ಪಿರಿಟ್ಸ್ ಲಿಮಿಟೆಡ್

DIAGEO INDIA

ನೋಂದಾಯಿತ ಕಛೇರಿ: 'ಯುಬಿ ಟವರ್', # 24, ವಿಠ್ಠಲ್ ಮಲ್ಯ ರಸ್ತೆ, ಬೆಂಗಳೂರು - 560 001.
ಫೋನ್: +91 80 4544 8000 ಫ್ಯಾಕ್ಸ್: +91 80 3985 6862
ಇಮೇಲ್: contactus.India@diageo.com ವೆಬ್‌ಸೈಟ್: www.diageoindia.com
ಕಾರ್ಪೋರೇಟ್ ಐಡೆಂಟಿಟಿ ನಂಬರ್: L01551KA1999PLC024991

[ಸೆಕ್ಯುರಿಟೀಸ್ ಅಂಡ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ (ಪಟ್ಟಿ ಮಾಡುವಿಕೆಯ ಹೊಣೆಗಾರಿಕೆಗಳು ಮತ್ತು ಬಹಿರಂಗ ಪಡಿಸುವಿಕೆಯ ಅವಶ್ಯಕತೆಗಳು) ನಿಬಂಧನೆಗಳು, 2015 ರ ನಿಬಂಧನೆ 47(1) (ಬಿ)]

ಜೂನ್ 30, 2021ಕ್ಕೆ ಅಂತ್ಯವಾದ ತ್ರೈಮಾಸಿಕ ಪ್ರತ್ಯೇಕಿತ ಮತ್ತು ಕ್ರೋಢೀಕೃತ ಪರಿಶೋಧಿಸದಿರುವ ಆರ್ಥಿಕ ಫಲಿತಾಂಶಗಳ ವಿವರಣೆ

(ಐಎನ್‌ಆರ್ ದಶಲಕ್ಷಗಳಲ್ಲಿ ಪ್ರತಿ ಷೇರಿನ ಡೇಟಾದ ಆದಾಯವನ್ನು ಹೊರತುಪಡಿಸಿ)

ಕ್ರ. ಸಂಖ್ಯೆ	ವಿವರಗಳು	ಪ್ರತ್ಯೇಕಿತ			ಕ್ರೋಢೀಕೃತ		
		ಜೂನ್ 30, 2021 ಕೊನೆಗೊಂಡ ತ್ರೈಮಾಸಿಕ	ಜೂನ್ 30, 2020 ಕೊನೆಗೊಂಡ ತ್ರೈಮಾಸಿಕ	ಮಾರ್ಚ್ 31, 2021 ವರ್ಷಕ್ಕೆ ಕೊನೆಗೊಂಡ	ಜೂನ್ 30, 2021 ಕೊನೆಗೊಂಡ ತ್ರೈಮಾಸಿಕ	ಜೂನ್ 30, 2020 ಕೊನೆಗೊಂಡ ತ್ರೈಮಾಸಿಕ	ಮಾರ್ಚ್ 31, 2021 ವರ್ಷಕ್ಕೆ ಕೊನೆಗೊಂಡ
		ಪರಿಶೋಧಿಸದಿರುವ	ಪರಿಶೋಧಿಸದಿರುವ	ಪರಿಶೋದಿಸಿದ	ಪರಿಶೋಧಿಸದಿರುವ	ಪರಿಶೋಧಿಸದಿರುವ	ಪರಿಶೋದಿಸಿದ
1.	ಕಾರ್ಯಾಚರಣೆಗಳಿಂದ ಒಟ್ಟು ಆದಾಯ	60,619	38,190	271,764	61,685	38,207	274,185
2.	ಅವಧಿಯ (ತೆರಿಗೆಯ ಮೊದಲು ಅಸಾಧಾರಣ ಮತ್ತು/ಅಥವಾ ವಿಶೇಷ ಐಟೆಂಗಳ) ನಿವ್ವಳ ಲಾಭ/(ನಷ್ಟ) [ಸೂಚನೆ (ಬಿ) ಅನ್ನು ನೋಡಿ]	1,031	(1,818)	6,204	966	(2,165)	6,043
3.	ಅವಧಿಯ ತೆರಿಗೆಯ ಮೊದಲು (ಅಸಾಧಾರಣ ಮತ್ತು/ಅಥವಾ ವಿಶೇಷ ಐಟೆಂಗಳ ನಂತರ) ನಿವ್ವಳ ಲಾಭ/(ನಷ್ಟ) [ಸೂಚನೆ (ಬಿ) ಅನ್ನು ನೋಡಿ]	667	(2,568)	4,690	513	(2,915)	5,400
4.	ಅವಧಿಯ ತೆರಿಗೆಯ ನಂತರ (ಅಸಾಧಾರಣ ಮತ್ತು/ಅಥವಾ ವಿಶೇಷ ಐಟೆಂಗಳ ನಂತರ) ನಿವ್ವಳ ಲಾಭ/(ನಷ್ಟ) [ಸೂಚನೆ (ಬಿ) ಅನ್ನು ನೋಡಿ]	691	(2,153)	3,103	503	(2,466)	3,621
5.	ಅವಧಿಯ ಒಟ್ಟಾರೆ ವ್ಯಾಪಕ ಆದಾಯ ಅವಧಿಯ [ಲಾಭ/(ನಷ್ಟ) (ತೆರಿಗೆಯ ನಂತರ) ಮತ್ತು ಇತರ ವ್ಯಾಪಕ ಆದಾಯ (ತೆರಿಗೆಯ ನಂತರ)ಗಳನ್ನು ಒಳಗೊಂಡಿರುವ]	691	(2,153)	3,160	515	(2,468)	3,684
6.	ಈಕ್ವಿಟಿ ಷೇರು ಬಂಡವಾಳ	1,453	1,453	1,453	1,453	1,453	1,453
7.	ಮೀಸಲುಗಳು (ಮೌಲ್ಯಮಾಪಿತ ಮೀಸಲುಗಳನ್ನು ಹೊರತುಪಡಿಸಿ) ಪರಿಶೋಧಿತ ಆಯವ್ಯಯ ಪಟ್ಟಿಯಲ್ಲಿ ತೋರಿಸಲಾಗಿದೆ			39,815			39,136
8.	ಪ್ರತಿ ಷೇರಿನ ಗಳಿಕೆ (ಪ್ರತಿ ಷೇರಿಗೆ ರೂ. 2/–) [ಸೂಚನೆ (ಸಿ) ಅನ್ನು ನೋಡಿ]						
	1. ಮೂಲ :	0.95	(2.96)	4.27	0.78	(3.40)	5.41
	2. ದುರ್ಬಲೀಕೃತ :	0.95	(2.96)	4.27	0.78	(3.40)	5.41

ಸೂಚನೆಗಳು:

ಎ) ಮೇಲಿನದು 2015ರ ಸೆಕ್ಯುರಿಟೀಸ್ ಅಂಡ್ ಎಕ್ಸ್‌ಚೇಂಜ್ ಬೋರ್ಡ್ ಆಫ್ ಇಂಡಿಯಾ ನಿಯಂತ್ರಣಗಳ (ಪಟ್ಟಿ ಮಾಡುವಿಕೆ ಮತ್ತು ಇತರೆ ಘೋಷಣೆಗಳ ಅವಶ್ಯಕತೆಗಳು) 33ನೇ ನಿಯಂತ್ರಣದಡಿ ಸ್ಟಾಕ್ ಎಕ್ಸ್‌ಚೇಂಜ್‌ನಲ್ಲಿ ಫೈಲ್ ಮಾಡಿರುವ ತ್ರೈಮಾಸಿಕ ಫಲಿತಾಂಶಗಳ ವಿವರವಾದ ನಮೂನೆಯ ಸಾರಂಶವಾಗಿದೆ. ತ್ರೈಮಾಸಿಕ ಫಲಿತಾಂಶಗಳ ವಿವರವಾದ ನಮೂನೆಯು ಸ್ಟಾಕ್ ಎಕ್ಸ್‌ಚೇಂಜ್‌ಗಳ ವೆಬ್‌ಸೈಟ್ www.bseindia.com ಮತ್ತು www.nseindia.com ಮತ್ತು ಕಂಪನಿಯ ವೆಬ್‌ಸೈಟ್ www.diageoindia.com ನಲ್ಲಿ ಲಭ್ಯವಿರುತ್ತದೆ.

ಬಿ) ಅಸಾಧಾರಣ ಮತ್ತು/ಅಥವಾ ಅಸಾಮಾನ್ಯ ಐಟಂಗಳನ್ನು, ಕಂಪನಿಗಳ (ಭಾರತೀಯ ಅಕೌಂಟಿಂಗ್ ಸ್ಟಾಂಡರ್ಡ್ಸ್) ನಿಯಮಗಳು, 2015 ಕಂಪನಿ ಕಾಯಿದೆ 2013 ಮತ್ತು ನೀತಿಗಳ ವಿಭಾಗ 133 ಅಡಿಯಲ್ಲಿ ಶಿಫಾರಸು ಅನುಗುಣವಾಗಿ ಲಾಭ ಹೇಳಿಕೆ ಮತ್ತು ನಷ್ಟದಲ್ಲಿ ಸರಿಹೊಂದಿಸಲ್ಪಡುತ್ತದೆ.

ಸಿ) ಏಕೀಕೃತ ಹಣಕಾಸು ಅಡಿಯಲ್ಲಿ ವರ್ಷದ ಬಾಕಿ ಇರುವ ಈಕ್ವಿಟಿ ಷೇರುಗಳ ಸರಾಸರಿ ಸಂಖ್ಯೆಯನ್ನು ಲೆಕ್ಕಹಾಕುವಲ್ಲಿ, ಕಂಪನಿಯು ಯುಎಸ್‌ಎಲ್ ಬೆನಿಫಿಟ್ ಟ್ರಸ್ಟ್‌ನಲ್ಲಿ ಹೊಂದಿರುವ (ಕಂಪೆನಿಯ ಏಕೈಕ ಫಲಾನುಭವಿಯಾಗಿರುವ) ಸ್ವಂತ ಷೇರುಗಳನ್ನು ಕಡಿಮೆ ಮಾಡಿದೆ.

ನಿರ್ದೇಶಕರ ಮಂಡಳಿಯ ನಿಮಿತ್ತ ಮತ್ತು ಅವರ ಪರವಾಗಿ
ಸಹಿ/–
ಹಿನಾ ನಾಗರಾಜನ್
ವ್ಯವಸ್ಥಾಪಕ ನಿರ್ದೇಶಕ ಮತ್ತು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ

ಸ್ಥಳ : ಬೆಂಗಳೂರು
ದಿನಾಂಕ : ಜುಲೈ 23, 2021

'ಗುರುಚರಣಕೆ ಬಾಗುವವರ ಜೀವನ ಪಾವನ'

ಆರೂಢ ಭಾರತಿ ಸ್ವಾಮೀಜಿ

ಬೆಂಗಳೂರು: 'ಜೀವನಕ್ಕೆ ಮಾರ್ಗ ದರ್ಶನ ಮಾಡುವವರು ಗುರುವಾಗಿದ್ದು, ಅವರ ಚರಣಕೆ ಬಾಗುವವರ ಜೀವನ ಪಾವನವಾಗಲಿದೆ' ಎಂದು ಆರೂಢ ಭಾರತಿ ಸ್ವಾಮೀಜಿ ತಿಳಿಸಿದರು.

ರಾಮೋಹಳ್ಳಿಯ ಸಿದ್ಧಾರೂಢ ಮಿಷನ್ ಆಶ್ರಮವು ಶನಿವಾರ ಆಯೋಜಿಸಿದ್ದ ಗುರು ಪೂರ್ಣಿಮಾ ಸಮಾರಂಭದಲ್ಲಿ ಅವರು ಆಶೀರ್ವಚನ ನೀಡಿದರು.

'ಸರಿ–ತಪ್ಪುಗಳ ಅರಿಕೆ ಮಾಡಿಸುವುದರ ಜೊತೆಗೆ ವಿದ್ಯೆಯನ್ನೂ ನೀಡಿ, ಸರಿ ದಾರಿಯಲ್ಲಿ ನಡೆಸುವವರು ಗುರು. ತನ್ನ ನಿಜ ರೂಪವನ್ನು ತಿಳಿಸಿ, ಪರಮಾತ್ಮನನ್ನಾಗಿಸುವವರು ಸದ್ಗುರು. ಗುರುವನ್ನು ಗೌರವಿಸುವವರು ಉತ್ತಮ ಸಂಸ್ಕಾರವಂತರಾಗಿ ಯಶಸ್ವಿ ಜೀವನ ನಡೆಸುತ್ತಾರೆ. ಗುರುವಿನಿಂದ ಜ್ಞಾನವನ್ನು ಬಯಸಬೇಕೇ ಹೊರತು ಹಣ, ಹಾರ-ತುರಾಯಿಗಳನ್ನಲ್ಲ' ಎಂದರು.

ಇದಕ್ಕೂ ಮೊದಲು ಸಿದ್ಧಾರೂಢರಿಗೆ ಹಾಗೂ ಸಾಯಿಬಾಬಾ ಅವರಿಗೆ ವಿದ್ವಾನ್ ಕಾರ್ತಿಕ್ ವಿಶೇಷ ಪೂಜೆ ಸಲ್ಲಿಸಿದರು. ಪಂ. ಸಂಗಮೇಶ್ವರ ಸ್ವಾದಿಮಠ ಅವರು ಹಿಂದುಸ್ತಾನಿ ಶಾಸ್ತ್ರೀಯ ಸಂಗೀತವನ್ನು ಪ್ರಸ್ತುತಪಡಿಸಿದರು. ಸ್ವರ ಚಿರಂತನ ತಂಡದ ವೀರೇಶ್ ತಂಡದವರು ಭಕ್ತಿಸಂಗೀತದ ಮೂಲಕ ರಂಜಿಸಿದರು. ಸಮುದಾಯ ಆರೋಗ್ಯ ಕೇಂದ್ರದ ವತಿಯಿಂದ ಕೋವಿಡ್ ಲಸಿಕೆಯನ್ನು ಉಚಿತವಾಗಿ ನೀಡುವ ಶಿಬಿರವನ್ನೂ ನಡೆಸಲಾಯಿತು. ಮುಮ್ಮಡಿ ಷಡಕ್ಷರಿ ಶಿವಾಚಾರ್ಯ ಸ್ವಾಮೀಜಿ, ಸ್ವಾಮಿ ಸುಹಾಸಾನಂದಜಿ, ಚುಂಚನಕುಪ್ಪೆ ಗ್ರಾಮ ಪಂಚಾಯಿತಿ ಸದಸ್ಯ ಪ್ರಸನ್ನ ರುದ್ರ ಇದ್ದರು.

ಸವಾಲುಗಳನ್ನು ಮೀರಿದ ಸಾಧನಾ ಪರ್ವ

ಏರೋಸ್ಪೇಸ್ ಉದ್ಯಮಗಳ ಆಕರ್ಷಣೆ
ಏರೋ ಇಂಡಿಯಾ ವೈಮಾನಿಕ ಪ್ರದರ್ಶನವನ್ನು ಬಳಸಿಕೊಂಡು ರಾಜ್ಯಕ್ಕೆ ಏರೋಸ್ಪೇಸ್ ಕ್ಷೇತ್ರದ ಉದ್ಯಮಗಳನ್ನು ಆಕರ್ಷಿಸುವ ಕೆಲಸವನ್ನು ಸರ್ಕಾರ ಮಾಡುತ್ತಿದೆ. 2021ರ ಫೆಬ್ರುವರಿಯಲ್ಲಿ ನಡೆದ ಏರೋ ಇಂಡಿಯಾ ಸಂದರ್ಭದಲ್ಲಿ ₹ 2,464 ಕೋಟಿ ಹೂಡಿಕೆಯ ಒಪ್ಪಂದಗಳಿಗೆ ಸಹಿ ಬಿದ್ದಿದೆ.

ಎರಡೇ ವರ್ಷಗಳಲ್ಲಿ ರಾಜ್ಯಕ್ಕೆ ಹರಿದು ಬಂದ ಹೂಡಿಕೆ

₹ 1,364 ಕೋಟಿ ವ್ಯಾಟ್ ಸಾಲ

ಕೋವಿಡ್ ಮತ್ತು ಲಾಕ್‌ಡೌನ್‌ನಿಂದ ಸಂಕಷ್ಟಕ್ಕೆ ಸಿಲುಕಿರುವ ಕೈಗಾರಿಕಾ ಕ್ಷೇತ್ರಕ್ಕೆ ನೆರವಿನ ಆಸರೆ ನೀಡುವ ಕೆಲಸವನ್ನೂ ರಾಜ್ಯ ಸರ್ಕಾರ ಮಾಡುತ್ತಿದೆ. ಕೈಗಾರಿಕೆಗಳಿಗೆ ₹ 1,364 ಕೋಟಿ ಬಡ್ಡಿರಹಿತ ವ್ಯಾಟ್ ಸಾಲ ನೀಡಲಾಗಿದೆ. ಸಹಾಯಧನ, ಭೂ ಪರಿವರ್ತನೆ ಶುಲ್ಕದ ಮರುಪಾವತಿ ಸೇರಿದಂತೆ ₹ 134.74 ಕೋಟಿ ಸಹಾಯಧನವನ್ನೂ ಸರ್ಕಾರ ಕೈಗಾರಿಕೆಗಳಿಗೆ ನೀಡಿದೆ.

ರಾಜ್ಯದಲ್ಲಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದು ಎರಡು ವರ್ಷ ಕಳೆಯುವುದರೊಳಗೆ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ ಕಾರ್ಯವೈಖರಿಯಲ್ಲಿ ಆಮೂಲಾಗ್ರ ಬದಲಾವಣೆಯಾಗಿ, ಉದ್ಯಮ ಸ್ನೇಹಿ ವಾತಾವರಣ ನಿರ್ಮಾಣವಾಗಿದೆ. ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಜಗದೀಶ ಶೆಟ್ಟರ್ ಅವರ ಸತತ ಪರಿಶ್ರಮದ ಫಲವಾಗಿ ರಾಜ್ಯಕ್ಕೆ ಹೂಡಿಕೆಯ ಹೊಳೆಯೇ ಹರಿದುಬರುತ್ತಿದೆ.

ರಾಜ್ಯದಲ್ಲಿ ಹೊಸ ಸರ್ಕಾರ ರಚನೆಯಾದ ಬೆನ್ನಲ್ಲೇ ಹೊಸ ಕೈಗಾರಿಕಾ ನೀತಿಯನ್ನು ರೂಪಿಸುವ ಕೆಲಸವೂ ಆರಂಭವಾಗಿತ್ತು. ₹ 5 ಲಕ್ಷ ಕೋಟಿ ಹೂಡಿಕೆ ಆಕರ್ಷಣೆ ಹಾಗೂ 20 ಲಕ್ಷ ಉದ್ಯೋಗ ಸೃಷ್ಟಿಯ ಗುರಿಯೊಂದಿಗೆ ಕೈಗಾರಿಕಾ ನೀತಿ 2020- 2025 ಅನ್ನು ಜಾರಿಗೆ ತರಲಾಯಿತು. ಅದರ ಪರಿಣಾಮವಾಗಿಯೇ 2020ರಲ್ಲಿ ₹ 1,62,492 ಕೋಟಿ ಹೂಡಿಕೆಯ 120 ಪ್ರಸ್ತಾವಗಳು ಬಂದಿವೆ. ಈ ಅವಧಿಯಲ್ಲಿ ದೇಶದಲ್ಲಿ ಸ್ವೀಕೃತವಾಗಿರುವ ಹೂಡಿಕೆ ಪ್ರಸ್ತಾವಗಳಲ್ಲಿ ಶೇ 39.19ರಷ್ಟು ರಾಜ್ಯಕ್ಕೇ ಬಂದಿವೆ. 2021ರ ಏಪ್ರಿಲ್ ಮತ್ತು ಮೇ ತಿಂಗಳಲ್ಲಿ ಕೋವಿಡ್ ಎರಡನೇ ಅಲೆಯ ಲಾಕ್‌ಡೌನ್ ನಡುವೆಯೂ ₹ 17,718 ಕೋಟಿ ಮೊತ್ತದ ಹೂಡಿಕೆ ಪ್ರಸ್ತಾವಗಳಿಗೆ ಅನುಮೋದನೆ ದೊರಕಿದೆ. ಇದರಿಂದ ರಾಜ್ಯದಲ್ಲಿ 19,729 ಉದ್ಯೋಗಗಳು ಸೃಜನೆಯಾಗಲಿವೆ.

ರಾಜ್ಯಮಟ್ಟದ ಏಕಗವಾಕ್ಷಿ ಅನುಮೋದನಾ ಸಮಿತಿಯು ಎರಡು ವರ್ಷಗಳ ಅವಧಿಯಲ್ಲಿ 561 ಹೊಸ ಹಾಗೂ 29 ಹೆಚ್ಚುವರಿ ಹೂಡಿಕೆಯ ಪ್ರಸ್ತಾವಗಳಿಗೆ ಅನುಮೋದನೆ ನೀಡಿದೆ. ₹ 30,363.27 ಕೋಟಿ ಹೂಡಿಕೆಗೆ ಒಪ್ಪಿಗೆ ನೀಡಿದ್ದು, 1,71,793 ಉದ್ಯೋಗಗಳ ಸೃಜನೆಗೆ ದಾರಿಯಾಗಿದೆ.

ಉನ್ನತಮಟ್ಟದ ಸಮಿತಿಯಲ್ಲಿ 17 ಹೊಸ ಹಾಗೂ ಎರಡು ಹೆಚ್ಚುವರಿ ಹೂಡಿಕೆಯ ಪ್ರಸ್ತಾವಗಳಿಗೆ ಒಪ್ಪಿಗೆ ನೀಡಲಾಗಿದೆ. ₹ 50,951.21 ಕೋಟಿ ಹೂಡಿಕೆಯಿಂದ 32,165 ಉದ್ಯೋಗ ಸೃಷ್ಟಿಗೆ ಅನುಮೋದನೆ ನೀಡಲಾಗಿದೆ.

ಕರ್ನಾಟಕ ಕೈಗಾರಿಕೆಗಳ (ಸೌಲಭ್ಯ) ಕಾಯ್ದೆ-2002ಕ್ಕೆ 2020ರಲ್ಲಿ ತಿದ್ದುಪಡಿ ತಂದಿರುವ ರಾಜ್ಯ ಸರ್ಕಾರ, ಕೈಗಾರಿಕೆಗಳಿಗೆ ವಿವಿಧ ಪ್ರಾಧಿಕಾರಗಳಿಂದ ಅನುಮೋದನೆ ಪಡೆಯುವುದನ್ನು ಸರಳೀಕರಿಸಲಾಗಿದೆ. 'ಕರ್ನಾಟಕ ಭೂ ಸುಧಾರಣೆಗಳ (ತಿದ್ದುಪಡಿ) ಕಾಯ್ದೆ-2020' ತರುವ ಮೂಲಕ ಕೈಗಾರಿಕೆಗಳಿಗೆ ಜಮೀನು ಖರೀದಿಗೆ ಇದ್ದ ತೊಡಕುಗಳನ್ನು ನಿವಾರಣೆ ಮಾಡಲಾಗಿದೆ.

ಇದು ಹೂಡಿಕೆದಾರರು ರಾಜ್ಯದತ್ತ ಬರುವಂತೆ ಮಾಡಿದೆ.

ರಾಜ್ಯಕ್ಕೆ ಹೂಡಿಕೆ ಆಕರ್ಷಿಸಲು ಸರ್ಕಾರ ನಿರಂತರ ಪ್ರಯತ್ನ ನಡೆಸುತ್ತಿದೆ. 2020ರ ಜನವರಿಯಲ್ಲಿ ದಾವೋಸ್‌ನಲ್ಲಿ ನಡೆದ ವಿಶ್ವ ಆರ್ಥಿಕ ಸಮ್ಮೇಳನದಲ್ಲಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ನೇತೃತ್ವದ ನಿಯೋಗ ಭಾಗವಹಿಸಿ ವಿದೇಶಿ ಹೂಡಿಕೆದಾರರನ್ನೂ ಸೆಳೆಯುವ ಪ್ರಯತ್ನ ಮಾಡಿದೆ. ಸಮ್ಮೇಳನದಲ್ಲೇ ಹಲವು ಹೂಡಿಕೆ ಒಪ್ಪಂದಗಳಿಗೆ ಸಹಿ ಹಾಕಲಾಗಿದೆ.

ವಿಸ್ತರಣೆಗೆ ಒತ್ತು: ಕೈಗಾರಿಕೆಗಳನ್ನು ಎರಡನೇ ಹಂತದ ನಗರಗಳು ಮತ್ತು ಗ್ರಾಮೀಣ ಪ್ರದೇಶಗಳಿಗೂ ಕೈಗಾರಿಕೆಗಳನ್ನು ಕೊಂಡೊಯ್ಯುವ ಕೆಲಸಕ್ಕೆ ಸರ್ಕಾರ ಆದ್ಯತೆ ನೀಡಿದೆ. ಕೇಂದ್ರ ಸರ್ಕಾರದ 'ಒಂದು ಜಿಲ್ಲೆ ಒಂದು ಉತ್ಪನ್ನ' ಕಾರ್ಯಕ್ರಮ, 'ರಫ್ತು ಉತ್ತೇಜನ ಕೇಂದ್ರ' ಮತ್ತು ಜಿಲ್ಲಾ ಮಟ್ಟದಲ್ಲಿ ರಫ್ತು ಕೇಂದ್ರಿತ ಚಟುವಟಿಕೆಗಳಿಗೆ ಉತ್ತೇಜನ ನೀಡುವ ಕೆಲಸ ನಿರಂತರವಾಗಿ ನಡೆಯುತ್ತಿದೆ.

ಸ್ಥಳೀಯ ಉತ್ಪನ್ನಗಳಿಗೆ ಅಂತರರಾಷ್ಟ್ರೀಯ ಮಟ್ಟದ ಮಾರುಕಟ್ಟೆ ಒದಗಿಸುವ ಉದ್ದೇಶದಿಂದ ಭೌಗೋಳಿಕ ಉತ್ಪನ್ನ ನೀತಿಯನ್ನು ಅನುಷ್ಠಾನಕ್ಕೆ ತರಲಾಗಿದೆ. ಉಡುಪಿ ಸೀರೆ, ಉಡುಪಿಯ ಮಟ್ಟುಗುಳ್ಳ ಬದನೆ, ಉಡುಪಿ ಮಲ್ಲಿಗೆ, ಮೈಸೂರಿನ ಸಾಂಪ್ರದಾಯಿಕ ರೇಷ್ಮೆ ಸೀರೆ, ಗಂಝೀಫಾ ಕಾರ್ಡ್ ಸೇರಿದಂತೆ ಹಲವು ಉತ್ಪನ್ನಗಳಿಗೆ 'ಜಿಐ ಟ್ಯಾಗ್' ನೀಡಲಾಗಿದೆ.

ರಾಜ್ಯದ ಒಂಬತ್ತು ಜಿಲ್ಲೆಗಳಲ್ಲಿ 'ಉತ್ಪಾದನಾ ನಿರ್ದಿಷ್ಟ ಕೈಗಾರಿಕಾ ಕ್ಲಸ್ಟರ್'ಗಳನ್ನು ನಿರ್ಮಿಸುವ ಯೋಜನೆಯನ್ನು 2020ರ ಬಜೆಟ್‌ನಲ್ಲಿ ಘೋಷಿಸಲಾಗಿದೆ. ಅದರಂತೆ ಶಿವಮೊಗ್ಗ, ಚಿತ್ರದುರ್ಗ, ಕಲಬುರ್ಗಿ, ಮೈಸೂರು, ಕೊಪ್ಪಳ, ಚಾಮರಾಜನಗರ, ಧಾರವಾಡ, ಚಿಕ್ಕಬಳ್ಳಾಪುರ ಮತ್ತು ಬೀದರ್ ಜಿಲ್ಲೆಗಳಲ್ಲಿ ಕ್ಲಸ್ಟರ್‌ಗಳನ್ನು ಅಭಿವೃದ್ಧಿಪಡಿಸಲಾಗುತ್ತಿದೆ.

ಪ್ರಸ್ತುತಿ: ಪಿ.ಪಿ. ಬ್ರ್ಯಾಂಡ್ ಸ್ಪಾಟ್

ಎಂಎಸ್ಎಂಇಗಳ ಕೈಹಿಡಿದ ಸರ್ಕಾರ: ರಾಜ್ಯದಲ್ಲಿ ಮಧ್ಯಮ, ಸಣ್ಣ ಮತ್ತು ಅತಿಸಣ್ಣ ಕೈಗಾರಿಕೆಗಳಿಗೆ ಸರ್ಕಾರ ನಿರಂತರವಾಗಿ ಬೆಂಬಲ ನೀಡುತ್ತಿದೆ. ಎರಡು ವರ್ಷಗಳ ಅವಧಿಯಲ್ಲಿ 1,42,853 ಮಧ್ಯಮ, ಸಣ್ಣ ಮತ್ತು ಅತಿಸಣ್ಣ ಕೈಗಾರಿಗಳ ನೋಂದಣಿಯಾಗಿದ್ದು, ₹ 18,751.56 ಕೋಟಿ ಹೂಡಿಕೆಯಾಗಿದೆ. ಇದರಿಂದ 10.21 ಲಕ್ಷ ಉದ್ಯೋಗ ಸೃಷ್ಟಿಯಾಗಿದೆ.

ಪ್ರಧಾನಮಂತ್ರಿ ಉದ್ಯೋಗ ಸೃಜನೆ ಯೋಜನೆ (ಪಿಎಂಇಜಿಪಿ) ಅಡಿಯಲ್ಲಿ 8,071 ಜನರು ಸಾಲ ಸೌಲಭ್ಯ ಪಡೆದಿದ್ದು, 64,568 ಜನರಿಗೆ ಉದ್ಯೋಗ ದೊರಕಿದೆ. 7,574 ಅತಿಸಣ್ಣ ಮತ್ತು ಸಣ್ಣ ಕೈಗಾರಿಕೆಗಳಿಗೆ ರಾಜ್ಯ ಸರ್ಕಾರ ₹ 242.02 ಕೋಟಿ ಸಹಾಯಧನ ನೀಡಿದೆ. ಕೃಷಿ ವಹಿವಾಟು ಮತ್ತು ಆಹಾರ ಸಂಸ್ಕರಣಾ ನೀತಿ ಅಡಿಯಲ್ಲಿ 307 ಘಟಕಗಳಿಗೆ ₹ 184 ಕೋಟಿ ಸಹಾಯಧನ ನೀಡಲಾಗಿದೆ. ಐದು ಕೈಗಾರಿಕಾ ಪ್ರದೇಶಗಳಲ್ಲಿ ಮೂಲಸೌಕರ್ಯ ಅಭಿವೃದ್ಧಿಗೆ ₹ 108.16 ಕೋಟಿ ವೆಚ್ಚ ಮಾಡಲಾಗಿದೆ. ಖಾದಿ ಮತ್ತು ಗ್ರಾಮೋದ್ಯೋಗ ಮಂಡಳಿಯ ಮೂಲಕ ನಿರಂತರವಾಗಿ ಸಣ್ಣ ಕೈಗಾರಿಕೆಗಳಿಗೆ ನೆರವು ನೀಡಲಾಗುತ್ತಿದೆ.

❖

ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಸ್ವಿಟ್ಜರ್ಲೆಂಡ್ ನ ದಾವೋಸ್‌ನಲ್ಲಿ ನಡೆದ ವರ್ಲ್ಡ್ ಎಕನಾಮಿಕ್ ಫೋರಮ್ ಸಮಾವೇಶದಲ್ಲಿ ಕರ್ನಾಟಕ ಪೆವಿಲಿಯನ್ ಉದ್ಘಾಟಿಸಿದ ಸಂದರ್ಭ. ಫೋರಮ್ ನ ವ್ಯವಸ್ಥಾಪಕ ನಿರ್ದೇಶಕ ಮೊರಾಟ್ ಸ್ಯಾನ್ ಮೆಜ್, ಭಾರತ ಮತ್ತು ಏಷ್ಯಾ ಅಜೆಂಡಾದ ಪ್ರಾದೇಶಿಕ ಮುಖ್ಯಸ್ಥ ವಿರಾಜ್ ಮೆಹ್ತಾ, ಕೈಗಾರಿಕಾ ಸಚಿವ ಜಗದೀಶ ಶೆಟ್ಟರ್

ಕೊಪ್ಪಳದಲ್ಲಿ ಆಟಿಕೆ ತಯಾರಿಕಾ ವಲಯ ಸ್ಥಾಪನೆಗೆ ಭೂಮಿಪೂಜೆ ನೆರವೇರಿಸಿದ ಮುಖ್ಯಮಂತ್ರಿ ಬಿ.ಎಸ್ ಯಡಿಯೂರಪ್ಪ. ಕೈಗಾರಿಕಾ ಸಚಿವ ಜಗದೀಶ ಶೆಟ್ಟರ್ ಇದ್ದರು.

ಹೂಡಿಕೆದಾರರ ಸಮ್ಮೇಳನದಲ್ಲಿ ಹೂಡಿಕೆ ಒಪ್ಪಂದಗಳಿಗೆ ಸಹಿ ಮಾಡಿದ ಉದ್ಯಮಿಗಳೊಂದಿಗೆ ಕೈಗಾರಿಕಾ ಸಚಿವ ಜಗದೀಶ ಶೆಟ್ಟರ್, ಮುಖ್ಯಮಂತ್ರಿ ಬಿ.ಎಸ್ ಯಡಿಯೂರಪ್ಪ, ಉಪ ಮುಖ್ಯಮಂತ್ರಿ ಡಾ.ಸಿ.ಎನ್ ಅಶ್ವತ್ಥನಾರಾಯಣ ಮತ್ತಿತರರು

ಪಶು ಸಂಗೋಪನೆಯಿಂದ ಹಸನಾದ ರೈತರ ಬಾಳು

ಪಶುಸಂಗೋಪನೆಗೆ ಆಧುನಿಕ ಸ್ಪರ್ಶ

ಪಶುಸಂಗೋಪನೆ ಇಲಾಖೆಗೆ ಹೊಸ ಚೈತನ್ಯ ಮತ್ತು ಆಧುನಿಕ ಸ್ಪರ್ಶ ಸಿಕ್ಕಿದೆ. ರೈತ ಸ್ನೇಹಿ ಎನಿಸಿಕೊಂಡಿರುವುದು ಮಾತ್ರವಲ್ಲ, ಅವರ ಬಾಳಿನಲ್ಲಿ ಕ್ರಾಂತಿಕಾರಿ ಬದಲಾವಣೆ ತರುವ ದಿಸೆಯಲ್ಲಿ ಬಿಜೆಪಿ ಸರ್ಕಾರ ದಾಪುಗಾಲಿಟ್ಟಿದೆ. ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಮತ್ತು ಪಶುಸಂಗೋಪನಾ ಸಚಿವ ಪ್ರಭು ಚವ್ಹಾಣ ಈ ಒಟ್ಟು ಸಾಧನೆಯ ಪ್ರೇರಕ ಶಕ್ತಿ. ಭಾರತೀಯರಿಗೆ ಪೂಜ್ಯವೆನಿಸಿದ ವೈವಿಧ್ಯ ಮತ್ತು ದೇಸಿ ತಳಿಯ ಗೋಸಂತತಿಯನ್ನು ರಕ್ಷಿಸುವ ಉದ್ದೇಶದಿಂದ 'ಕರ್ನಾಟಕ ಜಾನುವಾರು ವಧೆ, ಪ್ರತಿಬಂಧಕ ಮತ್ತು ಸಂರಕ್ಷಣಾ ಕಾಯ್ದೆ' ಜಾರಿ ಮಾಡಿದ್ದು ಒಂದು ಮೈಲುಗಲ್ಲು. ಈ ಮೂಲಕ ಅಕ್ರಮ ಜಾನುವಾರು ಸಾಗಣೆ ಮತ್ತು ಹತ್ಯೆಗೆ ಕಡಿವಾಣ ಹಾಕಲಾಗಿದೆ.

ಜಾನುವಾರು ಸಾಕಾಣಿಕೆದಾರರಿಗೆ ಕಾಲ ಕಾಲಕ್ಕೆ ಮಹತ್ವದ ಮಾಹಿತಿ ನೀಡಲು ಅತ್ಯಾಧುನಿಕ ತಂತ್ರಜ್ಞಾನವನ್ನು ಬಳಸಿಕೊಂಡು 'ಪ್ರಾಣಿ ಕಲ್ಯಾಣ ಸಹಾಯವಾಣಿ'ಗೆ ಚಾಲನೆ ನೀಡಲಾಗಿದೆ. ಇದರಿಂದ 24X4 ರೈತರಿಗೆ ಪಶುಪಾಲನೆಯಲ್ಲಿ ತೊಡಗಿರುವ ರೈತರು ಮತ್ತು ಸಾಕಾಣಿಕೆದಾರರಿಗೆ ಅಗತ್ಯ ಮಾಹಿತಿ ನೀಡಿ ಉತ್ಪಾದಕತೆ ಹೆಚ್ಚಿಸಲು ಮತ್ತು ಜಾನುವಾರುಗಳ ಆರೋಗ್ಯ ಕಾಪಾಡಲು ನೆರವಾಗುತ್ತಿದೆ. ಇದು ವಾರ್‌ರೂಮ್ ರೀತಿಯಲ್ಲಿ ಕಾರ್ಯನಿರ್ವಹಿಸುತ್ತಿದ್ದು, ಇಂತಹದ್ದೊಂದು ಆಧುನಿಕ ವ್ಯವಸ್ಥೆ ದೇಶದಲ್ಲೇ ಪ್ರಥಮ.

ರಾಜ್ಯದಲ್ಲಿ ವಯಸ್ಸಾದ ಮತ್ತು ಅಶಕ್ತ ಗೋವುಗಳನ್ನು ರಕ್ಷಿಸಿ, ಪೋಷಣೆ ಮಾಡಲು ಎಲ್ಲ ಜಿಲ್ಲೆಗಳಲ್ಲೂ ಗೋಶಾಲೆಗಳನ್ನು ಆರಂಭಿಸಲು ಸಚಿವ ಸಂಪುಟ ಸಭೆಯಲ್ಲಿ ನಿರ್ಧರಿಸಿದ್ದು, ಈ ಉದ್ದೇಶಕ್ಕೆ ಮೊದಲ ಹಂತದಲ್ಲಿ ₹15 ಕೋಟಿ ಬಿಡುಗಡೆ ಮಾಡಲಿದೆ. ಗೋಶಾಲೆಗಳ ಪ್ರಗತಿಯನ್ನು ನೋಡಿಕೊಂಡು ಹೆಚ್ಚುವರಿ ಹಣ ನೀಡಲು ನಿರ್ಧರಿಸಲಾಗಿದೆ.

ರಾಜ್ಯದಲ್ಲಿ ಹಲವು ಜಿಲ್ಲೆಗಳಲ್ಲಿ ಜಾನುವಾರುಗಳಿಗೆ ಕಾಲು ಬಾಯಿ ರೋಗ ತೀವ್ರ ವ್ಯಾಪಿಸಿದ ಕಾರಣ ತಕ್ಷಣವೇ 'ರಿಂಗ್ ವ್ಯಾಕ್ಸಿನ್' ಹಾಕಿಸಲು ಕ್ರಮ ಕೈಗೊಂಡಿದ್ದರಿಂದ ಸಾಂಕ್ರಾಮಿಕ ಕಾಯಿಲೆ ನಿಯಂತ್ರಣಕ್ಕೆ ಬಂದಿತು. ಈ ಕಾರ್ಯವನ್ನು ಸಮರೋಪಾದಿಯಲ್ಲಿ ಮಾಡಲಾಗಿದೆ. ವಿಶೇಷವಾಗಿ ಕೊಡಗು, ರಾಮನಗರ, ಚಿಕ್ಕಬಳ್ಳಾಪುರ, ಹಾಸನ, ಚಾಮರಾಜನಗರ, ಬೆಂಗಳೂರು ನಗರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳಲ್ಲಿ ತ್ವರಿತಗತಿಯಲ್ಲಿ ಹತೋಟಿಗೆ ತರಲಾಯಿತು. ಒಟ್ಟು 205 ಲಕ್ಷ ಜಾನುವಾರುಗಳಿಗೆ ಲಸಿಕೆ ಹಾಕಲಾಯಿತು.

ಆಕಸ್ಮಿಕವಾಗಿ ಮರಣ ಹೊಂದಿದ 37,094 ಕುರಿ/ಮೇಕೆಗಳ ಮಾಲೀಕರಿಗೆ ₹17.11 ಕೋಟಿ ಪರಿಹಾರ ಧನವನ್ನು ವಿತರಿಸಲಾಗಿದೆ. ಬಾಕಿ ಉಳಿದ ₹39.11 ಕೋಟಿ ಸರ್ಕಾರದಿಂದ ಬಿಡುಗಡೆ ಆಗಿದ್ದು, ಅದನ್ನು ಸಂತ್ರಸ್ತರ ಖಾತೆಗಳಿಗೆ ನೇರವಾಗಿ ವರ್ಗಾವಣೆ ಮಾಡಲು ಕ್ರಮ ತೆಗೆದುಕೊಳ್ಳಲಾಗಿದೆ.

- ಕೋವಿಡ್ ಸಂದರ್ಭದಲ್ಲಿ ಕೊಳೆಗೇರಿ ಪ್ರದೇಶದ ಜನರು, ನಿರ್ಗತಿಕರು, ವಲಸೆ ಕಾರ್ಮಿಕರು, ಕಟ್ಟಡ ಕಾರ್ಮಿಕರಿಗೆ ₹78.2 ಕೋಟಿ ವೆಚ್ಚದಲ್ಲಿ 2.11 ಕೋಟಿ ಲೀಟರ್ ಹಾಲು ವಿತರಿಸಲಾಗಿದೆ. ಈ ಮೂಲಕ ಕೆಳಸ್ತರದ ಜನರ ಆರೋಗ್ಯವನ್ನು ಕಾಪಾಡುವ ಕೆಲಸ ಸರ್ಕಾರ ಮಾಡಿದೆ.

ಹಾಲು ಉತ್ಪಾದಕರಿಗೆ ಪ್ರೋತ್ಸಾಹ ಧನ

8.8 ಲಕ್ಷ
ಹಾಲು ಉತ್ಪಾದಕರು

₹244.6 ಕೋಟಿ
ನೇರ ವರ್ಗಾವಣೆ

ಉತ್ಪನ್ನ	ಪ್ರಮಾಣ	ದೇಶದಲ್ಲಿ ಸ್ಥಾನ
ಹಾಲು	109.36 ಲಕ್ಷ ಟನ್	11
ಮೊಟ್ಟೆ	761.99 ಕೋಟಿ	6
ಮಾಂಸ	3.64 ಲಕ್ಷ ಟನ್	10

ಮುಖ್ಯಮಂತ್ರಿ ಯಡಿಯೂರಪ್ಪ ಪ್ರಭು ಚವ್ಹಾಣ ಅವರನ್ನು ಅಭಿನಂದಿಸುತ್ತಿರುವುದು

ಮುಖ್ಯಮಂತ್ರಿ ಯಡಿಯೂರಪ್ಪ ಅವರೊಂದಿಗೆ ಪಶುಸಂಗೋಪನೆ ಸಚಿವ ಪ್ರಭು ಚವ್ಹಾಣ

ಜಾನುವಾರು ಹತ್ಯೆ ಪ್ರತಿಬಂಧಕ ಕಾಯ್ದೆಯ ಅಂಶಗಳು

- ಜಾನುವಾರು ವ್ಯಾಪ್ತಿಯಲ್ಲಿ ಹಸು,ಕರು, ಎಮ್ಮೆ, ಎತ್ತು ಸೇರಿವೆ. 13 ವರ್ಷದೊಳಗಿನ ಎಮ್ಮೆ ಮತ್ತು ಕೋಣಗಳು ಒಳಗೊಂಡಿವೆ.
- ಗೋಹತ್ಯೆ ಮಾಡಿದರೆ 3 ವರ್ಷಗಳಿಗೆ ಕಡಿಮೆ ಇಲ್ಲದಂತೆ ಗರಿಷ್ಠ 7 ವರ್ಷಗಳವರೆಗೆ ಜೈಲು ಶಿಕ್ಷೆ
- ಒಂದು ಜಾನುವಾರು ಹತ್ಯೆ ಮಾಡಿದರೆ ₹50 ಸಾವಿರದಿಂದ ₹5 ಲಕ್ಷದವರೆಗೆ ದಂಡ
- ಎರಡು ಅಥವಾ ಹೆಚ್ಚಿನ ಅಪರಾಧಕ್ಕೆ ₹1 ಲಕ್ಷದಿಂದ ₹10 ಲಕ್ಷ ದಂಡ ಮತ್ತು 7 ವರ್ಷ ಕಾರಾಗೃಹ ವಾಸ
- ಗೋ ಹತ್ಯೆ ಪ್ರಕರಣಗಳ ತ್ವರಿತ ವಿಚಾರಣೆಗಾಗಿ ಜಿಲ್ಲೆಗಳಲ್ಲಿ ವಿಶೇಷ ನ್ಯಾಯಾಲಯಗಳ ಸ್ಥಾಪನೆ
- ಗೋ ರಕ್ಷಣೆಗೆ ಶ್ರಮಿಸುವವರ ವಿರುದ್ಧ ಯಾವುದೇ ಕ್ರಮ ತೆಗೆದುಕೊಳ್ಳುವಂತಿಲ್ಲ
- 13 ವರ್ಷಕ್ಕೆ ಮೇಲ್ಪಟ್ಟ ಎಮ್ಮೆ ಮತ್ತು ಕೋಣಗಳನ್ನು ಸೂಕ್ತ ಪ್ರಾಧಿಕಾರದ ಪರವಾನಗಿ ಪಡೆದು ವಧೆ ಮಾಡಬಹುದು. ಇದಕ್ಕೆ ಪಶು ವೈದ್ಯಾಧಿಕಾರಿಯ ಪ್ರಮಾಣ ಪತ್ರ ಕಡ್ಡಾಯ
- ವಧೆಯ ಉದ್ದೇಶದಿಂದ ಹೊರ ರಾಜ್ಯಗಳಿಗೆ ಜಾನುವಾರು ಸಾಗಣೆ ನಿಷೇಧ
- ವಶಕ್ಕೆ ತೆಗೆದುಕೊಂಡ ಹಸುಗಳನ್ನು ಹರಾಜು ಹಾಕಬಹುದು. ಸೆಕ್ಷನ್ 19 ರ ಪ್ರಕಾರ ವಶಕ್ಕೆ ಪಡೆದ ಹಸುಗಳನ್ನು ಆರೋಪಿಗಳಿಗೆ ವಾಪಸ್ ಮಾಡುವಂತಿಲ್ಲ
- ಸೆಷನ್ ನ್ಯಾಯಾಧೀಶರ ಹಂತದಲ್ಲೇ ಪ್ರಕರಣಗಳನ್ನು ವಿಲೇವಾರಿ ಮಾಡಬೇಕು. ಆರೋಪ ಸಾಬೀತಾದರೆ ಹಸು, ಸಾಗಣೆಗೆ ಬಳಸಿದ ವಾಹನ ಮತ್ತು ಜಾನುವಾರು ಕಟ್ಟಿಹಾಕಿದ್ದ ಸ್ಥಳ ಮುಟ್ಟುಗೋಲು ಹಾಕಿಕೊಳ್ಳಬಹುದು
- ಕರ್ನಾಟಕ ಸೊಸೈಟಿ ಕಾಯ್ದೆಯ ಪ್ರಕಾರ ನೋಂದಾಯಿತ ಸಂಸ್ಥೆಗಳಿಗೆ ಮಾತ್ರ ಗೋ ಶಾಲೆ ನಡೆಸಲು ಅವಕಾಶ

ಸರ್ಕಾರದ ಪ್ರೋತ್ಸಾಹದಿಂದ ರೇಷ್ಮೆ ಉತ್ಪಾದನೆ ಹೆಚ್ಚಳ

ಮೈಸೂರು ರೇಷ್ಮೆಯು ಜಾಗತಿಕ ಮಟ್ಟದಲ್ಲಿ ತನ್ನದೇ ಆದ ಸ್ಥಾನವನ್ನು ಕಂಡಕೊಂಡಿದೆ. ಸರ್ಕಾರದ ಪ್ರೋತ್ಸಾಹದ ಕಾರಣ, ದೇಶದ ಒಟ್ಟು ಕಚ್ಚಾ ರೇಷ್ಮೆ ಉತ್ಪಾದನೆಯಲ್ಲಿ ರಾಜ್ಯದ ಪಾಲು ಶೇ 44 ರಿಂದ ಶೇ 47 ರಷ್ಟಿದ್ದು, ಮುಂಚೂಣಿಯ ರಾಜ್ಯ ಎನಿಸಿಕೊಂಡಿದೆ.

ರೇಷ್ಮೆ ಬೆಳೆಗಾರರಿಗೆ ಅನುಕೂಲ ಮಾಡಿಕೊಡಲು ಕಳೆದ ಎರಡು ವರ್ಷಗಳಲ್ಲಿ ಆಧುನಿಕ ತಂತ್ರಜ್ಞಾನವನ್ನೂ ಬಳಸಿಕೊಳ್ಳಲಾಗಿದೆ. ಇದರ ಪರಿಣಾಮ ರಾಜ್ಯದ 10 ಪ್ರಮುಖ ರೇಷ್ಮೆಗೂಡು ಮಾರುಕಟ್ಟೆಯಲ್ಲಿ ಇ-ಹರಾಜು ವ್ಯವಸ್ಥೆ ಅನುಷ್ಠಾನದಲ್ಲಿದ್ದು, ಕೋಲಾರ, ರಾಮನಗರ, ಶಿಡ್ಲಘಟ್ಟ ಮತ್ತು ಕನಕಪುರ ರೇಷ್ಮೆ ಗೂಡು ಮಾರುಕಟ್ಟೆಗಳಲ್ಲಿ ಭಾಹಶಃ ಇ-ನಗದು ಪಾವತಿಯನ್ನು ಆರಂಭಿಸಲಾಗಿದೆ. ಇದರಿಂದ ರೈತರು ವಂಚನೆಗೆ ಒಳಗಾಗುವುದು ತಪ್ಪಿದೆ. ರೇಷ್ಮೆ ಗೂಡಿಗೆ ವೈಜ್ಞಾನಿಕ ದರ ನಿಗದಿಪಡಿಸಲು ಪ್ರಾಯೋಗಿಕವಾಗಿ ಕನಕಪುರ, ಕೊಳ್ಳೆಗಾಲ ಮತ್ತು ಚನ್ನಪಟ್ಟಣ ರೇಷ್ಮೆ ಗೂಡು ಮಾರುಕಟ್ಟೆಯಲ್ಲಿ ಗೂಡು ಪರೀಕ್ಷಾ ಕೇಂದ್ರಗಳನ್ನು ಆರಂಭಿಸಲಾಗಿದೆ.

ರೇಷ್ಮೆ ಕೃಷಿಯಲ್ಲಿ ಸಂಶೋಧನೆ ಕೈಗೊಂಡು ನೂತನ ತಾಂತ್ರಿಕತೆಗಳನ್ನು ಅಭಿವೃದ್ಧಿಗೊಳಿಸಲು ತಲಘಟ್ಟಪುರದಲ್ಲಿರುವ ಕರ್ನಾಟಕ ರಾಜ್ಯ ಸಂಶೋಧನಾ ಮತ್ತು ಅಭಿವೃದ್ಧಿ ಸಂಸ್ಥೆಯನ್ನು ಬಲಪಡಿಸಲು ಅನುದಾನ ಒದಗಿಸಲಿದೆ. ಅಲ್ಲದೆ ಕರ್ನಾಟಕ ರೇಷ್ಮೆ ಮಾರಾಟ ಮಂಡಳಿ ಸಂಸ್ಥೆಗೆ ₹2.27 ಕೋಟಿ ಆರ್ಥಿಕ ನೆರವನ್ನೂ ಒದಗಿಸಿದೆ.

ರಾಜ್ಯದಲ್ಲಿ 1,38,848 ಕುಟುಂಬಗಳು ರೇಷ್ಮೆ ಬೇಸಾಯವನ್ನೇ ನೆಚ್ಚಿಕೊಂಡಿವೆ. ಸುಮಾರು 7,250 ಕುಟುಂಬಗಳು ರೇಷ್ಮೆ ನೂಲು ಬಿಚ್ಚಣಿಕೆದಾರರು ಇದ್ದಾರೆ. ಈ ಉದ್ಯಮ ಕೃಷಿ ಆಧಾರಿತ ಸುಸ್ಥಿರ ಗ್ರಾಮೀಣ ಜೀವನೋಪಾಯವನ್ನು ಕಲ್ಪಿಸಿದೆ.

2020-21 ನೇ ಸಾಲಿನಲ್ಲಿ ಕೇಂದ್ರ ರೇಷ್ಮೆ ಮಂಡಳಿಯು ಕೇಂದ್ರ ಪುರಸ್ಕೃತ ಸಿಲ್ಕ್ ಸಮಗ್ರ ಯೋಜನೆಯಡಿ ಕೇಂದ್ರದ ಪಾಲು ₹49.25 ಕೋಟಿ ಅನುದಾನ ಒದಗಿಸಿದೆ. ರಾಜ್ಯ ಇದಕ್ಕೆ ಪೂರಕವಾಗಿ ತನ್ನ ಪಾಲಿನ ₹22.84 ಕೋಟಿಯನ್ನು ರಾಜ್ಯ ರೇಷ್ಮೆ ಅಭಿವೃದ್ಧಿ ಯೋಜನೆಯಡಿ ಒದಗಿಸಿದೆ. ಒಟ್ಟು ₹72.09 ಕೋಟಿ ಭರಿಸಿದೆ. ಇದರಿಂದ 15,645 ಫಲಾನುಭವಿಗಳಿಗೆ ಸಹಾಯಧನ ಪಾವತಿಸಲಾಗಿದೆ.

ತೋಟಗಾರಿಕೆ ಮತ್ತು ರೇಷ್ಮೆ ಸಚಿವ ಆರ್.ಶಂಕರ್ ಅವರ ಅಧ್ಯಕ್ಷತೆಯಲ್ಲಿ ರೇಷ್ಮೆ ಭಾಗೀದಾರರ ಮತ್ತು ರೇಷ್ಮೆ ವರ್ತಕರ ಪ್ರತಿನಿಧಿಗಳೊಂದಿಗೆ ಸಭೆ ನಡೆಸಿ, ರೇಷ್ಮೆ ಭಾಗೀದಾರರ ಹಿತವನ್ನು ಕಾಪಾಡಲು ಕೆಎಸ್ಎಂಬಿ ವತಿಯಿಂದ ಕಚ್ಚಾ ರೇಷ್ಮೆಗೆ ಒತ್ತೆ ಸಾಲ ನೀಡಲು ಹಾಗೂ ಕಚ್ಚಾ ರೇಷ್ಮೆ ಖರೀದಿಸಲು ಸರ್ಕಾರ ₹20 ಕೋಟಿ ಬಿಡುಗಡೆ ಮಾಡಿದೆ. 2020 ರ ಅಕ್ಟೋಬರ್ ಅಂತ್ಯಕ್ಕೆ 56.48 ಮೆಟ್ರಿಕ್ ಟನ್ ಕಚ್ಚಾ ರೇಷ್ಮೆಯನ್ನು ಒತ್ತೆ ಇಟ್ಟುಕೊಂಡು 692 ರೀಲರ್‌ಗಳಿಗೆ ₹8.63 ಕೋಟಿ ಒತ್ತೆ ಸಾಲವನ್ನು ನೀಡಲಾಗಿದೆ.1506 ರೀಲರ್‌ಗಳಿಂದ ₹15.95 ಕೋಟಿ ಮೌಲ್ಯದ 68.83 ಮೆಟ್ರಿಕ್ ಟನ್ ಕಚ್ಚಾ ರೇಷ್ಮೆಯನ್ನು ಖರೀದಿ ಮಾಡಲಾಗಿದೆ.

2021-22 ನೇ ಸಾಲಿನ ಬಜೆಟ್‌ನಲ್ಲಿ ಘೋಷಿಸಿರುವಂತೆ ಓಕಳಿಪುರದಲ್ಲಿ ₹150 ಕೋಟಿ ವೆಚ್ಚದಲ್ಲಿ ರೇಷ್ಮೆ ಭವನವನ್ನು ನಿರ್ಮಿಸಲು ಕ್ರಮ ತೆಗೆದುಕೊಳ್ಳಲಾಗಿದೆ. ಅಲ್ಲದೆ, ರಾಮನಗರದಲ್ಲಿ ಅತ್ಯಾಧುನಿಕ ಸೌಲಭ್ಯಗಳನ್ನು ಒಳಗೊಂಡ ಹೈ-ಟೆಕ್ ರೇಷ್ಮೆಗೂಡು ಮಾರುಕಟ್ಟೆಯನ್ನು ರೇಷ್ಮೆ ಭಾಗೀದಾರರ ಹಿತಕ್ಕಾಗಿ ನಬಾರ್ಡ್ ಸಹಯೋಗದೊಂದಿಗೆ ₹75 ಕೋಟಿ ವೆಚ್ಚದಲ್ಲಿ ನಿರ್ಮಿಸಲಾಗುವುದು.

- ರೇಷ್ಮೆ ಕೃಷಿಕರ ಸೇವೆಯನ್ನು ರೇಷ್ಮೆ ವಿಸ್ತರಣಾ ಕಾರ್ಯಕ್ರಮಕ್ಕೆ ಬಳಸಿಕೊಂಡು ಗೌರವಧನ ನೀಡುವ ಕಾರ್ಯಕ್ರಮವನ್ನು ಮುಂದುವರೆಸಲಾಗಿದೆ. ಇದಕ್ಕಾಗಿ ₹50 ಲಕ್ಷದ ಅನುದಾನ ನೀಡಲಾಗಿದೆ.
- ಲಾಕ್‌ಡೌನ್ ಅವಧಿಯಲ್ಲಿ ರಾಜ್ಯದ 41 ರೇಷ್ಮೆ ಗೂಡಿನ ಮಾರುಕಟ್ಟೆಗಳಲ್ಲಿ ವಹಿವಾಟು ನಡೆಸಲಾಯಿತು. ರೇಷ್ಮೆ ಬೆಳೆಗಾರರು ಉತ್ಪಾದಿಸಿದ ರೇಷ್ಮೆ ಗೂಡುಗಳ ಸುಗಮ ವಹಿವಾಟಿಗೆ ಅಗತ್ಯ ಕ್ರಮತೆಗೆದುಕೊಳ್ಳಲಾಗಿದೆ.

ಕೋವಿಡ್ ಅವಧಿಯಲ್ಲಿ ರೇಷ್ಮೆ ಗೂಡಿನ ಧಾರಣೆಯಲ್ಲಿ ಕುಸಿತವಾದ ಕಾರಣ ರೇಷ್ಮೆ ಗೂಡಿಗೆ ಪ್ರೋತ್ಸಾಹ ಧನ ಪ್ರತಿ ಕೆ.ಜಿ ಮಿಶ್ರತಳಿ ₹30 ಮತ್ತು ದ್ವಿತಳಿ ₹50 ರಂತೆ ನೀಡಲು ಸರ್ಕಾರ ಆದೇಶ ನೀಡಿದೆ. ಈ ಉದ್ದೇಶಕ್ಕೆ ₹ 45 ಕೋಟಿಗಳ ಅನುದಾನವನ್ನು ಕ್ಷೇತ್ರಮಟ್ಟಕ್ಕೆ ಬಿಡುಗಡೆಗೊಳಿಸಿದೆ. ₹39.68 ಲಕ್ಷಗಳನ್ನು ಗೂಡಿನ ಪ್ರೋತ್ಸಾಹ ಧನವಾಗಿ ಒಟ್ಟು 78,126 ಬೆಳೆಗಾರರಿಗೆ ಪಾವತಿಸಲಾಗಿದೆ.

ಬೆಳೆಗಾರರಿಗೆ ಸಹಾಯಧನ

ರೇಷ್ಮೆ ಅಭಿವೃದ್ಧಿಗಾಗಿ ಮತ್ತು ರೇಷ್ಮೆ ಉತ್ಪಾದನೆಯಲ್ಲಿ ನಿರತರಾಗಿರುವ ಭಾಗೀದಾರರನ್ನು ವಿವಿಧ ಯೋಜನೆಗಳಡಿ ಒದಗಿಸಿರುವ ಪ್ರೋತ್ಸಾಹಧನ/ಸಹಾಯಧನ ಸೌಲಭ್ಯಗಳನ್ನು ಒದಗಿಸಲಾಗಿದೆ. 2019-20 ರ ಸಾಲಿನಲ್ಲಿ 42,595 ಫಲಾನುಭವಿಗಳಿಗೆ ₹13,534.465 ಲಕ್ಷ, 2020-21 ನೇ ಸಾಲಿನಲ್ಲಿ 1,26,586 ಫಲಾನುಭವಿಗಳಿಗೆ ₹23,709.887 ಮತ್ತು 2021-22 ನೇ ಸಾಲಿನಲ್ಲಿ 3502 ಫಲಾನುಭವಿಗಳಿಗೆ ₹1,201 ಲಕ್ಷ ಸಹಾಯಧನ ಸೌಲಭ್ಯವನ್ನು ನೀಡಲಾಗಿದೆ.

ನಗರದಲ್ಲಿ ಇಂದು

‘ವನಮಹೋತ್ಸವ’ ಉದ್ಘಾಟನೆ ಮತ್ತು ಸಮಾರೋಪ: ಉದ್ಘಾಟನೆ–ಹೇಮಾ ಆರ್.ರಾವ್, ಆಯೋಜನೆ–ರಾಜ್ಯ ಗೃಹರಕ್ಷಕ ದಳ, ಸ್ಥಳ–ಬಿಇಎಲ್ ಕಾರ್ಖಾನೆ ಹೊರ ಆವರಣ, ಬಿಇಎಲ್ ವೃತ್ತ, ಬೆಳಿಗ್ಗೆ 9

ಕೋವಿಡ್ ಸೇನಾನಿಗಳಿಗೆ ಅಭಿನಂದನೆ ಮತ್ತು ಕೋವಿಡ್ ಪೀಡಿತ ಸದಸ್ಯರಿಗೆ ಸಹಾಯಧನ ವಿತರಣೆ: ಉದ್ಘಾಟನೆ–ಶ್ರೀನಿವಾಸ ಎಚ್.ಖೋಡೆ, ಆಯೋಜನೆ–ಸೋಮವಂಶ ಸಹಸ್ರಾರ್ಜುನ ಕ್ಷತ್ರಿಯ ಕೋ–ಆಪರೇಟಿವ್ ಸೊಸೈಟಿ ಲಿಮಿಟೆಡ್, ಸ್ಥಳ–ಕಾಸಿಯಾ ಭವನ, ವಿಜಯನಗರ, ಬೆಳಿಗ್ಗೆ 10.30

ಪ್ರಶಿಕ್ಷಣ ಭಾರತಿ–ಶಿಕ್ಷಕರ ತರಬೇತಿ ಪ್ರಕಲ್ಪ: ಉದ್ಘಾಟನೆ–ಸಚಿವ ಎಸ್. ಸುರೇಶ್ ಕುಮಾರ್, ಅಧ್ಯಕ್ಷತೆ–ಎಂ.ಪಿ. ಕುಮಾರ್, ಆಯೋಜನೆ–ರಾಷ್ಟ್ರೋತ್ಥಾನ ಪರಿಷತ್, ಬೆಳಿಗ್ಗೆ 11 (ಆನ್‌ಲೈನ್ ಕಾರ್ಯಕ್ರಮ)

ರಾಷ್ಟ್ರೀಯ ಪೋಷಕರ ದಿನ: ಪೋಷಣೆಯ ಜಾಗೃತಿ ಶೃಂಗ ಕುರಿತು ವೆಬಿನಾರ್, 3ಇ ಹೋಮ್ ಸ್ಕೂಲ್, ಮಧ್ಯಾಹ್ನ 12 (ಆನ್‌ಲೈನ್ ಕಾರ್ಯಕ್ರಮ)

ಕೆ.ಉಷಾ ಪಿ.ರೈ ದತ್ತಿ ಕಾರ್ಯಕ್ರಮ: ಸಣ್ಣ ಕಥೆ–ಒಂದು ಸಂವಾದ, ಸಂಪನ್ಮೂಲ ವ್ಯಕ್ತಿ–ಎಸ್.ದಿವಾಕರ್, ಭಾಗವಹಿಸುವವರು–ಉಮಾ ರಾವ್, ಜಯಶ್ರೀ ದೇಶಪಾಂಡೆ, ಜಯಶ್ರೀ ಕಾಸರವಳ್ಳಿ, ಗೀತಾ, ಜಾಹ್ನವಿ, ದೀಪ್ತಿ, ಶಾಂತಿ ಕೆ.ಅಪ್ಪಣ್ಣ, ಛಾಯಾ ಭಟ್, ಅಧ್ಯಕ್ಷತೆ–ವನಮಾಲಾ ಸಂಪನ್ನಕುಮಾರ್, ಆಯೋಜನೆ–ಕರ್ನಾಟಕ ಲೇಖಕಿಯರ ಸಂಘ, ಸಹಕಾರ–ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಸಂಜೆ 5 (ಆನ್‌ಲೈನ್ ಕಾರ್ಯಕ್ರಮ)

ಸೋಲೂರು: ನಾರಾಯಣ ಗುರು ಪೀಠಕ್ಕೆ ಭೂಮಿಪೂಜೆ

ಪ್ರಜಾವಾಣಿ ವಾರ್ತೆ

ಮಾಗಡಿ: ಕರ್ನಾಟಕ ಪ್ರದೇಶ ಆರ್ಯ ಈಡಿಗರ ಸಂಘದ ಆಶ್ರಯದಲ್ಲಿ ತಾಲ್ಲೂಕಿನ ಸೋಲೂರಿನ ರೇಣುಕಾಯಲ್ಲಮ್ಮದೇವಿ ದೇವಾಲಯ ಬಳಿ ಶನಿವಾರ ಬ್ರಹ್ಮಶ್ರೀ ನಾರಾಯಣ ಗುರು ಪೀಠಕ್ಕೆ ಭೂಮಿಪೂಜೆ ನೆರವೇರಿಸಲಾಯಿತು.

ಇದೇ ಸಂದರ್ಭದಲ್ಲಿ ನಡೆದ ಗುರು ಪೂರ್ಣಿಮೆ ಕಾರ್ಯಕ್ರಮದಲ್ಲಿ ರೇಣುಕಾ ಪೀಠ ಹಾಗೂ ಬ್ರಹ್ಮಶ್ರೀ ನಾರಾಯಣಗುರು ಪೀಠದ ನಿಯೋಜಿತ ಪೀಠಾಧಿಪತಿ ವಿಖ್ಯಾತಾನಂದ ಸ್ವಾಮೀಜಿ ಅವರಿಗೆ ಗುರುವಂದನೆ ಸಲ್ಲಿಸಲಾಯಿತು.

‘ಈಡಿಗರ ಸಂಘಟನೆಯೇ ನಮ್ಮ ಗುರಿ’ ಎಂದು ಸ್ವಾಮೀಜಿ ಹೇಳಿದರು.

ಈಡಿಗ ಸಮುದಾಯದ ಶಿಕ್ಷಣ, ಉದ್ಯೋಗದಂತಹ ಸೌಲಭ್ಯಕ್ಕೆ ಕಾರ್ಯಯೋಜನೆ ರೂಪಿಸಲಾಗುವುದು. ಬ್ರಹ್ಮಶ್ರೀ ನಾರಾಯಣ ಗುರು ಅವರ ತತ್ವಗಳನ್ನು ಜನಮಾನಸದಲ್ಲಿ ಬಿತ್ತಿ ಬೆಳೆಸಲಾಗುವುದು. ಸಮುದಾಯದ ಅಭಿವೃದ್ಧಿಗೆ ಅರ್ಪಣಾಭಾವನೆಯಿಂದ ದುಡಿಯಲಾಗುವುದು ಎಂದು ತಿಳಿಸಿದರು.

ರಾಜ್ಯದಲ್ಲಿ ಈಡಿಗ ಸಮುದಾಯದವರು ಪ್ರದೇಶವಾರು ವಿವಿಧ ಒಳ ಪಂಗಡಗಳಲ್ಲಿ ಗುರುತಿಸಿಕೊಂಡಿದ್ದಾರೆ. ಸಮುದಾಯದ 26 ಒಳಪಂಗಡಗಳನ್ನು ಸಂಘಟಿಸಿ ಎಲ್ಲರ ವಿಶ್ವಾಸದೊಂದಿಗೆ ಸಂವಿಧಾನದತ್ತವಾದ ಸವಲತ್ತು ದೊರಕಿಸಿಕೊಡಲು ಪ್ರಾಮಾಣಿಕ ಪ್ರಯತ್ನ ಮಾಡುತ್ತೇವೆ ಎಂದು ಹೇಳಿದರು.

ಮಾಗಡಿ ತಾಲ್ಲೂಕಿನ ಸೋಲೂರಿನ ಆರ್ಯ ಈಡಿಗರ ಮಹಾಸಂಸ್ಥಾನ ಮಠದಲ್ಲಿ ಶನಿವಾರ ನಡೆದ ಗುರು ಪೂರ್ಣಿಮೆ ಹಾಗೂ ಬ್ರಹ್ಮಶ್ರೀ ನಾರಾಯಣಗುರು ಪೀಠ ಸ್ಥಾಪನೆಗೆ ನಿಯೋಜಿತ ಪೀಠಾಧಿಪತಿ ವಿಖ್ಯಾತಾನಂದ ಸ್ವಾಮೀಜಿ ಗೋಪೂಜೆ ನೆರವೇರಿಸಿ ಚಾಲನೆ ನೀಡಿದರು

ರಾಜ್ಯದಾದ್ಯಂತ ಪ್ರವಾಸ ಮಾಡಿ ಈಡಿಗ ಸಮುದಾಯದ ಎಲ್ಲರನ್ನು ಪರಿಚಯಿಸಿಕೊಂಡು ಅವರ ಸಮಸ್ಯೆ ಆಲಿಸಿ ಪರಿಹಾರ ಸೂಚಿಸಲು ಯೋಜನೆ ರೂಪಿಸಲಾಗುತ್ತಿದೆ. ಜೊತೆಗೆ, ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಕೊಡಿಸುವ ಬಗ್ಗೆ ಪೋಷಕರಲ್ಲಿ ಜನಜಾಗೃತಿ ಮೂಡಿಸಲಾಗುವುದು ಎಂದರು.

ಮುಂದಿನ ವರ್ಷ ಪಟ್ಟಾಭಿಷೇಕ: ಕರ್ನಾಟಕ ಪ್ರದೇಶ ಆರ್ಯ ಈಡಿಗರ ಸಂಘದ ಅಧ್ಯಕ್ಷ ಎಂ. ತಿಮ್ಮೇಗೌಡ ಮಾತನಾಡಿ, ಮುಂದಿನ ವರ್ಷದ ಫೆ. 2ರಂದು ವಿಖ್ಯಾತಾನಂದ ಸ್ವಾಮೀಜಿ ಅವರ ಪಟ್ಟಾಧಿಕಾರ ಮಹೋತ್ಸವ ನಡೆಸಲಾಗುವುದು ಎಂದು ತಿಳಿಸಿದರು.

‘ಆರ್ಯ ಈಡಿಗರ ಸಮುದಾಯವನ್ನು ಸಂಘಟಿಸಿ, ಮುನ್ನಡೆಸಲು ಸ್ವಾಮೀಜಿ ಅವರಿಗೆ ಪೂರ್ಣ ಸಹಕಾರ ನೀಡಲಾಗುವುದು. ನಮ್ಮ ಜನಾಂಗದ ಮುಖಂಡರು, ಜನಪ್ರತಿನಿಧಿಗಳು ಮತ್ತು ಯುವಜನತೆ ಸಂಘಟನೆ ಮಾಡಲು ಸ್ವಾಮೀಜಿ ಅವರಿಗೆ ಪೂರ್ಣ ಸಹಕಾರ ನೀಡಬೇಕು’ ಎಂದು ಮನವಿ ಮಾಡಿದರು.

ವಿಧಾನ ಪರಿಷತ್ ಸದಸ್ಯ ಬಿ.ಕೆ. ಹರಿಪ್ರಸಾದ್, ಶಾಸಕರಾದ ವಿ. ಸುನಿಲ್ ಕುಮಾರ್, ಎಚ್.ಆರ್. ಗವಿಯಪ್ಪ, ಮಾಜಿ ಶಾಸಕರಾದ ಕೆ.ಡಿ. ನಾಯ್ಕ್, ಸ್ವಾಮಿರಾವ್, ಬೇಳೂರು ಗೋಪಾಲಕೃಷ್ಣ ಮಾತನಾಡಿದರು.

ಬೆಂಗಳೂರು ಬಿಲ್ಲವ ಸಂಘದ ಅಧ್ಯಕ್ಷ ಎಂ. ವೇದಕುಮಾರ್, ಕೆಪಿಎಸ್‌ಸಿ ಮಾಜಿ ಸದಸ್ಯ ಡಾ.ಲಕ್ಷ್ಮೀನರಸಿಂಹಯ್ಯ, ಶ್ರೀಸುಧಾ ಸಹಕಾರ ಬ್ಯಾಂಕ್ ಉಪಾಧ್ಯಕ್ಷ ಟಿ. ವಾಸನ್, ಈಡಿಗರ ಸಂಘದ ಪದಾಧಿಕಾರಿಗಳಾದ ಜೆ.ಪಿ. ಸುಧಾಕರ್, ಕೆ.ಎಸ್. ದುಶ್ಯಂತ್, ಹರಿಚರಣ್, ರಕ್ಷಿತ್ ಶಿವರಾಮ್, ಶಿವಕುಮಾರ್, ಪತ್ರಕರ್ತ ಚೆಲುವರಾಜ್, ಕುದೂರು ವೆಂಕಟೇಶ್, ತಾಲ್ಲೂಕು ಆರ್ಯ ಈಡಿಗರ ಸಂಘದ ಅಧ್ಯಕ್ಷ ಎಂ.ಜಿ. ಗೋಪಾಲ್, ಕಾರ್ಯದರ್ಶಿ ಚಂದ್ರಶೇಖರ್, ಕುದೂರಿನ ವೆಂಕಟೇಶ್ ಹಾಜರಿದ್ದರು.

ರಾಮಚಂದ್ರಾಪುರ ಮಠದ ರಾಘವೇಶ್ವರ ಭಾರತಿ ಸ್ವಾಮೀಜಿ
‘ಧನ ಜನಕ್ಕಿಂತ ಜ್ಞಾನವೇ ಶ್ರೇಷ್ಠ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಜನ ಅಥವಾ ಧನ ಶಕ್ತಿಯಿಂದ ದೇಶವನ್ನು ಬದಲಿಸಲು ಸಾಧ್ಯವಾಗದು. ಆದರೆ, ಜ್ಞಾನ ಶಕ್ತಿಯನ್ನು ಹೊಂದಿದ್ದಲ್ಲಿ ಅದು ಸುಲಭ ಸಾಧ್ಯ’ ಎಂದು ರಾಮಚಂದ್ರಾಪುರ ಮಠದ ರಾಘವೇಶ್ವರ ಭಾರತಿ ಸ್ವಾಮೀಜಿ ಅಭಿಪ್ರಾಯಪಟ್ಟರು.

ನಗರದಲ್ಲಿ 28ನೇ ಚಾತುರ್ಮಾಸ್ಯ ವ್ರತ ಕೈಗೊಳ್ಳುವ ವೇಳೆ ಶನಿವಾರ ಧಾರ್ಮಿಕ ಪ್ರವಚನ ನೀಡಿದ ಅವರು, ‘ಸೈನ್ಯ, ಕೋಶ ಅಥವಾ ಜನಸ್ತೋಮ ಇಲ್ಲದೆಯೇ ಶಂಕರಾಚಾರ್ಯರು ತಮ್ಮ ಜ್ಞಾನ ಪ್ರಭೆಯಿಂದ ಅಖಂಡ ಭಾರತದ ಪುನರುತ್ಥಾನ ಮಾಡಿದರು. ಅದೇ ರೀತಿ, ವಿಷ್ಣುಗುಪ್ತ ವಿಶ್ವವಿದ್ಯಾಪೀಠವು ಪ್ರಾಚೀನ ಜ್ಞಾನಪರಂಪರೆಯ ತಳಹದಿಯಲ್ಲಿ ದೇಶದ ಪುನರ್‌ನಿರ್ಮಾಣದತ್ತ ದೃಷ್ಟಿ ನೆಟ್ಟಿದೆ. ವಾಸ್ತು, ಆಯುರ್ವೇದ, ವೃಕ್ಷಾಯುರ್ವೇದ, ಸಾಮವೇದದಂಥ ಅಳಿವಿನ ಅಂಚಿನಲ್ಲಿರುವ ಹಲವು ವಿದ್ಯೆಗಳ ಪುನರುತ್ಥಾನ ಇಲ್ಲಿ ನಡೆಯಲಿದೆ’ ಎಂದರು.

‘ಗೋಕರ್ಣ ಮಂಡಲದ ವ್ಯಾಪ್ತಿಯಲ್ಲೇ ಹಂಚಿದ ಜ್ಞಾನದ ಬೆಳಕು ದೇಶ ಕಟ್ಟುವ ಜತೆಗೆ ವಿಶ್ವ ಬೆಳಗಬೇಕು. ಈ ಸಂಕಲ್ಪದೊಂದಿಗೆ ವಿಶ್ವವಿದ್ಯಾಪೀಠ ನಿರ್ಮಿಸಲಾಗುತ್ತಿದೆ. ಇದನ್ನೇ ಕೇಂದ್ರಬಿಂದುವಾಗಿ ಇಟ್ಟುಕೊಂಡು ಈ ಬಾರಿಯ ಚಾತುರ್ಮಾಸ್ಯವನ್ನು ವಿಶ್ವವಿದ್ಯಾ ಚಾತುರ್ಮಾಸ್ಯವಾಗಿ ಆಚರಿಸಲಾಗುತ್ತಿದೆ’ ಎಂದು ಹೇಳಿದರು.

ಅಖಿಲ ಹವ್ಯಕ ಮಹಾಸಭಾ ಅಧ್ಯಕ್ಷ ಡಾ. ಗಿರಿಧರ ಕಜೆ, ‘ಜಗತ್ತಿನ ಎಲ್ಲ ಸಂಶೋಧನೆಗಳ ಮೂಲ ಭಾರತ. ಅದರ ಶಕ್ತಿ, ಸತ್ವ, ಸಿದ್ಧಾಂತಗಳನ್ನು ಮುಂದಿನ ಜನಾಂಗಕ್ಕೆ ತಲುಪಿಸುವ ಮಹಾನ್ ಸಂಕಲ್ಪವೇ ವಿಶ್ವವಿದ್ಯಾಪೀಠ’ ಎಂದರು.

ಶಿವಮೊಗ್ಗ ಕೃಷಿ ವಿಶ್ವವಿದ್ಯಾಲಯದಿಂದ ಮಾನ್ಯತೆ ಪಡೆದ ‘ಮಲೆನಾಡು ಸಿಂಧೂರಿ’ ಎಂಬ ಕೆಂಪಕ್ಕಿ ತಳಿಯನ್ನು ಲೋಕಾರ್ಪಣೆ ಮಾಡಲಾಯಿತು.

ಶಾಸಕ ರವಿ ಸುಬ್ರಹ್ಮಣ್ಯ, ಮಠದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಕೆ.ಜಿ. ಭಟ್, ಚಾತುರ್ಮಾಸ್ಯ ಮಹಾಸಮಿತಿ ಗೌರವಾಧ್ಯಕ್ಷ ದಿವಾಣ ಕೇಶವ ಕುಮಾರ್, ಕ್ರಿಯಾಸಮಿತಿ ಗೌರವಾಧ್ಯಕ್ಷ ಜಿ.ಎಂ. ಹೆಗಡೆ ಹುಕ್ಲಮಕ್ಕಿ, ಚಾತುರ್ಮಾಸ್ಯ ಸಮಿತಿ ಅಧ್ಯಕ್ಷ ಎಸ್.ಜಿ. ಭಟ್ ಮತ್ತಿತರರು ಇದ್ದರು.

ಚಾತುರ್ಮಾಸ್ಯ ವ್ರತ ಕೈಗೊಂಡ ರಾಘವೇಶ್ವರ ಭಾರತಿ ಸ್ವಾಮೀಜಿ ಅವರು ದೇವರಿಗೆ ಪೂಜೆ ಸಲ್ಲಿಸಿದರು.

‘ವಿಶ್ವವಿದ್ಯಾಪೀಠಕ್ಕೆ ಅಗತ್ಯ ನೆರವು’

‘ಮೆಕಾಲೆ ಶಿಕ್ಷಣ ಪದ್ಧತಿ ಸರಿಯಿಲ್ಲ ಎಂದು ವಿಶ್ಲೇಷಿಸಿದರೂ ಅದಕ್ಕೆ ಪರ್ಯಾಯ ಶಿಕ್ಷಣ ಪದ್ಧತಿಯನ್ನು ಜಾರಿಗೆ ತರಲು ನಮಗೆ ಈವರೆಗೂ ಸಾಧ್ಯವಾಗಿಲ್ಲ. ಹೊಸ ಶಿಕ್ಷಣ ನೀತಿ ಜಾರಿಗೆ ಬರುವ ಮೂರು ವರ್ಷಗಳ ಮೊದಲೇ ನೂತನ ನೀತಿಯ ಎಲ್ಲ ಅಂಶಗಳನ್ನು ಒಳಗೊಂಡ ಹಾಗೂ ಅದಕ್ಕೂ ಮಿಗಿಲಾದ ಪರಿಕಲ್ಪನೆಯನ್ನು ವಿಶ್ವವಿದ್ಯಾಪೀಠದ ತಳಪಾಯದ ಮೂಲಕ ಮಠ ಸಾಕಾರಗೊಳಿಸಿದೆ. ಈ ವಿದ್ಯಾಪೀಠದ ಕಾರ್ಯಕ್ಕೆ ಕೇಂದ್ರ ಸರ್ಕಾರ ಎಲ್ಲ ಅಗತ್ಯ ನೆರವು ನೀಡಲಿದೆ’ ಎಂದು ಸಂಸದ ತೇಜಸ್ವಿ ಸೂರ್ಯ ಭರವಸೆ ನೀಡಿದರು.

ಪ್ರಜಾವಾಣಿ ಕ್ಲಾಸಿಫೈಡ್ಸ್
ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

JOB OPPORTUNITIES
Teachers/ Professors

RMS INTERNATIONAL SCHOOL requires PRINCIPAL. EXPERIENCE: Minimum 5 years as PRINCIPAL in school. Next to metro cash and carry, Kanakapura Road. 9738211017, 9606416534

MORNING STAR School, Ramachandra Puram, (Rajajinagar Entrance) Bangalore, Require B.Sc/ M.Sc, B.Ed, (Mathematics) Lady Teachers, Contact: 9845018480

SOUNDARYA EDUCATIONAL TRUST (R)
Soundarya Nagar, Sidedahalli, Hesarghatta Road, Nagasandra Post, B'lore-73. www.soundaryainstitutions.in
Tel: 080-29510260 / Mob: 99645 14873
Invites Applications For
SOUNDARYA COLLEGE OF LAW
PRINCIPAL
Qualifications : LLM with Ph.D
Experience : Minimum 10 years Teaching Exp. including at least 5 years of administrative exp.
SOUNDARYA INSTITUTE OF MANAGEMENT & SCIENCE
Dept. of Post Graduation in Commerce
ASSOCIATE PROFESSOR
M.Com. with Ph.D having min. 8 yrs of teaching exp.
Salary: Attractive & commensurate with qualification & exp.
Interested candidates apply with all relevant documents to hr@soundaryainstitutions.in on or before 31-07-2021

GLOBAL ACADEMY FOR LEARNING
Next Gen School
Affiliated to CBSE, New Delhi
Applications are invited from qualified female candidates for the following posts:
Primary School – All Subjects Bachelor Degree with B.Ed and at least 2 years of previous experience
Secondary school - English, Social Studies, Maths and Physics Master Degree with B.Ed and at least 2 years of previous experience.
Librarian- B. Lib with at least two years of experience.
Eligible candidates may send their detailed resumes in an envelope clearly super-scribing the post applied for.
The soft copy of the application may be sent to contact@gaflschool.com.
Candidates with good communication skills and previous experience will be given preference.
R R Nagar, Bangalore

GURUKULA INTERNATIONAL School requires English Social, Maths Teachers for Primary and High school and Lady Accountant with Kannada Typing. Near Magadi Road, Metro Station, Bangalore-23. 7829338292, 7676676629.

APPLICATIONS FOR the post of Lecturer in English, Commerce, Computer Science and Physical Director are invited for VET PU and Degree College at J.P.Nagar from the eligible candidates with Master's in respective specialization. NET/UGC will be given preference. Apply within 01st August 2021. E-mail: vetinst@rediffmail.com, vetfgc@rediffmail.com

NEW HOLY SAINT HIGH SCHOOL- Mathematics Science Teacher 18000/- .Anglo-Indian Nursery 15,000/-. Ph:7892461960

JUBILEE NATIONAL PUBLIC SCHOOL, Affiliated to CBSE, J.P.Nagar 8th Phase,Invite applications from Qualified and Experienced TEACHERS for Immediate Appointment in English for Middle School & High School and Trained Nursery TEACHERS. Contact- 8197812901. jubileenational9740@gmail.com

“”ST.MARTIN'S. HIGH School, 7th Cross, Behind Anjan Theater, Magadi Road, Bangalore:-23 Requires:- Qualified & Trained. Teachers for Nursery, Primary & High School to teach all the Subjects including COMPUTER & P E. Contact Office Phone:: 080-23101999/ 9591990199“”

DH DECCAN HERALD — ಪ್ರಜಾವಾಣಿ ಕ್ಲಾಸಿಫೈಡ್ಸ್
RECRUITMENT
BOOK YOUR JOB AD IN DECCAN HERALD ALL KARNATAKA PRAJAVANI ALL KARNATAKA
@ 700/-* Per Sqcm Single Column
JOB opportunities
condition apply*
For More Details Contact:
9880856233 | 9731810277
9901641752 | 9845114560 | 9886213331
080- 45557163 | 45557164

AURO MIRRA International School, Ulsoor, Bangalore, Requires:- Accountant, Administrator, HOD- for English & Math, Teachers (all-subjects) Contact- 7760977548 jobs@auroschoolsulsoor.org www.auroschoolsulsoor.org

WANTED IMMEDIATELY PRINCIPAL: For Women's Degree College.M.Com with 6 to 8 years experience in College Administration, Managing University affairs and Teaching Commerce Subjects. LIBRARIAN: B.lib or M.lib with minimum 2 years experience in handling Degree & PU college Library. CLERK:B.com with minimum two years Experience in Managing Office and Handling University affairs. Apply immediately with Resume and Recent Passport size photograph to reach us on or before 5th August 2021 The Secretary, Bharathamatha Education Society Hanumanthanagar, Bangalore: 560019. 080-26672836 9110669225 Email: bharathamatha.edusoc@gmail.com

HERITAGE PUBLIC SCHOOL, Srinidhi Layout, Konanakunte, J.P.Nagar 8th-Phase, Bangalore-62. Urgently Requires Hindi and Chemistry/Biology TEACHERS For High School. Contact: 9901733776.

WANTED TRAINED and experienced teachers for a reputed school at Malur. High school Hindi, Computer_science. Primary_School Hindi, Maths, Gen.science, Social_Science & EVS. Email: unique.malur@gmail.com. Contact: 9448894417

STSOPHIA CONVENT (CBSE)Nagarabhavi requires trained experienced Female HODs and Coordinators for Maths Socialscience and English to primary and High school (Immediate Appointment) principal@stsophiaconvent.orgContact:9243031872

VIDYA-VAHINI SCHOOL, CBSE, RHCS Layout, Srigandhadakaval, Bangalore-560091. Ph:9686282423, 080-23483398, Email: vvs_school@live.com, REQUIRED- Maths, Social and English TEACHER (8,9 &10 Grade).

MORE Classifieds IN SUPPLEMENT

INNOVATIVE INTERNATIONAL PUBLIC SCHOOL AND PU COLLEGE, Ramasandra, Kengeri Hobli, Bengaluru-60, Phone- 8904051455. REQUIRED: LECTURERS- English, Economics, Accountancy, Statistics, Business Studies (P.G With B.ED) PGT-English, Kannada, Social,Science Mathematics (P.G With B.ED) OFFICE ASSISTANT- Female Only, Send your resume before: 28.07.2021. iipschool2014@gmail.com

Engg/ Production Technical

LEADING SUPER-GRADE Electrical Contractor Required Diploma/BE Electrical Engineers with 6-Months to 1-Year Experience. Contact: 9972056655

WANTED SINGLE/MULTI Spindle Operators: Any qualification, Quality Inspectors: Qualification: PUC, Kamakshipalya, Bangalore-560079, Contact: 9845142536

CNC TURNING, Milling, Surface Grinding Operaters, Fitter, Turner, Miller, Receptionist, Helper, Cleark. Contact: 9448558947/ 9916552712.

General

INDUSTRY AT Peenya requires, 3-4 years Experienced (1) VMC OPERATOR- Master-Cam programming & job setting knowledge (2) ADMIN-INCHARGE for Sales & Marketing, ADMIN ASSISTANT- good English (3) SHEET-METAL WORKER- bending, shearing, welding. Telephone: 9972410541, 9845915484 infusilindia@infusil.in

'REQUIRED JUNIOR Advocates for 3 years Court Experience and Non-Litigation Matters, office at Whitefield Main Road, B. Narayanapura, 9900007938.'

REQUIRED-BUNK MAINTENANCE Supervisors Qualification: Any Degree, Exp: 5-10years Relevant Field, Salary: 35000/- & Above Accountant, Marketing Executive For Petroleum Product Exp: 5-10years Email glprojects7889@gmail.com Call:7338084555 9880727889

Marketing & Sales

A Consortium of German, Italian, Dutch & other European Companies represented in India by their agents **STANDARD MACHINERY CORPORATION** who are leaders in the Industrial Food Manufacturing Machinery Business, are looking for a
Marketing Manager-Female
Qualification : MBA
The incumbents must have excellent communication skills & computer knowledge to look after sales & support.
Min. 5 years exp. candidates can apply for this job. Excellent salary package can be offered for the right candidates.
Interested Candidates please send your CV to : smc@stanmac.net
STANDARD MACHINERY CORPORATION #205B, Brooklyn Apartments #63, Banaswadi Main Road Jai Bharath Nagar Bangalore-560033.
www.stanmac.com

AGSAR PAINTS PVT. LTD REQUIRED Sales Executives (MALE) Qualification: Degree Age: 30-45 years Language: English, Kannada, Hindi and Tamil Email: bangalore@agsar.net Contact: 9535910010

REQUIRED FIELD Sales Officer in FMCG in Dobbespet, Mookandapalli, Zuzuvadi, Ramangara, Channapatna, Kanakapura, Tiptur, Kunigal, Pavagada, Madhugiri, Mysore, Salary 15k in hand + Allow + Incentive, Having Bike + Android Mobile, RC. Contact: 9770502074, 6264800162, 7898986707

WANTED FEMALE Marketing Executives min 1 year experience in sales. Qualification: PUC/Degree, Salary +Incentives, basic computer knowledge Must. Ph: 9340099993/9341444444

Accounts & Finance

REPUTED REAL Estate Company. Required Female ACCOUNTANT with 10 years experience, well knowledge of GST/TDS. Contact:9886150302/ 08023610405 Mail: jpnarayanslv@gmail.com

NEED EXPERIENCED accountant for company at 9th mile, tumkur road WhatsApp on +91 9880177861

Receptionist/ Secretary

REQUIRED EXPERIENCED Tele callersExcellent Remuneration, Incentives. send WhatsApp message about yourself Please don't call 8762424646Deevige ClassesMalleshwaram

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
GM-Advertisement

EDUCATION CORNER
ಕ್ಲಾಸಿಫೈಡ್ಸ್

A JAIN INSTITUTION
ADARSH GROUP OF INSTITUTIONS
AGI Estd : 1971
5th Main, Chamarajpet, Bengaluru - 18 | www.agieducation.org
PUC COMMERCE: MSBA (Basic Maths, Statistics, Business Studies, Accountancy), SEBA (Statistics, Economics, Business Studies, Accountancy), CsSBA (Computer Science, Statistics, Business Studies, Accountancy), HEBA (History, Economics, Business Studies, Accountancy), CsEBA (Computer Science, Economics, Business Studies, Accountancy)
PUC SCIENCE: PCMB (Physics, Chemistry Mathematics, Biology), PCMCs (Physics, Chemistry Mathematics, Computer Science), PCME (Physics, Chemistry, Mathematics, Electronics)
DEGREE COURSES: BBA (Bachelor of Business Administration), BCA (Bachelor of Computer Applications), B.Com (Bachelor of Commerce)
PG COURSES: MBA DUAL Specialization (Master of Business Administration), M.Com (Master of Commerce)
EVENING COLLEGE: PUC, B.Com (Bachelor of Commerce)
COVID special concession in fees
ADMISSIONS OPEN
Apply online @ www.agieducation.org
Scholarship for meritorious students
Mob : +91 74067 40011 / 22 | Phone : +91 80 26677100 Email : admission@agieducation.org

SRI RAGHAVENDRA DEGREE COLLEGE
Chimney Hills, Chikkabanavara, Hesarghatta Road, Bangalore-560090
ADMISSION OPEN
For 2021-22
B.COM
Eligibility - PUC
Contact No.
7353582077 | 8050850737

ಯುವ ಶಿಕ್ಷಣ ಉದ್ಯಮಿಯಾಗಬೇಕೆ?
100% ವಿದ್ಯಾರ್ಥಿ ವೇತನದೊಂದಿಗೆ*
ಒಂದು ವರ್ಷದ ಕಲಿಕಾ ಕಾರ್ಯಕ್ರಮ
ಆನ್ ಲೈನ್ ತರಗತಿಗಳು + ವ್ಯಯಕ್ತಿಕ ತರಗತಿಗಳು
ಬೆಂಗಳೂರಿನ ಹತ್ತಿರದಲ್ಲಿ
ಹೆಡ್‌ಸ್ಟ್ರೀಮ್ಸ್ ನ ಸಾರಥ್ಯದಲ್ಲಿ: ಹೆಡ್‌ಸ್ಟ್ರೀಮ್ಸ್ ಲಾಭ ರಹಿತ ಸಂಸ್ಥೆಯಾಗಿದ್ದು 2008 ರಿಂದ ಯುವಕರ ಜೊತೆ ಕೆಲಸ ಮಾಡುತ್ತಿದೆ
ವೆಬ್ ಸೈಟ್ ವಿಳಾಸ: https://headstreams.org/holacourse
ಅರ್ಹತೆಗಳು
- 18 ರಿಂದ 30 ವರ್ಷಗಳಾಗಿರಬೇಕು
- ಹೆಚ್ಚಿನ ವೇಗದ ಇಂಟರ್ನೆಟ್ ಹೊಂದಿರಬೇಕು
- ಕನ್ನಡ ಓದಲು ಮತ್ತು ಮಾತನಾಡಲು ಬರಬೇಕು ಹಾಗೂ ಸಾಮಾನ್ಯ ಇಂಗ್ಲೀಷ್ ಜ್ಞಾನ ಹೊಂದಿರಬೇಕು

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:- ಜುಲೈ 28, 2021
ಭೇಟಿ ನೀಡಿ http://bit.ly/holacourse
*ಆಯ್ಕೆಯಾದ ಅಭ್ಯರ್ಥಿಗಳಿಗೆ ಮಾತ್ರ
ಹೆಚ್ಚಿನ ಮಾಹಿತಿಗಾಗಿ +91-8095962200 ಗೆ SMS / WhatsApp ಮಾಡಿ

SS ACHARYA INSTITUTE OF ALLIED HEALTH SCIENCE
Paramedical Diploma & Paramedical Degree ▸ In All Courses
SSLC/PUC Pass
100% JOB
ADMISSION OPEN 2021-22
New BEL ISRO Road, Bangalore-94
Call us: 63640 61616

ಶ್ರೀ ಕೃಷ್ಣಸೂರಿ ವೇದಗಮ ಪಾಠಶಾಲಾ
ಮೇಲುಕೋಟೆ 571431 (ಮಂಡ್ಯ ಜಿಲ್ಲೆ)
ಯಜುರ್ವೇದ ತರಗತಿಗಳ ನೂತನ ಬ್ಯಾಚ್ ಪ್ರಾರಂಭ
ಶ್ರೀ ಶ್ರೀ ಕೃಷ್ಣಪ್ರೇಮಿ ಸ್ವಾಮಿಗಳ ಆಶೀರ್ವಾದಗಳೊಂದಿಗೆ, ಅಖಿಲ ಭಾರತ ಸಾಧು ಸಂಗಮ ಇವರಿಂದ ಮೇಲ್ಕಾಣಸಿದ ಪಾಠಶಾಲೆಯನ್ನು ಗುರುಕುಲ ಮಾದರಿಯಲ್ಲಿ ನಡೆಸಲಾಗುತ್ತಿದೆ. ಕೃಷ್ಣ ಯಜುರ್ವೇದ ತರಗತಿನ ನೂತನ ಬ್ಯಾಚ್ 2021ರ ಆಗಸ್ಟ್ ತಿಂಗಳಲ್ಲಿ ಆರಂಭಿಸಲಾಗುತ್ತಿದೆ. ಉಪನಯನ ಸಂಸ್ಕಾರ ಪೂರ್ಣಗೊಂಡಿರುವ, 8–12 ವರ್ಷ ವಯೋಮಾನದ ಬ್ರಾಹ್ಮಣ ಮಕ್ಕಳಿಗೆ ಪ್ರವೇಶಾತಿ ನೀಡಲಾಗುತ್ತದೆ. ಪ್ರವೇಶ ಪಡೆದ ಮಕ್ಕಳಿಗೆ ಊಟ, ವಸತಿ ಮತ್ತು ವೈದ್ಯಕೀಯ ಸೌಲಭ್ಯಗಳನ್ನು ಒದಗಿಸಲಾಗುತ್ತದೆ. ಮಕ್ಕಳಿಗೆ ವೇದದ ಜೊತೆಗೆ ಸಂಸ್ಕೃತ ಮತ್ತು ಇಂಗ್ಲಿಷ್ ಕೂಡ ಬೋಧಿಸಲಾಗುತ್ತದೆ. ಆಸಕ್ತಿಯುಳ್ಳ ವಿದ್ಯಾರ್ಥಿಗಳಿಗೆ, ಎನ್‌ಐಒಎಸ್ ಇವರು ಕೈಗೊಳ್ಳುವ 10ನೇ ತರಗತಿ ಪರೀಕ್ಷೆ ಎದುರಿಸಲು ತರಬೇತಿ ಕೂಡ ನೀಡಲಾಗುತ್ತದೆ.
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ: ಕೆ. ವೆಂಕಟರಮಣಿ
ಮೊಬೈಲ್: 8105322119, 8431595511

EDUCATION SPECIAL
We are coming out with special offer for Admission Notice, Education Success Congratulation Ads
For details contact: Jerry: 9731810277
Vishal: 9845114560 Tanveer: 9886213331
E-mail: dhclassifieds@deccanherald.co.in

ಕೋವಿಡ್ ನಿರ್ವಹಣೆ ಹೊಣೆ– ಸಮರ್ಥವಾಗಿ ನಿಭಾಯಿಸಿದ ಐಟಿ –ಬಿಟಿ ಇಲಾಖೆ

ತಂತ್ರಜ್ಞಾನ ಬಳಕೆಯ ದಿಟ್ಟ ಹೆಜ್ಜೆ

ಕರಗಿತು ಸಮಸ್ಯೆಗಳ ಬೆಟ್ಟ

ಉಪಮುಖ್ಯಮಂತ್ರಿ ಡಾ.ಸಿ.ಎನ್‌.ಅಶ್ವತ್ಥನಾರಾಯಣ ಅವರ ಜೊತೆ ಮಾಹಿತಿ ತಂತ್ರಜ್ಞಾನ ವಿಷನ್ ಗ್ರೂಪ್ ಮುಖ್ಯಸ್ಥ ಕ್ರಿಸ್ ಗೋಪಾಲ ಕೃಷ್ಣ ಹಾಗೂ ಜೈವಿಕ ತಂತ್ರಜ್ಞಾನ ವಿಷನ್ ಗ್ರೂಪ್ ಮುಖ್ಯಸ್ಥೆ ಕಿರಣ್ ಮುಜುಮ್ದಾರ್ ಷಾ

ಕರ್ನಾಟಕದ ಏಳಿಗೆ ನೊಗ ಹೊರಲು ಸಜ್ಜಾದ ಬಿ.ಎಸ್. ಯಡಿಯೂರಪ್ಪ ನೇತೃತ್ವದ ಸರ್ಕಾರ ಈ ನಿಟ್ಟಿನಲ್ಲಿ ಆರಂಭಿಕ ಹೆಜ್ಜೆಗಳನ್ನು ಇಡುತ್ತಿರುವಾಗಲೇ ಧುತ್ತೆಂದು ಎದುರಾಗಿದ್ದು ಕೋವಿಡ್-19. ಜಗತ್ತನ್ನೇ ನಕ್ಷತ್ರಿಕನಂತೆ ಪೀಡಿಸಿದ ಕೋವಿಡ್‌ನಿಂದಾಗಿ ಆವರಿಸಿದ ಕಗ್ಗತ್ತಲಿನಲ್ಲೂ ಅಭಿವೃದ್ಧಿಯ ಗುರಿಯೆಡೆಗಿನ ಪಯಣದಲ್ಲಿ ಕೋಲ್ಮಿಂಚುಗಳಂತೆ ಬಂದೊದಗಿ ದಾರಿ ತೋರಿಸಿದ್ದು ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ. ಈ ಇಲಾಖೆಯು ಆಧುನಿಕ ಚಿಂತನೆ ಹಾಗೂ ತಂತ್ರಜ್ಞಾನಗಳನ್ನು ಹದವಾಗಿ ಪೋಣಿಸಿ ಕೈಗೊಂಡ ಕಾರ್ಯಕ್ರಮಗಳು ಸಮಸ್ಯೆಗಳ ಬೆಟ್ಟವನ್ನೇ ಮಣಿಸಿಬಿಟ್ಟವು.

ಬಿ.ಎಸ್.ಯಡಿಯೂರಪ್ಪ ಅವರ ದಕ್ಷ ನಾಯಕತ್ವದಲ್ಲಿ ಉಪ ಮುಖ್ಯಮಂತ್ರಿ ಡಾ.ಸಿ.ಎನ್.ಅಶ್ವತ್ಥನಾರಾಯಣ ಅವರ ಸಮರ್ಥ ಮುಂದಾಳತ್ವದಲ್ಲಿ ಈ ಇಲಾಖೆ ಸಮಸ್ಯೆಗಳನ್ನೇ ಅವಕಾಶವನ್ನಾಗಿ ಪರಿವರ್ತಿಸಿತು. ಸರ್ಕಾರವು ಬೆಟ್ಟದಂತಹ ಸವಾಲುಗಳನ್ನು ಮೆಟ್ಟಿನಿಲ್ಲುವ ದಿಟ್ಟತನ ತೋರಿಸಲು ಕಸುವನ್ನು ತುಂಬಿತು. ಇಡೀ ಸಾಮಾಜಿಕ ಹಾಗೂ ಆಡಳಿತ ವ್ಯವಸ್ಥೆಗೇ ಆವರಿಸಿದ್ದ ಕೋವಿಡ್ ಕಾರ್ಮೋಡವನ್ನೇ ಸರಿಸಬಲ್ಲ 'ಚಿಕಿತ್ಸಕ ಕ್ರಮ'ಗಳನ್ನು ಇಲಾಖೆ ಕೈಗೊಂಡಿತು. ಸಂಕಟಗಳ ಸರಮಾಲೆಯನ್ನೇ ಹೊತ್ತುತಂದ ಈ ಎರಡು ವರ್ಷಗಳಲ್ಲಿ ಎದುರಾದ ಸವಾಲುಗಳಿಗೆ ಇಲಾಖೆಯು ಏನೆಲ್ಲ ಪರಿಹಾರಗಳನ್ನು ಕಂಡುಕೊಂಡಿತು ಎಂಬ ಸಮಗ್ರ ಚಿತ್ರಣ ಇಲ್ಲಿದೆ. ಮಾಹಿತಿ & ಜೈವಿಕ ತಂತ್ರಜ್ಞಾನ, ವಿಜ್ಞಾನ-ತಂತ್ರಜ್ಞಾನ ಕ್ಷೇತ್ರಗಳಲ್ಲಿ ತನ್ನದೇ ಆದ ಹಿರಿಮೆಯನ್ನು ಹೊಂದಿರುವ ರಾಜ್ಯ ಕರ್ನಾಟಕ. ಜಾಗತಿಕ ಮಟ್ಟದ ಫಾರ್ಚೂನ್ 500 ಕಂಪನಿಗಳಲ್ಲಿ 400 ಇಲ್ಲಿ ನೆಲೆ ಹೊಂದಿವೆ. ಸಂಶೋಧನೆ ಹಾಗೂ ನಾವೀನ್ಯತೆ ಉತ್ತೇಜಿಸುವಲ್ಲೂ ರಾಜ್ಯವು ಸದಾ ಮುಂದಿದೆ.

ಸುಲಲಿತ ವ್ಯವಹಾರಕ್ಕೆ ಬುನಾದಿ ಹಾಕಲು ಆಡಳಿತದಲ್ಲಿ ಸುಧಾರಣೆ ತರಲಾಗಿದೆ. ಇಲಾಖೆಯು ಕರ್ನಾಟಕ ನಾವೀನ್ಯತೆ ಪ್ರಾಧಿಕಾರವನ್ನು ಮತ್ತು ಕರ್ನಾಟಕ ಡಿಜಿಟಲ್ ಆರ್ಥಿಕತೆ ಮಿಷನ್ (ಕೆಡಿಇಎಂ) ಸ್ಥಾಪನೆ, ಬೆಂಗಳೂರು ಜೀವ ವಿಜ್ಞಾನಗಳ ಉದ್ಯಾನ (ಲೈಫ್ ಸೈನ್ಸಸ್ ಪಾರ್ಕ್) ನಿರ್ಮಾಣ ಹಾಗೂ ₹ 7 ಸಾವಿರ ಕೋಟಿ ವೆಚ್ಚದಲ್ಲಿ ಜೈವಿಕ-ಉದ್ಯಮ ಸಮುಚ್ಚಯ (ಬಯೊ-ಇಂಡಸ್ಟ್ರಿ ಕ್ಲಸ್ಟರ್) ಸ್ಥಾಪನೆ.. ಮೊದಲಾದವು ಉಜ್ವಲ ಭವಿತವ್ಯದತ್ತ ದೃಷ್ಟಿ ನೆಟ್ಟು ರೂಪಿಸಿದ ಮಹತ್ವಾಕಾಂಕ್ಷೆಯ ಯೋಜನೆಗಳು.

ಬೆಂಗಳೂರಿನ ಭಾರತೀಯ ವಿಜ್ಞಾನ ಸಂಸ್ಥೆ ಸಹಭಾಗಿತ್ವದಲ್ಲಿ 'ಕೃತಕ ಬುದ್ಧಿಮತ್ತೆ ಸಂಶೋಧನಾ ಕೇಂದ್ರ' ಸ್ಥಾಪಿಸಲು ಇಲಾಖೆಯು ಕ್ರಮಕೈಗೊಂಡಿದೆ. ರಾಜ್ಯದ ಸಮಗ್ರ ಆಂತರಿಕ ಉತ್ಪನ್ನದಲ್ಲಿ (ಜಿಎಸ್‌ಡಿಪಿ) ಕೃಷಿ ವಲಯದ ಕೊಡುಗೆಯನ್ನು ಐದು ವರ್ಷಗಳಲ್ಲಿ ಶೇ 16ರಿಂದ ಶೇ 30ಕ್ಕೆ ಹೆಚ್ಚಿಸಲು ಕಾರ್ಯಕ್ರಮಗಳನ್ನು ರೂಪಿಸಲಾಗಿದೆ.

ಇದ್ದಲ್ಲಿಂದಲೇ ಉದ್ಯೋಗ: ಕೋವಿಡ್-19 ಸೋಂಕು ವ್ಯಾಪಿಸುತ್ತಿದ್ದಂತೆಯೇ ಎಲ್ಲಾ ಚಟುವಟಿಕೆಗಳು ಸ್ಥಗಿತವಾದಾಗ, 'ಇರುವ ಜಾಗದಿಂದಲೇ ಉದ್ಯೋಗ' ಪರಿಕಲ್ಪನೆ ಪ್ರಚಲಿತಕ್ಕೆ ಬಂತು. ಅದಕ್ಕೆ ಪೂರಕವಾಗಿ ಇಲಾಖೆಯು ನಾವೀನ್ಯತೆಯನ್ನು ಸಮರ್ಥವಾಗಿ ಬೆಂಬಲಿಸಿತು. ಹಲವಾರು ತೊಡಕುಗಳಿಗೆ ಅಲ್ಪಾವಧಿಯಲ್ಲೇ ಪರಿಹಾರಗಳನ್ನು ಕಂಡುಕೊಳ್ಳಲಾಯಿತು.

ಬೆಳಗಾವಿ ಐ.ಟಿ ಪಾರ್ಕ್: ಬೆಳಗಾವಿಯಲ್ಲಿ ಮಾಹಿತಿ ತಂತ್ರಜ್ಞಾನ ಪಾರ್ಕ್ ನಿರ್ಮಿಸಲು 750 ಎಕರೆ ಭೂಮಿಯನ್ನು ಬಿಟ್ಟುಕೊಡುವಂತೆ ರಕ್ಷಣಾ ಇಲಾಖೆಯನ್ನು ಸರ್ಕಾರ ಕೋರಿದೆ. ಎಲೆಕ್ಟ್ರಾನಿಕ್ ಹಾರ್ಡ್ ವೇರ್, ವೈಮಾಂತರಿಕ್ಷ ಹಾಗೂ ಇತರ ತಯಾರಿಕಾ ಉದ್ಯಮಗಳ ಬೆಳವಣಿಗೆಗೆ ಇದು ನೆಲೆ ಕಲ್ಪಿಸಲಿದೆ.

ಸೈಬರ್ ಸುರಕ್ಷತಾ ಮಾಸಾಚರಣೆ: ಕೋವಿಡ್ ಬಳಿಕ ಡಿಜಿಟಲ್ ವ್ಯವಹಾರಗಳು ಹೆಚ್ಚುತ್ತಿದ್ದು, ಜೊತೆಯಲ್ಲೇ ಫಿಷಿಂಗ್, ರ‍್ಯಾನ್ಸಮ್ ವೇರ್ ಮತ್ತು ಮಾಲ್ವೇರ್ ದಾಳಿಗಳೂ ಹೆಚ್ಚುತ್ತಿವೆ. ಇವುಗಳನ್ನು ತಡೆಯಲು ರಾಜ್ಯದಲ್ಲಿ ಸೈಬರ್ ಸುರಕ್ಷತಾ ಕಾರ್ಯನೀತಿಯನ್ನು ರೂಪಿಸಲಾಗುತ್ತಿದೆ. 2020ರ ಅಕ್ಟೋಬರ್‌ನಲ್ಲಿ ಮೊದಲ ಸಲ ಸೈಬರ್ ಸುರಕ್ಷತಾ ಮಾಸ ಆಚರಿಸಲಾಯಿತು.

ನಾವೀನ್ಯತೆ– ಕರ್ನಾಟಕಕ್ಕೆ ಅಗ್ರಸ್ಥಾನ: ಕೇಂದ್ರ ಸರ್ಕಾರದ 'ನೀತಿ' ಆಯೋಗವು ಪ್ರಕಟಿಸುವ 'ಭಾರತ ನಾವೀನ್ಯತಾ ಸೂಚ್ಯಂಕ ಪಟ್ಟಿ'ಯಲ್ಲಿ ರಾಜ್ಯವು ಸತತ ಎರಡನೇ ಬಾರಿಗೆ ದೇಶದ 'ಅಗ್ರಮಾನ್ಯ ನಾವೀನ್ಯತಾ ರಾಜ್ಯ' ಎಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ಕರ್ನಾಟಕವು ಎಲ್ಲಾ ವಿಭಾಗಗಳಲ್ಲಿ ಮುನ್ನಡೆ ಕಾಯ್ದುಕೊಂಡಿದೆ. ನಾವೀನ್ಯತೆಯು ತಯಾರಿಕಾ ವಲಯದ ಗುಣಮಟ್ಟದ ಉತ್ಪಾದನೆ, ಸ್ಪರ್ಧಾತ್ಮಕತೆ ಹಾಗೂ ರಫ್ತು ಪ್ರವೃತ್ತಿಯನ್ನು ಉತ್ತೇಜಿಸುತ್ತದೆ.

ನವೋದ್ಯಮ– ಕರ್ನಾಟಕಕ್ಕೆ ಪ್ರಶಸ್ತಿಯ ಗರಿ: 'ನವೋದ್ಯಮ ಭಾರತ' (ಸ್ಟಾರ್ಟ್ ಅಪ್ ಇಂಡಿಯಾ) ವತಿಯಿಂದ ಇತ್ತೀಚೆಗೆ ನಡೆದ ಸ್ಪರ್ಧೆಯಲ್ಲಿ ರಾಷ್ಟ್ರೀಯ ಪ್ರಶಸ್ತಿ ಗೆದ್ದ 36 ನವೋದ್ಯಮಗಳಲ್ಲಿ 14 ಹಾಗೂ 1 ವೇಗವರ್ಧಕ (ಆಕ್ಸಲರೇಟರ್) ರಾಜ್ಯದ್ದು. ಸಲ್ಲಿಕೆಯಾಗಿದ್ದ 1,641 ಅರ್ಜಿಗಳಲ್ಲಿ 418 ಅರ್ಜಿಗಳು ರಾಜ್ಯದವು. ಪ್ರಶಸ್ತಿ ಗೆದ್ದ 14 ನವೋದ್ಯಮಗಳಲ್ಲಿ 11 ಕರ್ನಾಟಕ ನವೋದ್ಯಮ ಕೋಶ ನಡೆಸುವ ಎಲಿವೇಟ್/ ಐಡಿಯಾ 2ಪಿಒಸಿ ಅನುದಾನ ಪಡೆದವು. ಡಿಜಿಟಲ್ ತಾಂತ್ರಿಕತೆಯಲ್ಲಿ ಕನ್ನಡ ಬಳಕೆ ಉತ್ತೇಜಿಸಲು 'ಕನ್ನಡ ತಂತ್ರಜ್ಞಾನ ಅಭಿವೃದ್ಧಿ ತಂಡ' ರಚನೆ ಮಾಡಲಾಗಿದೆ.

ಪ್ರಸ್ತುತಿ: ಪಿ.ವಿ. ಬ್ರ್ಯಾಂಡ್ ಸ್ಪಾಟ್

ಎಲೆಕ್ಟ್ರಾನಿಕ್ ಸಿಟಿಯ ಬೆಂಗಳೂರು ಬಯೊ ಇನ್ನೊವೇಷನ್ ಸೆಂಟರ್‌ಗೆ (ಬಿಬಿಸಿ) ಕೇಂದ್ರ ಹಣಕಾಸು ಸಚಿವರಾದ ನಿರ್ಮಲಾ ಸೀತಾರಾಮನ್ ಹಾಗೂ ಉಪಮುಖ್ಯಮಂತ್ರಿ ಡಾ.ಸಿ.ಎನ್‌.ಅಶ್ವತ್ಥನಾರಾಯಣ ಅವರು ಭೇಟಿ ನೀಡಿದ ಸಂದರ್ಭ

ಹೊಸ ಭರವಸೆ ಮೂಡಿಸಿದ ವರ್ಚ್ಯುಯಲ್ ಮಹಾಮೇಳ

ಬೆಂಗಳೂರು ತಂತ್ರಜ್ಞಾನ ಶೃಂಗ2020

ಕೋವಿಡ್ ಕಾಡಿದ 2020ರಲ್ಲಿ ಕಾಲವೇ ಸ್ತಬ್ಧವಾದ ಅನುಭವ. ಎಲ್ಲವೂ ಇದ್ದಕ್ಕಿಂದ್ದತೆಯೇ, ಇದ್ದ ಸ್ಥಿತಿಯಲ್ಲೇ ನಿಂತು ಹೋಯಿತೇನೋ ಎಂಬ ಕಳವಳದ ವಾತಾವರಣ ಜಗದಗಲ ಮನೆ ಮಾಡಿದ್ದ ಸಂದರ್ಭವದು. ವಿಜ್ಞಾನ–ತಂತ್ರಜ್ಞಾನದ ಮೂಲಕ ಜಗತ್ತಿಗೆ ಸದಾ ಹೊಸ ಬೆಳಕು ತೋರಿಸುತ್ತಲೇ ಬಂದಿರುವ ಬೆಂಗಳೂರು ತನ್ನ ಈ ಪರಂಪರೆಯನ್ನು ಮುಂದುವರಿಸಿತು. ಇಲಾಖೆಯು ಮೊದಲ ಬಾರಿಗೆ 2020ರ ನವೆಂಬರ್ 19ರಿಂದ 21ರವರೆಗೆ ವರ್ಚ್ಯುವಲ್ ರೂಪದಲ್ಲಿ ಏರ್ಪಡಿಸಿದ 'ಬೆಂಗಳೂರು ತಂತ್ರಜ್ಞಾನ ಶೃಂಗ-2020'ವು ಸ್ಥಗಿತಗೊಂಡ ಕಾಲಚಕ್ರವನ್ನು ಮತ್ತೆ ಚಲನಶೀಲಗೊಳಿಸುವಲ್ಲಿ ಹೊಸ ಭರವಸೆಯನ್ನು ಮೂಡಿಸಿತು. ಕರ್ನಾಟಕದ ಈ ಚೊಚ್ಚಲ ಪ್ರಯತ್ನಕ್ಕೆ ನಿರೀಕ್ಷೆಗೂ ಮೀರಿ ಸ್ಪಂದನೆ ವ್ಯಕ್ತವಾಯಿತು.

ಕೋವಿಡ್ ಸವಾಲಿನ ನಡುವೆ ನಡೆದ ಭಾರತದ ಮಹತ್ವದ ತಾಂತ್ರಿಕ ಕಾರ್ಯಕ್ರಮಕ್ಕೆ ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ವರ್ಚ್ಯುಯಲ್ ರೂಪದಲ್ಲೇ ಚಾಲನೆ ನೀಡಿದ್ದು ವಿಶೇಷ. ಕಾರ್ಯಕ್ರಮದ ಉದ್ಘಾಟನೆಯಲ್ಲಿ ಆಸ್ಟ್ರೇಲಿಯಾ ಪ್ರಧಾನ ಮಂತ್ರಿ ಸ್ಕಾಟ್ ಮಾರಿಸನ್ ಮತ್ತು ಸ್ವಿಜ್ ಗಣರಾಜ್ಯದ ಉಪರಾಷ್ಟ್ರಾಧ್ಯಕ್ಷ ಗೈ ಪರ್ಮಲಿನ್ ಗೌರವ ಅತಿಥಿಗಳಾಗಿ ಪಾಲ್ಗೊಂಡರು. ಕೇಂದ್ರ ಸರ್ಕಾರದ ಸಂವಹನ, ವಿದ್ಯುನ್ಮಾನ ಮತ್ತು ಮಾಹಿತಿ ತಂತ್ರಜ್ಞಾನ ಸಚಿವ ರವಿಶಂಕರ್ ಪ್ರಸಾದ್ ಆನ್ಲೈನ್ ಮೂಲಕ ಭಾಗವಹಿಸಿದರೆ, ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ, ಕೈಗಾರಿಕಾ ಸಚಿವ ಜಗದೀಶ್ ಶೆಟ್ಟರ್ ಮತ್ತಿತರರು ಖುದ್ದು ಪಾಲ್ಗೊಂಡರು.

ಫಿನ್ಲೆಂಡ್, ಇಸ್ರೇಲ್, ನೆದರ್ಲೆಂಡ್ಸ್, ಯು.ಕೆ, ಕೆನಡಾ, ಆಸ್ಟ್ರೇಲಿಯಾ, ಜರ್ಮನಿ, ಫ್ರಾನ್ಸ್, ಆಸ್ಟ್ರೇಲಿಯಾ, ಜರ್ಮನಿ, ಸ್ವೀಡನ್, ಸ್ವಿಟ್ಜರ್‌ಲೆಂಡ್, ಡೆನ್ಮಾರ್ಕ್, ತೈವಾನ್, ಜಪಾನ್, ಲಿಥುವಾನಿಯಾ ಸೇರಿದಂತೆ 25ಕ್ಕೂ ಹೆಚ್ಚು ದೇಶಗಳು ಉತ್ಸಾಹದಿಂದ ಪಾಲ್ಗೊಂಡವು. 100ಕ್ಕೂ ಹೆಚ್ಚು ನವೋದ್ಯಮಗಳು, ಉದ್ಯಮ ಕ್ಷೇತ್ರದ 4000ಕ್ಕೂ ಹೆಚ್ಚು ಗಣ್ಯರು, ಸುಮಾರು 270 ವಿಷಯ ಪರಿಣತರ ಪಾಲ್ಗೊಳ್ಳುವಿಕೆ ಹಾಗೂ 70ಕ್ಕೂ ಹೆಚ್ಚು ಗೋಷ್ಠಿಗಳಿಗೆ ಮೇಳ ಸಾಕ್ಷಿಯಾಯಿತು. 250ಕ್ಕೂ ಹೆಚ್ಚು ಕಂಪನಿಗಳು ತಮ್ಮ ಉತ್ಪನ್ನಗಳನ್ನು ಪ್ರದರ್ಶಿಸಿದವು. ಶೃಂಗದ ವೇಳೆ ಕರ್ನಾಟಕ ಸರ್ಕಾರವು ಬೇರೆ ದೇಶಗಳೊಂದಿಗೆ 7 ಪರಸ್ಪರ ತಿಳಿವಳಿಕೆ ಒಪ್ಪಂದಗಳಿಗೆ ಸಹಿ ಹಾಕಿತು.

ವೈವಿಧ್ಯಮಯ ಗೋಷ್ಠಿ: ನಾಲೆಜ್ ಹಬ್, ಇನ್ನೊವೇಷನ್ ಕಾರ್ನರ್, ಒನ್ ಹೆಲ್ತ್, ಕಂಟ್ರಿ ಸೆಷನ್ಸ್ ವಿಭಾಗಗಳಲ್ಲಿ ವಿವಿಧ ಗೋಷ್ಠಿಗಳು ನಡೆದವು. ಜನರ ದೈನಂದಿನ ಬದುಕಿನೊಂದಿಗೆ ನೇರವಾಗಿ ಬೆಸೆದುಕೊಂಡಿರುವ ತಾಂತ್ರಿಕ ನಾವೀನ್ಯತೆಗಳನ್ನು ಗಮನದಲ್ಲಿರಿಸಿಕೊಂಡು ವಿಷಯ ಗೋಷ್ಠಿಗಳನ್ನು ಆಯ್ಕೆ ಮಾಡಲಾಗಿತ್ತು.. ಕೃಷಿ ತಾಂತ್ರಿಕತೆ, ಕೃತಕ ಬುದ್ಧಿಮತ್ತೆ, ಡಿಜಿಟಲ್ ಆರೋಗ್ಯ ಸೇವೆ, ಆಹಾರ ಮತ್ತು ಪೌಷ್ಟಿಕತೆ, ಜೈವಿಕ ತಂತ್ರಜ್ಞಾನ, ಸ್ವಚ್ಛ ಇಂಧನ, ಬಾಹ್ಯಾಕಾಶ, ಡ್ರೋನ್, 5ಜಿ, ಸೈಬರ್ ಸುರಕ್ಷತೆ, ಸ್ಮಾರ್ಟ್ ಸಿಟಿಗಳು ಹಾಗೂ ನಗರ ಸುಸ್ಥಿರತೆ, ಲಸಿಕೆಗಳು (ಆವಿಷ್ಕಾರ ಮತ್ತು ಅಭಿವೃದ್ಧಿ), ಕೊರೋನಾ ನಂತರದ ಸನ್ನಿವೇಶದಲ್ಲಿ ನಾಯಕತ್ವದ ಪುನರ್ ವ್ಯಾಖ್ಯಾನ, ರಾಷ್ಟ್ರೀಯ ಶಿಕ್ಷಣ ನೀತಿ, ಫಿನ್ ಟೆಕ್ ಇತ್ಯಾದಿ ವಿಷಯಗಳನ್ನು ಇವು ಒಳಗೊಂಡಿತ್ತು.

17ಸಾವಿರಕ್ಕೂ ಅಧಿಕ ಮಂದಿ ಮಹಾಮೇಳದಲ್ಲಿ ಭಾಗವಹಿಸಿದರು. ಸಾಮಾಜಿಕ ಜಾಲತಾಣಗಳ ಮೂಲಕವೂ ಈ ಶೃಂಗ 2 ಕೋಟಿಗೂ ಹೆಚ್ಚು ಜನರನ್ನು ತಲುಪಿತು. ದೇಶ-ವಿದೇಶಗಳ ಕೋಟ್ಯಂತರ ಜನರ ಹೃದಯ ಗೆದ್ದಿತು.

ಡಿಜಿಟಲ್ ಆರ್ಥಿಕತೆಗೆ ಬಲ ತುಂಬಲು ಸಜ್ಜಾಗಿದೆ ಕೆ.ಡಿ.ಇ.ಎಂ. ಕಚೇರಿ

ಕರ್ನಾಟಕದ ಜಿಡಿಪಿಯಲ್ಲಿ ಡಿಜಿಟಲ್ ಆರ್ಥಿಕತೆಯ ಪಾಲನ್ನು ಐದು ವರ್ಷಗಳಲ್ಲಿ ಶೇ 30ಕ್ಕೆ ಹೆಚ್ಚಿಸುವ ಗುರಿ ಸರ್ಕಾರದ್ದು. ಇದಕ್ಕಾಗಿ 'ಕರ್ನಾಟಕ ಡಿಜಿಟಲ್ ಆರ್ಥಿಕತೆ ಮಿಷನ್'ನ (ಕೆಡಿಇಎಂ) ಕಚೇರಿ ಆರಂಭಿಸಲಾಗಿದೆ. ಜೊತೆಗೆ ಎರಡನೇ ಹಂತದ ನಗರಗಳಲ್ಲೂ ಡಿಜಿಟಲ್ ಆರ್ಥಿಕತೆಗೆ ಉತ್ತೇಜನ ನೀಡಲು 'ಬೆಂಗಳೂರಿನ ವ್ಯಾಪ್ತಿಯಾಚೆ' (ಬಿಯಾಂಡ್ ಬೆಂಗಳೂರು) ವರದಿ ಬಿಡುಗಡೆ ಮಾಡಲಾಗಿದೆ. ಉದ್ಯಮ-ಶೈಕ್ಷಣಿಕ ವಲಯ-ಸರ್ಕಾರ ಇವುಗಳ ನಡುವೆ ಸಂಪರ್ಕ ಸೇತುವೆಯಾಗಿ ಕೆಡಿಇಎಂ ಕೆಲಸ ಮಾಡುತ್ತಿದೆ. ಮೈಸೂರು, ಮಂಗಳೂರು, ಹುಬ್ಬಳ್ಳಿ/ಧಾರವಾಡ, ಕಲಬುರ್ಗಿ, ಶಿವಮೊಗ್ಗ, ತುಮಕೂರು, ಈ ಆರು ಕ್ಲಸ್ಟರ್ ಗಳಲ್ಲಿ ಡಿಟಿಜಲ್ ಆರ್ಥಿಕತೆ ಕೊಡುಗೆ ಹೆಚ್ಚಿಸಲು ಶ್ರಮಿಸುತ್ತಿದೆ.

ಆವಿಷ್ಕಾರ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ರಾಜ್ಯದ ಆರ್ಥಿಕ ಶಕ್ತಿವರ್ಧನೆಗೆ ಕೆಡಿಎಂಎ ಕಾರ್ಯ ನಿರ್ವಹಿಸಲಿದೆ. ಐದು ವರ್ಷಗಳಲ್ಲಿ ರಾಜ್ಯದ ಐಟಿ ರಫ್ತನ್ನು 150 ಬಿಲಿಯನ್ ಡಾಲರ್‌ಗೆ ಹೆಚ್ಚಿಸುವ ಹಾಗೂ ಡಿಜಿಟಲ್ ಆರ್ಥಿಕತೆಗೆ ಪೂರಕವಾದ ಉದ್ದಿಮೆಗಳಿಗೆ ಹೂಡಿಕೆ ಆಕರ್ಷಿಸಿ 2025ರ ವೇಳೆಗೆ 10 ಲಕ್ಷ ಉದ್ಯೋಗ ಸೃಷ್ಟಿಸುವ ಗುರಿಯನ್ನು ಇದು ಹೊಂದಿದೆ. ಡಿಜಿಟಲ್ ಆರ್ಥಿಕತೆಯನ್ನು ಸದೃಢಗೊಳಿಸಲು ಗ್ರಾಮೀಣ-ನಗರ ಪ್ರದೇಶಗಳ ಅಂತರ ನಿವಾರಿಸಲು ಒತ್ತು ನೀಡಲಾಗಿದೆ. ಗ್ರಾಮೀಣ ಪ್ರದೇಶಗಳಲ್ಲೂ ಸಂಪರ್ಕ ಜಾಲ ಸುಧಾರಣೆಗೆ ಹಾಗೂ ದಿನದ 24 ಗಂಟೆಯೂ ವಿದ್ಯುತ್ ಸೌಲಭ್ಯ ಒದಗಿಸಲು ಗಮನ ಕೇಂದ್ರೀಕರಿಸಲಾಗಿದೆ.

ಕೆಡಿಇಎಂಯನ್ನು ಉದ್ಯಮಸ್ನೇಹಿಯನ್ನಾಗಿಸಲು ಸರ್ಕಾರ ಇದರ ಶೇ 51ರಷ್ಟು ಪಾಲುಗಾರಿಕೆಯನ್ನು ಉದ್ಯಮ ಸಂಘಟನೆಗಳಿಗೇ ಬಿಟ್ಟುಕೊಟ್ಟಿದೆ. ಮೂಲಸೌಕರ್ಯಗಳಿಗೆ ಒತ್ತು ನೀಡಲು ಕ್ರಮಕೈಗೊಂಡಿದೆ.

ಮಾಹಿತಿ ತಂತ್ರಜ್ಞಾನ ಉತ್ಪನ್ನಗಳ ಅಭಿವೃದ್ಧಿ ಮತ್ತು ಸೇವೆಗಳನ್ನು ಒದಗಿಸುವುದು, ಆವಿಷ್ಕಾರಗಳು ಮತ್ತು ನವೋದ್ಯಮಗಳು, ಎಲೆಕ್ಟ್ರಾನಿಕ್ಸ್ ವ್ಯವಸ್ಥೆ ವಿನ್ಯಾಸ ಮತ್ತು ತಯಾರಿಕೆ (ಇ.ಎಸ್.ಡಿ.ಎಂ.), 'ಬೆಂಗಳೂರು ವ್ಯಾಪ್ತಿಯಾಚೆ' (ಬಿಯಾಂಡ್ ಬೆಂಗಳೂರು) ಮತ್ತು ಪ್ರತಿಭಾ ಸಂವರ್ಧನೆ (ಟ್ಯಾಲೆಂಟ್ ಆಕ್ಸಲರೇಟರ್) ಈ ಐದು ವಲಯಗಳನ್ನು ಗಮನದಲ್ಲಿರಿಸಿಕೊಂಡು ಕೆಡಿಇಎಂ ಕೆಲಸ ಮಾಡುತ್ತಿದೆ.

ಇ,ಎಸ್‌,ಡಿ.ಎಂ ಕ್ಷೇತ್ರದಲ್ಲಿ 2 ಸಾವಿರ ನವೋದ್ಯಮ • 20 ಲಕ್ಷ ಉದ್ಯೋಗ ಸೃಷ್ಟಿ

'ಚಿಪ್' ತಯಾರಿ ನಮ್ಮದೇ ಪಾರಮ್ಯ

ಪ್ರಸ್ತುತ ಭಾರತದ ಎಲೆಕ್ಟ್ರಾನಿಕ್ಸ್ ವ್ಯವಸ್ಥೆ ವಿನ್ಯಾಸ ಮತ್ತು ತಯಾರಿಕೆ (ಇ,ಎಸ್,ಡಿ.ಎಂ) ವಲಯದ ರಫ್ತಿನಲ್ಲಿ ಕರ್ನಾಟಕದ ಕೊಡುಗೆ ಶೇ 64ರಷ್ಟಿದೆ. 2022ರ ವೇಳೆಗೆ 2000 ನವೋದ್ಯಮಗಳ ಸ್ಥಾಪನೆ ಹಾಗೂ 2025ರ ವೇಳೆಗೆ 20 ಲಕ್ಷ ಉದ್ಯೋಗ ಸೃಷ್ಟಿಸುವ ಗುರಿ ಸರ್ಕಾರದ್ದು. ಚಿಪ್ ವಿನ್ಯಾಸದಲ್ಲಿ ಕರ್ನಾಟಕವೇ ಮುಂಚೂಣಿಯಲ್ಲಿದೆ. ಈ ಮುನ್ನಡೆ ಕಾಯ್ದುಕೊಂಡು ಕೌಶಲಾಭಿವೃದ್ಧಿ, ಗುಣಮಟ್ಟದ ಮೂಲಸೌಕರ್ಯ, ನವೋದ್ಯಮಗಳಿಗೆ ಉತ್ತೇಜನ ಹಾಗೂ ಸುಗಮ ವ್ಯವಹಾರಕ್ಕೆ ಅನುವು ಮಾಡಿಕೊಡುವ ಕಾರ್ಯಕ್ರಮಗಳನ್ನು ರೂಪಿಸಲಾಗಿದೆ.

ಪ್ರೋತ್ಸಾಹ ಭತ್ಯೆಗಳು

- ಜಮೀನಿನ ಮೇಲಿನ ಹೂಡಿಕೆಗೆ ಶೇ 25 % ರಷ್ಟು ಸಬ್ಸಿಡಿ ಹಾಗೂ ಹಲವು ಪ್ರೋತ್ಸಾಹ ಭತ್ಯೆಗಳು
- ಘಟಕ ಹಾಗೂ ಯಂತ್ರೋಪಕರಣಗಳಿಗೆ ಶೇ 20ರಷ್ಟು ಸಬ್ಸಿಡಿ
- ಮುದ್ರಾಂಕ ಶುಲ್ಕ ಮತ್ತು ನೋಂದಣಿ ಶುಲ್ಕ ಶೇ 100ರಷ್ಟು ಮರುಪಾವತಿ
- ಭೂಪರಿವರ್ತನಾ ಶುಲ್ಕ ಶೇ 100ರಷ್ಟು ಮರುಪಾವತಿ
- ವಿದ್ಯುತ್ ಶುಲ್ಕದಲ್ಲಿ ಪ್ರತಿ ಯುನಿಟ್ ಗೆ ₹1 ಸಬ್ಸಿಡಿ ಇತ್ಯಾದಿ (5 ವರ್ಷಗಳ ಅವಧಿಗೆ)

ಉಪಮುಖ್ಯಮಂತ್ರಿ ಡಾ.ಸಿ.ಎನ್‌.ಅಶ್ವತ್ಥನಾರಾಯಣ ಅವರು ಮಾಹಿತಿ ತಂತ್ರಜ್ಞಾನ ನೀತಿ ಬಿಡುಗಡೆ ಮಾಡಿದ ಸಂದರ್ಭ. ಇಲಾಖೆಯ ನಿರ್ದೇಶಕಿ ಮೀನಾ ನಾಗರಾಜ್ ಹಾಗೂ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಇ.ವಿ.ರಮಣ ರೆಡ್ಡಿ ಇದ್ದಾರೆ

ಸಾಧನಗಳ ತುರ್ತು ಶೋಧ

ನಾಗಾಲೋಟದಲ್ಲಿ ವ್ಯಾಪಿಸುತ್ತಿದ್ದ ಕೋವಿಡ್ 19 ಪಿಡುಗಿಗೆ ತುರ್ತಾಗಿ ಕಡಿವಾಣ ಹಾಕುವ ಅಗತ್ಯ ಎದುರಾಗಿತ್ತು. ಈ ಸೋಂಕು ನಿಯಂತ್ರಣಕ್ಕೆ ನೆರವಾಗುವ 22 ಉತ್ಪನ್ನಗಳನ್ನು ರಾಜ್ಯದಲ್ಲಿ ಆವಿಷ್ಕಾರಗೊಂಡವು. ತ್ವರಿತಗತಿಯಲ್ಲಿ ಆವಿಷ್ಕಾರಗೊಂಡ ಈ ಸಾಧನಗಳು ರಾಜ್ಯದ ಅನ್ವೇಷಣಾ ಸಾಮರ್ಥ್ಯಕ್ಕೆ ಕನ್ನಡಿ ಹಿಡಿದಿವೆ.

ಕೋವಿಡ್‌ಗೆ ಕಡಿವಾಣ

22 ಹೊಸ ಉತ್ಪನ್ನಗಳಲ್ಲಿ, 6 ಉತ್ಪನ್ನಗಳು, ಇಲಾಖೆಯ ಕರ್ನಾಟಕ ನಾವೀನ್ಯತಾ ಮತ್ತು ತಂತ್ರಜ್ಞಾನ ಸಂಸ್ಥೆ (KITS) ಹಾಗೂ ಬೆಂಗಳೂರು ಬಯೊ ಇನ್ನೊವೇಷನ್ ಸೆಂಟರ್ (ಬಿಬಿಸಿ) ಮೇಲ್ವಿಚಾರಣೆಯಡಿ ಹಾಗೂ ಉಳಿದ 16 ಉತ್ಪನ್ನಗಳು ಕರ್ನಾಟಕ ನವೋದ್ಯಮ ಕೋಶದ ಮೇಲ್ವಿಚಾರಣೆಯಡಿ ಅಭಿವೃದ್ಧಿಗೊಂಡಿದ್ದವು.

ಲೋಕಾರ್ಪಣೆಗೊಂಡ ಕೆಲವು ಉತ್ಪನ್ನಗಳು: ನ್ಯೂಕ್ಲಿಯೋಡಿಎಕ್ಸ್ ಆರ್ ಟಿ, ಕೋವಿಡಿಎಕ್ಸ್ ಎಂಪ್ಲೆಕ್ಸ್ 3R ಮತ್ತು 4R, ಡಾ.ತಾಪಮಾನ್, ಎಸ್‌ಎಫ್‌ಎಇ ಬಯೊಸೆಕ್ಯುರಿಟಿ ಸಲ್ಯೂಷನ್ಸ್, ಯುವಿಇಇ ಬೀಮರ್, ಯುವಿಇಇ ಕನ್ವೇಯರ್, ರೆಸ್ಪೈರ್ ಏಯ್ಡ್, ಎಮ್ವಿಲಿಯೊ, ಥರ್ಮಾಕ್ಸಿ, ಹೈಲೊಬಿಜ್, ಡಾಕ್ಸ್ ಪರ್, ವ್ಯಾಪ್ ಕೇರ್, ಟಚ್ ಲೆಸ್ ಐಡಿ, ಡೋಜಿ.

ಎಂಜಿನಿಯರಿಂಗ್ ಸಂಶೋಧನೆಗೆ ಕಾರ್ಯನೀತಿಯ ಬೆಂಬಲ

ಎಂಜಿನಿಯರಿಂಗ್ ವಲಯದ ಜಾಗತಿಕ ಹೂಡಿಕೆ 2025ರ ಹೊತ್ತಿಗೆ 2 ಟ್ರಿಲಿಯನ್ ಡಾಲರ್‌ಗಳಿಗೆ ಹೆಚ್ಚಳವಾಗುವ ನಿರೀಕ್ಷೆ ಇದೆ. ಇದರಿಂದ ಸೃಷ್ಟಿಯಾಗುವ ಅವಕಾಶಗಳನ್ನು ಬಾಚಿಕೊಳ್ಳಲು ಸದ್ದಿಲ್ಲದೇ ಸಿದ್ಧತೆ ನಡೆದಿದೆ. ಇದಕ್ಕಾಗಿ ದೇಶದಲ್ಲೇ ಮೊದಲ ಬಾರಿಗೆ ಕರ್ನಾಟಕವು 'ಎಂಜಿನಿಯರಿಂಗ್ ಸಂಶೋಧನೆ ಮತ್ತು ಅಭಿವೃದ್ಧಿ (ಇ.ಆರ್.&ಡಿ) ಕಾರ್ಯನೀತಿ-2021' ಅನ್ನು ಜಾರಿಗೊಳಿಸಿದೆ.

400ಕ್ಕೂ ಹೆಚ್ಚು ಸಂಶೋಧನಾ ಮತ್ತು ಅಭಿವೃದ್ಧಿ ಕೇಂದ್ರಗಳು/ಜಿ.ಸಿ.ಸಿ.ಗಳು ರಾಜ್ಯದಲ್ಲಿದ್ದು, ಬೌದ್ಧಿಕ ಸ್ವತ್ತುಗಳ ಸೃಷ್ಟಿ ಹಾಗೂ ರಾಜ್ಯವನ್ನು ಕೌಶಲಯುಕ್ತ ಜ್ಞಾನಕಾಶಿಯಾಗಿಸಲು ಇದು ಸಹಕಾರಿ. ಜಾಗತಿಕ ಸಾಮರ್ಥ್ಯ ಕೇಂದ್ರಗಳು (ಜಿ.ಸಿ.ಸಿ.ಗಳು), ಎಂಜಿನಿಯರಿಂಗ್ ಸೇವಾದಾತರನ್ನು ರಾಜ್ಯದತ್ತ ಸೆಳೆಯುವುದು ಇದರ ಗುರಿ. ವೈಮಾಂತರಿಕ್ಷ ಮತ್ತು ರಕ್ಷಣೆ, ವಾಹನ, ಬಿಡಿಭಾಗಗಳು-ವಿದ್ಯುತ್ ಚಾಲಿತ ವಾಹನಗಳು, ಜೈವಿಕ ತಂತ್ರಜ್ಞಾನ, ಔಷಧ ಮತ್ತು ವೈದ್ಯಕೀಯ ಉಪಕರಣಗಳು, ಅರೆವಾಹಕಗಳು, ದೂರಸಂಪರ್ಕ, ಇ.ಎಸ್.ಡಿ.ಎಂ. ಹಾಗೂ ಸಾಫ್ಟ್ ವೇರ್ ಉತ್ಪನಗಳು ಕಾರ್ಯನೀತಿಯ ಆದ್ಯತಾ ವಲಯಗಳು.

ಕಾರ್ಯನೀತಿಯ ಉಪಯೋಗಗಳು

- ಎಂಜಿನಿಯರಿಂಗ್ ಮತ್ತು ಅಭಿವೃದ್ಧಿ ವಹಿವಾಟನಲ್ಲಿ ರಾಜ್ಯದ ಪಾಲು ಶೇ 45ಕ್ಕೆ ಹೆಚ್ಚಳ
- 50 ಸಾವಿರ ಕೌಶಲಯುಕ್ತ ಉದ್ಯೋಗ ಸೃಷ್ಟಿ
- ಎಂಜಿನಿಯರಿಂಗ್ ಸಂಶೋಧನೆ ಹಾಗೂ ಅಭಿವೃದ್ಧಿ ಕ್ಷೇತ್ರಕ್ಕೆ ಹೂಡಿಕೆ ಆಕರ್ಷಣೆ
- ಪ್ರತಿಭಾ ಸಂಪನ್ಮೂಲ ಹಾಗೂ ಉದ್ಯಮದ ಅಗತ್ಯಗಳ ಅಂತರ ತುಂಬುವುದು

ಎಂಜಿನಿಯರಿಂಗ್ 'ಆರ್ ಆ್ಯಂಡ್ ಡಿ' ಗೆ ಪ್ರೋತ್ಸಾಹಕ ಕ್ರಮಗಳು:

- ಬೆಂಗಳೂರು ನಗರ ಜಿಲ್ಲೆ ವ್ಯಾಪ್ತಿಯಾಚೆಗೆ ಸ್ಥಾಪನೆ/ವಿಸ್ತರಣೆ ಮಾಡಿದರೆ ಬಾಡಿಗೆ ಮರುಪಾವತಿ, ನೇಮಕಾತಿಗೆ ನೆರವು, ಹೂಡಿಕೆ ಸಬ್ಸಿಡಿ
- ನಾವೀನ್ಯತಾ ಪ್ರಯೋಗಾಲಯಗಳ ಸ್ಥಾಪನೆಗೆ ಹಣಕಾಸು ನೆರವು
- ಡಿಜಿಟಲ್ ನಾವೀನ್ಯತಾ ಕಾರ್ಯಯೋಜನೆಗಳಿಗೆ ₹ 3 ಕೋಟಿಯವರೆಗೆ ನೆರವು
- ಶೈಕ್ಷಣಿಕ ವಲಯದ ಸಂಶೋಧನೆಗಳನ್ನು ಉದ್ದಿಮೆಗಳಿಗೆ ಅಡಕಗೊಳಿಸಲು ಅನುದಾನ
- ಭವಿಷ್ಯದ ಇ.ಆರ್. ಮತ್ತು ಡಿ ಕೋರ್ಸ್ ರೂಪಿಸಲು ನೆರವು
- ಶೈಕ್ಷಣಿಕ ಕೌಶಲ–ಉದ್ಯಮದ ಅಗತ್ಯದ ಅಂತರ ತುಂಬಲು ಇಂಟರ್ನ್‌ಶಿಪ್‌ಗೆ ಉತ್ತೇಜನ, ಶಿಷ್ಯವೇತನ
- ಇ.ಆರ್. ಮತ್ತು ಡಿ ವಲಯದಲ್ಲಿ ಮಹಿಳಾ ಅಭ್ಯರ್ಥಿಗಳಿಗೆ ಉತ್ತೇಜನ
- ಪಿಎಚ್.ಡಿ. ಮಾಡುವವರಿಗೆ ಮುಖ್ಯಮಂತ್ರಿಯವರ ಸಂಶೋಧನಾ ಅನುದಾನ

ಜೈವಿಕ ತಂತ್ರ ಸಿದ್ಧಿ–ಆರ್ಥಿಕ ವೃದ್ಧಿಗೆ ಬುನಾದಿ

ಮೊತ್ತಮೊದಲ 'ಕರ್ನಾಟಕ ಜೈವಿಕ ಆರ್ಥಿಕತೆ ವರದಿ-2020' ಅನ್ನು ಬಿಡುಗಡೆ ಮಾಡಿದ ಹೆಗ್ಗಳಿಕೆ ರಾಜ್ಯದ್ದು. ರಾಜ್ಯದ ಆರ್ಥಿಕತೆಗೆ 5000 ಕೋಟಿ ಡಾಲರ್ ಕೊಡುಗೆ ನೀಡುವ ಗುರಿಯೊಂದಿಗೆ ಇದನ್ನು ಸಿದ್ಧಪಡಿಸಲಾಗಿದೆ. ಲಸಿಕೆ, ಕೃಷಿ ತಾಂತ್ರಿಕತೆ, ಬಯೊರಿಫೈನರಿಗಳಿಗೆ ಒತ್ತು ನೀಡಲಾಗಿದೆ. ₹ 7000 ಕೋಟಿ ವೆಚ್ಚದ ಜೈವಿಕ-ಉದ್ಯಮ ಸಮುಚ್ಚಯ (ಬಯೊ–ಇಂಡಸ್ಟ್ರಿ ಕ್ಲಸ್ಟರ್) ನಿರ್ಮಾಣಕ್ಕೆ ಕಾರ್ಯಯೋಜನೆ ರೂಪಿಸಲಾಗಿದೆ. ಜೈವಿಕ ತಂತ್ರಜ್ಞಾನದಿಂದ ಜನಜೀವನ ಸುಧಾರಿಸುವ ಧ್ಯೇಯ ಹೊಂದಿರುವ ಈ ವರದಿ ಕೃಷಿ, ಪಶು ಸಂಗೋಪನೆ, ಪೌಷ್ಠಿಕತೆ, ಲಸಿಕೆ, ಆರೋಗ್ಯ ಸೇವೆ, ಜೈವಿಕ ಇಂಧನ, ಸಾಗರ ಜೀವನೋಪಾಯ ಕ್ಷೇತ್ರಗಳ ಅಭಿವೃದ್ಧಿಯತ್ತ ಚಿತ್ತ ನೆಟ್ಟಿದೆ. ಎಲೆಕ್ಟ್ರಾನಿಕ್ಸ್ ಸಿಟಿಯಲ್ಲಿ ₹ 7000 ಕೋಟಿ ವೆಚ್ಚದಲ್ಲಿ 80 ಲಕ್ಷ ಚ. ಅಡಿ ವಿಸ್ತೀರ್ಣದ ಜೈವಿಕ-ಉದ್ಯಮ ಸಮುಚ್ಚಯ (ಬಯೊ-ಇಂಡಸ್ಟ್ರಿ ಕ್ಲಸ್ಟರ್) ನಿರ್ಮಾಣಕ್ಕೆ ಚಾಲನೆ ನೀಡಲಾಗಿದೆ.

ರಾಜ್ಯದಲ್ಲಿ 35ಕ್ಕೂ ಹೆಚ್ಚು ಜೈವಿಕ ತಂತ್ರಜ್ಞಾನ ಸಂಶೋಧನಾ ಕೇಂದ್ರಗಳು ಹಾಗೂ ಅತ್ಯಾಧುನಿಕ ಬಯೊ-ಇನ್ಕ್ಯುಬೇಟರ್‌ಗಳಿವೆ(ಜೈವಿಕ ಪರಿಪೋಷಕಗಳು). 150ಕ್ಕೂ ಹೆಚ್ಚು ನವೋದ್ಯಮಗಳು ಸರ್ಕಾರದ ನೆರವಿನಿಂದ ಹಾಗೂ ಹಲವು ಕಂಪನಿಗಳು 'ಬಯೋ-ವೆಂಚರ್' ಅನುದಾನದಿಂದ ಯಶಸ್ವಿಯಾಗಿ ಕಾರ್ಯಾಚರಿಸುತ್ತಿವೆ.

ಹೊಸ ತಲೆಮಾರಿನ ಲಸಿಕೆಗಳು, ಜೀವರಕ್ಷಕ ಔಷಧಗಳು, ಪರಿಸರ ಸ್ನೇಹಿ ಬ್ಯಾಟರಿಗಳು, ಕಿಣ್ವ (ಎಂಜೈಮ್) ತಾಂತ್ರಿಕತೆಗಳು, ಜೈವಿಕ ಇಂಧನಗಳು ಭವಿಷ್ಯದಲ್ಲಿ ಜನಜೀವನದ ವೈಖರಿಯನ್ನೇ ಬದಲಿಸಲಿವೆ. 2,200 ಕೋಟಿ ಡಾಲರ್‌ಗಳಷ್ಟಿರುವ ಈ ವಲಯದ ಕೊಡುಗೆಯನ್ನು 5 ವರ್ಷಗಳಲ್ಲಿ 5000 ಕೋಟಿ ಡಾಲರ್ ಗೆ ಹೆಚ್ಚಿಸುವ ಗುರಿ ಇಲಾಖೆಯದ್ದು.

ವರದಿಯ ಪ್ರಮುಖ ಶಿಫಾರಸುಗಳು

- ಲಸಿಕಾ ವಲಯ, ಜೈವಿಕ-ತಯಾರಿಕಾ ವಲಯಗಳ ಸ್ಥಾಪನೆಗೆ ಉತ್ತೇಜನ, ವಂಶವಾಹಿಗಳ ಸಂಕಲನ (ಜೀನ್ ಎಡಿಟಿಂಗ್), ಆಣ್ವಿಕ ಸಂಕರ (ಮೊಲೆಕ್ಯುಲಾರ್ ಬ್ರೀಡಿಂಗ್) ತಂತ್ರಜ್ಞಾನ ಬಳಸಿ 'ಕೃಷಿ ತಾಂತ್ರಿಕತೆ' ಬೆಳೆಸಲು ಒತ್ತು
- ಸಾಗರ ಸಂಬಂಧಿ ಜೈವಿಕ ತಂತ್ರಜ್ಞಾನದಲ್ಲಿ ಮೌಲ್ಯವರ್ಧನೆ
- ಡಯಾಗ್ನಾಸ್ಟಿಕ್ ಮತ್ತು ವೈದ್ಯಕೀಯ ಸಲಕರಣೆ ತಯಾರಿಕೆಗೆ 'ಬಯೊ-ಮೆಡಿಕಲ್ ಕ್ಲಸ್ಟರ್' ಸ್ಥಾಪನೆ
- ಲಭ್ಯ ಜೈವಿಕ ತ್ಯಾಜ್ಯ ಬಳಸಲು ಅನುಕೂಲವಾಗುವಂತೆ 'ಬಯೊ-ರಿಫೈನರೀಸ್ ಕ್ಲಸ್ಟರ್' ಸ್ಥಾಪನೆ
- ಹಾಸನ, ಧಾರವಾಡ ಮತ್ತು ಬೆಳಗಾವಿ ಪ್ರದೇಶಗಳಲ್ಲಿ ಮೌಲ್ಯವರ್ಧಿತ ಕೃಷಿ ಪದ್ಧತಿ ಅಳವಡಿಕೆ

ಬೆಂಗಳೂರು ಬಯೊ ಇನ್ನೋವೇಷನ್ ಸೆಂಟರ್‌ನ ಪ್ರೋತ್ಸಾಹದಿಂದ ಆವಿಷ್ಕರಿಸಲಾದ ಹೊಸ ಉತ್ಪನ್ನಗಳನ್ನು ಉಪಮುಖ್ಯಮಂತ್ರಿ ಡಾ.ಸಿ.ಎನ್‌.ಅಶ್ವತ್ಥನಾರಾಯಣ ಅವರು ಬಿಡುಗಡೆ ಮಾಡಿದ ಸಂದರ್ಭ

ಜಲ ಬಂಧನ
ಜನಜೀವನ ಅತಂತ್ರ

ಬೆಳಗಾವಿ ಜಿಲ್ಲೆ ಚಿಕ್ಕೋಡಿ ತಾಲ್ಲೂಕಿನ ಯಡೂರ ಗ್ರಾಮ ಕೃಷ್ಣಾ ನದಿ ನೀರಿನಿಂದ ಜಲಾವೃತವಾಗಿದ್ದು, ಜನರನ್ನು ಎನ್‌ಡಿಆರ್‌ಎಫ್ ತಂಡದವರು ಮತ್ತು ಪೊಲೀಸರು ಶನಿವಾರ ಸ್ಥಳಾಂತರಿಸಿದರು

ದೂಧ್‌ಗಂಗಾ ನದಿ ಉಕ್ಕಿ ಹರಿಯುತ್ತಿರುವುದರಿಂದ ಕಾಗಲ್ ಬಳಿ ಪುಣೆ–ಬೆಂಗಳೂರು ಹೆದ್ದಾರಿ ಮುಳುಗಿದ್ದು, ವಾಹನಗಳ ಸಂಚಾರ ಸ್ಥಗಿತಗೊಂಡಿದೆ

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು	ಹೊರಹರಿವು
			(ಕ್ಯುಸೆಕ್‌ಗಳಲ್ಲಿ)	
ಕೆ ಆರ್ ಎಸ್*	124.80	107.35	37,808	6,354
ಹಾರಂಗಿ	2,859	2,854.37	15,206	15,246
ಕಬಿನಿ	2,284.00	2,280.40	28,000	30,000
ಹೇಮಾವತಿ	2,922	2,914.29	34,175	725
ಲಿಂಗನಮಕ್ಕಿ	1,819	1,802.60	1,03,117	-
ಸೂಪಾ (ಮೀ)	564	549.12	47,895	2,564
ಮಾಣಿ	594.36	579.86	8,743	-
ತುಂಗಭದ್ರಾ	1,633	1,624.62	1,20,000	1,02,048
ಮಲಪ್ರಭಾ	2,079.50	2,073.80	70,351	15,394
ಘಟಪ್ರಭಾ	2,175	2,167.20	95,034	20,096
ಭದ್ರಾ	186	175	50,195	103
ಆಲಮಟ್ಟಿ (ಮೀ)	519.60	517.79	2,25,370	3,50,000
ನಾರಾಯಣಪುರ (ಮೀ)	492.25	489.71	3,20,000	3,41,800

* ನೆಲಮಟ್ಟದಿಂದ

ಎನ್‌ಡಿಆರ್‌ಎಫ್ ತಂಡದಿಂದ ಹಲವರ ರಕ್ಷಣೆ: ಕೊಚ್ಚಿ ಹೋಗಿದ್ದ ಬಾಲಕಿಯ ಮೃತದೇಹ ಪತ್ತೆ

ನದಿ ತೀರ ಪ್ರದೇಶದ ಜನತೆಗೆ ಆತಂಕ

ಪ್ರಜಾವಾಣಿ ವಾರ್ತೆ

ಬೆಳಗಾವಿ: ಬೆಳಗಾವಿ, ಬಾಗಲಕೋಟೆ, ಉತ್ತರಕನ್ನಡ, ಗದಗ, ಹಾವೇರಿ, ವಿಜಯಪುರ ಜಿಲ್ಲೆಗಳಲ್ಲಿ ಮಳೆ ಶನಿವಾರ ಬಿಡುವು ನೀಡಿದೆ. ಆದರೆ, ನದಿಗಳಿಗೆ ಹೆಚ್ಚಿನ ನೀರು ಹರಿದು ಬರುತ್ತಿರುವುದು ಮತ್ತು ಜಲಾಶಯಗಳಿಂದ ಹೊರಹರಿವಿನ ಪ್ರಮಾಣ ಏರಿಕೆಯಾಗಿರುವ ಪರಿಣಾಮ ತೀರದ ಪ್ರದೇಶಗಳಲ್ಲಿ ಪ್ರವಾಹದ ಭೀತಿ ಜಾಸ್ತಿಯಾಗುತ್ತಿದೆ.

ಚಿಕ್ಕೋಡಿಯ ರಾಮನಗರ ಬಳಿ ಹಳ್ಳದಲ್ಲಿ ಶುಕ್ರವಾರ ಕೊಚ್ಚಿ ಹೋಗಿದ್ದ ಬಾಲಕಿ ಕಿರಣ ಶಾನೂರ (12) ಶವ ಹಾಗೂ ಧಾರವಾಡ ತಾಲ್ಲೂಕಿನ ಬೇಲೂರು ಗ್ರಾಮದ ಹಳ್ಳದಲ್ಲಿ ತೇಲಿ ಹೋಗಿದ್ದ ಕೋಟೂರು ಗ್ರಾಮದ ಇಮಾಮ್ ಭಾಷಾ ಖುರೇಶಿ (45) ಮೃತ ದೇಹ ಶನಿವಾರ ಪತ್ತೆಯಾಗಿವೆ.

ಮಹಾರಾಷ್ಟ್ರದ ರಾಜಾಪುರ ಬ್ಯಾರೇಜ್‌ನಿಂದ 2,24,435 ಕ್ಯುಸೆಕ್ ಹಾಗೂ ದೂಧ್‌ಗಂಗಾ ನದಿಯಿಂದ 51,920 ಕ್ಯುಸೆಕ್ ಸೇರಿ 2,72,295 ಕ್ಯುಸೆಕ್ ನೀರು ಬೆಳಗಾವಿ ಜಿಲ್ಲೆ ಚಿಕ್ಕೋಡಿ ತಾಲ್ಲೂಕಿನ ಕಲ್ಲೋಳ ಬಳಿ ಕೃಷ್ಣಾ ನದಿಗೆ ಬಂದು ಸೇರುತ್ತಿದ್ದು, ಅಪಾಯದ ಮಟ್ಟ ಮೀರಿ ಹರಿಯುತ್ತಿದೆ.

ಅಪಾಯದ ಮಟ್ಟದಲ್ಲಿ ಹರಿಯುತ್ತಿರುವ ದೂಧ್‌ಗಂಗಾ, ವೇದಗಂಗಾ ಮತ್ತು ಹಿರಣ್ಯಕೇಶಿ ನದಿಯಿಂದ ಬಾಧಿತರಾದವರನ್ನು ಸ್ಥಳಾಂತರಿಸಲಾಯಿತು. ವೇದಗಂಗಾ ಉಕ್ಕಿ ಹರಿಯುತ್ತಿದ್ದು, ನಿಪ್ಪಾಣಿ ತಾಲ್ಲೂಕಿನ ಯಮಗರ್ಣಿ ಗ್ರಾಮದ ಬಳಿ ಪುಣೆ-ಬೆಂಗಳೂರು ರಾಷ್ಟ್ರೀಯ ಹೆದ್ದಾರಿ ಜಲಾವೃತ ಸ್ಥಿತಿಯಲ್ಲೇ ಇದೆ. ಸಂಚಾರ ಬಂದ್ ಮಾಡಲಾಗಿದೆ. ಈ ಹೆದ್ದಾರಿಯಲ್ಲಿ ಸಂಕೇಶ್ವರ ಬಳಿ ಮತ್ತು ಮಹಾರಾಷ್ಟ್ರ ವ್ಯಾಪ್ತಿಯಲ್ಲಿರುವ ಕಾಗಲ್ ಸಮೀಪವೂ ನೀರು ಸಂಗ್ರಹವಾಗಿದ್ದು, ಸಂಪರ್ಕ ಕಡಿತಗೊಂಡಿದೆ.

ಚಿಕ್ಕೋಡಿ ತಾಲ್ಲೂಕಿನ ಕಲ್ಲೋಳದ ಕಮತೆ ತೋಟದಲ್ಲಿ ಕೃಷ್ಣಾ ನದಿ ಪ್ರವಾಹದಿಂದ ನೀರು ಬಂದು ಸಿಲುಕಿದ್ದ ಸಾಜನೆ ಕುಟುಂಬದ ನಾಲ್ವರನ್ನು ಎನ್‌ಡಿಆರ್‌ಎಫ್ ತಂಡ ಹಾಗೂ ಪೊಲೀಸರು ರಕ್ಷಿಸಿದರು. ಗೋಕಾಕ ತಾಲ್ಲೂಕು ಲೋಳಸೂರದಲ್ಲಿ ಘಟಪ್ರಭಾ ನದಿ ಪ್ರವಾಹದಲ್ಲಿ ಸಿಲುಕಿದ್ದ ಇಬ್ಬರು, ಪಾಶ್ಚಾಪುರದಲ್ಲಿ 18 ಮಂದಿ ಬಿಹಾರದ ಕೂಲಿ ಕಾರ್ಮಿಕರು, ಸಂಕೇಶ್ವರದಲ್ಲಿ 100 ಮತ್ತು ಖಾನಾಪುರದ ದುರ್ಗಾ ನಗರದಲ್ಲಿ 55 ಜನರನ್ನು ರಕ್ಷಿಸಲಾಗಿದೆ.

‘ಪುಣೆಯಿಂದ ಹುಬ್ಬಳ್ಳಿಗೆ ಚಿಕಿತ್ಸೆಗಾಗಿ ಬರುತ್ತಿದ್ದ ಕುಟುಂಬದ ನಾಲ್ವರು ಯಮಗರ್ಣಿ ಬಳಿ ಸಿಲುಕಿದ್ದರು. ಅವರನ್ನು ಬೋಟ್‌ನಲ್ಲಿ ಕರೆ ತಂದು ಬಳಿಕ ಆಂಬುಲೆನ್ಸ್ ಮೂಲಕ ಹುಬ್ಬಳ್ಳಿಗೆ ಕಳುಹಿಸಲಾಯಿತು. ಕೃಷ್ಣಾ ದಡದ ಯಡೂರದ ವೃದ್ಧರು ಮತ್ತು ರೋಗಿಗಳನ್ನು ಸುರಕ್ಷಿತ ಪ್ರದೇಶಕ್ಕೆ ಸ್ಥಳಾಂತರಿಸಲಾಯಿತು’ ಎಂದು ಎಸ್ಪಿ ಲಕ್ಷ್ಮಣ ನಿಂಬರಗಿ ತಿಳಿಸಿದರು.

ಬೆಳೆ ಹಾನಿ: ಗೋಕಾಕದಿಂದ ಜಲಪಾತದ ಕಡೆಗೆ ಸಂಪರ್ಕಿಸುವ ರಸ್ತೆ ಮಾರ್ಕಂಡೇಯ ನದಿ ಪ್ರವಾಹದಲ್ಲಿ ಮುಳುಗಿದೆ. ಬೆಳಗಾವಿ ಜಿಲ್ಲೆಯಲ್ಲಿ ಪ್ರಾಥಮಿಕ ಮಾಹಿತಿ ಪ್ರಕಾರ, 3ಸಾವಿರ ಹೆಕ್ಟೇರ್‌ಗೂ ಹೆಚ್ಚಿನ ಬೆಳೆ ಹಾನಿಯಾಗಿದೆ. 70 ರಸ್ತೆ, 36 ಸೇತುವೆಗಳು ಜಲಾವೃತಗೊಂಡಿವೆ.

ಅತಿವೃಷ್ಟಿ ಹಾಗೂ ಪ್ರವಾಹದಿಂದಾಗಿ ಬೆಳಗಾವಿ ವಿಭಾಗದಲ್ಲಿ ಲೋಕೋಪಯೋಗಿ ಇಲಾಖೆಗೆ ₹ 550 ಕೋಟಿ ಹಾನಿಯಾಗಿದೆ
ಗೋವಿಂದ ಕಾರಜೋಳ
ಉಪ ಮುಖ್ಯಮಂತ್ರಿ

ವಿಡಿಯೋ ನೋಡಲು ಈ ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ಧಾರವಾಡ ಜಿಲ್ಲೆಯಲ್ಲಿ ಮಳೆ ಅಬ್ಬರ ತಗ್ಗಿದೆ. ಅಳ್ನಾವರದ ಸರ್ಕಾರಿ ಪ್ರಾಥಮಿಕ ಆರೋಗ್ಯ ಕೇಂದ್ರದ ಹಳೆಯ ಕಟ್ಟಡ ಕುಸಿದಿದೆ. ಮಲಪ್ರಭಾ ಜಲಾಶಯದಿಂದ ಹೊಳೆ–ಕಾಲುವೆಗಳಿಗೆ ನೀರು ಹರಿಸಿದ್ದರಿಂದ ಗದಗ ಜಿಲ್ಲೆಯ ನರಗುಂದ ತಾಲ್ಲೂಕಿನ ಲಕಮಾಪುರದಲ್ಲಿ ಪ್ರವಾಹದ ಭೀತಿ ಎದುರಾಗಿದೆ. ಜನರನ್ನು ಬೆಳ್ಳೇರಿಯ ಕೃಷಿ ಡಿಪ್ಲೊಮಾ ಕಾಲೇಜಿನಲ್ಲಿ ತೆರೆದಿರುವ ಕಾಳಜಿ ಕೇಂದ್ರಕ್ಕೆ ಸ್ಥಳಾಂತರಿಸಲಾಗಿದೆ. ಬಾಗಲಕೋಟೆ ಜಿಲ್ಲೆ ಜಮಖಂಡಿ ತಾಲ್ಲೂಕಿನ ಮುತ್ತೂರು ಹಾಗೂ ಕಂಕಣವಾಡಿ ಕೃಷ್ಣಾ ನದಿ ಪ್ರವಾಹದಿಂದ ನಡುಗಡ್ಡೆಯಾಗಿವೆ. ಬಾದಾಮಿ ತಾಲ್ಲೂಕಿನ ಗೋವನಕೊಪ್ಪ ಹಾಗೂ ಗದಗ ಜಿಲ್ಲೆ ಕೊಣ್ಣೂರ ನಡುವಿನ ಹಳೆಯ ಸೇತುವೆ ಮುಳುಗಿದೆ. ಹಾವೇರಿ ಜಿಲ್ಲೆಯಲ್ಲಿ ಒಂದೇ ದಿನ 443 ಮನೆಗಳಿಗೆ ಭಾಗಶಃ ಮತ್ತು 34 ಸಂಪೂರ್ಣ ಹಾನಿಯಾಗಿದೆ.

ಕೃಷ್ಣಾ ಪ್ರವಾಹ ಏರಿಕೆ: ನಡುಗಡ್ಡೆ ಸಂಪರ್ಕ ಕಡಿತ

ರಾಯಚೂರು ಜಿಲ್ಲೆಯ ಲಿಂಗಸುಗೂರು ತಾಲ್ಲೂಕಿನ ಶೀಲಹಳ್ಳಿ ಸೇತುವೆ ಶನಿವಾರ ಸಂಪೂರ್ಣ ಮುಳುಗಡೆಯಾಗಿದೆ. ವಾಹನಗಳ ಸಂಚಾರ ಸಂಚಾರ ಸ್ಥಗಿತಗೊಂಡಿದೆ ಪ್ರಜಾವಾಣಿ ಚಿತ್ರ: ಬಿ.ಎ.ನಂದಿಕೋಲಮಠ

ಯಾದಗಿರಿ/ರಾಯಚೂರು: ಯಾದಗಿರಿ ಜಿಲ್ಲೆಯ ನಾರಾಯಣಪುರ ಬಸವಸಾಗರ ಜಲಾಶಯದಿಂದ ಶನಿವಾರ ಕೃಷ್ಣಾ ನದಿಗೆ 3.44 ಲಕ್ಷಕ್ಕೂ ಹೆಚ್ಚು ಕ್ಯುಸೆಕ್ ನೀರು ಹರಿಸಲಾಗುತ್ತಿದೆ. ಯಾದಗಿರಿ ಜಿಲ್ಲೆಯ ಶಹಾಪುರ ತಾಲ್ಲೂಕಿನ ಕೊಳ್ಳೂರು (ಎಂ)–ರಾಯಚೂರು ಜಿಲ್ಲೆ ದೇವದುರ್ಗ ತಾಲ್ಲೂಕಿನ ಹೂವಿನಹೆಡಗಿ ಸೇತುವೆ ಮುಳುಗಡೆಯಾಗಿದೆ.

ಶಹಾಪುರ– ದೇವದುರ್ಗ ಸಂಪರ್ಕ ಕಡಿತವಾಗಿದ್ದು, ವಾಹನ ಸವಾರರು ತಿಂಥಣಿ ಮಾರ್ಗವಾಗಿ 46 ಕಿ.ಮೀ. ಸುತ್ತುವರೆದು ತೆರಳಬೇಕಿದೆ.

ಕೊಡೇಕಲ್ ಸಮೀಪದ ಛಾಯಾ ಭಗವತಿ ದೇವಸ್ಥಾನ ಜಲಾವೃತಗೊಂಡಿದೆ. ದೇವಿಯ ಮೂರ್ತಿಯನ್ನು ಮೆಟ್ಟಿಲ ಮೇಲೆ ಇಡಲಾಗಿದೆ. ಪ್ರವಾಹದ ನೀರು ಮತ್ತಷ್ಟು ಏರಿಕೆಯಾದಲ್ಲಿ ವಡಗೇರಾ ತಾಲ್ಲೂಕಿನ ಯಕ್ಷಂತಿ, ಟೊಣ್ಣೂರು, ಗೌಡೂರು, ಮರಕಲ್, ಕೊಳ್ಳೂರು (ಎಂ) ಗ್ರಾಮಗಳು ಜಲಾವೃತವಾಗಲಿವೆ.

ರಾಯಚೂರು ಜಿಲ್ಲೆಯ ಲಿಂಗಸುಗೂರು ತಾಲ್ಲೂಕಿನ ಶೀಲಹಳ್ಳಿ ಸೇತುವೆ ಶನಿವಾರ ಸಂಪೂರ್ಣ ಮುಳುಗಡೆಯಾಗಿದೆ.

ರಾಯಚೂರು ತಾಲ್ಲೂಕಿನ ಕುರ್ವಕಲಾ, ಕುರ್ವಕುರ್ದಾ, ಅಗ್ರಹಾರ ನಡುಗಡ್ಡೆ ಗ್ರಾಮಗಳಿಗೆ ಮತ್ತು ಲಿಂಗಸುಗೂರು ತಾಲ್ಲೂಕಿನ ತದವಗಡ್ಡಿ ನಡುಗಡ್ಡೆಗೆ ಸಂಪರ್ಕ ಕಡಿತಗೊಂಡಿದೆ. ತೆಪ್ಪಗಳಲ್ಲಿ ಜನ ಸಂಚರಿಸುವುದನ್ನು ನಿರ್ಬಂಧಿಸಲಾಗಿದೆ.

ಯಲ್ಲಾಪುರ ತಾಲ್ಲೂಕಿನ ತಳಕೆಬೈಲ್‌ನಲ್ಲಿ ಕೈಗಾ– ಇಳಕಲ್ ರಾಜ್ಯ ಹೆದ್ದಾರಿ ಸಂಪೂರ್ಣ ಕುಸಿದು ಹೋಗಿದೆ

ಸೇತುವೆ, ಮನೆ, ಭೂ ಕುಸಿತ

ಕಾರವಾರ: ಉತ್ತರ ಕನ್ನಡ ಜಿಲ್ಲೆಯಲ್ಲಿ ಶನಿವಾರ ಮಳೆಯ ಪ್ರಮಾಣ ಇಳಿಕೆಯಾಗಿದೆ. ಆದರೆ, ಹಾನಿ ಮುಂದುವರಿದಿದೆ. ಪ್ರವಾಹದಿಂದ ಒಟ್ಟು 81 ಗ್ರಾಮಗಳು ಬಾಧಿತವಾಗಿದ್ದು, 50 ಮನೆಗಳು ಸಂಪೂರ್ಣವಾಗಿ ಕುಸಿದಿವೆ.

ಗಂಗಾವಳಿ ನದಿ ಪ್ರವಾಹಕ್ಕೆ ಅಂಕೋಲಾ ತಾಲ್ಲೂಕಿನ ಗುಳ್ಳಾಪುರದ ಸೇತುವೆ ಮಧ್ಯಭಾಗದಿಂದ ಕೊಚ್ಚಿ ಹೋಗಿದೆ. ಇದರಿಂದ ಗುಳ್ಳಾಪುರ-ಹಳವಳ್ಳಿ ಸಂಪರ್ಕ ಕಡಿತವಾಗಿದೆ. ಈ ಭಾಗದಲ್ಲಿ 3,000ಕ್ಕಿಂತ ಹೆಚ್ಚು ಮನೆಗಳಿವೆ. ಹತ್ತಕ್ಕೂ ಹೆಚ್ಚು ಗ್ರಾಮಗಳಿಗೆ ಈ ಸೇತುವೆ ಸಂಪರ್ಕ ಕೊಂಡಿಯಾಗಿತ್ತು. ಈ ಸೇತುವೆಯಲ್ಲಿ ಸಾಗಿದರೆ ಗುಳ್ಳಾಪುರ ತಲುಪಲು ಕೇವಲ 10 ಕಿಲೋಮೀಟರ್ ದೂರವಾಗುತ್ತಿತ್ತು. ತಾಲ್ಲೂಕು ಕೇಂದ್ರ ಅಂಕೋಲಾಕ್ಕೆ 50 ಕಿ.ಮೀ, ಯಲ್ಲಾಪುರಕ್ಕೆ 25 ಕಿ.ಮೀ ದೂರವಾಗುತ್ತಿತ್ತು. ಈಗ ಮತ್ತಿಘಟ್ಟ ಮೂಲಕ ಅಂಕೋಲಾಕ್ಕೆ 150 ಕಿ.ಮೀ., ಯಲ್ಲಾಪುರಕ್ಕೆ ಸುಮಾರು 100 ಕಿ.ಮೀ ಸಂಚರಿಸಬೇಕಿದೆ. ಇಡೀ ಪ್ರದೇಶವೇ ದ್ವೀಪದಂತಾಗಿದೆ.

ಯಲ್ಲಾಪುರ ತಾಲ್ಲೂಕಿನ ಕಳಚೆಯಲ್ಲಿ ಶುಕ್ರವಾರ ಸಂಜೆ ಮನೆ ಮೇಲೆ ಗುಡ್ಡ ಕುಸಿದು ದೇವಕಿ ನಾರಾಯಣ ಗಾಂವ್ಕರ (48) ಮೃತಪಟ್ಟಿದ್ದಾರೆ. ಮನೆಯಲ್ಲಿದ್ದ ಇಬ್ಬರು ಮಕ್ಕಳು ಮತ್ತು ಮೂವರು ದೊಡ್ಡವರು ಪ್ರಾಣಪಾಯದಿಂದ ಪಾರಾಗಿದ್ದಾರೆ.

ಈ ನಡುವೆ, ಶುಕ್ರವಾರ ಕುಸಿದಿದ್ದ ಅರಬೈಲ್ ಘಟ್ಟದಲ್ಲಿ ಶನಿವಾರ ಮತ್ತೆ ಭೂಕುಸಿತವಾಗಿದೆ. ಇದರಿಂದ ರಾಷ್ಟ್ರೀಯ ಹೆದ್ದಾರಿ 63 ಮತ್ತಷ್ಟು ಅಪಾಯದಲ್ಲಿದೆ. ಈ ರಸ್ತೆಯಲ್ಲಿ ಮುಂದಿನ ಸೂಚನೆಯವರೆಗೆ ವಾಹನಗಳ ಸಂಚಾರವನ್ನು ನಿಷೇಧಿಸಿ ಜಿಲ್ಲಾಧಿಕಾರಿ ಆದೇಶಿಸಿದ್ದಾರೆ.

ತಳಕೆಬೈಲ್‌ನಲ್ಲಿ ಭೂಕುಸಿತದಿಂದಾಗಿ ಕೈಗಾ– ಇಳಕಲ್ ರಾಜ್ಯ ಹೆದ್ದಾರಿ ಸಂಪೂರ್ಣ ಕುಸಿದು ಹೋಗಿದೆ. ಜೊಯಿಡಾ ತಾಲ್ಲೂಕಿನ ಅಣಶಿ ಘಟ್ಟದ ನಾಲ್ಕು ಕಡೆಗಳಲ್ಲಿ ಗುಡ್ಡ, ಒಂದು ಕಡೆ ರಾಜ್ಯ ಹೆದ್ದಾರಿ ರಸ್ತೆ ಕುಸಿದಿದೆ.

ಮಹಾರಾಷ್ಟ್ರ: 129 ಸಾವು, 1.35 ಲಕ್ಷ ಜನರ ಸ್ಥಳಾಂತರ

ಕೊಲ್ಹಾಪುರ, ಸಾಂಗ್ಲಿ, ಸತಾರಾ ಜಿಲ್ಲೆಗಳಲ್ಲಿ ಪ್ರವಾಹ; 59 ಜನ ನಾಪತ್ತೆ

ಪ್ರಜಾವಾಣಿ ವಾರ್ತೆ

ಮುಂಬೈ: ಮಹಾರಾಷ್ಟ್ರದ ಕೊಲ್ಹಾಪುರ, ಸಾಂಗ್ಲಿ, ಸತಾರಾ ಜಿಲ್ಲೆಗಳಲ್ಲಿ ಪ್ರವಾಹದ ಪರಿಸ್ಥಿತಿ ಶನಿವಾರವೂಮುಂದುವರಿದಿದ್ದು, ಈವರೆಗೆ 1.35 ಲಕ್ಷ ಜನರನ್ನು ಸ್ಥಳಾಂತರ ಮಾಡಲಾಗಿದೆ. ಕಳೆದ ಎರಡು ದಿನಗಳಲ್ಲಿ ಮಹಾರಾಷ್ಟ್ರದಲ್ಲಿ ಮಳೆ ಸಂಬಂಧಿತ ಘಟನೆಗಳಲ್ಲಿ 129 ಜನರು ಮೃತಪಟ್ಟಿದ್ದಾರೆ ಎಂದು ರಾಜ್ಯ ವಿಪತ್ತು ನಿರ್ವಹಣಾ ವಿಭಾಗದ ಮೂಲಗಳು ಮಾಹಿತಿ ನೀಡಿವೆ.

ಮೂರು ಜಿಲ್ಲೆಗಳಲ್ಲಿ ಪ್ರವಾಹ ಉಂಟಾಗಿರುವುದರಿಂದ ಮಹಾರಾಷ್ಟ್ರ ಮತ್ತು ಪಕ್ಕದ ಕರ್ನಾಟಕದ ನಡುವಿನ ರಸ್ತೆ ಸಂಚಾರಕ್ಕೆ ಅಡಚಣೆಯಾಗಿದೆ. ಮೂರು ಜಿಲ್ಲೆಗಳ ಬಹುಪಾಲು ಅಣೆಕಟ್ಟುಗಳು ತುಂಬಿರುವ ಪರಿಣಾಮ, ಹಲವಾರು ಗ್ರಾಮಗಳು ಮುಳುಗಡೆಯಾಗಿವೆ.

‘ಈ ಪ್ರವಾಹ, ನಾವು ನೋಡುತ್ತಿರುವ ದೊಡ್ಡ ಅನಿರೀಕ್ಷಿತ ದುರಂತ’ ಎಂದು ಮಹಾರಾಷ್ಟ್ರ ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಹೇಳಿದ್ದಾರೆ.

ಕಳೆದ ನಾಲ್ಕು ದಿನಗಳಲ್ಲಿ, ಮಹಾಬಲೇಶ್ವರ ಗಿರಿಧಾಮದಲ್ಲಿ 186 ಸೆಂ.ಮೀ ಮಳೆಯಾಗಿದೆ.

ರಾಜ್ಯದಲ್ಲಿ ಮಳೆ, ಪ್ರವಾಹ ಹಾಗೂ ಭೂ ಕುಸಿತದಿಂದ 59 ಜನರು ನಾಪತ್ತೆಯಾಗಿದ್ದಾರೆ ಎಂದು ಮಹಾರಾಷ್ಟ್ರ ಉಪಮುಖ್ಯಮಂತ್ರಿ ಅಜಿತ್ ಪವಾರ್ ಶನಿವಾರ ಹೇಳಿದ್ದಾರೆ. ಈ ಅವಘಡದಲ್ಲಿ 38 ಜನರು ಗಾಯಗೊಂಡಿದ್ದಾರೆ. ರಾಯಗಡ ಜಿಲ್ಲೆಯಲ್ಲಿ ಅತಿಹೆಚ್ಚು ಹಾನಿ ಉಂಟಾಗಿದ್ದು, ಇಲ್ಲಿ 47 ಜನರು ಪ್ರಾಣ ಕಳೆದುಕೊಂಡಿದ್ದಾರೆ. ಗುರುವಾರ ಸಂಭವಿಸಿದ ಭೂಕುಸಿತದಲ್ಲಿ ರಾಯಗಡದ ತಾಲಿಯೆ ಎಂಬಲ್ಲಿ 37 ಜನರು ಮೃತಪಟ್ಟದ್ದರು.

ಕರಾವಳಿ ಕೊಂಕಣ ಪ್ರದೇಶದ ರಾಯಗಡ ಮತ್ತು ರತ್ನಾಗಿರಿ ಜಿಲ್ಲೆಗಳ ಭಾಗಗಳು ಮತ್ತು ಪಶ್ಚಿಮ ಮಹಾರಾಷ್ಟ್ರದ ಕೊಲ್ಹಾಪುರ ಜಿಲ್ಲೆಗಳು ಪ್ರವಾಹದಿಂದ ಹೆಚ್ಚು ಹಾನಿಗೊಳಗಾಗಿವೆ. ಈ ಮಧ್ಯೆ ಸತಾರಾ ಜಿಲ್ಲೆಯಲ್ಲಿ ಅತಿಹೆಚ್ಚು ಪ್ರಮಾಣದ ಮಳೆಯಾಗುತ್ತಿದೆ.

ರಾಷ್ಟ್ರೀಯ ವಿಪತ್ತು ನಿರ್ವಹಣೆ ಪಡೆಯ (ಎನ್‌ಡಿಆರ್‌ಎಫ್) 21 ತಂಡಗಳು, ಸೇನೆ, ಕರಾವಳಿ ರಕ್ಷಣಾ ಪಡೆಗಳ 14 ತಂಡಗಳು ಮಳೆಯಿಂದ ಹಾನಿಗೊಳಗಾದ ಜಿಲ್ಲೆಗಳಲ್ಲಿ ಕಾರ್ಯ-ನಿರ್ವಹಿಸುತ್ತಿವೆ ಎಂದು ಪವಾರ್ ಹೇಳಿದ್ದಾರೆ. ರಾಜ್ಯ ವಿಪತ್ತು ನಿರ್ವಹಣಾ ಪಡೆಯ ನಾಲ್ಕು ತಂಡಗಳೂ ಸಹ ಕಾರ್ಯಾಚರಣೆಯಲ್ಲಿ ನಿರತವಾಗಿವೆ.

- ಅಂಬೆಗಾಂವ್‌ನ ಐದು ಪ್ರದೇಶಗಳು, ಮಾವಲ್ ಹಾಗೂ ಖೇಡ್‌ನಲ್ಲಿ ತಲಾ ಎರಡು, ಭೋರ್‌ನಲ್ಲಿ ಮೂರು, ಮುಲ್ಶಿ, ಜುನ್ನಾರ್ ಮತ್ತು ವೆಲ್ಹಾದಲ್ಲಿ ತಲಾ ಒಂದು ಪ್ರದೇಶಗಳೂ ಸೇರಿದಂತೆ ಪುಣೆ ಜಿಲ್ಲೆಯ 23 ಪ್ರದೇಶಗಳಲ್ಲಿ ಭೂಕುಸಿತ.
- ರಾಯಗಡದಲ್ಲಿ 47, ಸತಾರಾದಲ್ಲಿ 6, ಮುಂಬೈನಲ್ಲಿ 4, ರತ್ನಾಗಿರಿಯಲ್ಲಿ 11, ಕೊಲ್ಹಾಪುರದಲ್ಲಿ 5, ಸಿಂಧುದುರ್ಗದಲ್ಲಿ ಇಬ್ಬರು ಹಾಗೂ ಪುಣೆಯಲ್ಲಿ ಒಬ್ಬರ ಸಾವು

ಕೊಲ್ಹಾಪುರದಲ್ಲಿ ಪ್ರವಾಹ ಸಂತ್ರಸ್ತ ಮಹಿಳೆಯನ್ನು ಎನ್‌ಡಿಆರ್‌ಎಫ್ ಸಿಬ್ಬಂದಿ ಹೊತ್ತು ತಂದರು–ಪಿಟಿಐ ಚಿತ್ರ

ಕಾಯಂ ಸ್ಥಳಾಂತರಕ್ಕೆ ಯೋಜನೆ: ಠಾಕ್ರೆ

ಭೂಕುಸಿತವನ್ನು ಗಮನದಲ್ಲಿಟ್ಟುಕೊಂಡು ಗುಡ್ಡಗಾಡು ಪ್ರದೇಶಗಳಲ್ಲಿ ವಾಸಿಸುವ ಜನರನ್ನು ಕಾಯಂ ಆಗಿ ಸ್ಥಳಾಂತರಿಸುವ ಯೋಜನೆಯನ್ನು ಮಹಾರಾಷ್ಟ್ರ ಸರ್ಕಾರ ಕೈಗೆತ್ತಿಕೊಳ್ಳಲಿದೆ ಎಂದು ಮುಖ್ಯಮಂತ್ರಿ ಉದ್ಧವ್ ಠಾಕ್ರೆ ಅವರು ಶನಿವಾರ ತಿಳಿಸಿದ್ದಾರೆ.

ರಾಜ್ಯದ ಕೆಲವು ಭಾಗಗಳಲ್ಲಿ, ವಿಶೇಷವಾಗಿ ಪಶ್ಚಿಮ ಮಹಾರಾಷ್ಟ್ರ ಪ್ರದೇಶವು ಪ್ರವಾಹಕ್ಕೀಡಾಗುವುದರಿಂದ ನೀರಿನ ನಿರ್ವಹಣೆಗೆ ನೀತಿಯನ್ನು ರೂಪಿಸಲಾಗುವುದು ಎಂದರು.

ಭೂಕುಸಿತದ ದುರ್ಘಟನೆ ಸಂಭವಿಸಿದ ರಾಯಗಡ ಜಿಲ್ಲೆಯ ತಾಲಿಯೆ ಗ್ರಾಮಕ್ಕೆ ಭೇಟಿ ನೀಡಿದ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

ಗೋವಾ–ಕರ್ನಾಟಕ ಮಧ್ಯೆ ರೈಲು ಸಂಚಾರ ಅಸ್ತವ್ಯಸ್ತ

ಪಣಜಿ: ಸತತ ಮಳೆಯಿಂದಾಗಿ ಗೋವಾ–ಕರ್ನಾಟಕ ಗಡಿ ಪ್ರದೇಶದಲ್ಲಿ ಭೂಕುಸಿತ ಉಂಟಾಗಿದೆ. ಹೀಗಾಗಿ ಉಭಯ ರಾಜ್ಯಗಳ ನಡುವೆ ಎರಡನೇ ದಿನವೂ ರೈಲುಗಳ ಸಂಚಾರ ಸ್ಥಗಿತಗೊಂಡಿದೆ ಎಂದು ನೈರುತ್ಯ ರೈಲ್ವೆ ಅಧಿಕಾರಿಗಳು ಶನಿವಾರ ಹೇಳಿದ್ದಾರೆ.

ಪ್ರವಾಹಪೀಡಿತ ಕೊಲ್ಹಾಪುರ ಜಿಲ್ಲೆಯ ಜನರಿಗೆ ನೆರವು ನೀಡಲು ಮಹಾರಾಷ್ಟ್ರ ಸರ್ಕಾರವು ಕರ್ನಾಟಕ ಸರ್ಕಾರದ ಜತೆ ಸಮನ್ವಯ ಸಾಧಿಸುತ್ತಿದೆ
ಅಜಿತ್ ಪವಾರ್, ಮಹಾರಾಷ್ಟ್ರ ಉಪಮುಖ್ಯಮಂತ್ರಿ

‘ಆರೆಂಜ್ ಅಲರ್ಟ್’

- ಮಧ್ಯಪ್ರದೇಶದ 24 ಜಿಲ್ಲೆಗಳಲ್ಲಿ ಭಾರಿ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ತಿಳಿಸಿದ್ದು, ಆರೆಂಜ್ ಅಲರ್ಟ್ ಘೋಷಿಸಲಾಗಿದೆ
- ಮುಂದಿನ 24 ಗಂಟೆಗಳಲ್ಲಿ ಪಶ್ಚಿಮ ಕರಾವಳಿಯಲ್ಲಿ ಮಳೆಯ ತೀವ್ರತೆ ಕಡಿಮೆಯಾಗಲಿದೆ ಎಂದು ಹವಾಮಾನ ಇಲಾಖೆ (ಐಎಂಡಿ) ಶನಿವಾರ ತಿಳಿಸಿದೆ

- ಶನಿವಾರ ಬೆಳಿಗ್ಗೆವರೆಗಿನ ಮಾಹಿತಿ ಪ್ರಕಾರ, ರಾಯಗಡದಲ್ಲಿ 53, ಸತಾರಾದಲ್ಲಿ ನಾಲ್ಕು ಮತ್ತು ಠಾಣೆಯಲ್ಲಿ ಇಬ್ಬರು ಕಾಣೆಯಾಗಿದ್ದಾರೆ.
- ಪ್ರವಾಹ ಮತ್ತು ಭೂಕುಸಿತದಿಂದ ಮೃತಪಟ್ಟವರ ಸಂಬಂಧಿಗಳಿಗೆ ರಾಜ್ಯ ಸರ್ಕಾರ ತಲಾ ₹5 ಲಕ್ಷ ಹಾಗೂ ಕೇಂದ್ರ ಸರ್ಕಾರ ತಲಾ ₹2 ಲಕ್ಷ ಪರಿಹಾರ ಘೋಷಣೆ
- ಸತಾರಾ ಜಿಲ್ಲೆಯ ಅಂಬೇಘರ್ ಗ್ರಾಮದಲ್ಲಿ ಭೂಕುಸಿತ ಸ್ಥಳದಲ್ಲಿ 13 ಶವಗಳ ಪತ್ತೆ
- ಕೊಲ್ಹಾಪುರ ಜಿಲ್ಲೆಯಲ್ಲಿ ಶನಿವಾರ ಮಧ್ಯಾಹ್ನ ತಗ್ಗಿದ ಮಳೆ ತೀವ್ರತೆ; ಪಂಚಗಂಗಾ ನದಿಯ ನೀರಿನ ಮಟ್ಟದಲ್ಲಿ ಸ್ವಲ್ಪ ಇಳಿಕೆ
- ಪ್ರವಾಹಪೀಡಿತ ಗ್ರಾಮಗಳಲ್ಲಿ ಪಡಿತರ ವಿತರಿಸಲು ಸರ್ಕಾರ ನಿರ್ಧರಿಸಿದೆ. ‘ಶಿವಭೋಜನ ಥಾಲಿ ಕೇಂದ್ರ’ ನಡೆಸಲು ಸಾಮಾಜಿಕ ಸಂಘಟನೆಗಳು ಮುಂದೆ ಬರಬೇಕು: ಅಜಿತ್ ಪವಾರ್ ಕರೆ
- ಮಹಾರಾಷ್ಟ್ರ ರಾಜ್ಯಪಾಲ ಭಗತ್ ಸಿಂಗ್ ಕೋಶಿಯಾರಿ ಅವರಿಂದ ಮಾಹಿತಿ ಪಡೆದ ರಾಷ್ಟ್ರಪತಿ ರಾಮನಾಥ್ ಕೋವಿಂದ್; ಮಳೆ–ಪ್ರವಾಹದಿಂದಾಗಿ ರಾಜ್ಯದಲ್ಲಿ ಪ್ರಾಣ ಮತ್ತು ಆಸ್ತಿಪಾಸ್ತಿ ನಷ್ಟದ ಬಗ್ಗೆ ಕಳವಳ

ಚಕ್ರ ಜಲಾಶಯ ಪ್ರದೇಶದಲ್ಲಿ 40.1 ಸೆಂ.ಮೀ ದಾಖಲೆಯ ಮಳೆ

ಶಿವಮೊಗ್ಗ: ಹಲವು ಪ್ರದೇಶಗಳು ಜಲಾವೃತ

ಪ್ರಜಾವಾಣಿ ವಾರ್ತೆ

ಶಿವಮೊಗ್ಗ: ಜಿಲ್ಲೆಯಲ್ಲಿ ಶನಿವಾರ ಮಳೆ ಆರ್ಭಟ ಕೊಂಚ ತಗ್ಗಿದರೂ ನೀರಿನ ಹರಿವು ಕಡಿಮೆಯಾಗಿಲ್ಲ. ತುಂಗಾ ಜಲಾಶಯದಿಂದ 87 ಸಾವಿರ ಕ್ಯುಸೆಕ್ ನೀರು ಬಿಡುತ್ತಿರುವ ಕಾರಣ ತುಂಗಾ ನದಿ ಉಕ್ಕಿ ಹರಿಯುತ್ತಿದೆ.

ಶಿವಮೊಗ್ಗ ನಗರದ ಹಲವು ಪ್ರದೇಶಗಳು ಜಲಾವೃತವಾಗಿವೆ. ಹೊಳೆಹೊನ್ನೂರಿನಿಂದ ಹೊಳೆಬೈರನಹಳ್ಳಿ ಗ್ರಾಮಕ್ಕೆ ಹೋಗುವ ರಸ್ತೆಗೆ ಅಡ್ಡಲಾಗಿ ಹರಿಯುವ ಹಳ್ಳದಲ್ಲಿ ಅಗಸರಬೀದಿ ನಿವಾಸಿ ಹನುಮಕ್ಕ (70) ಶನಿವಾರ ಮುಂಜಾನೆ ಕೊಚ್ಚಿ ಹೋಗಿದ್ದಾರೆ. ಹಳ್ಳದ ನೀರಿಗೆ ಅಡ್ಡಲಾಗಿ ನಿರ್ಮಿಸಿರುವ ಕಿರು ಸೇತುವೆ ದಾಟುತ್ತಿದ್ದಾಗ ಕಾಲು ಜಾರಿ ನೀರಿನಲ್ಲಿ ಬಿದ್ದಿದ್ದು, ನೀರಿನ ರಭಸಕ್ಕೆ ಕೊಚ್ಚಿ ಹೋಗಿದ್ದು, ಶೋಧ ಕಾರ್ಯ ನಡೆದಿದೆ.

ತೀರ್ಥಹಳ್ಳಿ ತಾಲ್ಲೂಕು ಅಂಬಳಿಕೆ ಗ್ರಾಮದ ಹುಲಿಗುಡ್ಡ ಕುಸಿದಿದೆ. ತಾಲ್ಲೂಕಿನ ಹಲವು ಕಡೆಗಳಲ್ಲಿ ಗುಡ್ಡಗಳು ಸಾಲುಸಾಲು ಕುಸಿತವಾಗಿದೆ. ತೀರ್ಥಹಳ್ಳಿ ಸಮೀಪದ ತುಡ್ಕಿಯಿಂದ ಭಾರತೀಪುರ ಗುಡ್ಡ ಪ್ರದೇಶದಲ್ಲಿ ಸುಮಾರು 10 ಕಡೆಗಳಲ್ಲಿ ಗುಡ್ಡ ಕುಸಿತವಾಗಿದೆ.

ಲಿಂಗನಮಕ್ಕಿ ಜಲಾಶಯಕ್ಕೆ ಒಂದೇ ದಿನ ಮೂರು ಅಡಿ, ಭದ್ರಾ ಜಲಾಶಯಕ್ಕೆ ನಾಲ್ಕು ಅಡಿ ನೀರು ಬಂದಿದೆ. ಲಿಂಗನಮಕ್ಕಿ ಜಲಾಶಯಕ್ಕೆ 1 ಲಕ್ಷಕ್ಕೂ ಅಧಿಕ ಕ್ಯುಸೆಕ್ ನೀರು ಹರಿದು ಬರುತ್ತಿದೆ. ಯಾವುದೇ ಕ್ಷಣದಲ್ಲಿ ಕ್ರಸ್ಟ್‌ಗೇಟ್ ತೆರೆಯುವ ಸಾಧ್ಯತೆ ಇದೆ.

ದಾವಣಗೆರೆ ಜಿಲ್ಲೆಯಲ್ಲಿ ಮಳೆಯ ಪ್ರಮಾಣ ತಗ್ಗಿದೆ. ತುಂಗಭದ್ರಾ ನದಿಯ ಪ್ರವಾಹದಿಂದಾಗಿ ಜಿಲ್ಲೆಗೆ ಸಂಪರ್ಕ ಕಲ್ಪಿಸುವ ಉಕ್ಕಡಗಾತ್ರಿ- ತುಮ್ಮಿನಕಟ್ಟೆ, ಉಕ್ಕಡಗಾತ್ರಿ- ಫತ್ಯಾಪುರ ನಂದಿಗುಡಿ ರಸ್ತೆ ಮೇಲೆ ನೀರು ಹರಿಯುತ್ತಿದ್ದು, ಸೇತುವೆ ಮುಳಗಡೆಯಾಗಿದೆ.

ದೇವರಬೆಳಕೆರೆ ಪಿಕ್‌ಪ್ ಡ್ಯಾಂನಲ್ಲಿ ಮೀನು ಹಿಡಿಯಲು ಹೋದ ಯುವಕ ಕೊಚ್ಚಿಕೊಂಡು ಹೋಗತ್ತಿದ್ದಾಗ ದಂಡೆಯ ಮೇಲಿದ್ದ ಕೆಲವು ಯುವಕರು ಹಗ್ಗವನ್ನು ಬಿಟ್ಟು ರಕ್ಷಿಸಿದ್ದಾರೆ.

ತೀರ್ಥಹಳ್ಳಿ ತಾಲ್ಲೂಕು ನೆರಟೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯ ಅಂಬಳಿಕೆ ಬಳಿಯ ಹುಲಿಗುಡ್ಡ ಜರಿದಿರುವುದು

ಗರಿಷ್ಠ ಮಳೆ (ಸೆ.ಮೀಗಳಲ್ಲಿ)

ಹೊಸನಗರ	40.1
ಸಾವೆಹಕ್ಲುವಿ	30.8
ತೀರ್ಥಹಳ್ಳಿ	38.8
ಮಾಸ್ತಿಕಟ್ಟೆ	21.7
ಗುಂಜಿ	28.50
ಲೋಂಡಾ ರೈಲು ನಿಲ್ದಾಣ	25.20
ಜಾಂಬೋಟಿ	20.30
ಕಣಕುಂಬಿ	17.20
ರಾಕಸಕೊಪ್ಪ	15.01
ನಾಗರಗಾಳಿ	15.60
ಸದಲಗಾ	13.60
ಸಂತಿಬಸ್ತವಾಡ	12.50
ಚಿಕ್ಕೋಡಿ	12.00
ಬುಗಟ ಆಲೂರು	13.90
ಸಂಕೇಶ್ವರ ಎಆರ್‌ಎಸ್	13.70
ಶಾಂತಳ್ಳಿ	11
ಭಾಗಮಂಡಲ	10
ಕಡಬಿನಬೈಲ	24.9
ನಾವೂರು	11

ಕುಶಾಲನಗರ: ಪ್ರವಾಹದ ಭೀತಿ, ಹೆದ್ದಾರಿಯಲ್ಲಿ ಬಿರುಕು

ಪ್ರಜಾವಾಣಿ ವಾರ್ತೆ

ಮಡಿಕೇರಿ: ಕೊಡಗಿನಲ್ಲಿ ಸುರಿಯುತ್ತಿರುವ ನಿರಂತರ ಮಳೆಗೆ ಮಡಿಕೇರಿ – ಸೋಮವಾರಪೇಟೆ ರಾಜ್ಯ ಹೆದ್ದಾರಿಯ ಹಟ್ಟಿಹೊಳೆ ಎಂಬಲ್ಲಿ ರಸ್ತೆ ಬಿರುಕು ಬಿಟ್ಟಿದ್ದು, ಬೃಹತ್ ವಾಹನ ಸಂಚಾರ ನಿರ್ಬಂಧಿಸಲಾಗಿದೆ.

ಮಡಿಕೇರಿ –ಸಂಪಾಜೆ ನಡುವೆ ಹಾದು ಹೋಗಿರುವ ರಾಷ್ಟ್ರೀಯ ಹೆದ್ದಾರಿ 275ರ ಕಾಟಕೇರಿ ಬಳಿ ಮಣ್ಣು ಕುಸಿದು, ರಸ್ತೆಯಲ್ಲಿ ಬಿರುಕು ಕಾಣಿಸಿದೆ. ಹೆದ್ದಾರಿ ಕುಸಿಯುವ ಆತಂಕವಿದೆ.

ಹಾಸನ ಜಿಲ್ಲೆಯಲ್ಲಿ ಮಳೆಯ ಆರ್ಭಟ ತಗ್ಗಿದ್ದು, ಹಲವು ಕಡೆ ಮನೆಗಳು ಕುಸಿದಿವೆ. ಹೇಮಾವತಿ ನದಿ ತುಂಬಿ ಹರಿಯುತ್ತಿರುವುದರಿಂದ ಸಕಲೇಶಪುರ ಪಟ್ಟಣದ ಹೊಳೆಮಲ್ಲೇಶ್ವರ ದೇವಾಲಯದ ಮೆಟ್ಟಿಲು ಮುಳುಗಿದ್ದು, ಹೇಮಾವತಿ ಜಲಾಶಯದ ಒಳಹರಿವಿನಲ್ಲಿ ಭಾರಿ ಏರಿಕೆಯಾಗಿದೆ. ಭತ್ತ, ಅಡಿಕೆ, ಕಾಫಿ ತೋಟಗಳಲ್ಲಿ ನೀರು ನಿಂತು, ಬೆಳೆ ನಷ್ಟ ಭೀತಿ ಎದುರಾಗಿದೆ. ಆಲೂರು ತಾಲ್ಲೂಕಿನ ಮಡಬಲು ಗ್ರಾಮದಲ್ಲಿ ಶುಂಠಿ ಗದ್ದೆಗೆ ನೀರು ನುಗ್ಗಿದೆ.

ಮೈಸೂರು ಜಿಲ್ಲೆ ಎಚ್.ಡಿ.ಕೋಟೆ ತಾಲ್ಲೂಕಿನ ಕಬಿನಿ ಜಲಾಶಯದಿಂದ ಹೊರಹರಿವಿನ ಪ್ರಮಾಣ ಹೆಚ್ಚಾಗಿದ್ದು, ಕಪಿಲಾ ನದಿ ಮೈದುಂಬಿ ಹರಿಯುತ್ತಿದೆ. 30 ಸಾವಿರ ಕ್ಯುಸೆಕ್ ನೀರು ನದಿಗೆ ಬಿಡಲಾಗುತ್ತಿದೆ. ನಂಜನಗೂಡಿನಲ್ಲಿ ಪ್ರವಾಹ ಆತಂಕ ತಲೆದೋರಿದೆ. ಹದಿನಾರು ಕಾಲು ಮಂಟಪ ಮುಳುಗಡೆಯಾಗಿದೆ. ಶ್ರೀಕಂಠೇಶ್ವರ ದೇವಸ್ಥಾನದ ಸ್ನಾನಘಟ್ಟದ ಮೆಟ್ಟಿಲುಗಳವರೆಗೆ ನೀರು ಬಂದಿದ್ದು, ಪುಣ್ಯಸ್ನಾನ ನಿರ್ಬಂಧಿಸಲಾಗಿದೆ.

ಮಡಿಕೇರಿ – ಸೋಮವಾರಪೇಟೆ ರಾಜ್ಯ ಹೆದ್ದಾರಿಯ ಹಟ್ಟಿಹೊಳೆ ಎಂಬಲ್ಲಿ ರಸ್ತೆಯಲ್ಲಿ ಬಿರುಕು

ಏಳು ಜಿಲ್ಲೆಗಳಲ್ಲಿ ‘ಆರೆಂಜ್ ಅಲರ್ಟ್’

ಬೆಂಗಳೂರು: ರಾಜ್ಯದಲ್ಲಿ ಮುಂಗಾರು ಚುರುಕಾಗಿದ್ದು, ಉತ್ತರ ಕನ್ನಡ, ದಕ್ಷಿಣ ಕನ್ನಡ, ಉಡುಪಿ, ಶಿವಮೊಗ್ಗ, ಹಾಸನ, ಕೊಡಗು ಮತ್ತು ಚಿಕ್ಕಮಗಳೂರು ಜಿಲ್ಲೆಗಳಲ್ಲಿ ಜುಲೈ 25ರಂದು ವ್ಯಾಪಕ ಮಳೆಯಾಗುವ ಮುನ್ಸೂಚನೆ ಇರುವುದರಿಂದ ‘ಆರೆಂಜ್ ಅಲರ್ಟ್’ ಘೋಷಿಸಲಾಗಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಕರಾವಳಿ ಜಿಲ್ಲೆಗಳಲ್ಲಿ ಇದೇ 27ರವರೆಗೆ ಹೆಚ್ಚು ಮಳೆಯಾಗುವ ಸಾಧ್ಯತೆ ಇದೆ. ಉತ್ತರ ಒಳನಾಡಿನಲ್ಲೂ ಭಾರಿ ಮಳೆಯಾಗುವ ಸೂಚನೆ ಇದೆ.

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಲೋಕಾಯುಕ್ತ ವರದಿಗೆ ದಶಕ ಕ್ರಮ ಇನ್ನೂ ಬಾಕಿ...

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಬಳ್ಳಾರಿ, ಚಿತ್ರದುರ್ಗ ಮತ್ತು ತುಮಕೂರು ಜಿಲ್ಲೆಗಳಲ್ಲಿನ ಅಕ್ರಮ ಗಣಿಗಾರಿಕೆ ಕುರಿತು ತನಿಖೆ ನಡೆಸಿದ್ದ ಆಗಿನ ಲೋಕಾಯುಕ್ತ ನ್ಯಾಯಮೂರ್ತಿ ಎನ್. ಸಂತೋಷ್ ಹೆಗ್ಡೆ ಅವರು, ಸರ್ಕಾರಕ್ಕೆ ವರದಿ ಸಲ್ಲಿಸಿ ದಶಕ ಕಳೆಯಲು ಎರಡೇ ದಿನ ಬಾಕಿ ಉಳಿದಿದೆ. ಆದರೆ, ಈವರೆಗೂ ತಪ್ಪಿತಸ್ಥರ ವಿರುದ್ಧ ಕ್ರಮ ಕೈಗೊಳ್ಳುವ ಪ್ರಕ್ರಿಯೆ ಪೂರ್ಣಗೊಂಡಿಲ್ಲ.

ಆಗಿನ ಮುಖ್ಯಮಂತ್ರಿ ಎಚ್.ಡಿ. ಕುಮಾರಸ್ವಾಮಿ, ಬಳ್ಳಾರಿ ಜಿಲ್ಲೆಯ ಗಣಿ ಮಾಲೀಕರಿಂದ ₹ 150 ಕೋಟಿ ಲಂಚ ಪಡೆದಿದ್ದಾರೆ ಎಂದು ಆಗ ವಿಧಾನ ಪರಿಷತ್ ಸದಸ್ಯರಾಗಿದ್ದ ಗಣಿ ಉದ್ಯಮಿ ಜಿ. ಜನಾರ್ದನ ರೆಡ್ಡಿ 2006ರಲ್ಲಿ ಆರೋಪಿಸಿದ್ದರು. ಈ ಘಟನೆಯ ಬಳಿಕ, 2000– 2006ರವರೆಗೆ ಬಳ್ಳಾರಿಯಲ್ಲಿ ನಡೆದಿದ್ದ ಅಕ್ರಮ ಗಣಿಗಾರಿಕೆ ಹಾಗೂ ₹ 150 ಕೋಟಿ ಲಂಚದ ಆರೋಪ ಕುರಿತು ತನಿಖೆ ನಡೆಸಲು ನಿವೃತ್ತ ನ್ಯಾಯಮೂರ್ತಿ ಯು.ಎಲ್. ಭಟ್ ಆಯೋಗವನ್ನು ರಾಜ್ಯ ಸರ್ಕಾರ ನೇಮಿಸಿತ್ತು. ಆದರೆ, ವರ್ಷ ಕಳೆಯುವುದರೊಳಗೆ ಆಯೋಗವನ್ನು ರದ್ದು ಮಾಡಲಾಯಿತು.

ಬಳ್ಳಾರಿ ಜಿಲ್ಲೆಯಲ್ಲಿ ಗಣಿಗಾರಿಕೆಯ ನೋಟ

2000–2006ರ ನಡುವಿನ ಅವಧಿಯಲ್ಲಿ ನಡೆದ ಅಕ್ರಮ ಗಣಿಗಾರಿಕೆ ಕುರಿತು ತನಿಖೆ ನಡೆಸುವ ಜವಾಬ್ದಾರಿಯನ್ನು ಲೋಕಾಯುಕ್ತಕ್ಕೆ ವಹಿಸಿ 2007ರಲ್ಲಿ ಆದೇಶ ಹೊರಡಿಸಲಾಗಿತ್ತು. 2008ರಲ್ಲಿ ಲೋಕಾಯುಕ್ತರು ತಮ್ಮ ಮೊದಲ (ಮಧ್ಯಂತರ) ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದ್ದರು.

ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ನೇತೃತ್ವದ ಸರ್ಕಾರದ ಅವಧಿಯಲ್ಲಿ ಅಕ್ರಮ ಗಣಿಗಾರಿಕೆ ಮತ್ತಷ್ಟು ಹೆಚ್ಚಿದೆ ಎಂಬ ಆರೋಪಗಳು ಕೇಳಿಬಂದವು. ಆಗ ಸಚಿವರಾಗಿದ್ದ ಜಿ. ಜನಾರ್ದನ ರೆಡ್ಡಿ, ವಿಧಾನಸಭೆಯಲ್ಲೇ ಕಾಂಗ್ರೆಸ್ ಸದಸ್ಯರ ವಿರುದ್ಧ ತೋಳೇರಿಸಿದ್ದು ವಿವಾದದ ಕಿಡಿ ಹೊತ್ತಿಸಿತ್ತು. ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ನೇತೃತ್ವದಲ್ಲಿ ಕಾಂಗ್ರೆಸ್ ಬೆಂಗಳೂರಿನಿಂದ ಬಳ್ಳಾರಿಗೆ ಪಾದಯಾತ್ರೆ ಹಮ್ಮಿಕೊಂಡಿತ್ತು. ಈ ಬೆಳವಣಿಗೆಗಳಿಂದ ಒತ್ತಡಕ್ಕೆ ಸಿಲುಕಿದ್ದ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ, ಅಕ್ರಮ ಗಣಿಗಾರಿಕೆ ಕುರಿತ ಲೋಕಾಯುಕ್ತ ತನಿಖೆಯ ಅವಧಿಯನ್ನು 2010ರ ಜುಲೈವರೆಗೂ ವಿಸ್ತರಿಸಿ ಆದೇಶ ಹೊರಡಿಸಿದ್ದರು.

ಹತ್ತಾರು ಸಾವಿರ ಪುಟಗಳ ದಾಖಲೆಗಳೊಂದಿಗೆ, ಸಂತೋಷ್ ಹೆಗ್ಡೆ 2011ರ ಜುಲೈ 27ರಂದು ತಮ್ಮ ತನಿಖಾ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಿದ್ದರು. ವರದಿಯ ಪರಿಣಾಮವಾಗಿ ಬಿ.ಎಸ್. ಯಡಿಯೂರಪ್ಪ ಮುಖ್ಯಮಂತ್ರಿ ಗಾದಿ ಕಳೆದುಕೊಳ್ಳಬೇಕಾಯಿತು. ಲೋಕಾಯುಕ್ತ ವರದಿಯ ಶಿಫಾರಸುಗಳ ಜಾರಿಗೆ ಒತ್ತಾಯಿಸಿ ಸಮಾಜ ಪರಿವರ್ತನಾ ಸಮುದಾಯದ ಸಂಸ್ಥಾಪಕ ಎಸ್.ಆರ್. ಹಿರೇಮಠ ಅವರು ಸುಪ್ರೀಂಕೋರ್ಟ್ ಮೆಟ್ಟಿಲೇರಿದರು.

ಸುಪ್ರೀಂಕೋರ್ಟ್‌ನಲ್ಲಿ ಸುದೀರ್ಘ ವಿಚಾರಣೆ ನಡೆದು, ಕೇಂದ್ರ ಉನ್ನತಾಧಿಕಾರ ಸಮಿತಿಯ (ಸಿಇಸಿ) ವಿಚಾರಣೆಗೆ ಆದೇಶ ಹೊರಬಿತ್ತು. ನಂತರ ಸಿಬಿಐ ತನಿಖೆ ನಡೆದು ಜನಾರ್ದನ ರೆಡ್ಡಿ ಸೇರಿದಂತೆ ಹಲವರು ಜೈಲು ಸೇರಬೇಕಾಯಿತು.

ಅಧಿಕಾರಿಗಳ ವಿರುದ್ಧ ಕ್ರಮ ಬಾಕಿ: ಗಣಿ ಉದ್ಯಮಿಗಳಿಂದ ಲಂಚ ಪಡೆದ ಆರೋಪ 700 ಮಂದಿ ಸರ್ಕಾರಿ ಅಧಿಕಾರಿಗಳು, ನೌಕರರ ವಿರುದ್ಧ ಇತ್ತು. ಆಗಿನ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಕೆ. ಜೈರಾಜ್ ನೇತೃತ್ವದ ಸಮಿತಿ ಪರಿಶೀಲನೆ ನಡೆಸಿ 570 ಅಧಿಕಾರಿಗಳ ವಿರುದ್ಧ ಕ್ರಮಕ್ಕೆ ಶಿಫಾರಸು ಮಾಡಿತ್ತು. ಕೆಲವು ಅಧಿಕಾರಿಗಳ ವಿರುದ್ಧ ಲೋಕಾಯುಕ್ತದಲ್ಲಿ ಇಲಾಖಾ ವಿಚಾರಣೆ ಆರಂಭವಾಗುತ್ತಿದ್ದಂತೆ, ಆರೋಪಿತರು ಕರ್ನಾಟಕ ಆಡಳಿತ ನ್ಯಾಯಮಂಡಳಿಗೆ (ಕೆಎಟಿ) ಅರ್ಜಿ ಸಲ್ಲಿಸಿದ್ದರು. ಕೆಎಟಿ ಇಲಾಖಾ ವಿಚಾರಣೆಗೆ ತಡೆ ನೀಡಿತ್ತು. ಕಳೆದ ವಾರ ತಡೆಯನ್ನು ತೆರವುಗೊಳಿಸಿರುವ ಹೈಕೋರ್ಟ್, ತ್ವರಿತವಾಗಿ ಇಲಾಖಾ ವಿಚಾರಣೆ ಪೂರ್ಣಗೊಳಿಸುವಂತೆ ಲೋಕಾಯುಕ್ತಕ್ಕೆ ನಿರ್ದೇಶನ ನೀಡಿದೆ.

ಅದಿರು ರಫ್ತು ವಹಿವಾಟು ನಡೆಸುತ್ತಿದ್ದ ಸಂಸ್ಥೆಗಳಿಂದ ವಿದೇಶಿ ವಿನಿಮಯ ಕಾಯ್ದೆ ಉಲ್ಲಂಘನೆ ಸೇರಿದಂತೆ ಹಲವು ಆರೋಪಗಳ ಕುರಿತು ಕೇಂದ್ರೀಯ ತನಿಖಾ ಸಂಸ್ಥೆಗಳಿಂದ ತನಿಖೆ ನಡೆಸಬೇಕೆಂಬ ಶಿಫಾರಸಿನ ಬಗ್ಗೆಯೂ ಪೂರ್ಣವಾಗಿ ಕ್ರಮ ಆಗಿಲ್ಲ.

ಹೊಸಪೇಟೆ, ಸಂಡೂರು ಹಾಗೂ ಹರಪನಹಳ್ಳಿಯಲ್ಲಿ ಅದಿರು ಗಣಿಗಾರಿಕೆಗೆ ಪರವಾನಗಿ ಪಡೆದವರ ವಿವರ

1. ಜೀನತ್ ಟ್ರಾನ್ಸ್‌ಪೋರ್ಟ್ ಕಂಪನಿ
2. ಮೈಸೂರು ಮಿನರಲ್ಸ್ ಲಿಮಿಟೆಡ್
3. ಸ್ಮಯೋರ್
4. ನದೀಮ್ ಮಿನರಲ್ಸ್
5. ವೀರಭದ್ರಪ್ಪ ಸಂಗಪ್ಪ ಅಂಡ್ ಕಂಪನಿ
6. ಎಂ. ಹನುಮಂತ ರಾವ್
7. ಬಿ. ಕುಮಾರಗೌಡ
8. ಪಿ. ಬಾಲಸುಬ್ಬಶೆಟ್ಟಿ ಅಂಡ್ ಸನ್
9. ಎನ್ಎಂಡಿಸಿ ಲಿಮಿಟೆಡ್
10. ರಾಮಗಡ ಮಿ.ಅಂಡ್ ಮೈ. ಪ್ರೈ.ಲಿ
11. ವಿ. ನಾರಾಯಣಕುಟ್ಟಿ ಮೆನನ್
12. ಗವಿಸಿದ್ದೇಶ್ವರ ಮಿನರಲ್ಸ್
12. ಚೌಗಲೆ ಅಂಡ್ ಕಂಪನಿ
13. ಲಕ್ಷ್ಮಿ ಮಿನರಲ್ಸ್
14. ಎಸ್.ಎ. ಥ್ವಾಬ್ ಅಂಡ್ ಕಂಪನಿ
15. ಎಚ್.ಜಿ. ರಂಗನಗೌಡ
16. ಕುಮಾರಸ್ವಾಮಿ ಮಿನರಲ್ಸ್ ಎಕ್ಸ್‌ಪೋರ್ಟ್
17. ಜಿ.ಜಿ. ಬ್ರದರ್ಸ್
18. ಎಚ್.ಆರ್. ಗವಿಯಪ್ಪ ಅಂಡ್ ಕಂ.
19. ಎಸ್.ವಿ. ಶ್ರೀನಿವಾಸುಲು
20. ಅಶ್ವತ್ಥನಾರಾಯಣ ಸಿಂಗ್ ಅಂಡ್ ಕಂ.
21. ಪಿ. ವೆಂಗಣ ಶೆಟ್ಟಿ ಅಂಡ್ ಬ್ರದರ್ಸ್
22. ಜೆಎಸ್‌ಡಬ್ಲ್ಯು ಸ್ಟೀಲ್ ಲಿಮಿಟೆಡ್
23. ಎಂಎಸ್‌ಪಿಎಲ್
24. ಆರ್‌ಬಿಎಸ್‌ಎಸ್‌ಎನ್ ದಾಸ್
25. ಎಚ್.ಎನ್. ಪ್ರೇಮಕುಮಾರ್
26. ಯರಿತಾತ ಮೈನಿಂಗ್ ಕಂಪನಿ

(ಮೂಲ: ಗಣಿ ಇಲಾಖೆ)

ರಾಜಕಾರಣಕ್ಕೆ ನಿಕಟ ನಂಟು

ಬೆಂಗಳೂರು: ರಾಜ್ಯದಲ್ಲಿ ಅಕ್ರಮ ಗಣಿಗಾರಿಕೆಗೂ, ರಾಜಕಾರಣಕ್ಕೂ ನಿಕಟ ನಂಟು. ಕಬ್ಬಿಣದ ಅದಿರಿನ ಅಕ್ರಮ ಗಣಿಗಾರಿಕೆ ಪ್ರಕರಣಗಳಲ್ಲಿ ಮಾಜಿ ಸಚಿವರಾದ ಜಿ. ಜನಾರ್ದನ ರೆಡ್ಡಿ, ಸಚಿವ ಆನಂದ್ ಸಿಂಗ್, ಶಾಸಕ ಬಿ. ನಾಗೇಂದ್ರ, ಮಾಜಿ ಶಾಸಕ ಸುರೇಶ್ ಬಾಬು ಸೇರಿದಂತೆ ಹಲವರು ಬಂಧನಕ್ಕೊಳಗಾಗಿದ್ದರು.

ಮಾಜಿ ಸಚಿವ ಸಂತೋಷ್ ಲಾಡ್, ಮಾಜಿ ಶಾಸಕ ಅನಿಲ್ ಲಾಡ್, ಬಳ್ಳಾರಿಯ ರೆಡ್ಡಿ ಸಹೋದರರು, ಸಚಿವ ವಿ. ಸೋಮಣ್ಣ ಕುಟುಂಬ ಸೇರಿದಂತೆ ಮಾಜಿ ಸಚಿವರು, ಶಾಸಕರು ಸೇರಿದಂತೆ ಹಲವು ರಾಜಕಾರಣಿಗಳ ವಿರುದ್ಧ ಅಕ್ರಮ ಗಣಿಗಾರಿಕೆ ಆರೋಪದ ಪ್ರಕರಣಗಳಿವೆ.

ಕಲ್ಲು ಗಣಿಗಾರಿಕೆಯಲ್ಲೂ ರಾಜಕಾರಣಿಗಳ ದೊಡ್ಡ ದಂಡೇ ಇದೆ. ಬೃಹತ್ ಪ್ರಮಾಣದಲ್ಲಿ ಕಲ್ಲು ಗಣಿಗಾರಿಕೆ ನಡೆಸಿರುವುದಕ್ಕಾಗಿಯೇ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರಿಗೆ 'ಕನಕಪುರದ ಬಂಡೆ' ಎಂಬ ಅಡ್ಡ ಹೆಸರು ಅಂಟಿಕೊಂಡಿದೆ. ಸಂಸದ ಡಿ.ಕೆ. ಸುರೇಶ್, ಮಾಲೂರು ಶಾಸಕ ಕೆ.ವೈ. ನಂಜೇಗೌಡ ವಿರುದ್ಧವೂ ಅಕ್ರಮ ಕಲ್ಲು ಗಣಿಗಾರಿಕೆ ನಡೆಸಿದ ಆರೋಪಗಳಿವೆ.

ಮಾಜಿ ಪ್ರಧಾನಿ ಕುಟುಂಬದ ಬೆಂಬಲ!

ಮೇಲುಕೋಟೆ ವನ್ಯಜೀವಿ ವಲಯದಲ್ಲಿ ಜೆಡಿಎಸ್‌ನ ಮುಖಂಡ ಎಚ್.ಟಿ. ಮಂಜು ನಡೆಸುತ್ತಿರುವ ಕ್ರಷರ್ ಸ್ಥಗಿತಗೊಳಿಸಲು ಮಂಡ್ಯ ಜಿಲ್ಲಾಡಳಿತ ಕಳೆದ ವರ್ಷ ಆದೇಶ ಹೊರಡಿಸಿತ್ತು. ಅದನ್ನು ವಿರೋಧಿಸಿ, ಮುಖ್ಯಮಂತ್ರಿ ಮನೆ ಎದುರು ಧರಣಿ ನಡೆಸಲು ಮಾಜಿ ಪ್ರಧಾನಿ ಎಚ್.ಡಿ.ದೇವೇಗೌಡ ಮುಂದಾಗಿದ್ದರು.

ಈಗ ಬೇಬಿಬೆಟ್ಟದಲ್ಲಿ ನಡೆಯುತ್ತಿರುವ ಅಕ್ರಮ ಗಣಿಗಾರಿಕೆ ನಿಯಂತ್ರಣಕ್ಕೆ ಸಂಸದೆ ಸುಮಲತಾ ಅಂಬರೀಷ್ ಆಗ್ರಹಿಸುತ್ತಿದ್ದಾರೆ. ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕರೂ ಆಗಿರುವ ಎಚ್.ಡಿ. ಕುಮಾರಸ್ವಾಮಿ ಅವರು ಕಲ್ಲು ಗಣಿಗಾರಿಕೆ ನಡೆಸುತ್ತಿರುವವರ ಬೆಂಬಲಕ್ಕೆ ನಿಂತಿರುವುದು ಚರ್ಚೆಗೆ ಎಡೆಮಾಡಿದೆ.

'ಸಕ್ರಮ'ದ ಹೆಸರಲ್ಲಿ 'ಅಕ್ರಮ'

ಒಂದನೇ ಪುಟದಿಂದ...

ಜತೆಯಲ್ಲೇ ಕಲ್ಲು ಗಣಿಗಾರಿಕೆಯಲ್ಲಿನ ಹತ್ತಾರು ಬಗೆಯ ಅಕ್ರಮಗಳೂ ಸರಣಿಯೋಪಾದಿಯಲ್ಲಿ ಹೊರ ಬರಲಾರಂಭಿಸಿವೆ.

ಮೇಲುಸ್ತುವಾರಿಯ ಮೂಗುದಾರ: ಸುಪ್ರೀಂಕೋರ್ಟ್ ಮಧ್ಯಪ್ರವೇಶದಿಂದ ರಾಜ್ಯದಲ್ಲಿ ಕಬ್ಬಿಣದ ಅದಿರು ಗಣಿಗಾರಿಕೆ 2010ರಿಂದ ಸಂಪೂರ್ಣ ನಿಷೇಧವಾಗಿತ್ತು. ಹತ್ತು ವರ್ಷಗಳ ಬಿಡುವಿನ ನಂತರ ಬಳ್ಳಾರಿ, ವಿಜಯನಗರ, ಚಿತ್ರದುರ್ಗ ಮತ್ತು ತುಮಕೂರು ಜಿಲ್ಲೆಗಳ 'ಎ' ಮತ್ತು 'ಬಿ' ದರ್ಜೆಯ ಗಣಿಗಳಲ್ಲಿ ಬಹುತೇಕ ಪೂರ್ಣ ಪ್ರಮಾಣದಲ್ಲಿ ಗಣಿಗಾರಿಕೆ ಆರಂಭವಾಗಿದೆ.

ಸುಪ್ರೀಂಕೋರ್ಟ್ ವಾರ್ಷಿಕ 3.5 ಕೋಟಿ ಟನ್ ಮಿತಿ ವಿಧಿಸಿರುವುದರಿಂದ ನಿಯಂತ್ರಿತವಾಗಿ ಗಣಿಗಾರಿಕೆ ನಡೆಯುತ್ತಿದೆ. ಸುಪ್ರೀಂಕೋರ್ಟ್ ನೇಮಿಸಿರುವ ಮೇಲುಸ್ತುವಾರಿ ಸಮಿತಿಯ ಕಣ್ಗಾವಲಿನಲ್ಲೇ ಗಣಿಗಾರಿಕೆ ನಡೆಯುತ್ತಿದ್ದು, ಅದಿರನ್ನು ಇ–ಹರಾಜಿನ ಮೂಲಕ ಮಾರಾಟ ಮಾಡುವ ಕೆಲಸವನ್ನೂ ಸಮಿತಿಯೇ ನಿರ್ವಹಿಸುತ್ತಿದೆ. ಸರ್ಕಾರಕ್ಕೆ ದೊರೆಯಬೇಕಾದ ರಾಜಧನ, ತೆರಿಗೆ, ಮೇಲುಸುಂಕವನ್ನು ಆರಂಭದಲ್ಲೇ ಕಡಿತ ಮಾಡಿಕೊಳ್ಳುತ್ತಿರುವುದರಿಂದ ಅಕ್ರಮಗಳಿಗೆ ಬಹುತೇಕ ಕಡಿವಾಣ ಬಿದ್ದಿದೆ.

ಕಲ್ಲು ಗಣಿಯಿಂದ ಕಂಪನ: ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಅಧಿಕೃತ ಮಾಹಿತಿ ಪ್ರಕಾರ ರಾಜ್ಯದಲ್ಲಿ 2,353.06 ಎಕರೆ ವಿಸ್ತೀರ್ಣದ 517 ಗ್ರಾನೈಟ್ ಮತ್ತು ಅಲಂಕಾರಿಕ ಶಿಲೆಗಳ ಗಣಿ ಗುತ್ತಿಗೆಗಳನ್ನು ನೀಡಲಾಗಿದೆ. 10,567 ಎಕರೆ ಮತ್ತು 31 ಗುಂಟೆ ವಿಸ್ತೀರ್ಣದಲ್ಲಿ ಕಟ್ಟಡ ಕಲ್ಲು, ಕೆಂಪು ಕಲ್ಲು ಗಣಿಗಾರಿಕೆಗೆ 2,493 ಗುತ್ತಿಗೆಗಳನ್ನು ನೀಡಲಾಗಿದೆ.

ಕಲ್ಲು ಗಣಿಗಾರಿಕೆ ನಡೆಯುತ್ತಿರುವ ಪ್ರದೇಶಗಳ ನೈಜ ವಿಸ್ತೀರ್ಣಕ್ಕೂ, ಗುತ್ತಿಗೆ ಪ್ರದೇಶಗಳಿಗೂ ಅಜಗಜಾಂತರವಿದೆ. ಕೆಲವರು ಗುತ್ತಿಗೆಯ ಹಲವು ಪಟ್ಟು ಪ್ರದೇಶಗಳಲ್ಲಿ ಸ್ಫೋಟಕ ಸಿಡಿಸಿ ಅಕ್ರಮ ಗಣಿಗಾರಿಕೆ ನಡೆಸುತ್ತಿದ್ದರೆ, ಕಲ್ಲುಪುಡಿ ಘಟಕಗಳ (ಕ್ರಷರ್) ಜತೆ ನಂಟು ಹೊಂದಿರುವ ಹಲವರು ಗುತ್ತಿಗೆ ಇಲ್ಲದೆ ರಾತ್ರೋರಾತ್ರಿ ಬೆಟ್ಟ, ಗುಡ್ಡಗಳನ್ನು ಕರಗಿಸುತ್ತಿದ್ದಾರೆ. 2019–20ರ ಮತ್ತು 2020–21ರ ಅವಧಿಯಲ್ಲೇ ಅಕ್ರಮ ಕಲ್ಲು ಗಣಿಗಾರಿಕೆ, ಸಾಗಣೆ ಮತ್ತು ದಾಸ್ತಾನು ಆರೋಪದ ಮೇಲೆ 3,935 ಪ್ರಕರಣಗಳನ್ನು ಪತ್ತೆಮಾಡಿ, ₹ 28.20 ಕೋಟಿ ದಂಡ ವಿಧಿಸಲಾಗಿದೆ.

ಕಲ್ಲು ಗಣಿಗಳಿಗೂ, ರಾಜಕಾರಣಕ್ಕೂ ನಿಕಟ ನಂಟಿದೆ. ಸಚಿವರು, ಶಾಸಕರು, ಸಂಸದರು, ಮಾಜಿ ಸಚಿವರಿಂದ ಗ್ರಾಮ ಪಂಚಾಯಿತಿ ಸದಸ್ಯರವರೆಗೂ ರಾಜಕಾರಣಿಗಳು ದಿಢೀರ್ ಶ್ರೀಮಂತರಾಗಲು ಮತ್ತು ರಾಜಕಾರಣದ ಅಗತ್ಯಕ್ಕೆ ತಕ್ಕಂತೆ 'ಆದಾಯ'ದ ಮೂಲ ಸೃಷ್ಟಿಸಿಕೊಳ್ಳಲು ಕಲ್ಲು ಗಣಿಗಾರಿಕೆಯ ಹಿಂದೆ ಬಿದ್ದಿದ್ದಾರೆ. ಎಲ್ಲ ಹಂತದ ರಾಜಕಾರಣಿಗಳೂ 'ಅಕ್ರಮ ಗಲ್ಲು ಗಣಿ ಮಾಫಿಯಾ' ಪರವಾಗಿ ಧ್ವನಿ ಎತ್ತುತ್ತಿರುವುದು ಈ ಜಾಲದ ಹಿಂದೆ ಬಲವಾದ ರಾಜಕೀಯ ಹಿತಾಸಕ್ತಿಗಳಿರುವುದನ್ನು ಖಾತರಿಪಡಿಸುವಂತಿದೆ.

ಮಂಡ್ಯ, ಮೈಸೂರು, ಚಾಮರಾಜನಗರ, ರಾಮನಗರ, ಬೆಂಗಳೂರು ಗ್ರಾಮಾಂತರ, ಚಿಕ್ಕಬಳ್ಳಾಪುರ, ತುಮಕೂರು, ಶಿವಮೊಗ್ಗ, ಬಳ್ಳಾರಿ, ಚಿಕ್ಕಮಗಳೂರು, ದಾವಣಗೆರೆ ಸೇರಿದಂತೆ ಹಲವು ಜಿಲ್ಲೆಗಳಲ್ಲಿ ಭಾರಿ ಪ್ರಮಾಣದ ಕಲ್ಲು ಗಣಿಗಾರಿಕೆ ನಡೆಯುತ್ತಿದೆ. ಅಕ್ರಮ ಗಣಿಗಾರಿಕೆ ನಿಯಂತ್ರಣದ ಅಧಿಕಾರ ಗಣಿ ಮತ್ತು ಭೂ ವಿಜ್ಞಾನ, ಕಂದಾಯ, ಪೊಲೀಸ್, ಅರಣ್ಯ–ಹೀಗೆ ನಾನಾ ಇಲಾಖೆಗಳ ನಡುವೆ ಹರಿದು ಹಂಚಿ ಹೋಗಿರುವುದು ಬೆಟ್ಟ, ಗುಡ್ಡಗಳನ್ನು ಸ್ಫೋಟಿಸಿ ತಿಜೋರಿ ತುಂಬಿಸಿಕೊಳ್ಳುತ್ತಿರುವವರ ಪಾಲಿಗೆ ವರದಾನವಾಗಿದೆ.

ನಿಯಂತ್ರಣದ ಅನುಪಸ್ಥಿತಿ: 'ಕಬ್ಬಿಣದ ಅದಿರು ಗಣಿಗಳಲ್ಲಿ 2010ಕ್ಕೂ ಮೊದಲು ಇದ್ದ ಸ್ಥಿತಿಯೇ ಕಲ್ಲು ಗಣಿಗಾರಿಕೆಯಲ್ಲಿ ಈಗ ಕಂಡುಬರುತ್ತಿದೆ. ಸುಪ್ರೀಂಕೋರ್ಟ್ ನೇಮಿಸಿದ್ದ ಮೇಲುಸ್ತುವಾರಿ ಸಮಿತಿಯ ಕಣ್ಗಾವಲಿನಲ್ಲಿ ಕಬ್ಬಿಣದ ಅದಿರು ಗಣಿಗಾರಿಕೆ ಆರಂಭವಾದ ಬಳಿಕ ಬಹುತೇಕ ಅಕ್ರಮಗಳಿಗೆ ಕಡಿವಾಣ ಬಿದ್ದಿದೆ. ಕಲ್ಲು ಗಣಿಗಾರಿಕೆ ನಿಯಂತ್ರಣಕ್ಕೂ ಅಂತಹ ವ್ಯವಸ್ಥೆ ಬಂದರೆ ಮಾತ್ರ ಪರಿಸ್ಥಿತಿ ಸುಧಾರಿಸಬಹುದು' ಎನ್ನುತ್ತಾರೆ ಅಕ್ರಮ ಗಣಿಗಾರಿಕೆ ಕುರಿತ ಲೋಕಾಯುಕ್ತ ತನಿಖಾ ತಂಡ ಮುಖ್ಯಸ್ಥರಾಗಿದ್ದ ನಿವೃತ್ತ ಐಎಫ್‌ಎಸ್ ಅಧಿಕಾರಿ ಡಾ.ಯು.ವಿ. ಸಿಂಗ್.

ಮರಳು ನಿಕ್ಷೇಪಗಳಲ್ಲೂ ಅಕ್ರಮವೇ ಹೆಚ್ಚು

ಮರಳು ಗಣಿಗಾರಿಕೆಯಲ್ಲೂ ಸಕ್ರಮಕ್ಕಿಂತ ಅಕ್ರಮವೇ ಹೆಚ್ಚು ಎಂಬ ವಾತಾವರಣ ರಾಜ್ಯದಲ್ಲಿ ನಿರ್ಮಾಣವಾಗಿದೆ. ರಾಜಕೀಯ ವ್ಯಕ್ತಿಗಳು, ಅಪರಾಧ ಹಿನ್ನೆಲೆಯವರೇ ಹೆಚ್ಚಾಗಿ ಮರಳು ನಿಕ್ಷೇಪಗಳ ಮೇಲೆ ಹಿಡಿತ ಸಾಧಿಸಿದ್ದಾರೆ. ಮರಳು ಗಣಿಗಾರಿಕೆಯಲ್ಲಿ ವ್ಯಾಪಕ ಅಕ್ರಮ ನಡೆಯುತ್ತಿರುವುದರಿಂದ ರಾಜ್ಯದ ಬಹುತೇಕ ಕಡೆಗಳಲ್ಲಿ ಜಲ ಮೂಲಗಳು ಅಪಾಯಕ್ಕೆ ಸಿಲುಕಿವೆ.

ಗಣಿ ಮತ್ತು ಭೂ ವಿಜ್ಞಾನ ಇಲಾಖೆಯ ಅಂಕಿಅಂಶಗಳ ಪ್ರಕಾರ, ರಾಜ್ಯದ 21 ಜಿಲ್ಲೆಗಳಲ್ಲಿ 4,733 ಎಕರೆ 49 ಗುಂಟೆ ವಿಸ್ತೀರ್ಣದಲ್ಲಿ ನದಿ ಪಾತ್ರ ಹಾಗೂ ಪಟ್ಟಾ ಜಮೀನಿನಲ್ಲಿ ಮರಳಿನ ನಿಕ್ಷೇಪಗಳಿವೆ. ಅಲ್ಲಿ ಅಂದಾಜು, 1.49 ಕೋಟಿ ಟನ್‌ಗಳಷ್ಟು ಮರಳಿನ ಲಭ್ಯತೆ ಇದೆ.

ಆದರೆ, ಇಲಾಖೆಯ ಅಂದಾಜು ಕೇವಲ ಕಡತಗಳಿಗಷ್ಟೇ ಎಂಬ ಸ್ಥಿತಿ ಇದೆ. ಪರವಾನಗಿ ನೀಡಿದ ವಿಸ್ತೀರ್ಣದ ಹತ್ತಾರು ಪಟ್ಟು ಹೆಚ್ಚುವರಿ ವಿಸ್ತೀರ್ಣದಲ್ಲಿ ಅಕ್ರಮವಾಗಿ ಮರಳು ತೆಗೆದು ಸಾಗಿಸಲಾಗುತ್ತಿದೆ.

ಮರಳಿನ ಅಕ್ರಮ ಗಣಿಗಾರಿಕೆ, ಸಾಗಣೆ ಮತ್ತು ದಾಸ್ತಾನು ಆರೋಪದಡಿ 2019–20 ಹಾಗೂ 2020–21ರಲ್ಲಿ 3,946 ಪ್ರಕರಣಗಳನ್ನು ಪತ್ತೆಮಾಡಿದ್ದು, ₹ 5.75 ಕೋಟಿ ದಂಡ ವಿಧಿಸಲಾಗಿದೆ ಎನ್ನುತ್ತಾರೆ ಅಧಿಕಾರಿಗಳು.

ಶಿವಮೊಗ್ಗ ಸಮೀಪದ ಹುಣಸೋಡಿನ ಕ್ರಷರ್ ಸಾಂದರ್ಭಿಕ ಚಿತ್ರ

ದೂಳು ತಿನ್ನುತ್ತಿದೆ ಪಾಟೀಲರ ವರದಿ!

ಒಂದನೇ ಪುಟದಿಂದ...

ಸರ್ಕಾರದ ಅಧಿಕಾರ ಅವಧಿಯ ಕೊನೆಯ ಹಂತದಲ್ಲಿ (2017ರ ನ. 3 ಮತ್ತು 4) ಅಂತಿಮ ಸಭೆ ನಡೆಸಿದ್ದ ಸಮಿತಿ, ಅಕ್ರಮ ಗಣಿಗಾರಿಕೆ ಮಾಡಿರುವವರಿಂದ ನಷ್ಟ ವಸೂಲಿಗೆ ಸ್ಥಿರಾಸ್ತಿಗಳನ್ನು ಜಪ್ತಿ ಮಾಡಬೇಕು, ಸಿಬಿಐ ಪ್ರಾಥಮಿಕ ತನಿಖೆ ನಡೆಸಿ ಕ್ರಿಮಿನಲ್ ಮೊಕದ್ದಮೆ ಸಾಧ್ಯವಾಗದೆ ಕೈ ಚೆಲ್ಲಿರುವ ಪ್ರಕರಣಗಳನ್ನು ಲೋಕಾಯುಕ್ತ ವಿಶೇಷ ತನಿಖಾ ದಳಕ್ಕೆ (ಎಸ್‌ಐಟಿ) ವಹಿಸಬೇಕು ಎಂದು ಸಚಿವ ಸಂಪುಟ ಸಭೆಗೆ ವರದಿ ಮಂಡಿಸಿತ್ತು. ಶಿಫಾರಸುಗಳನ್ನು ಯಥಾವತ್ ಜಾರಿಗೆ ತರುವ ಜೊತೆಗೆ ಎಸ್‌ಐಟಿಗೆ ಅಂತರರಾಜ್ಯ ಪ್ರಕರಣಗಳ ತನಿಖೆಗೆ ಅಗತ್ಯವಾದ ಕಾನೂನು ಬಲ ನೀಡುವ ಪ್ರಸ್ತಾಪಕ್ಕೂ ಅಂದು ಸಂಪುಟ ಒಪ್ಪಿಗೆ ನೀಡಿತ್ತು. ಆದರೆ, ನಂತರ ಯಾವುದೇ ಕ್ರಮಕ್ಕೆ ಮುಂದಾಗಲಿಲ್ಲ. ಬಳಿಕ ಅಧಿಕಾರಕ್ಕೆ ಬಂದ ಜೆಡಿಎಸ್–ಕಾಂಗ್ರೆಸ್ ಸಮ್ಮಿಶ್ರ ಸರ್ಕಾರ, ಯಡಿಯೂರಪ್ಪ ಸರ್ಕಾರ ಈ ಹಗರಣವನ್ನು ಮರೆತವು.

ಸಂಪುಟ ಉಪ ಸಮಿತಿ ಎದುರು ಹಾಜರಾಗಿದ್ದ ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಅಧಿಕಾರಿಗಳು, ಇಲಾಖೆಯ ನಿರ್ದೇಶಕರನ್ನು ಪದೇಪದೇ ವರ್ಗಾವಣೆ ಮಾಡಿದ್ದರಿಂದ ಆಸ್ತಿ ಮುಟ್ಟುಗೋಲು ಹಾಗೂ ದಂಡ ವಸೂಲಿಗೆ ಕ್ರಮ ತೆಗೆದುಕೊಳ್ಳಲು ವಿಳಂಬವಾಗಿದೆ ಎಂದಿದ್ದರು. ನಷ್ಟ ವಸೂಲಿ ಸಂಬಂಧ ಗಣಿ ಮತ್ತು ಭೂ ವಿಜ್ಞಾನ ಇಲಾಖೆ 17 ಗಣಿ ಗುತ್ತಿಗೆದಾರರಿಗೆ ನೋಟಿಸ್ ನೀಡಿತ್ತು. ಆದರೆ, 2017ರ ಜೂನ್ 6ರಂದು ಲೋಕಾಯುಕ್ತ ಎಸ್‌ಐಟಿ ಮುಖ್ಯಸ್ಥರು ಗಣಿ ಇಲಾಖೆಗೆ ಪತ್ರ ಬರೆದು ನೋಟಿಸ್ ನೀಡದಂತೆ ಸೂಚಿಸಿದ್ದು ಪಾಟೀಲರ ವರದಿಯಲ್ಲಿದೆ. 2014ರ ಜನವರಿಯಲ್ಲಿ ಎರಡು ವರ್ಷಗಳ ಅವಧಿಗೆ ಎಸ್‌ಐಟಿ ರಚಿಸಲಾಗಿತ್ತು. ಬಳಿಕ ಪ್ರತಿ ವರ್ಷ ಅವಧಿ ವಿಸ್ತರಿಸಲಾಗುತ್ತಿದೆ. 2022 ಜನವರಿಗೆ ಎಸ್‌ಐಟಿ ಅವಧಿ ಮುಗಿಯಲಿದ್ದು, ಅಷ್ಟರೊಳಗೆ ಎಲ್ಲ ಪ್ರಕರಣಗಳ ವಿಚಾರಣೆ ಪೂರ್ಣಗೊಳ್ಳುವುದು ಅನುಮಾನ. ಮತ್ತೆ ಅವಧಿ ವಿಸ್ತರಣೆ ಖಚಿತ ಎನ್ನುತ್ತವೆ ಎಸ್‌ಐಟಿ ಮೂಲಗಳು.

ಪಾಟೀಲರ ವರದಿಯಲ್ಲಿ ಏನಿದೆ?: ರಾಜ್ಯದ ಹತ್ತು ಬಂದರು ಹಾಗೂ ಗೋವಾ, ತಮಿಳುನಾಡು ಮತ್ತು ಆಂಧ್ರಪ್ರದೇಶದ ವಿವಿಧ ಬಂದರುಗಳಿಂದ ರಫ್ತಾದ ಕಬ್ಬಿಣದ ಅದಿರು ಮತ್ತು ಸುಂಕ ಇಲಾಖೆಯ ಮಾಹಿತಿ ಆಧರಿಸಿ 2.98 ಕೋಟಿ ಟನ್‌ಗಳಷ್ಟು ಅಕ್ರಮ ಅದಿರು ರಫ್ತಾಗಿದೆ ಎಂದು ಲೋಕಾಯುಕ್ತ ವರದಿಯಲ್ಲಿದೆ.

ಆದರೆ, ಬಳ್ಳಾರಿಯಿಂದ ಹೊರಗಡೆ 6 ರೈಲು ನಿಲ್ದಾಣಗಳಿಂದ ಮತ್ತು 14 ರೈಲ್ವೆ ಸೈಡಿಂಗ್‌ಗಳಿಂದ 2006ರಿಂದ 2010ರ ಅವಧಿಯಲ್ಲಿ 20 ಕೋಟಿ ಟನ್‌ಗಳಷ್ಟು ಅದಿರು ಸಾಗಿಸಲಾಗಿದೆ ಎಂದು ರೈಲ್ವೆ ಇಲಾಖೆಯ ದಾಖಲೆಗಳಲ್ಲಿದೆ. 2009ರ ಸೆಪ್ಟೆಂಬರ್‌ನಿಂದ 2010ರ ಜೂನ್ ಅವಧಿಯಲ್ಲಿ 14 ಕೋಟಿ ಟನ್‌ಗಳಷ್ಟು ಅದಿರು ದಿನವೂ 20 ಸಾವಿರ ಟ್ರಕ್‌ಗಳಲ್ಲಿ ಸಾಗಣೆಯಾಗಿದೆ. ರೈಲ್ವೆಯ ವ್ಯಾಗನ್, ಟ್ರಕ್‌ಗಳ ಹಾಗೂ ಅಧಿಕಾರಸ್ಥ ರಾಜಕಾರಣಿಗಳ ತೋಳ್ಬಲದ ಮೂಲಕ ಸಾಗಣೆಯಾಗಿದೆ ಎಂಬ ಅಂಶ ವರದಿಯಲ್ಲಿದೆ.

ಗಣಿಗಾರಿಕೆಗೆ ಪರವಾನಗಿ ಪಡೆದವರ ವಿವರ

ಬಳ್ಳಾರಿ: ಗಣಿ ಗುತ್ತಿಗೆ ಕಂಪನಿಗಳ ಪಟ್ಟಿ

ಹೆಸರು	ವಿಸ್ತೀರ್ಣ (ಹೆಕ್ಟೇರ್)	ಉತ್ಪಾದನೆ (ಎಂಎಂಟಿ)
ಸ್ಮಿಯೋರ್	1758.22	2.34
ಝೀನತ್ ಟ್ರಾನ್ಸ್‌ಪೋರ್ಟ್ ಕಂ	86.42	0.78
ಎಸ್.ಎ. ತವಾಬ್ ಅಂಡ್ ಕಂ	24.72	0.035
ಜೆಎಸ್‌ಡಬ್ಲ್ಯುಸ್ಟೀಲ್ ಲಿ.	335.54	5.355
ಎಂಎಸ್‌ಪಿಎಲ್	485.279	2.43
ಅಲ್ಲಂ ಪ್ರಶಾಂತ್	112.54	(ಎ ಕೆಟಗರಿ)
ಕುಮಾರಸ್ವಾಮಿ ಮಿನರಲ್ ಎಕ್ಸ್‌ಪೋರ್ಟ್ಸ್	60.56	1.48
ಪಿ.ಬಾಲಸುಬ್ಬಶೆಟ್ಟಿ ಅಂಡ್ ಸನ್ಸ್	44.11	0.83
ಬಿ.ಕುಮಾರಗೌಡ	54.25	1.26
ನದೀಂ ಮಿನರಲ್ಸ್	53.20	0.41
ಗವಿಸಿದ್ದೇಶ್ವರ ಮಿನರಲ್ಸ್	134.00	0.26
ಚೌಗಲೆ ಅಂಡ್ ಕಂ	100.00	0.38

ಬಾಗಲಕೋಟೆ

- ಡಿ.ಎಸ್.ಹೂಲಗೇರಿ, ರಾಯಚೂರು ಜಿಲ್ಲೆ ಲಿಂಗಸಗೂರು ಶಾಸಕ. ಅವರ ಕುಟುಂಬದ ಹೆಸರಲ್ಲಿ ಇಳಕಲ್ ತಾಲ್ಲೂಕಿನ ಬಲಕುಂದಿ, ಹಿರೇಕೊಡಗಲಿ ಬಳಿ ಗ್ರಾನೈಟ್ (ಕೆಂಪು ಕಲ್ಲು)ಗಣಿಗಾರಿಕೆ.
- ಹುನಗುಂದ ಶಾಸಕ ದೊಡ್ಡನಗೌಡ ಪಾಟೀಲ ಅವರ ಕುಟುಂಬದ ಹೆಸರಲ್ಲಿ ರಾಯಚೂರು ಜಿಲ್ಲೆ ಮುದಗಲ್ ಬಳಿ ಗ್ರಾನೈಟ್ ಗಣಿಗಾರಿಕೆ.
- ಇಳಕಲ್ ಬಳಿ ಹುನಗುಂದ ಮಾಜಿ ಶಾಸಕ ವಿಜಯಾನಂದ ಕಾಶಪ್ಪನವರ ಸಹೋದರ ದೇವಾನಂದ ಕಾಶಪ್ಪನವರ ಗ್ರಾನೈಟ್ ಗಣಿಗಾರಿಕೆ.
- ಮುಧೋಳ ತಾಲ್ಲೂಕಿನ ಲೋಕಾಪುರ ಬಳಿ ಮಾಜಿ ಶಾಸಕ ಬಿಜೆಪಿಯ ಪಿ.ಎಚ್.ಪೂಜಾರ ಸುಣ್ಣದಕಲ್ಲು ಗಣಿಗಾರಿಕೆ.
- ಲೋಕಾಪುರ ಬಳಿ ಡಿಸಿಸಿ ಬ್ಯಾಂಕ್ ಮಾಜಿ ಉಪಾಧ್ಯಕ್ಷ, ಕಾಂಗ್ರೆಸ್ ಮುಖಂಡ ಶಿವಾನಂದ ಉದಪುಡಿ ಕುಟುಂಬ ಸುಣ್ಣದಕಲ್ಲು ಗಣಿಗಾರಿಕೆ.
- ಲೋಕಾಪುರ ಬಳಿ ಕಾಂಗ್ರೆಸ್ ಮುಖಂಡರಾದ ಕಮಲೇಶ ಸಾರವಾಡ, ಸುರೇಶ ಹಿರೇಮಠ, ಗುರುರಾಜ ಉದಪುಡಿ, ಬಿಜೆಪಿ ಮುಖಂಡರಾದ ಎಂ.ಎಂ. ವಿರಕ್ತಮಠ, ಕಲ್ಲಪ್ಪ ಸಬರದ, ಸಿ.ಎ.ಪಾಟೀಲ ಕುಟುಂಬದವರ ಸುಣ್ಣದಕಲ್ಲು ಗಣಿಗಾರಿಕೆ.

ರಾಯಚೂರು

- **ಗ್ರಾನೈಟ್ ಗಣಿ:** ಯಮಕನಮರಡಿ ಶಾಸಕ ಸತೀಶ ಜಾರಕಿಹೊಳಿ (ಆನಂದ ಪಾಟೀಲ ಅವರಿಂದ ಲೀಸ್)
- ಲಿಂಗಸುಗೂರು ಶಾಸಕ ಡಿ.ಎಸ್. ಹೂಲಗೇರಿ (ಸಪ್ತಗಿರಿ ಗ್ರಾನೈಟ್, ಮುದಗಲ್)
- ಇಳಕಲ್ ಶಾಸಕ ದೊಡ್ಡನಗೌಡ ಪಾಟೀಲ (ಅಮರ ಗ್ರಾನೈಟ್ ಲೀಸ್ ಪಡೆದಿದ್ದಾರೆ)

ಕೊಪ್ಪಳ

- **ಕ್ರಷರ್ ಘಟಕ:** ಮಾಜಿ ಸಚಿವ ಬಸವರಾಜ ರಾಯರಡ್ಡಿ, ಸಹೋದರ ಶಿವಣ್ಣ ರಾಯರಡ್ಡಿ
- **ಗ್ರಾನೈಟ್:** ಶಾಸಕ ಹಾಲಪ್ಪ ಆಚಾರ್, ಅಳಿಯ ಬಸವರಾಜ ಗೌರಾ (ಕುಕನೂರ)
- **ಕಲ್ಲು, ಕಡಿ, ಗ್ರಾನೈಟ್:** ಶಾಸಕ ಕೆ. ರಾಘವೇಂದ್ರ ಹಿಟ್ನಾಳ, ಸಹೋದರ ರಾಜಶೇಖರ ಹಿಟ್ನಾಳ (ಕೆರೆಹಳ್ಳಿ)

ಕಲಬುರ್ಗಿ

- **ಶಹಾಬಾದ್ ಫರಸಿ ಕಲ್ಲು:** ವಿಧಾನಪರಿಷತ್ ಸದಸ್ಯ ಸುನೀಲ ವಲ್ಯಾಪುರ (ಹಲಕಟ್ಟಾ); ವಿನಯ ವಲ್ಯಾಪುರ, ಸುನೀಲ ವಲ್ಯಾಪುರ ಪುತ್ರ (ಕದ್ದರಗಿ)
- **ಕ್ವಾರಿ:** ಜಿ.ಪಂ. ಮಾಜಿ ಸದಸ್ಯ ರವಿರಾಜು ಕೊರವಿ (ವಿಧಾನಪರಿಷತ್ ಮಾಜಿ ಸದಸ್ಯ ತಿಪ್ಪಣ್ಣಪ್ಪ ಕಮಕನೂರ ಅಳಿಯ)

'ಗಣಿಗಾರಿಕೆಯ ಸುತ್ತ'

- ಶಿವಮೊಗ್ಗ ಜಿಲ್ಲೆಯಲ್ಲಿ 150ಕ್ಕೂ ಹೆಚ್ಚು ಕ್ವಾರಿಗಳು ಇವೆ. ಇವುಗಳಲ್ಲಿ ಅರ್ಧದಷ್ಟು ಮಾತ್ರ ಪರವಾನಗಿ ಪಡೆದಿವೆ.
- 55 ಕ್ವಾರಿಗಳ ಸಮೀಕ್ಷೆಯಲ್ಲಿ ಹಲವು ನಿಯಮ ಮೀರಿ ಕಾರ್ಯ ನಿರ್ವಹಣೆ
- ದಂಡ ವಿಧಿಸಿದರೂ ಜನಪ್ರತಿನಿಧಿಗಳ ಮೂಲಕ ಒತ್ತಡ ತಂದು ವಿನಾಯಿತಿ
- ಶಿವಮೊಗ್ಗ ಜಿಲ್ಲೆಯಲ್ಲಿ ದಂಡದ ಬಾಕಿ ಮೊತ್ತ ₹ 200 ಕೋಟಿ
- ಚಿತ್ರದುರ್ಗ ತಾಲ್ಲೂಕಿನ ಭೀಮಸಮುದ್ರ ಹೋಬಳಿ ವ್ಯಾಪ್ತಿಯಲ್ಲಿ ಗಣಿ ಚಟುವಟಿಕೆ ಸಕ್ರಿಯ
- ಅನಿಲ್ ಅಗರವಾಲ್ ಮಾಲೀಕತ್ವದ ವೇದಾಂತ ಸೇಸಾ ಗೋವಾ ಲಿಮಿಟೆಡ್, ಆರ್. ಪ್ರವೀಣ್ ಚಂದ್ರ ಮೈನ್ಸ್ ಹಾಗೂ ಜೆಎಸ್‌ಡಬ್ಲ್ಯು ಕಂಪನಿಗಳು ಜಿಲ್ಲೆಯಲ್ಲಿ ಗಣಿ ಗುತ್ತಿಗೆ ಪಡೆದಿವೆ.

ವಿಸ್ತೃತ ವರದಿಗಾಗಿ ಈ ಲಿಂಕ್ ನೋಡಿ

1. ತುಮಕೂರು/ಚಿಕ್ಕಬಳ್ಳಾಪುರ: ಗಣಿ ಪ್ರದೇಶದ ಪುನಶ್ಚೇತನ ಮರೀಚಿಕೆ
https://www.prajavani.net/karnataka-news/tumakuru-chikkaballapura-illegal-mining-recovery-mirage-in-the-mine-area-851299.html
2. 'ಚಿನಕುರಳಿ' ಚಪ್ಪಡಿಗೆ ಬಲು ಬೇಡಿಕೆ
https://www.prajavani.net/karnataka-news/demand-for-chinakurali-granite-in-mandya-mining-851308.html
3. ಅರ್ಧದಷ್ಟು ಅನಧಿಕೃತ: ಗಣಿಗಾರಿಕೆ ನಿರಂತರ
https://www.prajavani.net/karnataka-news/unauthorized-mining-in-shivamogga-851311.html

'ಲಾಭವೇ ಲೂಟಿಗೆ ಪ್ರೇರಣೆ'

2009–10ರ ಅವಧಿಯಲ್ಲಿ ಒಂದು ಟನ್ ಕಬ್ಬಿಣದ ಅದಿರಿಗೆ ₹ 6,000ದಿಂದ ₹ 7,000 ಬೆಲೆ ಇತ್ತು. ಆದರೆ, ಸರ್ಕಾರಕ್ಕೆ ಬರುತ್ತಿದ್ದ ರಾಜಧನ ಪ್ರತಿ ಟನ್‌ಗೆ ₹ 27 ಮಾತ್ರ! ಅಕ್ರಮ ಗಣಿಗಾರಿಕೆಯಿಂದ ಅದಿರು ತೆಗೆದರೆ ಅದೂ ಸಿಗುತ್ತಿರಲಿಲ್ಲ. ಕಲ್ಲು ಮತ್ತು ಮರಳು ಗಣಿಗಾರಿಕೆಯಲ್ಲೂ ಇದೇ ಸ್ಥಿತಿ ಇದೆ. ಅತಿಯಾದ ಲಾಭವೇ ಪ್ರಕೃತಿಯನ್ನು ಶೋಷಿಸಿ ಅಕ್ರಮ ಗಣಿಗಾರಿಕೆ ನಡೆಸುವಂತೆ ಪ್ರೇರೇಪಿಸುತ್ತಿದೆ.

ಅಕ್ರಮ ಗಣಿಗಾರಿಕೆ ತಡೆಯಲು ಕಾನೂನು ಮತ್ತು ವ್ಯವಸ್ಥೆಗಳಿವೆ. ಆದರೆ, ಗಣಿಗಾರಿಕೆ ನಿಯಂತ್ರಿಸಬೇಕಾದವರು ಮತ್ತು ಅದರಿಂದ ಲಾಭ ಪಡೆಯುತ್ತಿರುವರು ಕೈ ಜೋಡಿಸಿದ್ದಾರೆ. ರಾಜ್ಯ ಸರ್ಕಾರಕ್ಕೆ ಬರಬೇಕಾದ ಸಾವಿರಾರು ಕೋಟಿ ತೆರಿಗೆ ವಂಚನೆ ಆಗುತ್ತಿದೆ. ರಾಜಕಾರಣಿಗಳೇ ಹೆಚ್ಚಿನ ಸಂಖ್ಯೆಯಲ್ಲಿ ಭಾಗಿಯಾಗಿರುವುದರಿಂದ ಯಾರೂ ತುಟಿ ಬಿಚ್ಚುತ್ತಿಲ್ಲ. ಕಲ್ಲು ಮತ್ತು ಮರಳಿನ ಅಕ್ರಮ ಗಣಿಗಾರಿಕೆ ನಿಯಂತ್ರಿಸಲು ಕಬ್ಬಿಣದ ಅದಿರು ಗಣಿಗಾರಿಕೆಯಲ್ಲಿ ಜಾರಿಯಾದಂತಹ ಹೊಸ ವ್ಯವಸ್ಥೆ ಬರಬೇಕಿದೆ. ಅಕ್ರಮ ಗಣಿಗಾರಿಕೆ ವಿರುದ್ಧ ಜನರೇ ಧ್ವನಿ ಎತ್ತುವ ವಾತಾವರಣ ಸೃಷ್ಟಿಯಾಗಬೇಕು. ಆಗ ಅಕ್ರಮ ಗಣಿಗಾರಿಕೆಗೆ ಕಡಿವಾಣ ಹಾಕಲು ಸಾಧ್ಯ.

ಎನ್. ಸಂತೋಷ್ ಹೆಗ್ಡೆ
ಸುಪ್ರೀಂಕೋರ್ಟ್ ನಿವೃತ್ತ ನ್ಯಾಯಮೂರ್ತಿ ಹಾಗೂ ರಾಜ್ಯದ ನಿವೃತ್ತ ಲೋಕಾಯುಕ್ತ

'ರಕ್ಷಣೆಯೇ ಸಮಸ್ಯೆಯಾದರೆ...'

ಕೆಆರ್‌ಎಸ್ ಸಂರಕ್ಷಣೆ ಸರ್ಕಾರಕ್ಕೆ ಏಕೆ ಸಮಸ್ಯೆಯಾಗುತ್ತಿದೆ ಎಂಬುದು ಅರ್ಥವಾಗುತ್ತಿಲ್ಲ. ಅಣೆಕಟ್ಟೆಯಿಂದ 20 ಕಿ.ಮೀ. ವ್ಯಾಪ್ತಿಯಲ್ಲಿ ಗಣಿಗಾರಿಕೆ ನಡೆಸಬಾರದು ಎಂಬ ನಿಯಮ ಇದೆ. ಆದರೆ, ಅದನ್ನೇ ಬದಲಿಸಲು ಸರ್ಕಾರ ಚಿಂತಿಸುತ್ತಿರುವುದು ದುರಂತ. 1978ರಲ್ಲಿ ಸಂಡೂರಿನಲ್ಲಿ ಗಣಿಗಾರಿಕೆ ನಡೆಯುತ್ತಿದ್ದ ಸಂದರ್ಭದಲ್ಲಿ ಅಲ್ಲಿದ್ದ ಪಾರ್ವತಿ ಕುಮಾರೇಶ್ವರ ದೇಗುಲಕ್ಕೆ ಧಕ್ಕೆ ಆಗದಂತೆ 5 ಕಿ.ಮೀ. ದೂರದಲ್ಲಿ ಗಣಿಗಾರಿಕೆ ನಡೆಸಲು ಅಂದಿನ ಮುಖ್ಯಮಂತ್ರಿ ದೇವರಾಜ ಅರಸು ಸೂಚಿಸಿದ್ದರು. ಆದರೆ, ಸಿದ್ದರಾಮಯ್ಯ ಮುಖ್ಯಮಂತ್ರಿ ಆಗಿದ್ದಾಗ 1 ಕಿ.ಮೀ.ಗೆ ಇಳಿಸಿದ್ದು ದುರದೃಷ್ಟ.

ಎಸ್.ಆರ್.ಹಿರೇಮಠ, ಸಮಾಜ ಪರಿವರ್ತನ ಸಮುದಾಯದ ಸಂಸ್ಥಾಪಕ

'ಬೆಳೆ ಬೆಳೆಯುವುದು ಬಿಟ್ಟಿದ್ದೇವೆ'



ಲೋಕಾಪುರ ಸುತ್ತಲೂ ಗಣಿಯಿಂದ ಲೈಮ್‌ಸ್ಟೋನ್ (ಸುಣ್ಣದಕಲ್ಲು) ತೆಗೆಯಲು ಭಾರಿ ಪ್ರಮಾಣದಲ್ಲಿ ಸ್ಫೋಟಕಗಳನ್ನು ಉಪಯೋಗಿಸುತ್ತಾರೆ. ಸ್ಫೋಟದ ರಭಸಕ್ಕೆ ಕಲ್ಲುಗಳು ಸಿಡಿಯುತ್ತವೆ, ನಮ್ಮ ಜೀವಕ್ಕೂ ಅಪಾಯವಿದೆ. ಭೂಮಿ ಉಳುಮೆ ಮಾಡುವುದನ್ನೇ ನಿಲ್ಲಿಸಿದ್ದೇವೆ. ಬಹಳಷ್ಟು ನಷ್ಟ ಅನುಭವಿಸುತ್ತಿದ್ದೇವೆ. ದೂಳಿನಿಂದ ಉಸಿರಾಟಕ್ಕೂ ತೊಂದರೆ ಆಗಿದೆ.

ತಿಪ್ಪಣ್ಣ ರುದ್ರಪ್ಪ ಮುದ್ದಾಪುರ
ವೆಂಕಟಾಪುರ, ಮುಧೋಳ ತಾಲ್ಲೂಕು, ಬಾಗಲಕೋಟೆ ಜಿಲ್ಲೆ

ಅಕ್ರಮಕ್ಕೆ ತಡೆ; ಅಭಿವೃದ್ಧಿ ನಗಣ್ಯ

• ಶಶಿಕಾಂತ ಎಸ್. ಶೆಂಬೆಳ್ಳಿ

ಹೊಸಪೇಟೆ (ವಿಜಯನಗರ): ಅವಿಭಜಿತ ಬಳ್ಳಾರಿ ಜಿಲ್ಲೆಯಲ್ಲಿ ಅಕ್ರಮ ಗಣಿಗಾರಿಕೆಗೆ ತಡೆ ಬಿದ್ದು ದಶಕವೇ ಕಳೆದಿದೆ. ಆದರೆ, ಪರಿಸರ, ಜನಜೀವನದ ಮೇಲೆ ಬೀರಿದ ವ್ಯತಿರಿಕ್ತ ಪರಿಣಾಮ ಇನ್ನೂ ಹಾಗೆಯೇ ಇದೆ.

ಅಕ್ರಮ ಗಣಿಗಾರಿಕೆಯಿಂದ ಸಂಡೂರು ತಾಲ್ಲೂಕು ಒಂದರಲ್ಲೇ 1,700 ಹೆಕ್ಟೇರ್ ಅರಣ್ಯ ನಾಶವಾಗಿದೆ. ಬಳ್ಳಾರಿ ಮತ್ತು ಹೊಸಪೇಟೆ ನಂತರದ ಸ್ಥಾನದಲ್ಲಿವೆ. ಅವಿಭಜಿತ ಜಿಲ್ಲೆಯಲ್ಲಿ ಶೇ 90ಕ್ಕೂ ಹೆಚ್ಚು ಅರಣ್ಯ ಪ್ರದೇಶ ಗಣಿಗಾರಿಕೆಯಿಂದ ಸಂಪೂರ್ಣ ನಾಶವಾಗಿದೆ. ಈಗಲೂ 4,684 ಹೆಕ್ಟೇರ್ ಅರಣ್ಯದಲ್ಲಿ ಗಣಿಗಾರಿಕೆ ನಡೆಯುತ್ತಿದೆ.

ಅದಿರು ಸಾಗಣೆ ಲಾರಿಗಳ ಓಡಾಟದಿಂದ ಸಂಡೂರು ತಾಲ್ಲೂಕಿನ ರಾಮಗಡ ರಸ್ತೆ ಅಸ್ತಿತ್ವ ಕಳೆದುಕೊಂಡಿದೆ ಚಿತ್ರ: ವಿ.ಎಂ. ನಾಗಭೂಷಣ್

ಅಕ್ರಮ ಗಣಿಗಾರಿಕೆ ಸಂಪೂರ್ಣವಾಗಿ ನಿಂತರೂ ಪರಿಸರ ಪುನಶ್ಚೇತನ ಕಾರ್ಯವನ್ನು ಇದುವರೆಗೆ ಕೈಗೊಂಡಿಲ್ಲ. ಕೆಲ ಗಣಿಗಳಲ್ಲಿ ತಡೆಗೋಡೆ ನಿರ್ಮಾಣ, ಹಸಿರು ಪಟ್ಟಿ, ಗಿಡ ಬೆಳೆಸುವ ಕಾರ್ಯ ನಡೆಯುತ್ತಿದೆ. ಆದರೆ, ವೇಗ ಆಮೆಗತಿಯದು. ಜಿಲ್ಲಾ ಖನಿಜ ನಿಧಿಯಿಂದ ₹300 ಕೋಟಿಗೂ ಹೆಚ್ಚಿನ ಹಣ ಖರ್ಚು ಮಾಡಲಾಗಿದೆ. ಗಣಿಬಾಧಿತ ಪ್ರದೇಶಗಳಲ್ಲಿ ರಸ್ತೆ, ಚರಂಡಿ ನಿರ್ಮಾಣ, ಶುದ್ಧ ಕುಡಿಯುವ ನೀರು, ಆಂಬುಲೆನ್ಸ್ ವ್ಯವಸ್ಥೆ ಮಾಡಲಾಗುತ್ತಿದೆ. ಜನರಿಗೆ ಹೊಲಿಗೆ ಯಂತ್ರ ವಿತರಿಸಲಾಗುತ್ತಿದೆ. ನಗರ ಕೇಂದ್ರಿತವಾಗಿ ಈ ಕೆಲಸಗಳು ನಡೆಯುತ್ತಿರುವುದರಿಂದ ಗಣಿಬಾಧಿತ ಪ್ರದೇಶದ ಪುನರುಜ್ಜೀವನ ಸಾಧ್ಯವಾಗಿಲ್ಲ.

ಜಿಂದಾಲ್, ಎನ್ಎಂಡಿಸಿ, ಸ್ಮಯೊರ್, ಕೆಎಸ್‌ಎಂಸಿಎಲ್ ಹೊರತು ಪಡಿಸಿದರೆ ಹೆಚ್ಚಿನ ಕಂಪನಿಯವರು ಕನ್ವೇಯರ್ ಬೆಲ್ಟ್ ಅಳವಡಿಸಿಕೊಂಡಿಲ್ಲ. ಈ ಹಿಂದಿನಂತೆಯೇ ಅದಿರು ಲಾರಿಗಳ ಓಡಾಟ ಸಾಮಾನ್ಯವಾಗಿದೆ. ಚಳಿಗಾಲ, ಬೇಸಿಗೆಯಲ್ಲಿ ದೂಳಿನ ಸಮಸ್ಯೆಯಿದ್ದರೆ, ಮಳೆಗಾಲದಲ್ಲಿ ರಸ್ತೆಗಳೆಲ್ಲ ಹೊಂಡಗಳಾಗಿ ಬದಲಾಗುತ್ತವೆ. ದೂಳಿನಿಂದ ಸುತ್ತಮುತ್ತಲಿನ ಪರಿಸರ, ರಸ್ತೆಗಳು ಸದಾ ಕೆಂಪಾಗಿರುತ್ತವೆ. ಜನರು ಸದಾ ಮೂಗು, ಬಾಯಿ ಮುಚ್ಚಿಕೊಂಡು ಓಡಾಡುವ ಪರಿಸ್ಥಿತಿ ಇದೆ.

ಹಲವೆಡೆ ಸಾಂಪ್ರದಾಯಿಕ ನೀರಿನ ಝರಿಗಳು ನಾಶಗೊಂಡಿವೆ. ವನ್ಯಮೃಗಗಳು ಆವಾಸ ಸ್ಥಾನ ಕಳೆದುಕೊಂಡಿವೆ. ವಿಪರೀತ ದೂಳಿನಿಂದ ಬೆಳೆಯ ಇಳುವರಿ ಕಡಿಮೆಯಾಗಿದೆ. ಜನ ಉಸಿರಾಟದ ಸಮಸ್ಯೆ, ಚರ್ಮರೋಗಗಳಿಂದ ಬಳಲುತ್ತಿದ್ದಾರೆ.

ಸಂಡೂರು ತಾಲ್ಲೂಕಿನ ನಂದಿಹಳ್ಳಿ, ಭುಜಂಗನಗರ, ನಾರಾಯಣಪುರ, ಸುಶೀಲಾ ನಗರ, ಸಿದ್ದಾಪುರ ರಸ್ತೆಯಲ್ಲಿ ಓಡಾಡಿದರೆ ಸಾಲು ಸಾಲು ಅದಿರಿನ ಲಾರಿಗಳ ದರ್ಶನವಾಗುತ್ತದೆ. ನಿತ್ಯ ಅಪಘಾತಗಳು ಸರ್ವೇ ಸಾಮಾನ್ಯ. ಹೊಸಪೇಟೆ–ಸಂಡೂರು, ತೋರಣಗಲ್ಲು–ಬಳ್ಳಾರಿ ರಸ್ತೆಯಲ್ಲೂ ಇದೇ ಪರಿಸ್ಥಿತಿ ಇದೆ.

ಅದಿರು ಲಾರಿಗಳ ಓಡಾಟದಿಂದ ರಸ್ತೆ ಹಾಳಾಗಿರುವುದರಿಂದ ಸರ್ಕಾರಿ ಬಸ್‌ಗಳು ಬರುವುದಿಲ್ಲ. ಇದರಿಂದ ಸಾರ್ವಜನಿಕರಿಗೆ ಬಹಳ ತೊಂದರೆಯಾಗಿದೆ
ಮಲ್ಲಿಸ್ವಾಮಿ, ಕಮತ್ತೂರು ನಿವಾಸಿ

ರಾಮಗಡದಲ್ಲಿ ಈಗಲೂ ಲಾರಿಗಳ ಓಡಾಟ ಹೆಚ್ಚಿದೆ. ರಸ್ತೆಯ ಅಸ್ತಿತ್ವವೇ ಹಾಳಾಗಿದೆ. ಜೀವ ಕೈಯಲ್ಲಿ ಹಿಡಿದು ಓಡಾಡಬೇಕು
ಶಾಜಾದ್ ಬೀ, ರಾಮಗಡ ನಿವಾಸಿ

ಗಣಿಗಾರಿಕೆ, ಲಾರಿಗಳ ಓಡಾಟದಿಂದ ಯಾವಾಗಲೂ ದೂಳು ಇರುತ್ತದೆ. ಹೆಚ್ಚಿನವರಿಗೆ ಉಸಿರಾಟದ ಸಮಸ್ಯೆ ಇದೆ.
ಮಲ್ಲೇಶ್, ಕಮತ್ತೂರು ನಿವಾಸಿ

ಅಕ್ರಮ ಗಣಿಗಾರಿಕೆಗೆ ತಡೆ ಬಿದ್ದಿದೆ. ಆದರೆ, ಗಣಿಬಾಧಿತ ಪ್ರದೇಶಗಳಲ್ಲಿ ಮೂಲಸೌಕರ್ಯ ಕಲ್ಪಿಸಬೇಕಿದೆ
ಶ್ರೀಶೈಲ ಆಲ್ದಳ್ಳಿ, ಸಂಡೂರು ನಿವಾಸಿ

https://www.prajavani.net/karnataka-news/hazards-in-mining-aria-in-hospet-of-vijayanagar-851310.html

ಡಿಜಿಸಿಎ ನಿಯಮಗಳನ್ನೂ ಉಲ್ಲಂಘಿಸಿದ್ದ ಸಂಸ್ಥೆ? • ಸಾರ್ವಜನಿಕರಿಗೆ ಜಾಲಿ ರೈಡ್ ಆಯೋಜನೆ

ಬಾಡಿಗೆ ಬಾಕಿ: ಅಗ್ನಿ ಏರೊಸ್ಪೋರ್ಟ್ಸ್ ಸಂಸ್ಥೆ ಆಸ್ತಿ ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹನ್ನೆರಡು ವರ್ಷಗಳಿಂದ ಸರಿಯಾಗಿ ಬಾಡಿಗೆ ನೀಡದ, ನೋಟಿಸ್‌ಗೂ ಉತ್ತರಿಸದ ಜಕ್ಕೂರಿನ ಸರ್ಕಾರಿ ವೈಮಾನಿಕ ತರಬೇತಿ ಶಾಲೆ ಆವರಣದಲ್ಲಿರುವ ಅಗ್ನಿ ಏರೊ ಸ್ಪೋರ್ಟ್ಸ್ ಸಂಸ್ಥೆಯ ಆಸ್ತಿಯನ್ನು ಮುಟ್ಟುಗೋಲು ಹಾಕಲಾಗಿದೆ' ಎಂದು ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವ ನಾರಾಯಣ ಗೌಡ ತಿಳಿಸಿದರು.

'ಈ ಸಂಸ್ಥೆಗೆ ಭೋಗ್ಯ ಮತ್ತು ಬಾಡಿಗೆ (ಲೀಸ್–ಕಂ–ರೆಂಟ್) ಆಧಾರದಲ್ಲಿ 80 × 120 ಚದರ ಅಡಿ ನಿವೇಶನವನ್ನು ನೀಡಲಾಗಿತ್ತು. ಆದರೆ, 2008ರಿಂದ ಈವರೆಗೆ ₹ 1.50 ಕೋಟಿ ಬಾಡಿಗೆ ಉಳಿಸಿಕೊಂಡಿರುವ ಸಂಸ್ಥೆ, ವೈಮಾನಿಕ ತರಬೇತಿ ಶಾಲೆಯ ಜಾಗವನ್ನೂ ಒತ್ತುವರಿ ಮಾಡಿಕೊಂಡಿದೆ. ಹೀಗಾಗಿ, ಕಾನೂನಿನ ಪ್ರಕಾರ ಕ್ರಮ ತೆಗೆದುಕೊಳ್ಳಲಾಗಿದೆ' ಎಂದರು.

ಯುವ ಸಬಲೀಕರಣ ಮತ್ತು ಕ್ರೀಡಾ ಸಚಿವ ನಾರಾಯಣ ಗೌಡ ಅವರು ಅಧಿಕಾರಿಗಳ ಜೊತೆ ಜಕ್ಕೂರಿನ ಸರ್ಕಾರಿ ವೈಮಾನಿಕ ತರಬೇತಿ ಶಾಲೆಯ ಆವರಣಕ್ಕೆ ಇತ್ತೀಚೆಗೆ ಭೇಟಿ ನೀಡಿ ಪರಿಶೀಲಿಸಿದ್ದರು.

'ಬಾಡಿಗೆ ನೀಡದ ಕಾರಣ ಸಂಸ್ಥೆಗೆ ಹಲವು ಬಾರಿ ನೋಟಿಸ್ ನೀಡಲಾಗಿತ್ತು. ಅಲ್ಲದೆ, ತಕ್ಷಣ ಬಾಡಿಗೆ ವಸೂಲಿ ಮಾಡಬೇಕು ಇಲ್ಲವೇ ಆಸ್ತಿ ಮುಟ್ಟುಗೋಲು ಹಾಕಬೇಕು ಎಂದು ಅಧಿಕಾರಿಗಳಿಗೆ ಸೂಚನೆ ನೀಡಲಾಗಿತ್ತು. ಇತ್ತೀಚೆಗೆ ಸರ್ವೆ ನಡೆಸಿದ್ದ ಅಧಿಕಾರಿಗಳು, ಸಂಸ್ಥೆ 24,143 ಚದರ ಅಡಿ ಜಾಗವನ್ನು ಒತ್ತುವರಿ ಮಾಡಿರುವುದನ್ನು ಗುರುತಿಸಿದ್ದರು' ಎಂದೂ ವಿವರಿಸಿದರು.

'ಸರ್ಕಾರಿ ವೈಮಾನಿಕ ತರಬೇತಿ ಶಾಲೆಯ ಆವರಣದಲ್ಲಿ ಸಕ್ಷಮ ಪ್ರಾಧಿಕಾರಗಳ ಅನುಮತಿ ಪಡೆಯದೆ ಅಗ್ನಿ ಏರೊಸ್ಪೋರ್ಟ್ಸ್ ಸಂಸ್ಥೆಯವರು ಕಚೇರಿ ನಿರ್ಮಿಸಿಕೊಂಡಿದ್ದರು. ಡಿಜಿ ಸಿಎ ನಿಯಮ ಉಲ್ಲಂಘಿಸಿ ವಾಣಿಜ್ಯ ಮಾದರಿಯಲ್ಲಿ ಮೈಕ್ರೊಲೈಟ್ ವಿಮಾನಗಳಲ್ಲಿ ಸಾರ್ವಜನಿಕರಿಗೆ ಜಾಲಿ ರೈಡ್ ಆಯೋಜಿಸುತ್ತಿದ್ದರು. ಈ ಮೂಲಕ, ವಾರ್ಷಿಕ ನೂರಾರು ಕೋಟಿ ಆದಾಯ ಗಳಿಸುತ್ತಿದ್ದ ಸಂಸ್ಥೆ, ಸರ್ಕಾರಕ್ಕೆ ತೆರಿಗೆ ವಂಚಿಸುತ್ತಿರುವುದು ಮೇಲ್ನೋಟಕ್ಕೆ ಕಂಡುಬಂದಿದೆ' ಎಂದೂ ತಿಳಿಸಿದರು.

'ಸಂಸ್ಥೆಯವರು ವೈಮಾನಿಕ ತರಬೇತಿ ಶಾಲೆ ಆವರಣದೊಳಗೆ ಅನಧಿಕೃತ ವ್ಯಕ್ತಿಗಳಿಗೆ ಪ್ರವೇಶ ನೀಡಿದ್ದಾರೆ. ತಮ್ಮ ವಿಮಾನಗಳಲ್ಲಿ ಅಕ್ರಮ ಹಾರಾಟಕ್ಕೆ ಅವಕಾಶ ನೀಡಿ ರಾಷ್ಟ್ರೀಯ ಭದ್ರತೆಗೆ ಧಕ್ಕೆಯಾಗುವ ರೀತಿಯಲ್ಲಿ ನಡೆದುಕೊಂಡಿದ್ದಾರೆ. ವೈಮಾನಿಕ ಉದ್ದೇಶಕ್ಕೆ ನೀಡಿದ್ದ ಸ್ಥಳಗಳನ್ನು ಅನಧಿಕೃತ ಚಟುವಟಿಕೆಗೆ ಬಳಸಿ, ಬಾಡಿಗೆ ಷರತ್ತು ಉಲ್ಲಂಘಿಸಿದ್ದಾರೆ. ಹೀಗಾಗಿ, ಬಾಡಿಗೆ ಹಣ ಪಾವತಿಸುವವರೆಗೆ ಸಂಸ್ಥೆಯ ಎಲ್ಲ ಸ್ವತ್ತುಗಳನ್ನು ಯಥಾಸ್ಥಿತಿಯಲ್ಲಿ ಮುಟ್ಟುಗೋಲು ಹಾಕಿಕೊಂಡು, ಎಲ್ಲ ಚಟುವಟಿಕೆ ಸ್ಥಗಿತಗೊಳಿಸಲಾಗಿದೆ' ಎಂದರು.

ಷರತ್ತು ಉಲ್ಲಂಘನೆ: ಸಂಸ್ಥೆಗಳ ಮೇಲೆ ಕ್ರಮ

'ವೈಮಾನಿಕ ತರಬೇತಿ ಶಾಲೆಯ ಆವರಣದಲ್ಲಿರುವ ಎಲ್ಲ ಕಂಪನಿಗಳಿಗೂ ನೋಟಿಸ್ ನೀಡಲಾಗಿದೆ. ಉಳಿದ ಕಂಪನಿಗಳು ನೋಟಿಸ್‌ಗೆ ಉತ್ತರಿಸಿ, ಅಲ್ಪ ಪ್ರಮಾಣದಲ್ಲಿ ಬಾಡಿಗೆ ಪಾವತಿಸಿವೆ. ನಿಯಮ ಉಲ್ಲಂಘನೆ ಆಗಿದ್ದರೆ 15 ದಿನಗಳ ಒಳಗೆ ಸರಿಪಡಿಸಿಕೊಳ್ಳಬೇಕು' ಎಂದೂ ಸಚಿವ ನಾರಾಯಣ ಗೌಡ ಎಚ್ಚರಿಕೆ ನೀಡಿದರು.

'ಮಾನವ ಕಳ್ಳಸಾಗಣೆ: ಎನ್‌ಐಎ ತನಿಖೆ'

ಮಂಗಳೂರು: 'ಪಾಸ್‌ಪೋರ್ಟ್ ಸೇರಿದಂತೆ ಅಧಿಕೃತ ದಾಖಲೆಗಳಿಲ್ಲದೇ ನಗರದಲ್ಲಿ ವಾಸವಿದ್ದ ಶ್ರೀಲಂಕಾದ 38 ಪ್ರಜೆಗಳನ್ನು ವಶಪಡಿಸಿಕೊಂಡಿದ್ದ ಪ್ರಕರಣದ ತನಿಖೆಯನ್ನು ರಾಷ್ಟ್ರೀಯ ತನಿಖಾ ಸಂಸ್ಥೆ (ಎನ್‌ಐಎ) ನಡೆಸುತ್ತಿದೆ. ಸಂಬಂಧಪಟ್ಟ ಅಧಿಕಾರಿಗಳಿಗೆ ಎಲ್ಲ ರೀತಿಯ ಸಹಕಾರ ನೀಡಲಾಗುತ್ತಿದೆ' ಎಂದು ಪೊಲೀಸ್ ಕಮಿಷನರ್ ಎನ್. ಶಶಿಕುಮಾರ್ ತಿಳಿಸಿದರು.

'ಅಕ್ರಮ ವಲಸೆ, ಅಕ್ರಮ ವಾಸ್ತವ್ಯ ಹಾಗೂ ಮಾನವ ಕಳ್ಳ ಸಾಗಾಟಕ್ಕೆ ಸಂಬಂಧಿಸಿ 38 ಮಂದಿಯ ವಿರುದ್ಧ ಪ್ರಕರಣ ದಾಖಲಾಗಿದ್ದು, ಸದ್ಯ ನ್ಯಾಯಾಂಗ ಬಂಧನದಲ್ಲಿದ್ದಾರೆ. ಇದು ರಾಷ್ಟ್ರೀಯ ಭದ್ರತೆಗೆ ಸಂಬಂಧಿಸಿದ ಪ್ರಕರಣವಾಗಿದೆ' ಎಂದರು.

ಜನರ ಜೊತೆ ಪೊಲೀಸ್ ಕಮಿಷನರ್ ಸಂವಾದದಲ್ಲಿ ನಂದಿನಿ ಬಡಾವಣೆ ನಿವಾಸಿಗಳ ಕಳವಳ

ಮಾದಕ ವ್ಯಸನ: ದಾರಿ ತಪ್ಪುತ್ತಿರುವ ಯುವಜನತೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಂದಿನಿ ಬಡಾವಣೆ ಹಾಗೂ ಸುತ್ತಮುತ್ತಲ ಸ್ಥಳಗಳಲ್ಲಿ ಮಾದಕ ವ್ಯಸನಿಗಳ ಸಂಖ್ಯೆ ಹೆಚ್ಚುತ್ತಿದೆ. ಬಹುಪಾಲು ಯುವಜನರು ದಾರಿ ತಪ್ಪುತ್ತಿದ್ದಾರೆ. ಕೆಲ ಶಾಲೆ ಹಾಗೂ ಕಾಲೇಜುಗಳ ವಿದ್ಯಾರ್ಥಿಗಳು ಸಹ ಡ್ರಗ್ಸ್ ಹಿಂದೆ ಬೀಳುತ್ತಿದ್ದಾರೆ' ಎಂದು ನಂದಿನಿ ಬಡಾವಣೆ ನಿವಾಸಿಗಳು ಕಳವಳ ವ್ಯಕ್ತಪಡಿಸಿದರು.

ನಗರ ಪೊಲೀಸ್ ಕಮಿಷನರ್ ಕಮಲ್ ಪಂತ್ ಅವರು ನಂದಿನಿ ಬಡಾವಣೆಯ ಪೊಲೀಸ್ ಠಾಣೆಯಲ್ಲಿ ಶನಿವಾರ ಹಮ್ಮಿಕೊಂಡಿದ್ದ ಜನಸಂಪರ್ಕ ಸಭೆಯಲ್ಲಿ ಸಮಸ್ಯೆ ಹೇಳಿಕೊಂಡ ಸ್ಥಳೀಯ ನಿವಾಸಿಗಳು ಗಾಂಜಾ ಹಾವಳಿಯ ಬಗ್ಗೆ ಗಮನ ಸೆಳೆದರು. ಮಾದಕ ದ್ರವ್ಯಗಳ ಮಾರಾಟ ತಡೆಯಲು ಕಟ್ಟುನಿಟ್ಟಿನ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿದರು.

ಕಮಲ್ ಪಂತ್

'ಆಯಾ ದಿನದ ದುಡಿಮೆ ನಂಬಿ ಜೀವನ ನಡೆಸುವವರು ಹೆಚ್ಚಿದ್ದಾರೆ. ದಂಪತಿ ಕೆಲಸಕ್ಕೆ ಹೋದರೆ, ಮಕ್ಕಳು ಮನೆಯಲ್ಲೇ ಉಳಿಬೇಕಾಗುತ್ತದೆ. ಈ ಪೈಕಿ ಹಲವು ಮಕ್ಕಳು ಇಂದು ದುಶ್ಚಟಗಳಿಗೆ ದಾಸರಾಗುತ್ತಿದ್ದಾರೆ. ಮಾದಕ ವ್ಯಸನಿಗಳಾಗುತ್ತಿದ್ದಾರೆ' ಎಂದೂ ಸ್ಥಳೀಯರು ದೂರಿದರು.

'ಮಾದಕ ವಸ್ತು ಮಾರಾಟ ಮಾಡುವವರನ್ನು ಪತ್ತೆ ಮಾಡಿ ಶಿಕ್ಷಿಸಬೇಕು. ಆಗಲೇ ಯುವಜನತೆಯನ್ನು ಸರಿದಾರಿಗೆ ತರಲು ಸಾಧ್ಯ' ಎಂದೂ ಸಲಹೆ ನೀಡಿದರು.

ಕಮಲ್ ಪಂತ್, 'ಮಾದಕ ವಸ್ತು ಸಾಗಣೆ ಹಾಗೂ ಮಾರಾಟದ ವಿರುದ್ಧ ನಿರಂತರವಾಗಿ ಕಾರ್ಯಾಚರಣೆ ನಡೆಸಲಾಗುತ್ತಿದೆ. ನಂದಿನಿ ಬಡಾವಣೆ ಹಾಗೂ ಸುತ್ತಮುತ್ತ ಮಾದಕ ವಸ್ತು ಮಾರಾಟ ಮಾಡುತ್ತಿರುವವರ ಪತ್ತೆಗೆ ಕ್ರಮ ಕೈಗೊಳ್ಳುವಂತೆ ಇನ್‌ಸ್ಪೆಕ್ಟರ್‌ಗೆ ಸೂಚಿಸುತ್ತೇನೆ' ಎಂದು ಭರವಸೆ ನೀಡಿದರು.

ಚುಡಾಯಿಸಿದರೆ ಕಠಿಣ ಕ್ರಮ: 'ಟೀ ಅಂಗಡಿ, ಬೇಕರಿ ಹಾಗೂ ರಸ್ತೆ ಬದಿಯಲ್ಲಿ ಕೆಲ ಕಿಡಿಗೇಡಿಗಳು, ಯುವತಿಯರನ್ನು ಚುಡಾಯಿಸುತ್ತಿದ್ದಾರೆ. ಯುವತಿಯರು ಭಯದಲ್ಲಿ ಓಡಾಡಬೇಕಾದ ಸ್ಥಿತಿ ಇದೆ. ಈ ಬಗ್ಗೆ ಕ್ರಮ ಕೈಗೊಳ್ಳಿ' ಎಂದು ಸ್ಥಳೀಯರೊಬ್ಬರು ವಿಡಿಯೊ ಸಾಕ್ಷ್ಯ ಸಮೇತ ದೂರು ಹೇಳಿದರು.

ಕಮಲ್ ಪಂತ್, 'ಯುವತಿಯರನ್ನು ಚುಡಾಯಿಸುವವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲಾಗುವುದು. ಅಂಥ ಘಟನೆಗಳು ನಡೆದ ತಕ್ಷಣವೇ ಸಾರ್ವಜನಿಕರು ಪೊಲೀಸರಿಗೆ ಮಾಹಿತಿ ನೀಡಬೇಕು. ಅಗತ್ಯವಿರುವ ಕಡೆ ಪೊಲೀಸರ ಗಸ್ತು ಹೆಚ್ಚಿಸಲಾಗುವುದು' ಎಂದರು.

ಅಡ್ಡಾದಿಡ್ಡಿ ವಾಹನ ನಿಲುಗಡೆ: 'ಕೆಲವರು ರಸ್ತೆಯಲ್ಲಿ ಅಡ್ಡಾದಿಡ್ಡಿಯಾಗಿ ವಾಹನ ನಿಲ್ಲಿಸುತ್ತಿದ್ದಾರೆ. ಇತರೆ ವಾಹನಗಳ ಸಂಚಾರಕ್ಕೆ ತೊಂದರೆ ಉಂಟಾಗುತ್ತಿದೆ' ಎಂದು ಸಾರ್ವಜನಿಕರೊಬ್ಬರು ದೂರಿದರು.

ಕಮಲ್ ಪಂತ್, 'ಅಡ್ಡಾದಿಡ್ಡಿ ವಾಹನ ನಿಲ್ಲಿಸುವವರಿಗೆ ಎಚ್ಚರಿಕೆ ನೀಡಲಾಗುವುದು. ತಪ್ಪು ತಿದ್ದಿಕೊಳ್ಳದಿದ್ದರೆ ಕಾನೂನು ಕ್ರಮ ಜರುಗಿಸಲಾಗುವುದು' ಎಂದರು. ಉತ್ತರ ವಿಭಾಗದ ಡಿಸಿಪಿ ಧರ್ಮೇಂದ್ರಕುಮಾರ್ ಮೀನಾ ಸಭೆಯಲ್ಲಿ ಭಾಗವಹಿಸಿದರು.

ಸುದ್ದಿ 2 ನಿಮಿಷ

ಪಾರ್ಕಿನ್‌ಸನ್ ಚಿಕಿತ್ಸಾ ಸೌಲಭ್ಯ ಹೆಚ್ಚಿಸಬೇಕಿದೆ: ಡಾ.ಕೆ. ಸುಧಾಕರ್

ಬೆಂಗಳೂರು: ಪಾರ್ಕಿನ್‌ಸನ್ ರೋಗಿಗಳ ಸಂಖ್ಯೆ 2030ರ ವೇಳೆಗೆ ಮೂರು ಪಟ್ಟನಷ್ಟಾಗಲಿದೆ ಎಂದು ತಜ್ಞರು ಅಂದಾಜಿಸಿದ್ದಾರೆ. ಆ ಪರಿಸ್ಥಿತಿಯನ್ನು ಎದುರಿಸುವುದಕ್ಕೆ ಪೂರಕವಾಗಿ ಆರೋಗ್ಯ ವ್ಯವಸ್ಥೆಯನ್ನು ಸಜ್ಜುಗೊಳಿಸಬೇಕಿದೆ ಎಂದು ಆರೋಗ್ಯ ಸಚಿವ ಡಾ.ಕೆ. ಸುಧಾಕರ್ ಹೇಳಿದರು.

ಲಂಡನ್‌ನ ಕಿಂಗ್ಸ್ ಕಾಲೇಜು ಮತ್ತು ಪಾರ್ಕಿನ್‌ಸನ್ ರೀಸರ್ಚ್ ಅಲಯನ್ಸ್ ಆಫ್ ಇಂಡಿಯಾ (ಪಿಆರ್‌ಎಐ) ಜಂಟಿಯಾಗಿ ಶನಿವಾರ ಆಯೋಜಿಸಿದ್ದ 'ಪಾರ್ಕಿನ್‌ಸನ್' ಕುರಿತ ವರ್ಚ್ಯುಯಲ್ ವಿಚಾರ ಸಂಕಿರಣದಲ್ಲಿ ಮಾತನಾಡಿದ ಅವರು, 'ದೇಶದಲ್ಲಿ ಈಗ ಪ್ರತಿ ಒಂದು ಲಕ್ಷ ಜನರಲ್ಲಿ 350ರಿಂದ 400 ಜನರಲ್ಲಿ 'ಪಾರ್ಕಿನ್‌ಸನ್' ರೋಗ ಕಾಣಿಸಿಕೊಳ್ಳುತ್ತಿದೆ. ಅಧ್ಯಯನಗಳ ಪ್ರಕಾರ, 2030ರ ವೇಳೆಗೆ ಇದು ಮೂರು ಪಟ್ಟನಷ್ಟಾಗಲಿದೆ. ದೇಶದ ಒಟ್ಟು ಜನಸಂಖ್ಯೆಯ ಶೇಕಡ 1ರಷ್ಟು ಜನರಲ್ಲಿ 'ಪಾರ್ಕಿನ್‌ಸನ್' ರೋಗ ಕಂಡುಬರುವ ಸಾಧ್ಯತೆ ಇದೆ' ಎಂದರು.

ನರರೋಗಕ್ಕೆ ಸಂಬಂಧಿಸಿದಂತೆ ನಿಮ್ಹಾನ್ಸ್ ಉತ್ತಮ ಕೆಲಸ ಮಾಡುತ್ತಿದೆ. ಮುಂದಿನ ದಿನಗಳಲ್ಲಿ ಪಾರ್ಕಿನ್ಸನ್ ರೋಗಕ್ಕೆ ಸಂಬಂಧಿಸಿದಂತೆ ಪಿಎಆರ್‌ಐ ಜತೆಗೂಡಿ ಸಂಶೋಧನೆಗಳನ್ನು ಆರಂಭಿಸಲಿದೆ. ಲಂಡನ್‌ನ ಕಿಂಗ್ಸ್ ಕಾಲೇಜು ಮತ್ತು ಪಿಎಆರ್‌ಐ ಸಹಯೋಗದಲ್ಲಿ ಶೈಕ್ಷಣಿಕ ತರಬೇತಿ ಹಾಗೂ ಸಂಶೋಧನೆಗಳನ್ನು ಕೈಗೊಳ್ಳುವ ಬಗ್ಗೆಯೂ ಪರಿಶೀಲಿಸಲಾಗುವುದು ಎಂದು ಸುಧಾಕರ್ ತಿಳಿಸಿದರು.

ರೌಡಿ ಪತ್ನಿ ಜೊತೆ ಮಾತನಾಡಿದ ಯುವಕನ ಮೇಲೆ ಹಲ್ಲೆ

ಬೆಂಗಳೂರು: ನಗರದ ರೌಡಿಯೊಬ್ಬನ ಪತ್ನಿ ಜೊತೆ ಮಾತನಾಡುತ್ತಿದ್ದರೆಂಬ ಕಾರಣಕ್ಕೆ ಯುವಕನೊಬ್ಬನ ಮೇಲೆ ಹಲ್ಲೆ ಮಾಡಲಾಗಿದ್ದು, ಇದರ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ.

ಕೆಂಗೇರಿ ಠಾಣೆ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ. ಗಾಯಾಳು ಯುವಕ ಚಿಕಿತ್ಸೆ ಪಡೆದುಕೊಂಡಿದ್ದು, ಘಟನೆ ಬಗ್ಗೆ ಪೊಲೀಸರಿಗೆ ದೂರು ನೀಡಿಲ್ಲವೆಂದು ಗೊತ್ತಾಗಿದೆ.

ಪ್ರಕರಣವೊಂದರಲ್ಲಿ ಜೈಲು ಸೇರಿದ್ದ ರೌಡಿಯೊಬ್ಬನ ಪತ್ನಿ, ಫೇಸ್‌ಬುಕ್‌ನಲ್ಲಿ ಖಾತೆ ಹೊಂದಿದ್ದರು. ಮಂಡ್ಯದ ನಿವಾಸಿ ಎನ್ನಲಾದ ಯುವಕನ ಪರಿಚಯವಾಗಿತ್ತು. ನಂತರ, ಇಬ್ಬರೂ ಮಾತನಾಡಲಾರಂಭಿಸಿದ್ದರು. ಇತ್ತೀಚೆಗೆ ರೌಡಿ, ಜೈಲಿನಿಂದ ಬಿಡುಗಡೆ ಆಗಿದ್ದ. ಯುವಕನ ಬಗ್ಗೆ ಮಾಹಿತಿ ಬರುತ್ತಿದ್ದಂತೆ ಆತನನ್ನು ಕೆಂಗೇರಿಗೆ ಕರೆಸಿಕೊಂಡು ಹಲ್ಲೆ ಮಾಡಿಸಿದ್ದಾನೆ ಎನ್ನಲಾಗಿದೆ.

ಪೊಲೀಸರು, 'ವಿಡಿಯೊ ಹರಿದಾಡಿದ್ದು ಗೊತ್ತಾಗಿದೆ. ಯುವಕ ಯಾವುದೇ ದೂರು ನೀಡಿಲ್ಲ' ಎಂದರು.

ದಯಾನಂದ ಸಾಗರ ಸಂಸ್ಥೆಯ ಶತಮಾನೋತ್ಸವ

'ರೋಗನಿರೋಧಕ ವಿಜ್ಞಾನ ಅಧ್ಯಯನಕ್ಕೆ ಕಾಲೇಜು ಸ್ಥಾಪನೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರೋಗನಿರೋಧಕ ವಿಜ್ಞಾನ ಹಾಗೂ ಭವಿಷ್ಯದ ರೋಗಗಳ ಅಧ್ಯಯನಕ್ಕಾಗಿ ಕಾಲೇಜು ಸ್ಥಾಪಿಸಲಾಗುವುದು. ಪಶುವೈದ್ಯಕೀಯ ಮತ್ತು ಕೃಷಿ ಕಾಲೇಜುಗಳನ್ನೂ ಸ್ಥಾಪಿಸಲು ಉದ್ದೇಶಿಸಲಾಗಿದೆ' ಎಂದು ದಯಾನಂದ ಸಾಗರ ಇನ್‌ಸ್ಟಿಟ್ಯೂಷನ್ಸ್‌ನ ಅಧ್ಯಕ್ಷ ಡಿ.ಹೇಮಚಂದ್ರ ಸಾಗರ್ ತಿಳಿಸಿದರು.

ದಯಾನಂದ ಸಾಗರ ಇನ್‌ಸ್ಟಿಟ್ಯೂಷನ್ಸ್ (ಡಿಎಸ್‌ಐ) ಶನಿವಾರ ಹಮ್ಮಿಕೊಂಡಿದ್ದ ಸಂಸ್ಥೆಯ ಶತಮಾನೋತ್ಸವ ಹಾಗೂ ಸಂಸ್ಥಾಪಕರ ದಿನ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

'ಸ್ಪರ್ಧೆ ಯಾವಾಗಲೂ ನಮ್ಮೊಳಗೆ ಇರಬೇಕು. ಸಾಧನೆಗೆ ನಮ್ಮನ್ನು ತೊಡಗಿಸಿಕೊಂಡಾಗ ಮಾತ್ರ ಯಶಸ್ಸು ಸಾಧ್ಯ. ನಮ್ಮ ಸಂಸ್ಥೆ ಸಮಾಜಕ್ಕೆ ಒಳಿತು ಮಾಡುವ ಉದ್ದೇಶ ಹೊಂದಿವೆ. ಡಾ. ಚಂದ್ರಮ್ಮ ಸಾಗರ್ ಅವರ ಸಾಮಾಜಿಕ ಜವಾಬ್ದಾರಿಯ ಕನಸನ್ನು ಪೂರ್ಣಗೊಳಿಸುವ ದೃಢಸಂಕಲ್ಪ ಮಾಡಿದ್ದೇವೆ. ಅನಾಥಾಶ್ರಮ ಮತ್ತು ವೃದ್ಧಾಶ್ರಮಗಳನ್ನು ನಿರ್ಮಿಸುವ ಮೂಲಕ ಅವರ ಕನಸು ಕಾರ್ಯರೂಪಕ್ಕೆ ಬರಲಿದೆ' ಎಂದರು.

ದಯಾನಂದ ಸಾಗರ ಇನ್‌ಸ್ಟಿಟ್ಯೂಷನ್ಸ್‌ನ (ಡಿಎಸ್‌ಐ) ಶತಮಾನೋತ್ಸವ ಹಾಗೂ ಸಂಸ್ಥಾಪಕರ ದಿನವನ್ನು ಹೇಮಚಂದ್ರ ಸಾಗರ್ ಉದ್ಘಾಟಿಸಿದರು.

ಸಂಸ್ಥೆಯ ಉಪಾಧ್ಯಕ್ಷ ಪ್ರೇಮಚಂದ್ರ ಸಾಗರ್, 'ನಮ್ಮ ತಂದೆ ದಯಾನಂದ ಸಾಗರ್ ಅವರು ಜ್ಞಾನದಿಂದ ಮುಕ್ತ ಮನೋಭಾವ ಹೊಂದಿದ್ದರು. ಜ್ಞಾನವು ಮನುಷ್ಯರನ್ನು ಪರಿಪೂರ್ಣರನ್ನಾಗಿ ರೂಪಿಸುತ್ತದೆ ಎಂದು ನಂಬಿದ್ದರು. ಸಂಸ್ಥೆಗೆ ನೂತನ ಶಿಕ್ಷಣ ನೀತಿ ಬಹಳಷ್ಟು ಸ್ವಾತಂತ್ರ್ಯ ನೀಡಲಿದೆ. ಸಂಸ್ಥೆ ಈಗ ಜಾಗತಿಕ ಮಟ್ಟಕ್ಕೆ ತಲುಪುತ್ತಿದ್ದು, ನಮ್ಮ ಗುರಿಗಳನ್ನು ಸಾಧಿಸುವವರೆಗೆ ವಿಶ್ರಮಿಸುವುದಿಲ್ಲ' ಎಂದರು.

ಡಿಎಸ್‌ಐ ವಿದ್ಯಾರ್ಥಿಗಳು ವಿನ್ಯಾಸಗೊಳಿಸಿದ ವಿಶೇಷ ಲೋಗೊವನ್ನು ಕಾರ್ಯಕ್ರಮದಲ್ಲಿ ಅನಾವರಣಗೊಳಿಸಲಾಯಿತು.

'ಪಕ್ಷಕ್ಕೆ ಬಂದ ಕೂಡಲೇ ಅಧಿಕಾರ ಬಯಸುವುದು ಸಲ್ಲ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಪಕ್ಷಕ್ಕೆ ಬಂದ ಕೂಡಲೇ ಅಧಿಕಾರ ಬೇಕೆಂದರೆ ಆಗದು. ಪಕ್ಷಕ್ಕೆ ಮಾಡಿರುವ ಸೇವೆ ಏನು? ಯಾವ ರೀತಿಯ ಕಾಣಿಕೆ ನೀಡಿದ್ದೇವೆ ಎಂಬುದನ್ನು ಮನನ ಮಾಡಿಕೊಳ್ಳಬೇಕು. ಪಕ್ಷಕ್ಕಾಗಿ ಬದ್ಧತೆಯಿಂದ ಕೆಲಸ ಮಾಡಿದರೆ, ಪಕ್ಷವೇ ಎಲ್ಲರನ್ನೂ ಬೆಳೆಸುತ್ತದೆ' ಎಂದು ಉಪಮುಖ್ಯಮಂತ್ರಿ ಡಾ.ಸಿ.ಎನ್. ಅಶ್ವತ್ಥನಾರಾಯಣ ಸಲಹೆ ನೀಡಿದರು.

ನಗರದಲ್ಲಿ ಶನಿವಾರ ಮಲ್ಲೇಶ್ವರ ಮಂಡಲದ ಬಿಜೆಪಿ ಕಾರ್ಯಕಾರಿಣಿ ಸಭೆ ಉದ್ಘಾಟಿಸಿ ಮಾತನಾಡಿದ ಅವರು, 'ಕೋವಿಡ್ ಸಂಕಷ್ಟ ಎದುರಿಸುತ್ತಲೇ ಅನೇಕ ಸುಧಾರಣೆಗಳನ್ನು ಕೇಂದ್ರ ಮತ್ತು ರಾಜ್ಯದಲ್ಲಿ ಜಾರಿಗೆ ತರಲಾಗಿದೆ. ಇವೆಲ್ಲ ಸಂಗತಿಗಳನ್ನು ಜನರಿಗೆ ತಲುಪಿಸಬೇಕು. ಅವರಿಗೆ ಸಿಗುತ್ತಿರುವ ಸವಲತ್ತುಗಳ ಬಗ್ಗೆ ಮಾಹಿತಿ ನೀಡಬೇಕು' ಎಂದರು.

ಮಲ್ಲೇಶ್ವರ ಮಂಡಲ ಬಿಜೆಪಿ ಕಾರ್ಯಕಾರಿಣಿಯನ್ನು ಗಣ್ಯರು ಉದ್ಘಾಟಿಸಿದರು. ಕಾವೇರಿ ಕೇದಾರನಾಥ, ನಾರಾಯಣ ಗೌಡ, ಡಾ.ಸಿ.ಎನ್ ಅಶ್ವತ್ಥನಾರಾಯಣ, ಡಾ. ವಾಸು ಇತರರು ಇದ್ದರು

ಸಂಸದ ಡಿ.ವಿ.ಸದಾನಂದ ಗೌಡ, ಮಲ್ಲೇಶ್ವರ ಮಂಡಲ ಬಿಜೆಪಿ ಕಾರ್ಯಕಾರಿ ಅಧ್ಯಕ್ಷೆ ಕಾವೇರಿ ಕೇದಾರನಾಥ, ಬೆಂಗಳೂರು ಉತ್ತರ ಬಿಜೆಪಿ ಘಟಕದ ಅಧ್ಯಕ್ಷ ನಾರಾಯಣ ಗೌಡ, ಬೆಂಗಳೂರು ಉತ್ತರ ಬಿಜೆಪಿ ಘಟಕದ ಉಪಾಧ್ಯಕ್ಷ ಡಾ.ವಾಸು ಹಾಜರಿದ್ದರು.

'ಪಕ್ಷ ಸಂಘಟನೆಗೆ ಕಾರ್ಯಕರ್ತರ ಪಾತ್ರ ಮಹತ್ವ'

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: 'ಭಾರತೀಯ ಜನತಾ ಪಕ್ಷವನ್ನು (ಬಿಜೆಪಿ) ಬಲಪಡಿಸುವಲ್ಲಿ ಕಾರ್ಯಕರ್ತರ ಪಾತ್ರ ಮಹತ್ವದ್ದು. ಸರ್ಕಾರದ ಯೋಜನೆಗಳನ್ನು ಜನರಿಗೆ ತಲುಪಿಸುವ ಮೂಲಕ ಸಮಾಜಮುಖಿ ಕಾರ್ಯಗಳಲ್ಲಿ ತೊಡಗಬೇಕು' ಎಂದು ಅರಣ್ಯ ಮತ್ತು ಸಂಸ್ಕೃತಿ ಸಚಿವ ಅರವಿಂದ ಲಿಂಬಾವಳಿ ತಿಳಿಸಿದರು.

ಹೂಡಿಯಲ್ಲಿ ಆಯೋಜಿಸಿದ್ದ ಮಹದೇವಪುರ ಕ್ಷೇತ್ರ ಗ್ರಾಮಾಂತರ ಮಂಡಲದ ಕಾರ್ಯಕಾರಣಿ ಸಭೆಯಲ್ಲಿ ಅವರು ಮಾತನಾಡಿದರು.

'ಕ್ಷೇತ್ರದಲ್ಲಿ ಪಕ್ಷದ ನಿರಂತರ ಚಟುವಟಿಕೆಗಳಿಂದ ಸಂಘಟನೆ ಪೂರಕವಾಗಿದೆ. ಯಾವುದೇ ಅಪೇಕ್ಷೆಯಿಲ್ಲದೆ ಪಕ್ಷ ಸಂಘಟನೆಗೆ ಕಾರ್ಯಕರ್ತರು ಒತ್ತು ನೀಡಬೇಕು. ಕ್ಷೇತ್ರದಲ್ಲಿ ಶೇ 95ರಷ್ಟು ಮತದಾರರಿಗೆ ಲಸಿಕೆ ಅಭಿಯಾನದ ಮೂಲಕ ಕೋವಿಡ್ ಮೂರನೇ ಅಲೆಯನ್ನು ಸಮರ್ಥವಾಗಿ ಎದುರಿಸಬೇಕು' ಎಂದರು.

ಕಾರ್ಯಕಾರಿಣಿ ಸಭೆಯನ್ನು ಸಚಿವ ಅರವಿಂದ ಲಿಂಬಾವಳಿ ಉದ್ಘಾಟಿಸಿದರು. ಬಿಜೆಪಿ ಮುಖಂಡರಾದ ಮಂಜುನಾಥ್, ನಟರಾಜ್, ಕಬಡ್ಡಿ ಪಿಳ್ಳಪ್ಪ, ಚನ್ನಸಂದ್ರ ಚಂದ್ರಶೇಖರ್ ಹಾಗೂ ಇತರರು ಇದ್ದರು.

15 ಡಿವೈಎಸ್ಪಿ ವರ್ಗಾವಣೆ

ಬೆಂಗಳೂರು: ರಾಜ್ಯದ 15 ಡಿವೈಎಸ್ಪಿ/ಎಸಿಪಿಗಳನ್ನು ವರ್ಗಾವಣೆ ಮಾಡಲಾಗಿದೆ.

ವಿವರ: ವಿ.ಕೆ. ವಾಸುದೇವ್ – ಚಿಕ್ಕಬಳ್ಳಾಪುರ ಉಪವಿಭಾಗ, ವಿಶ್ವನಾಥ್‌ರಾವ್ ಕುಲಕರ್ಣಿ– ಹೊಸಪೇಟೆ ಉಪವಿಭಾಗ, ಎಚ್. ಆರ್. ಅನಿಲ್‌ಕುಮಾರ್– ಸಕಲೇಶಪುರ ಉಪವಿಭಾಗ, ಜಿ.ಎಸ್. ಗಜೇಂದ್ರ ಪ್ರಸಾದ್– ಮಡಿಕೇರಿ ಉಪವಿಭಾಗ, ಬಿ.ಎಸ್. ಅಬ್ದುಲ್ ಖಾದರ್– ಪುಲಿಕೇಶಿನಗರ ಉಪ ವಿಭಾಗ, ಎಂ.ಇ.ಮನೋಜ್ ಕುಮಾರ್– ಯಲಹಂಕ ಉಪ ವಿಭಾಗ, ಎನ್.ಟಿ.ಶ್ರೀನಿವಾಸ ರೆಡ್ಡಿ– ಅರಣ್ಯ ಘಟಕ, ಮಲ್ಲೇಶಪ್ಪ ಮಲ್ಲಾಪುರ– ಭ್ರಷ್ಟಾಚಾರ ನಿಗ್ರಹ ದಳ (ಎಸಿಬಿ), ರವೀಂದ್ರ ಎಸ್. ಶಿರೂರ– ಬೆಳಗಾವಿ ಡಿಸಿಆರ್‌ಇ, ಆರ್. ಜಯರಾಮ್– ಸಿಐಡಿ, ಕೆ. ರವಿಶಂಕರ್– ಪೊಲೀಸ್ ಪ್ರಧಾನ ಕಚೇರಿ ಅಪರಾಧ ವಿಭಾಗ, ವಿ. ರಘುಕುಮಾರ್– ರಾಜ್ಯ ಗುಪ್ತದಳ, ಆರ್. ಗೋಪಿ– ಸಿಐಡಿ, ತಬರಕ್ ಫಾತಿಮಾ– ಸಿಐಡಿ, ಎಚ್.ಎಸ್. ರಾಮಲಿಂಗೇಗೌಡ– ಬೆಂಗಳೂರು ಸಿಸಿಆರ್‌ಬಿ.

ಒಂದೇ ದಿನ ಎರಡು ಪರೀಕ್ಷೆ ಗೊಂದಲದಲ್ಲಿ ಅಭ್ಯರ್ಥಿಗಳು

ಕಲಬುರ್ಗಿ: ಕರ್ನಾಟಕ ಲೋಕಸೇವಾ ಆಯೋಗವು (ಕೆಪಿಎಸ್‌ಸಿ) ಆಗಸ್ಟ್ 1ರಂದು ವಿವಿಧ ಗ್ರೂಪ್ 'ಎ' ತಾಂತ್ರಿಕ, ಗ್ರೂಪ್ 'ಬಿ' ತಾಂತ್ರಿಕ ಹಾಗೂ ತಾಂತ್ರಿಕೇತರ ಹುದ್ದೆಗಳಿಗೆ ಪರೀಕ್ಷೆ ನಡೆಸುತ್ತಿದೆ. ಅದೇ ದಿನ ಕೇಂದ್ರ ಸರ್ಕಾರದ ರಾಷ್ಟ್ರೀಯ ಜಲ ಅಭಿವೃದ್ಧಿ ಏಜೆನ್ಸಿಯು ಜ್ಯೂನಿಯರ್ ಎಂಜಿನಿಯರ್ ಹುದ್ದೆಗಳಿಗೂ ಪರೀಕ್ಷೆ ನಡೆಸುತ್ತಿದೆ.

ಎರಡೂ ಪರೀಕ್ಷೆಗಳಿಗೆ ಅರ್ಜಿ ಸಲ್ಲಿಸಿದ ರಾಜ್ಯದ ಸಾವಿರಾರು ಎಂಜಿನಿಯರಿಂಗ್ ಅಭ್ಯರ್ಥಿಗಳು ಇದೀಗ ಗೊಂದಲದಲ್ಲಿದ್ದು, ಯಾವುದಾದರೂ ಒಂದು ಪರೀಕ್ಷೆಯನ್ನಷ್ಟೇ ಬರೆಯುವ ಅನಿವಾರ್ಯತೆಗೆ ಸಿಲುಕಿದ್ದಾರೆ.

ಕೆಪಿಎಸ್‌ಸಿಯು ಜುಲೈ 30ರಿಂದ ಆಗಸ್ಟ್ 1ರವರೆಗೆ ವಿವಿಧ ಇಲಾಖೆಗಳ ಹಲವು ಹುದ್ದೆಗಳಿಗೆ ಪರೀಕ್ಷೆಗಳನ್ನು ನಡೆಸುತ್ತಿದ್ದು, ಬೆಂಗಳೂರು, ಮೈಸೂರು, ಬೆಳಗಾವಿ, ಕಲಬುರ್ಗಿ ಹಾಗೂ ಶಿವಮೊಗ್ಗ ಜಿಲ್ಲೆಗಳಲ್ಲಿ ಪರೀಕ್ಷಾ ಕೇಂದ್ರಗಳಿವೆ.

'ಕೇಂದ್ರೀಯ ಜಲ ಅಭಿವೃದ್ಧಿ ಏಜೆನ್ಸಿ ನಡೆಸುವ ಪರೀಕ್ಷೆಯನ್ನು ರಾಜ್ಯದ ಕಲಬುರ್ಗಿ ಭಾಗದ ವಿದ್ಯಾರ್ಥಿಗಳು ಪಕ್ಕದ ತೆಲಂಗಾಣದ ಹೈದರಾಬಾದ್‌ನಲ್ಲಿ ಪರೀಕ್ಷೆ ಬರೆಯಬೇಕಿದೆ. ಹೀಗಾಗಿ, ಕೆಪಿಎಸ್‌ಸಿ ಪರೀಕ್ಷೆಯನ್ನು ಬೇರೆ ದಿನ ನಿಗದಿಮಾಡಬೇಕು' ಎಂದು ಎರಡೂ ಪರೀಕ್ಷೆಗೆ ಅರ್ಜಿ ಸಲ್ಲಿಸಿ ಸಿದ್ಧತೆ ನಡೆಸುತ್ತಿರುವ ಅಭ್ಯರ್ಥಿಗಳು 'ಪ್ರಜಾವಾಣಿ'ಗೆ ಕೋರಿದರು.

'ಒಂದೇ ದಿನ ರಾಜ್ಯ ಹಾಗೂ ಕೇಂದ್ರ ಸರ್ಕಾರ ಪರೀಕ್ಷೆ ನಡೆಸಿದರೆ ಹೇಗೆ? ಕೆಪಿಎಸ್‌ಸಿ ಈ ಕುರಿತು ನಿರ್ಣಯ ತೆಗೆದುಕೊಳ್ಳಬೇಕು' ಎಂದು ಎರಡೂ ಪರೀಕ್ಷೆಗೆ ಅರ್ಜಿ ಹಾಕಿರುವ ವಿನಯ್ ಎಸ್.ಟಿ. ಕೋರಿದರು.

ಕೋವಿಡ್ ಅಂಕಿ–ಅಂಶ

ಆಧಾರ: ಕೋವಿಡ್19 ಇಂಡಿಯಾ, ಒಆರ್‌ಜಿ

	ವಿಶ್ವ	ಭಾರತ
ಒಟ್ಟು ಪ್ರಕರಣ	19.42 ಕೋಟಿ ▲	3.13 ಕೋಟಿ ▲
ಸಕ್ರಿಯ ಪ್ರಕರಣ	1.37 ಕೋಟಿ ▲	4.02 ಲಕ್ಷ ▼
ಗುಣಮುಖ	17.63 ಕೋಟಿ ▲	3.05 ಕೋಟಿ ▲
ಸಾವು	41.64 ಲಕ್ಷ ▲	4.20 ಲಕ್ಷ
ದಿನದ ಮಾಹಿತಿ: ಹೊಸ ಪ್ರಕರಣ	5.74 ಲಕ್ಷ ▲	40,279 ▼
ದಿನದ ಮಾಹಿತಿ: ಗುಣಮುಖ	4.05 ಲಕ್ಷ ▲	40,032 ▲
ದಿನದ ಮಾಹಿತಿ: ಸಾವು	8,652 ▼	541 ▼

ಎಲ್ಲಿ ಹೆಚ್ಚು ಪ್ರಕರಣ (ಹಿಂದಿನ 24 ಗಂಟೆಗಳಲ್ಲಿ): 36,389 ▼ ಬ್ರಿಟನ್; 67,485 ▲ ಅಮೆರಿಕ; 45,460 ▼ ಬ್ರೆಜಿಲ್

ಎಲ್ಲಿ ಹೆಚ್ಚು ಸಕ್ರಿಯ ಪ್ರಕರಣಗಳು (ಲಕ್ಷಗಳಲ್ಲಿ): 51.58 ▲ ಅಮೆರಿಕ; 7.52 ▲ ಬ್ರೆಜಿಲ್; 10.73 ▲ ಬ್ರಿಟನ್

(*ರಾತ್ರಿ 12 ಗಂಟೆಯ ವರೆಗಿನ ಮಾಹಿತಿ)

ಎಲ್ಲಿ ಹೆಚ್ಚು ಸಾವು (ಒಟ್ಟು): 1.31 ಲಕ್ಷ ▼ ಮಹಾರಾಷ್ಟ್ರ; 33,889 ▲ ತಮಿಳುನಾಡು; 25,041 ದೆಹಲಿ

ಎಲ್ಲಿ ಹೆಚ್ಚು ಪ್ರಕರಣ (ಲಕ್ಷಗಳಲ್ಲಿ): 62.58 ಮಹಾರಾಷ್ಟ್ರ ▲; 32.54 ಕೇರಳ ▲; 25.46 ತಮಿಳುನಾಡು ▲

ಪ್ರಜಾವಾಣಿ ಗ್ರಾಫಿಕ್ಸ್

ಎನ್‌ಕೌಂಟರ್: ಮೂವರು ಉಗ್ರರ ಹತ್ಯೆ

ಶ್ರೀನಗರ (ಪಿಟಿಐ): 'ಜಮ್ಮು ಮತ್ತು ಕಾಶ್ಮೀರದ ಬಂಡಿಪೊರಾ ಜಿಲ್ಲೆಯಲ್ಲಿ ಶನಿವಾರ ನಡೆದ ಎನ್‌ಕೌಂಟರ್‌ನಲ್ಲಿ ಮೂವರು ಉಗ್ರರು ಹತರಾಗಿದ್ದಾರೆ' ಎಂದು ಪೊಲೀಸರು ಹೇಳಿದರು.

'ಬಂಡಿಪೊರಾದ ಶೋಕ್ಬಾಬಾ ಅರಣ್ಯ ಪ್ರದೇಶದಲ್ಲಿ ಉಗ್ರರು ಅಡಗಿರುವ ಮಾಹಿತಿ ಮೇರೆಗೆ ಭದ್ರತಾ ಪಡೆಯು ಶೋಧ ನಡೆಸಿದೆ. ಈ ವೇಳೆ ಉಗ್ರರು ಮೊದಲು ದಾಳಿ ನಡೆಸಿದ್ದಾರೆ. ಇದಕ್ಕೆ ಭದ್ರತಾ ಪಡೆಯು ಪ್ರತಿದಾಳಿ ನಡೆಸಿದ್ದು, ಈ ಗುಂಡಿನ ಚಕಮಕಿಯಲ್ಲಿ ಇಬ್ಬರು ಉಗ್ರರು ಮೃತಪಟ್ಟಿದ್ದಾರೆ.

ಬೆಂಗಳೂರು ನಗರ ಜಿಲ್ಲಾ ಕೋವಿಡ್ ಅಂಕಿ–ಅಂಶ

12,24,595 ▲ ಒಟ್ಟು ಸೋಂಕಿತರು

ಸಕ್ರಿಯ ಪ್ರಕರಣ	ಗುಣಮುಖ ಆದವರು	ಒಟ್ಟು ಸಾವು
8,346 ▼	12,00,419 ▲	15,829 ▲

ಶನಿವಾರದ ಏರಿಕೆ

ಹೊಸ ಪ್ರಕರಣ	551 ▲
ಗುಣಮುಖ	560 ▼
ಸಾವು	9 ▲

ಆಧಾರ: ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಮಟ್ಕಾ ದಂಧೆ; ಏಳು ಕಡೆ ಸಿಸಿಬಿ ದಾಳಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಟ್ಕಾ ದಂಧೆ ನಡೆಸುತ್ತಿದ್ದ ಅಡ್ಡೆಗಳ ಮೇಲೆ ಸಿಸಿಬಿ ಪೊಲೀಸರು ಶನಿವಾರ ದಾಳಿ ನಡೆಸಿದ್ದು, ಏಳು ಮಂದಿಯನ್ನು ಬಂಧಿಸಿದ್ದಾರೆ.

'ಹಲಸೂರು ಗೇಟ್, ಕಲಾಸಿಪಾಳ್ಯ, ಸಿಟಿ ಮಾರ್ಕೆಟ್ ಹಾಗೂ ಎಸ್.ಜೆ. ಪಾರ್ಕ್ ಠಾಣೆಗಳ ವ್ಯಾಪ್ತಿಯಲ್ಲಿ ಆರೋಪಿಗಳು ಮಟ್ಕಾ ದಂಧೆ ನಡೆಸುತ್ತಿದ್ದರು. ಈ ಬಗ್ಗೆ ಸಿಕ್ಕ ಮಾಹಿತಿ ಆಧರಿಸಿ ದಾಳಿ ಮಾಡಲಾಯಿತು' ಎಂದು ಸಿಸಿಬಿ ಅಧಿಕಾರಿಯೊಬ್ಬರು ಹೇಳಿದರು.

'ನಿಗದಿತ ಸ್ಥಳಗಳಲ್ಲಿ ಸೇರುತ್ತಿದ್ದ ಆರೋಪಿಗಳು, ಕಾರ್ಮಿಕರು, ಆಟೊ ಚಾಲಕರು ಹಾಗೂ ಇತರರಿಂದ ಹಣ ಕಟ್ಟಿಸಿಕೊಳ್ಳುತ್ತಿದ್ದರು. ಮಟ್ಕಾ ಚೀಟಿ ಗಳನ್ನು ಬರೆದುಕೊಡುತ್ತಿದ್ದರು. ನಿತ್ಯವೂ ಬೆಳಿಗ್ಗೆ ಹಾಗೂ ಸಂಜೆ ವಿಜೇತರಿಗೆ ಹಣ ನೀಡುತ್ತಿದ್ದರು. ಹಣಕಾಸಿನ ವಿಚಾರ ವಾಗಿ ಗಲಾಟೆಗಳೂ ನಡೆಯುತ್ತಿದ್ದವು.' ಎಂದೂ ಅವರು ತಿಳಿಸಿದರು.

ಪ್ರಕರಣ ದಾಖಲು: 'ಏಳು ಅಡ್ಡೆಗಳನ್ನು ಗುರುತಿಸಿ ದಾಳಿ ನಡೆಸಲಾಗಿದೆ. ಏಳು ಮಂದಿ ಪ್ರಮುಖ ಆರೋಪಿಗಳು ಕೈಗೆ ಸಿಕ್ಕಿದ್ದಾರೆ. ಅವರೆಲ್ಲರ ವಿರುದ್ಧ ಆಯಾ ಠಾಣೆ ವ್ಯಾಪ್ತಿಯಲ್ಲಿ ಪ್ರಕರಣ ದಾಖಲಿಸಿಕೊಳ್ಳಲಾಗಿದೆ' ಎಂದೂ ಅಧಿಕಾರಿ ಮಾಹಿತಿ ನೀಡಿದರು.

ರಾಜ್ಯದಲ್ಲಿ ಪದವಿ ಕಾಲೇಜುಗಳ ಭೌತಿಕ ತರಗತಿಗಳು ಸೋಮವಾರದಿಂದ ಆರಂಭವಾಗಲಿವೆ. ಬೆಂಗಳೂರು ನಗರ ವಿಶ್ವವಿದ್ಯಾಲಯದ ತರಗತಿಗಳ ಕೊಠಡಿಗಳು ಮತ್ತು ಆಡಳಿತ ಕಚೇರಿಗಳನ್ನು ಸೋಂಕು ನಿವಾರಕ ದ್ರಾವಣ ಸಿಂಪಡಿಸಿ ಸ್ವಚ್ಛಗೊಳಿಸುವ ಕಾರ್ಯಕ್ಕೆ ಕುಲಪತಿ ಪ್ರೊ. ಲಿಂಗರಾಜ ಗಾಂಧಿ ಶನಿವಾರ ಚಾಲನೆ ನೀಡಿದರು.

ಚಿಕ್ಕಬಳ್ಳಾಪುರ, ಕೋಲಾರ ಜಿಲ್ಲೆಯ ವಿದ್ಯಾರ್ಥಿಗಳಿಗೆ ಅನುಕೂಲ

172 ಎಕರೆಯಲ್ಲಿ ಬೆಂಗಳೂರು ಉತ್ತರ ವಿ.ವಿ

ಪ್ರಜಾವಾಣಿ ವಾರ್ತೆ

ಶಿಡ್ಲಘಟ್ಟ: ತಾಲ್ಲೂಕಿನ ಅಮರಾವತಿ ಗ್ರಾಮದ ಬಳಿ ಬೆಂಗಳೂರು ಉತ್ತರ ವಿಶ್ವವಿದ್ಯಾಲಯ ಸ್ಥಾಪನೆ ಯಾಗುವುದರಿಂದ ಚಿಕ್ಕಬಳ್ಳಾಪುರ, ಕೋಲಾರ ಮತ್ತು ಬೆಂಗಳೂರು ಗ್ರಾಮಾಂತರ ಜಿಲ್ಲೆಗಳ ವಿದ್ಯಾರ್ಥಿಗಳ ಪದವಿ ಮತ್ತು ಸ್ನಾತಕೋತ್ತರ ಶಿಕ್ಷಣಕ್ಕೆ ಅನುಕೂಲವಾಗಲಿದೆ ಎಂದು ಚಿಕ್ಕಬಳ್ಳಾಪುರದ ಜಿಲ್ಲಾಧಿಕಾರಿ ಆರ್.ಲತಾ ಹೇಳಿದರು.

ವಿ.ವಿ ನಿರ್ಮಾಣಕ್ಕಾಗಿ ಈಗಾಗಲೇ 110.25ಎಕರೆ ಸರ್ಕಾರಿ ಜಮೀನನ್ನು ವಿ.ವಿಗೆ ಹಸ್ತಾಂತರಿಸಲಾಗಿದೆ. 61.15 ಎಕರೆ ಜಾಗವನ್ನು ಭೂ ಸ್ವಾಧೀನ ಮಾಡಿಕೊಳ್ಳುವ ಪ್ರಕ್ರಿಯೆ ಪ್ರಗತಿಯಲ್ಲಿದೆ ಎಂದರು.

ಶಿಡ್ಲಘಟ್ಟ ತಾಲ್ಲೂಕಿನ ಜಂಗಮಕೋಟೆ ಹೋಬಳಿಯ ಅಮರಾವತಿ ಬಳಿ ಬೆಂಗಳೂರು ಉತ್ತರ ವಿಶ್ವ ವಿದ್ಯಾಲಯ ನಿರ್ಮಾಣಕ್ಕಾಗಿ ಮೀಸಲಿಟ್ಟಿರುವ ಸ್ಥಳಕ್ಕೆ ಜಿಲ್ಲಾಧಿಕಾರಿ ಆರ್.ಲತಾ ಭೇಟಿ ನೀಡಿ ಪರಿಶೀಲನೆ ನಡೆಸಿ ಮಾತನಾಡಿದರು.

ಶಿಡ್ಲಘಟ್ಟ ತಾಲ್ಲೂಕಿನ ಜಂಗಮಕೋಟೆ ಹೋಬಳಿಯ ಅಮರಾವತಿ ಬಳಿ ಬೆಂಗಳೂರು ಉತ್ತರ ವಿಶ್ವವಿದ್ಯಾಲಯ ನಿರ್ಮಾಣಕ್ಕಾಗಿ ಮೀಸಲಿಟ್ಟಿರುವ ಸ್ಥಳಕ್ಕೆ ಜಿಲ್ಲಾಧಿಕಾರಿ ಆರ್.ಲತಾ ಭೇಟಿ ನೀಡಿ ಪರಿಶೀಲನೆ ನಡೆಸಿದರು

ಅಮರಾವತಿ ಬಳಿ ವಿ.ವಿ ನಿರ್ಮಾಣಕ್ಕೆ ನೀರಿನ ಸಮಸ್ಯೆ ಇಲ್ಲ. ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ಪೂರಕವಾದ ವಾತಾವರಣವಿದೆ ಎಂದರು.

ಬೆಂಗಳೂರು ಉತ್ತರ ವಿ.ವಿ ಕುಲಪತಿ ಕೆಂಪರಾಜು ಮಾತನಾಡಿ, ಬೆಂಗಳೂರು ವಿ.ವಿ ವಿಭಜನೆಯಾದ ನಂತರ ಬೆಂಗಳೂರು ಉತ್ತರ ವಿ.ವಿಯ ಚಟುವಟಿಕೆಗಳು ಪ್ರಸ್ತುತ ಕೋಲಾರ ಜಿಲ್ಲಾ ಕೇಂದ್ರದಿಂದ ನಡೆಯುತ್ತಿವೆ. ಈಗ ಅಮರಾವತಿ ಬಳಿ ಗುರುತಿಸಿರುವ ಸ್ಥಳದಲ್ಲಿ ವಿ.ವಿ ಆರಂಭವಾದಲ್ಲಿ ಚಿಕ್ಕಬಳ್ಳಾಪುರ, ಕೋಲಾರ, ಬೆಂಗಳೂರು ಗ್ರಾಮಾಂತರ ಜಿಲ್ಲೆಯ ವ್ಯಾಪ್ತಿಯನ್ನೊಳಗೊಂಡ ಬೆಂಗಳೂರು ಉತ್ತರ ವಿ.ವಿಯ ಆಡಳಿತ ಕಟ್ಟಡಗಳು ಸೇರಿದಂತೆ ಎಲ್ಲ ಕಚೇರಿಗಳು ಚಿಕ್ಕಬಳ್ಳಾಪುರ ಜಿಲ್ಲೆಯಿಂದ ಕಾರ್ಯ ನಿರ್ವಹಿಸಲಿವೆ ಎಂದರು.

ವಿ.ವಿ ಕುಲಸಚಿವ ವೆಂಕಟೇಶ್ ಮಾತನಾಡಿ, ಭೂ ಮಾಲಿಕರಿಂದ 61.15 ಎಕರೆ ಜಾಗವನ್ನು ನೇರ ಖರೀದಿ ಮಾಡುವ ಸಂಬಂಧ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಬೆಲೆ ನಿರ್ಧರಣಾ ಸಮಿತಿಯ ಸಭೆ ನಡೆಸಿ ಬೆಲೆ ನಿಗದಿಪಡಿಸಲಾಗಿದೆ. ಜೊತೆಗೆ ಭೂ ಸ್ವಾಧೀನಕ್ಕಾಗಿ ₹23 ಕೋಟಿ ಹಣವನ್ನು ಭೂ ಸ್ವಾಧೀನ ಅಧಿಕಾರಿಯವರ ಖಾತೆಗೆ ಜಮೆ ಮಾಡಲಾಗಿದೆ ಎಂದರು.

ಸಿಂಡಿಕೇಟ್ ಸದಸ್ಯರಾದ ಸಂತೋಷ್, ದೇವರಾಜು, ಉಪವಿಭಾಗಾಧಿಕಾರಿ ಎ.ಎನ್.ರಘುನಂದನ್, ತಹಶೀಲ್ದಾರ್ ರಾಜೀವ್, ಭೂ ದಾಖಲಾತಿ ಅಧಿಕಾರಿ ಡಿ.ರವಿಕುಮಾರ್ ಯಾದವ್, ಚೀಮಂಗಲ ಗ್ರಾಮ ಪಂಚಾಯಿತಿ ಅಧ್ಯಕ್ಷ ರಾಜಣ್ಣ ಇದ್ದರು.

ಕಾಂಗ್ರೆಸ್: ವಿಭಾಗ ಮಟ್ಟದ ಸಮಾವೇಶ • ನಾಯಕತ್ವ ಬದಲಾವಣೆ ಕಚ್ಚಾಟದಲ್ಲಿ ಬಿಜೆಪಿ: ಸುರ್ಜೇವಾಲ ಆರೋಪ

ಪಕ್ಷ ಸಂಘಟನೆ: ತುಮಕೂರಿನಿಂದ ಚಾಲನೆ

ಪ್ರಜಾವಾಣಿ ವಾರ್ತೆ

ತುಮಕೂರಿನಲ್ಲಿ ನಡೆದ ಕಾಂಗ್ರೆಸ್ ಸಭೆಯಲ್ಲಿ ಮುಖಂಡರಾದ ಎಸ್‌ಆರ್‌ಪಾಟೀಲ, ಸಿದ್ದರಾಮಯ್ಯ, ರಣದೀಪ ಸಿಂಗ್ ಸುರ್ಜೇವಾಲ, ಡಿ.ಕೆ.ಶಿವಕುಮಾರ್, ಡಾ.ಜಿ.ಪರಮೇಶ್ವರ ಇತರರು ಉಪಸ್ಥಿತರಿದ್ದರು

ತುಮಕೂರು: ರಾಜ್ಯದಲ್ಲಿ ಪಕ್ಷ ಸಂಘಟನೆಗೆ ತುಮಕೂರಿನಲ್ಲಿ ಶನಿವಾರ ಕಾಂಗ್ರೆಸ್ ಮುಖಂಡರು ಚಾಲನೆ ನೀಡಿದರು. ತುಮಕೂರು, ಚಿತ್ರದುರ್ಗ, ದಾವಣಗೆರೆ, ಚಿಕ್ಕಬಳ್ಳಾಪುರ, ಕೋಲಾರ ಜಿಲ್ಲೆಯ ಕಾಂಗ್ರೆಸ್ ಮುಖಂಡರ ಸಭೆ ನಡೆಸುವ ಮೂಲಕ ಕೆಪಿಸಿಸಿ ಉಸ್ತುವಾರಿ ರಣದೀಪ ಸಿಂಗ್ ಸುರ್ಜೇವಾಲ ಅವರು ಕಾರ್ಯಕರ್ತರನ್ನು ಸಜ್ಜುಗೊಳಿಸುವ ಕೆಲಸಕ್ಕೆ ಚಾಲನೆ ನೀಡಿದರು.

ಮೊದಲಿಗೆ ಮಂಗಳೂರಿನಲ್ಲಿ ಚಾಲನೆ ನೀಡಲು ಉದ್ದೇಶಿಸಿದ್ದು, ರಾಜ್ಯಸಭೆ ಸದಸ್ಯ ಆಸ್ಕರ್ ಫರ್ನಾಂಡೀಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿರುವುದರಿಂದ ಅಲ್ಲಿ ಶುಕ್ರವಾರ ಹಮ್ಮಿಕೊಂಡಿದ್ದ ಸಭೆ ರದ್ದುಪಡಿಸಲಾಗಿತ್ತು.

ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್, ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ, ವಿಧಾನ ಪರಿಷತ್ ನಾಯಕ ಎಸ್.ಆರ್.ಪಾಟೀಲ, ಮುಖಂಡರಾದ ಡಾ.ಜಿ.ಪರಮೇಶ್ವರ, ವೀರಪ್ಪ ಮೊಯಿಲಿ ಸೇರಿದಂತೆ ರಾಜ್ಯದ ಪ್ರಮುಖ ನಾಯಕರ ಜತೆಗೂಡಿ ತುಮಕೂರಿನಿಂದಲೇ ಪಕ್ಷ ಸಂಘಟನೆ ಆರಂಭಿಸಿದ್ದಾರೆ. ಇದೇ ರೀತಿ ರಾಜ್ಯದ ಎಲ್ಲಾ ವಿಭಾಗಗಳಲ್ಲೂ ಸಭೆ ನಡೆಸಿ ಕಾಂಗ್ರೆಸ್‌ಗೆ ಬಲ ತುಂಬುವ ಕೆಲಸದಲ್ಲಿ ನಿರತರಾಗಿದ್ದಾರೆ.

ಸಭೆಯ ಮಧ್ಯದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಸುರ್ಜೇವಾಲ, 'ರಾಜ್ಯದ ಜನರು ನೆರೆ, ಕೋವಿಡ್‌ನಿಂದ ಸಂಕಷ್ಟಕ್ಕೆ ಸಿಲುಕಿದ್ದು, ಅವರಿಗೆ ಸ್ಪಂದಿಸುವ ಬದಲು ನಾಯಕತ್ವ ಬದಲಾವಣೆಯ ಕಚ್ಚಾಟದಲ್ಲಿ ಬಿಜೆಪಿ ಮುಖಂಡರು ತೊಡಗಿದ್ದಾರೆ. ಭ್ರಷ್ಟಾಚಾರದಲ್ಲಿ ಮುಳುಗಿದ್ದಾರೆ. ಜನರ ಹಿತಕ್ಕಿಂತ ಅಧಿಕಾರ, ಹಣ ಕೊಳ್ಳೆ ಹೊಡೆಯುವುದರಲ್ಲೇ ನಿರತರಾಗಿದ್ದಾರೆ' ಎಂದು ವಾಗ್ದಾಳಿ ನಡೆಸಿದರು.

ಸಿದ್ದರಾಮಯ್ಯ ಮಾತನಾಡಿ, 'ಸರ್ಕಾರ ಭ್ರಷ್ಟಾಚಾರದಲ್ಲಿ ಮುಳುಗಿದ್ದು, ಕೋವಿಡ್ ನಿರ್ವಹಣೆಯಲ್ಲಿ ಭಾರಿ ಭ್ರಷ್ಟಾಚಾರ ನಡೆಸಿದ್ದಾರೆ. ಬ್ಯಾಂಕ್ ಖಾತೆಗೆ ಹಣ ಹಾಕಿಸಿಕೊಂಡು ಗುತ್ತಿಗೆ ನೀಡಲಾಗುತ್ತಿದೆ. ಮಕ್ಕಳಿಗೆ ಮೊಟ್ಟೆ ನೀಡುವಲ್ಲೂ ಇದೇ ರೀತಿ ಆಗಿದೆ. ಬಿಜೆಪಿ ಭ್ರಷ್ಟಾಚಾರದ ಪಕ್ಷ, ಅವರಷ್ಟು ಭ್ರಷ್ಟರು ಮತ್ತಾರೂ ಇಲ್ಲ' ಎಂದು ಟೀಕಿಸಿದರು.

ಅಭಿವೃದ್ಧಿ ಕಾರ್ಯಗಳು ಸಂಪೂರ್ಣ ಕುಂಠಿತಗೊಂಡಿವೆ. ಇದೇ ಕಾರಣಕ್ಕೆ ಬಿಜೆಪಿ ನಾಯಕರು ಮುಖ್ಯಮಂತ್ರಿಯನ್ನು ಬದಲಾವಣೆ ಮಾಡುತ್ತಿದ್ದಾರೆ. ಅವರ ಆಂತರಿಕ ವಿಚಾರದಲ್ಲಿ ನಾವು ಮಧ್ಯೆ ಪ್ರವೇಶಿಸುವುದಿಲ್ಲ ಎಂದರು.

ಶಿವಕುಮಾರ್, 'ಮುಖ್ಯಮಂತ್ರಿ ಬಿ.ಎಸ್.ಯಡಿಯೂರಪ್ಪ ಕಳೆದ ಎರಡು ವರ್ಷಗಳಲ್ಲಿ ಯಾವುದೇ ಕಾರ್ಯಕ್ರಮಗಳನ್ನು ರಾಜ್ಯದ ಜನರಿಗೆ ನೀಡಿಲ್ಲ. ಹಾಗಾಗಿ ಬದಲಾವಣೆ ಮಾಡುತ್ತಿದ್ದಾರೆ' ಎಂದು ಹೇಳಿದರು.

'ಜಿಲ್ಲಾ ಮುಖಂಡರಿಂದಲೂ ಅಭಿಪ್ರಾಯ ಸಂಗ್ರಹ'

ಬೂತ್, ವಾರ್ಡ್ ಮಟ್ಟದಿಂದ ಹಿಡಿದು ಕೆಪಿಸಿಸಿ ಹಂತದ ವರೆಗೂ ಕಾಂಗ್ರೆಸ್ ಸಂಘಟನೆಗೆ ಒತ್ತು ನೀಡುವುದು ಸಭೆಯ ಪ್ರಮುಖ ಉದ್ದೇಶವಾಗಿದೆ ಎಂದು ಕೆಪಿಸಿಸಿ ಉಸ್ತುವಾರಿ ರಣದೀಪ ಸಿಂಗ್ ಸುರ್ಜೇವಾಲ ಹೇಳಿದರು.

ಪಕ್ಷ ಸಂಘಟನೆ ಹಾಗೂ ಚುನಾವಣೆಯಲ್ಲಿ ಗೆಲುವು ಸಾಧಿಸಲು ಜಿಲ್ಲೆಯ ಪ್ರತಿ ಮುಖಂಡರಿಂದಲೂ ಅಭಿಪ್ರಾಯ ಪಡೆದುಕೊಳ್ಳಲಾಗುತ್ತಿದೆ. ಅವರ ಸಲಹೆ, ಸಹಕಾರ ಪಡೆದುಕೊಂಡರೆ ಪಕ್ಷಕ್ಕೆ ಮತ್ತಷ್ಟು ಬಲ ತುಂಬಬಹುದು. ಹಾಗಾಗಿ ಮುಖಂಡರೇ ಕಾರ್ಯಕರ್ತರ ಬಳಿಗೆ ಹೋಗುತ್ತಿದ್ದೇವೆ ಎಂದು ಸ್ಪಷ್ಟಪಡಿಸಿದರು.

ಮುಂದಿನ ದಿನಗಳಲ್ಲಿ ಜಿಲ್ಲಾ ಹಾಗೂ ತಾಲ್ಲೂಕು ಪಂಚಾಯಿತಿ ಚುನಾವಣೆಗಳು ಎದುರಾಗಲಿದ್ದು, ಈಗಿನಿಂದಲೇ ಸಿದ್ಧತೆ ಆರಂಭಿಸಲಾಗುತ್ತಿದೆ. ಸಂಘಟನೆ ಮಾಡಿದರೆ ಚುನಾವಣೆಯಲ್ಲಿ ಗೆಲುವು ಸಾಧಿಸುವುದು ಸುಲಭ. ವಿಧಾನಸಭೆ ಚುನಾವಣೆಯನ್ನು ದೃಷ್ಟಿಯಲ್ಲಿ ಇಟ್ಟುಕೊಂಡು ಸಂಘಟನೆಗೆ ಚಾಲನೆ ನೀಡಲಾಗಿದೆ ಎಂದು ತಿಳಿಸಿದರು.

ದೂರು ಸಲ್ಲಿಕೆ: ಕೋಲಾರ ಹಾಗೂ ಇತರ ಕೆಲ ಜಿಲ್ಲೆಗಳ ನಾಯಕರು ರಾಜ್ಯದ ಮುಖಂಡರ ವಿರುದ್ಧವೂ ದೂರು ಹೇಳಿಕೊಂಡಿದ್ದಾರೆ. ಪಕ್ಷದಲ್ಲಿ ಕಳೆದ ಕೆಲ ದಿನಗಳಿಂದ ಆಗುತ್ತಿರುವ ಬೆಳವಣಿಗೆಗಳು, ಮುಖ್ಯಮಂತ್ರಿ ಸ್ಥಾನದ ಅಭ್ಯರ್ಥಿ ಬಗ್ಗೆ ಹೊರಬರುತ್ತಿರುವ ಹೇಳಿಕೆಗಳು, ಇದರಿಂದ ಪಕ್ಷಕ್ಕೆ ಆಗುತ್ತಿರುವ ನಷ್ಟ, ಕೆಲವು ನಾಯಕರು ಕಾರ್ಯಕರ್ತರಿಗೆ ಸರಿಯಾಗಿ ಸ್ಪಂದಿಸದಿರುವ ಬಗ್ಗೆಯೂ ಚರ್ಚೆಗಳು ನಡೆದವು ಎಂದು ಮೂಲಗಳು ತಿಳಿಸಿವೆ.

'ಪಕ್ಷ ಸಂಘಟನೆ, ಮುಂಬರುವ ಚುನಾವಣೆಗೆ ಈಗಿನಿಂದಲೇ ಕಾರ್ಯಕರ್ತರನ್ನು ಸಜ್ಜುಗೊಳಿಸುವ ಕೆಲಸ ಮಾಡುತ್ತಿದ್ದೇವೆ. ಚುನಾವಣೆ ಸಮಯದಲ್ಲಿ ಸಿದ್ಧತೆ ನಡೆಸಿದರೆ ಗೆಲುವು ಸಾಧಿಸುವುದು ಕಷ್ಟಕರ. ಅದಕ್ಕೆ ಮೊದಲೇ ತಯಾರಿ ನಡೆಸಿದ್ದೇವೆ. ಸಂಘಟನೆ ವಿಚಾರದಲ್ಲಿ ಪ್ರತಿ ಸಂಸತ್ ಕ್ಷೇತ್ರಕ್ಕೂ ಪ್ರತ್ಯೇಕ ಕಾರ್ಯತಂತ್ರ ರೂಪಿಸಲಾಗುತ್ತಿದೆ' ಎಂದು ಹೇಳಿದರು.

ಗ್ರಾಮೀಣಾಭಿವೃದ್ಧಿ ವಿ.ವಿಯಲ್ಲಿ ಪದವಿ ಶಿಕ್ಷಣ

ಗದಗ: 'ಯುಜಿಸಿ ಮಾರ್ಗಸೂಚಿ, ರಾಜ್ಯ ಸರ್ಕಾರದ ನೀತಿ ಮತ್ತು ಕೇಂದ್ರ ಸರ್ಕಾರದ ನೂತನ ರಾಷ್ಟ್ರೀಯ ಶಿಕ್ಷಣ ನೀತಿಗೆ ಅನುಗುಣವಾಗಿ ಈ ಶೈಕ್ಷಣಿಕ ವರ್ಷದಿಂದ ವಿಶ್ವವಿದ್ಯಾಲಯದಲ್ಲಿ ಯುಜಿ (ಪದವಿ) ತರಗತಿಗಳನ್ನು ಆರಂಭಿಸಲು ನಿರ್ಧರಿಸಲಾಗಿದೆ' ಎಂದು ಕರ್ನಾಟಕ ರಾಜ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ವಿಷ್ಣುಕಾಂತ ಎಸ್. ಚಟಪಲ್ಲಿ ತಿಳಿಸಿದ್ದಾರೆ.

ಶನಿವಾರ ವಿಶ್ವವಿದ್ಯಾಲಯದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ, 'ಪದವಿ ಶಿಕ್ಷಣದ ಗುಣಮಟ್ಟ ಅತ್ಯುತ್ಕೃಷ್ಟವಾಗಿರಬೇಕು ಎಂಬುದೇ ಹೊಸ ಶಿಕ್ಷಣ ನೀತಿಯ ಮೂಲ ಉದ್ದೇಶ. ಜಾರಿಗೆ ತರಲು ರಾಜ್ಯ ಸರ್ಕಾರ ಈ ಸಂಬಂಧ ಟಾಸ್ಕ್‌ಫೋರ್ಸ್ ರಚಿಸಿದೆ' ಎಂದು ಹೇಳಿದರು.

'ಪದವಿ ಶಿಕ್ಷಣ ಸಾಮಾನ್ಯವಾಗಿ ಕಾಲೇಜುಗಳಲ್ಲಿ ನಡೆಯುತ್ತದೆ. ವಿಶ್ವವಿದ್ಯಾಲಯದಲ್ಲಿ ಪದವಿ ಶಿಕ್ಷಣ ನೀಡುವ ವ್ಯವಸ್ಥೆ ಇರುವುದು ಬಹಳ ಕಡಿಮೆ. ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿ ಕಲೆ, ವಿಜ್ಞಾನ, ವಾಣಿಜ್ಯ ಎಂಬ ವಿಭಾಗಗಳು ಇರುವುದಿಲ್ಲ. ಇವೆಲ್ಲವನ್ನೂ ಒಳಗೊಂಡಿರುವ ಬಹು ವಿಸ್ತೀರ್ಣ ವಿಭಾಗಗಳು ಇರಲಿದ್ದು, ಪದವಿ ಶಿಕ್ಷಣದ ಗುಣಮಟ್ಟ ಹೆಚ್ಚಿಸಲು ಇದು ಸಹಕಾರಿಯಾಗಲಿದೆ' ಎಂದರು.

'ಹೊಸ ರಾಷ್ಟ್ರೀಯ ಶಿಕ್ಷಣ ನೀತಿಯನ್ವಯ ನಾಲ್ಕು ವರ್ಷಗಳ ಪದವಿ ವಿದ್ಯಾಭ್ಯಾಸದ ವೇಳೆ ಓದುವ ಅಥವಾ ಹೊರನಡೆಯುವ ಆಯ್ಕೆ ವಿದ್ಯಾರ್ಥಿಗಳಿಗೆ ಇರಲಿದೆ. ಅಂದರೆ ಒಬ್ಬ ಪದವಿ ವಿದ್ಯಾರ್ಥಿ ಒಂದು ವರ್ಷ ಓದಿದ ನಂತರ ಎರಡನೇ ವರ್ಷಕ್ಕೆ ದಾಖಲಾಗಬೇಕು ಎಂಬ ನಿಯಮವಿಲ್ಲ. ಒಂದು ವರ್ಷ ಓದಿಕ್ಕಕ್ಕೆ ಆ ವಿದ್ಯಾರ್ಥಿಗೆ ಸರ್ಟಿಫಿಕೇಟ್ ಸಿಗಲಿದೆ. ಎರಡು ವರ್ಷ ಓದಿದರೆ ಡಿಪ್ಲೊಮಾ ಸರ್ಟಿಫಿಕೇಟ್, ಮೂರು ವರ್ಷ ಓದಿದರೆ ಪದವಿ ಪ್ರಮಾಣಪತ್ರ ಹಾಗೂ ನಾಲ್ಕು ವರ್ಷ ಪೂರ್ಣಗೊಳಿಸಿದರೆ ಹಾನರ್ಸ್ ಪದವಿ ಸಿಗಲಿದೆ' ಎಂದು ಮಾಹಿತಿ ನೀಡಿದರು.

ಉಚಿತ ಶಿಕ್ಷಣ

'ಕೋವಿಡ್-19ನಿಂದ ತಂದೆ ತಾಯಿಗಳನ್ನು ಕಳೆದುಕೊಂಡಿರುವ 18 ವರ್ಷ ಮೇಲ್ಪಟ್ಟ ವಿದ್ಯಾರ್ಥಿಗಳು ಗ್ರಾಮೀಣಾಭಿವೃದ್ಧಿ ವಿಶ್ವವಿದ್ಯಾಲಯದಲ್ಲಿ ವ್ಯಾಸಂಗ ಮಾಡಲು ಬಯಸಿದರೆ ಅವರಿಗೆ ಉಚಿತ ಶಿಕ್ಷಣ ಹಾಗೂ ವಸತಿ ವ್ಯವಸ್ಥೆ ಕಲ್ಪಿಸಲಾಗುವುದು ಎಂದು ಪ್ರೊ. ವಿಷ್ಣುಕಾಂತ ಎಸ್.ಚಟಪಲ್ಲಿ ತಿಳಿಸಿದರು.

ತಂದೆ ಅಥವಾ ತಾಯಿ ಇಬ್ಬರಲ್ಲಿ ಒಬ್ಬರನ್ನು ಕಳೆದುಕೊಂಡಿರುವ ವಿದ್ಯಾರ್ಥಿಗಳಿಗೆ ಉಚಿತ ಶಿಕ್ಷಣ ಹಾಗೂ ಪರೀಕ್ಷಾ ಶುಲ್ಕ ವಿನಾಯಿತಿ ಮಾಡಿಕೊಡಲಾಗುವುದು ಎಂದರು.

ತಿಂಗಳಲ್ಲಿ 500ಕ್ಕೂ ಅಧಿಕ ಪ್ರಕರಣಗಳು ಪತ್ತೆ

ಮುಂಗಾರು ಮಳೆ: ಏರುಗತಿ ಪಡೆದ ಡೆಂಗಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಕಳೆದ ವರ್ಷ ನಿಯಂತ್ರಣದಲ್ಲಿದ್ದ ಡೆಂಗಿ ಪ್ರಕರಣಗಳು ಈ ವರ್ಷ ಮುಂಗಾರು ಮಳೆ ಕಾಣಿಸಿಕೊಂಡ ಬೆನ್ನಲ್ಲೇ ಏರುಗತಿ ಪಡೆದಿದೆ. ಈ ತಿಂಗಳಲ್ಲಿಯೇ 500ಕ್ಕೂ ಅಧಿಕ ಪ್ರಕರಣಗಳು ಪತ್ತೆಯಾಗಿವೆ.

ಈ ವರ್ಷದ ಮೊದಲ ಆರು ತಿಂಗಳ ಅವಧಿಯಲ್ಲಿ ಡೆಂಗಿ ಪ್ರಕರಣಗಳ ಸಂಖ್ಯೆ ಸಾವಿರದ ಗಡಿಯ ಆಸುಪಾಸಿನಲ್ಲಿತ್ತು. ಮುಂಗಾರು ಚುರುಕುಗೊಂಡ ಬಳಿಕ ಪ್ರಕರಣಗಳ ಸಂಖ್ಯೆ ಕೂಡ ಏರಿಕೆಯ ಹಾದಿ ಹಿಡಿದಿದೆ. ಈವರೆಗೆ ಒಟ್ಟು 1,502 ಪ್ರಕರಣಗಳು ವರದಿಯಾಗಿವೆ.

ಬೆಂಗಳೂರು ಗ್ರಾಮಾಂತರ ಬಿಟ್ಟು ಎಲ್ಲ ಜಿಲ್ಲೆಗಳಲ್ಲಿ ಡೆಂಗಿ ಪ್ರಕರಣಗಳು ಪತ್ತೆಯಾಗಿವೆ. ಉಡುಪಿ, ಬೆಂಗಳೂರಿನಲ್ಲಿ ತಲಾ 255, ಶಿವಮೊಗ್ಗದಲ್ಲಿ 158, ದಕ್ಷಿಣ ಕನ್ನಡದಲ್ಲಿ 147, ಕಲಬುರ್ಗಿಯಲ್ಲಿ 81, ಬಳ್ಳಾರಿ ಮತ್ತು ಗದಗದಲ್ಲಿ ತಲಾ 76, ದಾವಣಗೆರೆಯಲ್ಲಿ 63, ಕೊಪ್ಪಳದಲ್ಲಿ 61, ವಿಜಯಪುರದಲ್ಲಿ 50 ಡೆಂಗಿ ಪ್ರಕರಣಗಳು ದೃಢಪಟ್ಟಿವೆ. ಉಳಿದ ಜಿಲ್ಲೆಗಳಲ್ಲಿ ಈ ಸಂಖ್ಯೆ 50ರ ಗಡಿಯೊಳಗೆ ಇವೆ.

ಸೋಂಕಿತ ಈಡಿಸ್ ಈಜಿಪ್ಟೈ ಸೊಳ್ಳೆಗಳ ಕಡಿತದಿಂದ ಹರಡುವ ಈ ಜ್ವರಕ್ಕೆ 2019ರಲ್ಲಿ 18 ಸಾವಿರಕ್ಕೂ ಅಧಿಕ ಮಂದಿ ಬಳಲಿದ್ದರು. ಅವರಲ್ಲಿ 17 ಮಂದಿ ಮೃತಪಟ್ಟಿದ್ದರು. 10 ಸಾವಿರಕ್ಕೂ ಅಧಿಕ ಪ್ರಕರಣಗಳು ರಾಜಧಾನಿ ಬೆಂಗಳೂರಿನಲ್ಲೇ ವರದಿಯಾಗಿದ್ದವು. ದಶಕದಲ್ಲೇ ಅತಿ ಹೆಚ್ಚು ಮಂದಿ ಈ ಜ್ವರಕ್ಕೆ ಒಳಪಟ್ಟಿದ್ದರು. ಕಳೆದ ವರ್ಷ 3,823 ಮಂದಿಯಲ್ಲಿ ಡೆಂಗಿ ಜ್ವರ ಕಾಣಿಸಿಕೊಂಡಿತ್ತು. ಅವರಲ್ಲಿ 5 ಮಂದಿ ಮೃತಪಟ್ಟಿದ್ದರು.

ಎಚ್ಚರಿಕೆ ಅಗತ್ಯ: ರಾಜ್ಯದಲ್ಲಿ ಈವರೆಗೆ 508 ಚಿಕೂನ್‌ಗುನ್ಯಾ ಪ್ರಕರಣಗಳು ದೃಢಪಟ್ಟಿವೆ. 24 ಜಿಲ್ಲೆಗಳಲ್ಲಿ ಪ್ರಕರಣಗಳು ವರದಿಯಾಗಿದ್ದು, ಕೋಲಾರದಲ್ಲಿ ಗರಿಷ್ಠ (55) ಪ್ರಕರಣಗಳು ವರದಿಯಾಗಿವೆ. ಡೆಂಗಿ ಹಾಗೂ ಚಿಕೂನ್‌ಗುನ್ಯಾ ಜ್ವರಕ್ಕೆ ಈ ವರ್ಷ ಯಾವುದೇ ವ್ಯಕ್ತಿ ಮೃತಪಟ್ಟಿಲ್ಲ.

'ಮುಂಗಾರು ಮಳೆಯ ಅವಧಿಯಲ್ಲಿ ಡೆಂಗಿ ಪ್ರಕರಣಗಳು ಹೆಚ್ಚಾಗುವ ಸಾಧ್ಯತೆ ಇರುತ್ತದೆ. ಹಗಲು ಹೊತ್ತಿನಲ್ಲಿ ಕಚ್ಚುವ ಈಡಿಸ್ ಸೊಳ್ಳೆ, ಸಂಗ್ರಹಿಸಿಟ್ಟ ನೀರಿನಲ್ಲಿ ಮೊಟ್ಟೆಯಿಟ್ಟು, ಸಂತಾನೋತ್ಪತ್ತಿ ಮಾಡುತ್ತದೆ. ಹಾಗಾಗಿ, ಮನೆಯ ಸುತ್ತಮುತ್ತ ಸ್ವಚ್ಛತೆಗೆ ಹೆಚ್ಚಿನ ಆದ್ಯತೆ ನೀಡಬೇಕು. ಡೆಂಗಿ ಜ್ವರಕ್ಕೆ ಈ ವರ್ಷ ಯಾವುದೇ ವ್ಯಕ್ತಿ ಮೃತಪಟ್ಟಿಲ್ಲ' ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ ಆರೋಗ್ಯ ಇಲಾಖೆಯ ಅಧಿಕಾರಿಯೊಬ್ಬರು ತಿಳಿಸಿದರು.

ರೋಗ ಲಕ್ಷಣ ಆಧರಿಸಿ ಚಿಕಿತ್ಸೆ

'ಡೆಂಗಿ ಜ್ವರಕ್ಕೆ ಲಸಿಕೆ ಲಭ್ಯವಿಲ್ಲ. ರೋಗ ಲಕ್ಷಣಗಳಿಗೆ ಅನುಗುಣವಾಗಿ ಚಿಕಿತ್ಸೆ ನೀಡಲಾಗುತ್ತದೆ. ತೀವ್ರ ಜ್ವರ, ವಿಪರೀತ ತಲೆನೋವು, ಕಣ್ಣಿನ ಹಿಂಭಾಗದಲ್ಲಿ ನೋವು, ಮಾಂಸಖಂಡ ಮತ್ತು ಕೀಲುಗಳಲ್ಲಿ ನೋವು, ವಾಕರಿಕೆ, ವಾಂತಿ ಹಾಗೂ ಆಂತರಿಕ ರಕ್ತಸ್ರಾವ ಪ್ರಮುಖ ಲಕ್ಷಣವಾಗಿದೆ. ಸೂಕ್ತ ಸಮಯದಲ್ಲಿ ಚಿಕಿತ್ಸೆ ಪಡೆಯದಿದ್ದಲ್ಲಿ ಸಾವು ಸಂಭವಿಸುವ ಸಾಧ್ಯತೆ ಇರುತ್ತದೆ. ಮನೆಯ ಸುತ್ತಮುತ್ತ ಬಿಸಾಡಿದ ವಸ್ತುಗಳಲ್ಲಿ ಮಳೆ ನೀರು ಶೇಖರಣೆಯಾಗದಂತೆ ಎಚ್ಚರವಹಿಸಬೇಕು. ಸ್ವಚ್ಛತೆಗೆ ಆದ್ಯತೆ ನೀಡಬೇಕು' ಎಂದು ಆರೋಗ್ಯ ಇಲಾಖೆ ತಿಳಿಸಿದೆ.

ಜೊಲ್ಲೆ ರಾಜೀನಾಮೆಗೆ ಆಗ್ರಹಿಸಿ ಪ್ರತಿಭಟನೆ

ಪ್ರಜಾವಾಣಿ ವಾರ್ತೆ

ರೇಸ್ ಕೋರ್ಸ್ ರಸ್ತೆಯ ಕಾಂಗ್ರೆಸ್ ಭವನದ ಬಳಿ ಕಾರ್ಯಕರ್ತರು ಮೊಟ್ಟೆ ಪ್ರದರ್ಶಿಸಿ ಪ್ರತಿಭಟನೆ ನಡೆಸಿದರು

ಬೆಂಗಳೂರು: 'ಗರ್ಭಿಣಿಯರು ಹಾಗೂ ಮಕ್ಕಳಲ್ಲಿನ ಅಪೌಷ್ಟಿಕತೆ ನೀಗಿಸಲು ನೀಡಲಾಗುವ ಮೊಟ್ಟೆಯಲ್ಲೂ ಹಣ ಮಾಡಲು ಮುಂದಾದ ಮಹಿಳಾ ಹಾಗೂ ಮಕ್ಕಳ ಕಲ್ಯಾಣ ಸಚಿವೆ ಶಶಿಕಲಾ ಜೊಲ್ಲೆ ತಕ್ಷಣ ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡಬೇಕು' ಎಂದು ಆಗ್ರಹಿಸಿ ಪ್ರತಿಭಟನೆ ನಡೆಸಿ, ಮುಖ್ಯಮಂತ್ರಿ ನಿವಾಸಕ್ಕೆ ಮೆರವಣಿಗೆಯಲ್ಲಿ ತೆರಳಲು ಮುಂದಾದ ಕಾಂಗ್ರೆಸ್‌ನ ಮಹಿಳಾ ಮತ್ತು ಯುವ ಕಾರ್ಯಕರ್ತರನ್ನು ಪೊಲೀಸರು ವಶಕ್ಕೆ ಪಡೆದರು.

ರೇಸ್ ಕೋರ್ಸ್ ರಸ್ತೆಯ ಕಾಂಗ್ರೆಸ್ ಭವನದ ಬಳಿ ಪ್ರತಿಭಟನೆ ನಡೆಸಿದ ಕಾಂಗ್ರೆಸ್ ಕಾರ್ಯಕರ್ತರು ಶಶಿಕಲಾ ಜೊಲ್ಲೆ ವಿರುದ್ಧ ಘೋಷಣೆ ಕೂಗಿ, ಪ್ರತಿಕೃತಿ ದಹಿಸಿ ಆಕ್ರೋಶ ವ್ಯಕ್ತಪಡಿಸಿದರು.

ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಪುಷ್ಪಾ ಅಮರನಾಥ್ ನೇತೃತ್ವದಲ್ಲಿ ಪ್ರತಿಭಟನೆ ನಡೆಯಿತು. ಅರ್ಧ ಗಂಟೆಗೂ ಹೆಚ್ಚು ಕಾಲ ಪ್ರತಿಭಟನೆ ನಡೆಸಿದ ಬಳಿಕ ಮೆರವಣಿಗೆ ನಡೆಸಲು ಮುಂದಾಗುತ್ತಿದ್ದಂತೆ ಪೊಲೀಸರು ತಡೆದರು.

'ಮಕ್ಕಳ ಪೌಷ್ಟಿಕ ಆಹಾರದ ವಿಚಾರದಲ್ಲಿಯೂ ಅವ್ಯವಹಾರ ನಡೆಸಿರುವುದು ಅಕ್ಷಮ್ಯ. ಸಚಿವ ಸ್ಥಾನಕ್ಕೆ ಅವರು ರಾಜೀನಾಮೆ ನೀಡದಿದ್ದರೆ, ಇನ್ನಷ್ಟು ಉಗ್ರ ಹೋರಾಟ ಹಮ್ಮಿಕೊಳ್ಳಲಾಗುವುದು' ಎಂದು ಪುಷ್ಪಾ ಎಚ್ಚರಿಕೆ ನೀಡಿದರು.

ತನಿಖೆಯಾಗಲಿ: ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಪುಷ್ಪಾ, ಮಾಜಿ ಸಚಿವೆ ಉಮಾಶ್ರೀ ಮತ್ತು ಶಾಸಕಿ ಕುಸುಮಾ ಎಚ್ ಅವರು ಪ್ರಕರಣದ ತನಿಖೆಗೆ ಒತ್ತಾಯಿಸಿದರು.

'ಮಹಿಳೆಯರು ಹಾಗೂ ಮಕ್ಕಳಲ್ಲಿನ ಅಪೌಷ್ಟಿಕತೆ ದೂರ ಮಾಡಲು ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಮೊಟ್ಟೆ ನೀಡುವ ಯೋಜನೆ ಆರಂಭಿಸಲಾಗಿತ್ತು. ಆದರೆ ಈ ಮೊಟ್ಟೆಯಿಂದ ಕಮಿಷನ್ ಪಡೆಯುವ ಹುನ್ನಾರ ನಡೆಯುತ್ತಿರುವುದು ದುರದೃಷ್ಟಕರ. ಇದು ಮಹಿಳೆಯರು ಮತ್ತು ಮಕ್ಕಳಿಗೆ ಮಾಡಿದ ದೊಡ್ಡ ದ್ರೋಹ' ಎಂದೂ ಟೀಕಿಸಿದರು.

ಖಾಸಗಿ ಸುದ್ದಿವಾಹಿನಿಯೊಂದು ಮಾರುವೇಷದ ಕಾರ್ಯಾಚರಣೆ ನಡೆಸಿ, ಮೊಟ್ಟೆ ಪೂರೈಕೆಗೆ ಟೆಂಡರ್‌ಗೆ ಜೊಲ್ಲೆ ಅವರು ಲಂಚಕ್ಕೆ ಬೇಡಿಕೆ ಇಟ್ಟಿದ್ದಾರೆ ಎಂದು ಆರೋಪಿಸಿತ್ತು.

'ಆರೋಪದ ಹಿಂದೆ ರಾಜಕೀಯ ಷಡ್ಯಂತ್ರ'

ಶಶಿಕಲಾ ಜೊಲ್ಲೆ

ಮೊಟ್ಟೆ ಖರೀದಿ ಟೆಂಡರ್‌ನಲ್ಲಿ ಅವ್ಯವಹಾರ ನಡೆದಿದೆ ಎಂಬ ಆರೋಪದ ಹಿಂದೆ ರಾಜಕೀಯ ಷಡ್ಯಂತ್ರವಿದೆ ಎಂದು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಸಚಿವೆ ಶಶಿಕಲಾ ಜೊಲ್ಲೆ ಹೇಳಿದ್ದಾರೆ.

ತಮ್ಮ ವಿರುದ್ಧದ ಆರೋಪದ ಕುರಿತು ಪತ್ರಿಕಾ ಹೇಳಿಕೆಯ ಮೂಲಕ ಸ್ಪಷ್ಟನೆ ನೀಡಿರುವ ಅವರು, 'ಇಲಾಖೆಯಿಂದ ಮೊಟ್ಟೆ ಖರೀದಿಗಾಗಿ ಈವರೆಗೆ ಯಾವುದೇ ಟೆಂಡರ್ ನಡೆದಿಲ್ಲ. ಮೊಟ್ಟೆ ಪೂರೈಕೆ ಗುತ್ತಿಗೆ ನೀಡುವುದಾಗಿ ನಾನು ಯಾವುದೇ ವ್ಯಕ್ತಿ ಅಥವಾ ಸಂಸ್ಥೆಯಿಂದ ಹಣ ಪಡೆದಿಲ್ಲ' ಎಂದು ತಿಳಿಸಿದ್ದಾರೆ.

'ನಮ್ಮ ಪಕ್ಷದ ಶಾಸಕ ಪರಣ್ಣ ಮುನವಳ್ಳಿ ಅವರು ತಮ್ಮ ಸಂಬಂಧಿಕರು ಎಂದು ಹೇಳಿಕೊಂಡ ಕೆಲವರನ್ನು ಕರೆದುಕೊಂಡು ಬಂದು, ಮೊಟ್ಟೆ ಪೂರೈಕೆ ಟೆಂಡರ್ ಕೊಡಿಸುವಂತೆ ನನ್ನನ್ನು ಭೇಟಿಮಾಡಿದ್ದರು. ಕಾನೂನು ಪ್ರಕಾರ ಟೆಂಡರ್‌ನಲ್ಲಿ ಭಾಗವಹಿಸುವಂತೆ ಸೂಚಿಸಿದ್ದೆ. ಹಣಕಾಸಿನ ವ್ಯವಹಾರದ ಕುರಿತು ನಾನು ಯಾವುದೇ ಮಾತನಾಡಿರಲಿಲ್ಲ' ಎಂದು ಹೇಳಿದ್ದಾರೆ.

ರಹಸ್ಯ ಕಾರ್ಯಾಚರಣೆ ನಡೆಸಿ ತಮ್ಮನ್ನು ಆರೋಪಿತರನ್ನಾಗಿ ಬಿಂಬಿಸುವ ಷಡ್ಯಂತ್ರ ನಡೆದಿದೆ. ತಮ್ಮ ಅವಧಿಯಲ್ಲಿ ಯಾವುದೇ ಅವ್ಯವಹಾರ ನಡೆದಿಲ್ಲ. ಮಹಿಳೆಯರು ಮತ್ತು ಮಕ್ಕಳ ಅಭಿವೃದ್ಧಿಗೆ ಪೂರಕವಾಗಿ ಕೆಲಸ ಮಾಡಲಾಗಿದೆ. ತಾವು ಸಚಿವರಾಗುವ ಸಂದರ್ಭದಲ್ಲಿ ರಾಜ್ಯದಲ್ಲಿ ಅಪೌಷ್ಟಿಕತೆಯ ಪ್ರಮಾಣ ಶೇಕಡ 0.3ರಷ್ಟಿತ್ತು. ಈಗ ಶೇ 0.1ಕ್ಕೆ ಇಳಿದಿದೆ. ತಮ್ಮ ಪ್ರಯತ್ನವೇ ಇದಕ್ಕೆ ಕಾರಣ ಎಂದು ತಿಳಿಸಿದ್ದಾರೆ.

ಚಿತ್ರಾವಳಿ

ನಗರದ ಕಮರ್ಷಿಯಲ್ ಸ್ಟ್ರೀಟ್ ರಸ್ತೆಯಲ್ಲಿ ತುಂತುರು ಮಳೆ ಸುರಿದ ವೇಳೆ ಯುವತಿಯರು ರಸ್ತೆ ಬದಿಯ ಪುಟ್ಟ ಅಂಗಡಿಯ ಕೆಳಗೆ ಆಶ್ರಯ ಪಡೆದದ್ದು ಶನಿವಾರ ಕಂಡುಬಂತು ಪ್ರಜಾವಾಣಿ ಚಿತ್ರ

ನಗರದ ಸುರಾನಾ ಕಾಲೇಜಿನಲ್ಲಿ ಶನಿವಾರ ಗೋಕುಲ ಸಹೃದಯ ಅಭಿನಯದ 'ಚಿಟ್ಟೆ' ಏಕವ್ಯಕ್ತಿ ರಂಗಪ್ರಯೋಗ ಪ್ರದರ್ಶನಗೊಂಡಿತು. ಮಕ್ಕಳ ಮನಸ್ಥಿತಿ ಕುರಿತ ಈ ನಾಟಕವನ್ನು ಬೇಲೂರು ರಘುನಂದನ ರಚಿಸಿದ್ದಾರೆ. ಕೃಷ್ಣಮೂರ್ತಿ ಕವತ್ತಾರು ನಿರ್ದೇಶಿಸಿದ್ದಾರೆ ಪ್ರಜಾವಾಣಿ ಚಿತ್ರ

ಬೆಂಗಳೂರಿನ ಸುರಾನಾ ಕಾಲೇಜಿನ ನಮ್ ತಂಡ (ಥೀಯೇಟರ್ ಕ್ಲಬ್) ಹಾಗೂ ಕನ್ನಡ ವಿಭಾಗ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ರಂಗಕರ್ಮಿ ಚನ್ನಕೇಶವ ಅವರಿಗೆ ರಂಗ ನಮನ ಸಲ್ಲಿಸಲಾಯಿತು. ಕವಯಿತ್ರಿ ಎಚ್.ಎಲ್.ಪುಷ್ಪಾ, ರಂಗಕರ್ಮಿ ಶ್ರೀನಿವಾಸ್ ಜಿ.ಕಪ್ಪಣ್ಣ, ರಂಗನಿರ್ದೇಶಕ ಸಿ. ಬಸವಲಿಂಗಯ್ಯ, ಶಶಿಧರ ಭಾರಿಘಾಟ್, ರಂಗ ನಟ ಸುಂದರ್ ವೀಣಾ ಪಾಲ್ಗೊಂಡಿದ್ದರು ಪ್ರಜಾವಾಣಿ ಚಿತ್ರ

ಜೋಶಿ, ಬೊಮ್ಮಾಯಿ ಗೋಪ್ಯ ಚರ್ಚೆ

ಹುಬ್ಬಳ್ಳಿ: ರಾಜ್ಯದಲ್ಲಿ ಮುಖ್ಯಮಂತ್ರಿ ಬದಲಾವಣೆ ಕುರಿತು ಚರ್ಚೆ ನಡೆಯುತ್ತಿರುವ ಸಂದರ್ಭದಲ್ಲಿಯೇ ಗೃಹ ಸಚಿವ ಬಸವರಾಜ ಬೊಮ್ಮಾಯಿ ಅವರು, ಶನಿವಾರ ರಾತ್ರಿ ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರ ನಿವಾಸಕ್ಕೆ ಭೇಟಿ ನೀಡಿದ್ದಾರೆ. ಇಬ್ಬರೇ ಪ್ರತ್ಯೇಕವಾಗಿ ಗೋಪ್ಯ ಚರ್ಚೆ ನಡೆಸಿದ್ದಾರೆ.

ಮುಖ್ಯಮಂತ್ರಿ ಬದಲಾದರೆ, ಆ ಸ್ಥಾನಕ್ಕೆ ಪ್ರಲ್ಹಾದ ಜೋಶಿ ಹಾಗೂ ಬಸವರಾಜ ಬೊಮ್ಮಾಯಿ ಅವರ ಹೆಸರು ಕೇಳಿ ಬರುತ್ತಿರುವ ಸಂದರ್ಭದಲ್ಲಿ ಇಬ್ಬರೂ ನಾಯಕರು 30 ನಿಮಿಷಗಳ ಕಾಲ ಮಾತುಕತೆ ನಡೆಸಿರುವುದು ಕುತೂಹಲಕ್ಕೆ ಕಾರಣವಾಗಿದೆ.

ಇಬ್ಬರೂ ನಾಯಕರು ಆಗಾಗ ಹುಬ್ಬಳ್ಳಿಗೆ ಬರುತ್ತಾರೆ. ಆದರೆ, ಇಬ್ಬರೂ ಭೇಟಿಯಾಗಿ ಚರ್ಚೆ ನಡೆಸುವುದಿಲ್ಲ. ಸಭೆಗಳಲ್ಲಿ ಮಾತ್ರ ಭೇಟಿಯಾದರೆ, ಕುಶಲೋಪರಿ ವಿಚಾರಿಸುತ್ತಾರೆಯೇ ಹೊರತು, ಗೋಪ್ಯವಾಗಿ ಚರ್ಚೆ ನಡೆಸಿರುವುದು ರಾಜಕೀಯ ಬದಲಾವಣೆಯ ಚರ್ಚೆಗೆ ಮತ್ತಷ್ಟು ಪುಷ್ಟಿ ನೀಡಿದೆ.

'ರಾಜಕೀಯವಾಗಿ ಯಾವುದೇ ಚರ್ಚೆ ಮಾಡಲು ಸಚಿವ ಜೋಶಿ ಅವರನ್ನು ಭೇಟಿ ಮಾಡಿಲ್ಲ. ಅವರು ಪ್ರತಿನಿಧಿಸುವ ಕ್ಷೇತ್ರದ ವ್ಯಾಪ್ತಿಯಲ್ಲಿ ಶಿಗ್ಗಾವಿಯೂ ಸೇರಿರುವುದರಿಂದ ಅಲ್ಲಿನ ಕೆಲವು ಕಾಮಗಾರಿ ಕುರಿತು ಚರ್ಚಿಸಿದ್ದೇನೆ. ಮುಖ್ಯಮಂತ್ರಿ ಬದಲಾವಣೆ ಕುರಿತು ಯಾವುದೇ ಚರ್ಚೆ ನಡೆದಿಲ್ಲ' ಎಂದು ಗೃಹ ಸಚಿವ ಬಸವರಾಜ ಬೊಮ್ಮಾಯಿ ಸುದ್ದಿಗಾರರಿಗೆ ತಿಳಿಸಿದರು.

ಸಿ.ಎಂ ಬಿಎಸ್‌ವೈ ಇಂದು ಬೆಳಗಾವಿಗೆ

ಪ್ರಜಾವಾಣಿ ವಾರ್ತೆ



ಯಡಿಯೂರಪ್ಪ

ಬೆಂಗಳೂರು: ಪ್ರವಾಹದಿಂದ ಉಂಟಾಗಿರುವ ಹಾನಿ ಕುರಿತು ಪರಿಶೀಲಿಸಲು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರು ಭಾನುವಾರ ಬೆಳಗಾವಿ ಜಿಲ್ಲೆಯಲ್ಲಿ ಪ್ರವಾಸ ಕೈಗೊಳ್ಳಲಿದ್ದಾರೆ.

ಈ ಕುರಿತು ಶನಿವಾರ ಬೆಳಿಗ್ಗೆ ಮಾಹಿತಿ ನೀಡಿರುವ ಮುಖ್ಯಮಂತ್ರಿಯವರ ಕಚೇರಿ, 'ರಾಜ್ಯದ ಹಲವು ಜಿಲ್ಲೆಗಳಲ್ಲಿ ಹೆಚ್ಚು ಮಳೆಯಾಗಿದ್ದು, ಪ್ರವಾಹ ಪರಿಸ್ಥಿತಿ ಉಂಟಾಗಿದೆ. ಮಳೆ ಮತ್ತು ಪ್ರವಾಹದಿಂದ ಉಂಟಾಗಿರುವ ಪರಿಸ್ಥಿತಿಯನ್ನು ಅವಲೋಕಿಸಲು ಮುಖ್ಯಮಂತ್ರಿಯವರು ಭಾನುವಾರ ಬೆಳಗಾವಿ ಜಿಲ್ಲೆಯಲ್ಲಿ ಪ್ರವಾಸ ಕೈಗೊಳ್ಳಲಿದ್ದಾರೆ' ಎಂದು ತಿಳಿಸಿದೆ.

ಯಡಿಯೂರಪ್ಪ ಅವರು 2019ರಲ್ಲಿ ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ಸಂದರ್ಭದಲ್ಲೂ ರಾಜ್ಯದಲ್ಲಿ ಪ್ರವಾಹ ಪರಿಸ್ಥಿತಿ ಇತ್ತು. ಪ್ರಮಾಣವಚನ ಸ್ವೀಕರಿಸಿದ ಕೆಲವೇ ದಿನಗಳಲ್ಲಿ ಬೆಳಗಾವಿ ಜಿಲ್ಲೆಗೆ ಭೇಟಿ ನೀಡಿ ಪ್ರವಾಹ ಪರಿಸ್ಥಿತಿ ಅವಲೋಕಿಸಿದ್ದರು.

ಜಿಲ್ಲೆಯಲ್ಲೇ ಮೊಕ್ಕಾಂಗೆ ಸೂಚನೆ: ಪ್ರವಾಹ ಪರಿಸ್ಥಿತಿ ಉಂಟಾಗಿರುವ ಹಾಗೂ ಹೆಚ್ಚು ಮಳೆ ಬೀಳುತ್ತಿರುವ ಜಿಲ್ಲೆಗಳ ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಉಸ್ತುವಾರಿ ಸಚಿವರ ಜತೆ ಮುಖ್ಯಮಂತ್ರಿಯವರು ಶನಿವಾರ ಬೆಳಿಗ್ಗೆ ದೂರವಾಣಿ ಮೂಲಕ ಚರ್ಚೆ ನಡೆಸಿದ್ದಾರೆ. ಸದ್ಯದ ಪರಿಸ್ಥಿತಿ ಕುರಿತು ಮಾಹಿತಿ ಪಡೆದಿದ್ದಾರೆ ಎಂದು ಮುಖ್ಯಮಂತ್ರಿಯವರ ಕಚೇರಿ ಹೇಳಿದೆ.

ಮಳೆ ಹಾಗೂ ಪ್ರವಾಹ ಪರಿಸ್ಥಿತಿ ಇರುವುದರಿಂದ ಜಿಲ್ಲಾ ಉಸ್ತುವಾರಿ ಸಚಿವರು ಆಯಾ ಜಿಲ್ಲೆಗಳಲ್ಲೇ ಇರುವಂತೆ ಯಡಿಯೂರಪ್ಪ ಅವರು ಸೂಚನೆ ನೀಡಿದ್ದಾರೆ ಎಂದು ತಿಳಿಸಿದೆ.

ಪರಿಶಿಷ್ಟ ಸಮುದಾಯವರಿಗೆ ಸಿ.ಎಂ ಸ್ಥಾನಕ್ಕೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಮುಖ್ಯಮಂತ್ರಿ ಸ್ಥಾನದಿಂದ ಬಿ.ಎಸ್. ಯಡಿಯೂರಪ್ಪ ಅವರು ಕೆಳಗಿಳಿದರೆ ಬಿಜೆಪಿ ವರಿಷ್ಠರು ಪರಿಶಿಷ್ಟ ಜಾತಿ ಅಥವಾ ಪರಿಶಿಷ್ಟ ಪಂಗಡದ ಹಿರಿಯ ನಾಯಕರೊಬ್ಬರನ್ನು ಮುಖ್ಯಮಂತ್ರಿಯನ್ನಾಗಿ ಆಯ್ಕೆ ಮಾಡಬೇಕು' ಎಂದು ಕರ್ನಾಟಕ ರಾಜ್ಯ ಆದಿ ಜಾಂಬವ ಸಂಘ ಹಾಗೂ ಸಾಮಾಜಿಕ ನ್ಯಾಯ ಪರಿಷತ್ ಜಂಟಿಯಾಗಿ ಆಗ್ರಹಿಸಿವೆ.

ಇಲ್ಲಿ ಶನಿವಾರ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಪರಿಷತ್ತಿನ ಅಧ್ಯಕ್ಷ ಅನಂತರಾಯಪ್ಪ, 'ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ ಶೇ 17ರಷ್ಟಿರುವ ಲಿಂಗಾಯತ ಸಮುದಾಯದವರು ಈವರೆಗೆ 9 ಬಾರಿ ಮುಖ್ಯಮಂತ್ರಿಯಾಗಿದ್ದಾರೆ. ಶೇ 16 ರಷ್ಟಿರುವ ಒಕ್ಕಲಿಗ ಸಮುದಾಯದವರು 6 ಸಲ, ಶೇ 5 ರಷ್ಟಿರುವ ಬ್ರಾಹ್ಮಣ ಸಮುದಾಯದವರು 2 ಬಾರಿ ಹಾಗೂ ಹಿಂದುಳಿದ ವರ್ಗದವರು 5 ಸಾರಿ ಮುಖ್ಯಮಂತ್ರಿಯಾಗಿದ್ದಾರೆ. ಆದರೆ, ಶೇ 24 ರಷ್ಟಿರುವ ಎಸ್.ಸಿ ಮತ್ತು ಎಸ್.ಟಿ ಸಮುದಾಯದವರಿಗೆ ಒಮ್ಮೆಯೂ ಮುಖ್ಯಮಂತ್ರಿಯಾಗುವ ಅವಕಾಶ ಸಿಕ್ಕಿಲ್ಲ' ಎಂದು ಬೇಸರ ವ್ಯಕ್ತಪಡಿಸಿದರು.

ಕರ್ನಾಟಕ ರಾಜ್ಯ ಆದಿ ಜಾಂಬವ ಸಂಘದ ಅಧ್ಯಕ್ಷ ಜಂಬು ದ್ವೀಪ ಸಿದ್ದರಾಜು, 'ಎಸ್.ಸಿ, ಎಸ್.ಟಿ ಸಮುದಾಯದ ಬೆಂಬಲದಿಂದ 50 ವರ್ಷ ಅಧಿಕಾರ ಅನುಭವಿಸಿದ ಕಾಂಗ್ರೆಸ್, ಈ ವರ್ಗಕ್ಕೆ ಒಮ್ಮೆಯೂ ಮುಖ್ಯಮಂತ್ರಿ ಸ್ಥಾನ ನೀಡದೆ ವಂಚಿಸಿತು. ಬಿಜೆಪಿಯಲ್ಲಿ ಗೋವಿಂದ ಕಾರಜೋಳ, ಬಿ. ಶ್ರೀರಾಮುಲು ಹಾಗೂ ಅರವಿಂದ ಲಿಂಬಾವಳಿ ಈ ಸಮುದಾಯದವರು. ಮುಖ್ಯಮಂತ್ರಿ ಸ್ಥಾನಕ್ಕೆ ಅರ್ಹತೆ ಹೊಂದಿದ್ದಾರೆ. ಈ ಮೂವರು ಹಿರಿಯ ನಾಯಕರು ಪಕ್ಷಕ್ಕೆ ಅತ್ಯುತ್ತಮ ಸೇವೆ ಸಲ್ಲಿಸಿದ್ದಾರೆ. 2023 ಮತ್ತು 2024ರಲ್ಲಿ ನಡೆಯಲಿರುವ ಚುನಾವಣೆಗಳನ್ನು ಗಮನದಲ್ಲಿಟ್ಟುಕೊಂಡು ಬಿಜೆಪಿ ವರಿಷ್ಠರು ಈ ಸಮುದಾಯಕ್ಕೆ ಮುಖ್ಯಮಂತ್ರಿ ಸ್ಥಾನ ನೀಡಬೇಕು' ಎಂದು ಆಗ್ರಹಿಸಿದ್ದಾರೆ.

'ಅತಿವೃಷ್ಟಿ ವೇಳೆ ಕಾಲುವೆಗಳಿಂದ ನೀರು ಹರಿಸಿ'

ಪ್ರಜಾವಾಣಿ ವಾರ್ತೆ

ಎಂ.ಬಿ. ರಾಜೇಗೌಡ

ಬೆಂಗಳೂರು: 'ಅತಿವೃಷ್ಟಿ ಸಂದರ್ಭದಲ್ಲಿ ಮಹಾರಾಷ್ಟ್ರದ ಅಣೆಕಟ್ಟೆಗಳಿಂದ ರಾಜ್ಯಕ್ಕೆ ಹರಿಯುವ ನೀರಿಗೆ ಹಲವು ಕಾಲುವೆಗಳನ್ನು ನಿರ್ಮಿಸಿ, ಉತ್ತರ ಕರ್ನಾಟಕದ ಎಲ್ಲ ಜಿಲ್ಲೆಗಳಿಗೆ ಹರಿಸಿ ಸದ್ಬಳಕೆ ಮಾಡಿಕೊಳ್ಳಬಹುದು. ಇದರಿಂದ ರಾಜ್ಯದಲ್ಲಿ ಅತಿವೃಷ್ಟಿಯನ್ನು ನಿಯಂತ್ರಿಸಬಹುದು' ಎಂದು ಕೃಷಿ ಹವಾಮಾನ ತಜ್ಞ ಎಂ.ಬಿ.ರಾಜೇಗೌಡ ಸಲಹೆ ನೀಡಿದ್ದಾರೆ.

'ರಾಜ್ಯದ ಗಡಿ ಪ್ರವೇಶಿಸುವಾಗಲೇ ಹರಿಯುವ ಮಾರ್ಗದ ಇಕ್ಕೆಲೆಗಳಲ್ಲಿ ಹತ್ತಾರು ಕಾಲುವೆಗಳನ್ನು ನಿರ್ಮಿಸಬೇಕು. ಈ ಕಾಲುವೆಗಳು ನೂರಾರು ಕೆರೆಗಳನ್ನು ಹಾದು ಹೋಗುವಂತೆ ಮಾಡಬೇಕು. ಇದರಿಂದ ಅಕ್ಕಪಕ್ಕದ ಹಳ್ಳಿಗಳಿಗೆ ಮತ್ತು ಕೃಷಿಗೂ ನೀರಿನ ಅಭಾವ ಇರುವುದಿಲ್ಲ. ಮುಖ್ಯವಾಗಿ ಉತ್ತರ ಕರ್ನಾಟಕದ ಜಿಲ್ಲೆಗಳಿಗೆ ನೀರು ಹರಿದರೆ, ಬರಗಾಲವೂ ತಗ್ಗಲಿದೆ' ಎಂದು ವಿವರಿಸಿದ್ದಾರೆ.

'ಎಲ್ಲ ನದಿಗಳಲ್ಲಿ ಸಂಗ್ರಹವಾಗಿರುವ ಹೂಳು ತೆಗೆಯುವ ಮೂಲಕ ಅವುಗಳನ್ನು ಪುನರುಜ್ಜೀವನಗೊಳಿಸಬೇಕು. ನೀರಿನ ಸಹಜ ಹರಿವಿಗೆ ಪೂರಕ ವ್ಯವಸ್ಥೆ ಕಲ್ಪಿಸಬೇಕು. ಕಾಲುವೆ ಕೆರೆಗಳನ್ನು ಸಂಪರ್ಕಿಸುವುದರಿಂದ ಈ ಭಾಗಗಳಲ್ಲಿ ಅಂತರ್ಜಲ ಮಟ್ಟ ಹೆಚ್ಚಲಿದೆ. ಕೃಷಿ ಚಟುವಟಿಕೆಗಳೂ ಗರಿಗೆದರುತ್ತವೆ. ಒಟ್ಟಾರೆ ಅತಿವೃಷ್ಟಿಯ ಅನಾಹುತಗಳನ್ನು ತಡೆಗಟ್ಟಲು ಈ ಮಾರ್ಗಗಳನ್ನು ಅನುಸರಿಸುವುದು ಸೂಕ್ತ. ಈ ಬಗ್ಗೆ ಸರ್ಕಾರ ಗಮನ ಹರಿಸಬೇಕು' ಎಂದೂ ಸಲಹೆ ನೀಡಿದ್ದಾರೆ.

ಪರಸ್ಪರ ಅಂತರ ಕಾಯ್ದುಕೊಳ್ಳಿ

ಕೃಷಿ ಸ್ನಾತಕ ಪದವಿ ಪ್ರವೇಶಕ್ಕೆ ಹೊಸ ಮಾರ್ಗಸೂಚಿ

ರಾಯಚೂರು: ಕೃಷಿ ಸ್ನಾತಕ ಪದವಿ ಪ್ರವೇಶಕ್ಕೆ ಹೊಸದಾಗಿ ಮಾರ್ಗಸೂಚಿ ನೀಡಲಾಗಿದ್ದು, ಪ್ರವೇಶಕ್ಕಾಗಿ ಈ ಮೊದಲು ನಡೆಯುತ್ತಿದ್ದ ಪ್ರಾಯೋಗಿಕ ಪರೀಕ್ಷೆ ರದ್ದುಗೊಳಿಸಲಾಗಿದೆ.

ಕೃಷಿಕರು ಮತ್ತು ಕೃಷಿ ಕಾರ್ಮಿಕರ ಕೋಟಾದಡಿ ಪ್ರವೇಶ ಬಯಸುವವರು ಮೂಲ ದಾಖಲಾತಿಗಳನ್ನು ಸ್ಕ್ಯಾನಿಂಗ್ ಮಾಡಿ ವಿಶ್ವವಿದ್ಯಾಲಯದ ವೆಬ್‌ಸೈಟ್‌ಗೆ ಅಪ್‌ಲೋಡ್ ಮಾಡಬೇಕಾಗುತ್ತದೆ. ದಾಖಲಾತಿಗಳನ್ನು ಪರಿಶೀಲಿಸಿ ಅಂಕಗಳ ಅರ್ಹತೆಯನ್ನು ಆಧರಿಸಿ ಪಟ್ಟಿಯೊಂದನ್ನು ವಿಶ್ವವಿದ್ಯಾಲಯವು ಸಿದ್ಧಪಡಿಸುತ್ತದೆ. ಆನಂತರ ಕರ್ನಾಟಕ ಪರೀಕ್ಷಾ ಪ್ರಾಧಿಕಾರಕ್ಕೆ ಪಟ್ಟಿ ರವಾನಿಸಲಾಗುತ್ತದೆ. ಅಂತಿಮ ಪಟ್ಟಿಯನ್ನು ಪ್ರಾಧಿಕಾರ ಪ್ರಕಟಿಸುತ್ತದೆ.

'ಕೃಷಿ ಸ್ನಾತಕ ಪದವಿ ಪ್ರವೇಶಕ್ಕೆ ಪ್ರಾಯೋಗಿಕ ಪರೀಕ್ಷೆ ರದ್ದಾಗಿದ್ದು, ಸರ್ಕಾರವು ನೀಡಿರುವ ಹೊಸ ಮಾರ್ಗಸೂಚಿ ಅನುಸರಿಸಲಾಗುವುದು' ಎಂದು ರಾಯಚೂರು ಕೃಷಿ ವಿಜ್ಞಾನಗಳ ವಿಶ್ವವಿದ್ಯಾಲಯದ ಕುಲಪತಿ ಡಾ.ಕೆ. ಎನ್.ಕಟ್ಟಿಮನಿ ತಿಳಿಸಿದರು.

ಅಪರಾಧ, ಭಯೋತ್ಪಾದನೆ ತಡೆಯಲು ಸಾಧ್ಯ

ಪೆಗಾಸಸ್ ತಂತ್ರಜ್ಞಾನ ಸಮರ್ಥಿಸಿಕೊಂಡ ಎನ್‌ಎಸ್‌ಒ

ಜೆರುಸಲೆಂ (ಪಿಟಿಐ): 'ಪೆಗಾಸಸ್‌ನಂತಹ ತಂತ್ರಜ್ಞಾನ ಇರುವುದರಿಂದಲೇ ಲಕ್ಷಾಂತರ ಮಂದಿ ರಾತ್ರಿ ನೆಮ್ಮದಿಯಾಗಿ ನಿದ್ರಿಸುತ್ತಿದ್ದಾರೆ ಮತ್ತು ಬೀದಿಗಳಲ್ಲಿ ನಡೆದಾಡುತ್ತಾರೆ' ಎಂದು ಇಸ್ರೇಲ್‌ನ ಸೈಬರ್ ಭದ್ರತೆ ಕಂಪನಿ ಎನ್‌ಎಸ್‌ಒ ಗ್ರೂಪ್ ಸಮರ್ಥಿಸಿಕೊಂಡಿದೆ.

ಭಾರತದ ಹಲವು ಪ್ರಮುಖ ವ್ಯಕ್ತಿಗಳ ಮೇಲೆ ಪೆಗಾಸಸ್ ಗೂಢಚರ್ಯೆ ನಡೆಸಲು ಯತ್ನಿಸಿದ ಬಗ್ಗೆ ಸಾಕಷ್ಟು ವಿವಾದ ನಡೆಯುತ್ತಿರುವ ಸಂದರ್ಭದಲ್ಲೇ ಎನ್‌ಎಸ್‌ಒ ಈ ಹೇಳಿಕೆ ನೀಡಿದೆ.

'ಗುಪ್ತಚರ ಇಲಾಖೆ ಮತ್ತು ಕಾನೂನು ಜಾರಿ ಸಂಸ್ಥೆಗಳ ಬಳಿ ಪೆಗಾಸಸ್‌ನಂತಹ ತಂತ್ರಜ್ಞಾನ ಇರುವುದರಿಂದ ಜನರು ನೆಮ್ಮದಿಯಾಗಿ ಇರಲು ಸಾಧ್ಯವಾಗಿದೆ. ಇದಕ್ಕಾಗಿ ಪೆಗಾಸಸ್ ಮತ್ತು ಇಂತಹ ತಂತ್ರಜ್ಞಾನಗಳಿಗೆ ಧನ್ಯವಾದ ಹೇಳಬೇಕು. ಜಗತ್ತಿನಾದ್ಯಂತ ಅಪರಾಧ, ಭಯೋತ್ಪಾದನೆ ತಡೆಯುವ ನಿಟ್ಟಿನಲ್ಲಿ ಹಾಗೂ ತನಿಖೆ ನಡೆಸಲು ಇದರಿಂದ ಸಾಧ್ಯವಾಗುತ್ತಿದೆ' ಎಂದು ಎನ್‌ಎಸ್‌ಒ ವಕ್ತಾರರು ಪ್ರತಿಪಾದಿಸಿದ್ದಾರೆ.

'ಈ ತಂತ್ರಜ್ಞಾನದ ನಿರ್ವಹಣೆಯನ್ನು ನಾವು ಮಾಡುವುದಿಲ್ಲ. ಗ್ರಾಹಕರು ಗೂಢಚರ್ಯೆ ಮೂಲಕ ಕಲೆ ಹಾಕುವ ಯಾವುದೇ ಮಾಹಿತಿಯೂ ನಮಗೆ ಸಿಗುವುದಿಲ್ಲ. ಸುರಕ್ಷತೆಗೆ ನಮ್ಮಿಂದ ಸಾಧ್ಯವಾದ ಪ್ರಯತ್ನ ನಡೆಸುತ್ತಿದ್ದೇವೆ' ಎಂದು ತಿಳಿಸಿದ್ದಾರೆ.

'ತಂತ್ರಜ್ಞಾನ ದುರುಪಯೋಗವಾಗುತ್ತಿರುವುದು ಪತ್ತೆಯಾದರೆ ನಾವು ಕ್ರಮಕೈಗೊಳ್ಳುತ್ತೇವೆ. ಮಾನವ ಹಕ್ಕುಗಳ ರಕ್ಷಣೆಯೂ ಈ ತಂತ್ರಜ್ಞಾನವು ಒಳಗೊಂಡಿದೆ' ಎಂದು ಹೇಳಿದ್ದಾರೆ.

ಭಾರತಕ್ಕೆ ಈ ತಂತ್ರಜ್ಞಾನದ ಸಾಫ್ಟ್‌ವೇರ್ ಅನ್ನು ಮಾರಾಟ ಮಾಡಲಾಗಿದೆಯೇ ಎನ್ನುವ ಪ್ರಶ್ನೆಗೆ ಸ್ಪಷ್ಟ ಉತ್ತರ ನೀಡದ ಅವರು, 'ಭಯೋತ್ಪಾದನೆ ಮತ್ತು ಗಂಭಿರ ಅಪರಾಧಗಳನ್ನು ತಡೆಗಟ್ಟುವ ಏಕೈಕ ಉದ್ದೇಶದಿಂದ ಉತ್ಪನ್ನಗಳ ಲೈಸನ್ಸ್ ಅನ್ನು ಸರ್ಕಾರದ ಗುಪ್ತಚರ ಇಲಾಖೆ ಮತ್ತು ಕಾನೂನು ಜಾರಿ ಇಲಾಖೆಗಳಿಗೆ ನೀಡಲಾಗುತ್ತಿದೆ' ಎಂದು ತಿಳಿಸಿದ್ದಾರೆ.

ಮುಖ್ಯಾಂಶಗಳು

- 'ಪೆಗಾಸಸ್‌ನಂತಹ ತಂತ್ರಜ್ಞಾನ ಇರುವುದರಿಂದ ಜನರು ನೆಮ್ಮದಿಯಿಂದಿರಲು ಸಾಧ್ಯ'
- 'ಅಪರಾಧ ಪ್ರಕರಣಗಳ ತನಿಖೆಗೂ ಈ ತಂತ್ರಜ್ಞಾನ ಸಹಕಾರಿ'
- 'ತಂತ್ರಜ್ಞಾನದ ದುರುಪಯೋಗ ಪತ್ತೆಯಾದರೆ ಕ್ರಮ ಖಚಿತ'

ಪ್ರಜಾವಾಣಿ
ಭಾನುವಾರದ
ಪುರವಣಿ
ಭಾನುವಾರ, 25 ಜುಲೈ 2021

ಅಜ್ಞಾತ ಜಲಪಾತಗಳ
ಜಾಡ ಹಿಡಿದು
9

11

ಮಿಂಚಿ ಮರೆಯಾದ ತಾರೆ

ಈ ನೆಲವಾದರೂ ಗಟ್ಟಿ ನೆಲೆ ಒದಗಿಸೀತೇ? ದೋಣಿ ಮೂಲಕ ಬಾಂಗ್ಲಾದೇಶ–ಮ್ಯಾನ್ಮಾರ್‌ನ ಗಡಿ ದಾಟಿದ ರೋಹಿಂಗ್ಯಾ ಮಹಿಳೆ ಬಂಗಾಳ ಕೊಲ್ಲಿಯ ಶಾ ಪೊರಿರ್ ದ್ವೀಪ ತಲುಪಿದಾಗ ಸಮುದ್ರ ತೀರವನ್ನು ಸ್ಪರ್ಶಿಸಿದ ಭಾವುಕ ಕ್ಷಣ... ದಾನಿಶ್ ಸಿದ್ದಿಕಿ ಸೆರೆಹಿಡಿದ ಇಂತಹ ಮಾನವೀಯ ಬಿಂಬಗಳು ಅದೆಷ್ಟೋ...

ದಾನಿಶ್ ಸಿದ್ದಿಕಿ... ಪುಲಿಟ್ಜರ್ ಪ್ರಶಸ್ತಿ ಪಡೆದ ಕ್ಷಣ

ಅದು ಮಾನವ ಸಂಘರ್ಷವೇ ಇರಲಿ, ಮನುಕುಲದ ದುರಂತ ಘಟನೆಯೇ ಆಗಿರಲಿ ಎಲ್ಲರಿಗಿಂತ ಮೊದಲು ಅಲ್ಲಿ ಹಾಜರಿದ್ದು 'ಮಾನವೀಯ ಬಿಂಬ'ಗಳನ್ನು ಹೆಕ್ಕಿ ತೆಗೆಯುತ್ತಿದ್ದ ಭಾರತದ ಅಸಾಮಾನ್ಯ ಛಾಯಾಗ್ರಾಹಕ ದಾನಿಶ್ ಸಿದ್ದಿಕಿ. ಅಫ್ಗಾನಿಸ್ತಾನದ ಯುದ್ಧದ ಚಿತ್ರಗಳನ್ನು ಸೆರೆ ಹಿಡಿಯಲು ಹೋದಾಗ ಗುಂಡಿಗೆ ಬಲಿಯಾಗಿದ್ದಾರೆ. ರೋಹಿಂಗ್ಯಾ ಸಮುದಾಯದ ಬಿಕ್ಕಟ್ಟು, ಕೋವಿಡ್ ಲಾಕ್‌ಡೌನ್ ಸಮಯದಲ್ಲಿ ಕಾರ್ಮಿಕರು ಅನುಭವಿಸಿದ ಇಕ್ಕಟ್ಟು, ದೆಹಲಿ ಗಲಭೆಯ ಹಿಂದಿನ ಗುಟ್ಟು, ಯುದ್ಧಭೂಮಿಯಲ್ಲಿ ಎರಡೂ ಪಾಳೆಯಗಳ ಪಟ್ಟು... ಹೀಗೆ ಅವರು ಉಳಿಸಿಹೋದ ಸಾವಿರಾರು ಚಿತ್ರಬಿಂಬಗಳು ಹೇಳುವ ಕಥೆಗಳ ಮೂಲಕ ಅವರು ಜನರೊಂದಿಗೆ ಸದಾ ಇರುತ್ತಾರೆ...

ಸಲ್ಮಾ ಸಿದ್ದಿಕಿ

ದಾನಿಶ್ ಜತೆಗಿನ ಮೊದಲ ಭೇಟಿಯ ಸಂದರ್ಭವನ್ನೊಮ್ಮೆ ನನ್ನ ಸ್ಮೃತಿಪಟಲದಿಂದ ಹೆಕ್ಕಿ ತೆಗೆಯಲು ಯತ್ನಿಸುವೆ. ಅದು 2005ರ ಬೇಸಿಗೆ ಋತು. ದೆಹಲಿಯ ಜಾಮಿಯಾ ಮಿಲಿಯಾ ಇಸ್ಲಾಮಿಯಾದ ಎ.ಜೆ.ಕೆ. ಸಮೂಹ ಸಂವಹನ ಸಂಶೋಧನಾ ಕೇಂದ್ರದ (ಎಂಸಿಆರ್‌ಸಿ) ಫಿಲಂ ಸ್ಕೂಲ್‌ನಲ್ಲಿ ನಾವಿಬ್ಬರೂ ಪ್ರವೇಶವನ್ನು ಪಡೆದಿದ್ದೆವು.

ಪಿಸ್ತಾ ಬಣ್ಣದ, ಅರ್ಧತೋಳಿನ, ಅಂಚನ್ನು ಜೀನ್ಸ್‌ನೊಳಗೆ ತುರುಕಿದ ಶರ್ಟ್ ಧರಿಸಿದ್ದ ದಾನಿಶ್, ಎಡಭಾಗದ ಹೆಗಲಲ್ಲಿ ಕಡುಗೆಂಪು ಬಣ್ಣದ ಬ್ಯಾಕ್‌ಪ್ಯಾಕ್ ಹೊತ್ತಿದ್ದ. ಓಹ್, ಹೌದು... ಆತ ಸಿಗರೇಟ್ ಸೇದುತ್ತಾ ಹೊಗೆ ಬೇರೆ ಬಿಡುತ್ತಿದ್ದ. ಪ್ರತೀ ಸಲ ಹೊಗೆ ಬಿಟ್ಟಾಗಲೂ ಅದು ಸೃಷ್ಟಿಸುತ್ತಿದ್ದ ಹಲವು ಸುರುಳಿಗಳನ್ನು ಕಂಡು ಹೆಮ್ಮೆಯಿಂದ ಬೀಗುತ್ತಿದ್ದ. ಪ್ರಾಯೋಗಿಕ ತರಬೇತಿ ಹಾಗೂ ಕ್ಲಾಸ್‌ರೂಮ್ ತರಗತಿಗಳ ಮಧ್ಯದ ಬಿಡುವಿನ ಸಂದರ್ಭದಲ್ಲಿ –ಎಂಸಿಆರ್‌ಸಿ ಟೆರೆಸ್ ಮೇಲಿನ ಕ್ಯಾಂಟೀನ್‌ನಲ್ಲಿ– ಹೀಗೆ ಆತ ಹೊಗೆಯ ಸುರುಳಿಗಳನ್ನು ಸೃಷ್ಟಿಸುತ್ತಾ ನಿಂತಿದ್ದನ್ನು ನಾವು ಕಾಣಬಹುದಿತ್ತು.

ದಾನಿಶ್ ಸದಾ ಚೈತನ್ಯದ ಚಿಲುಮೆ ಆಗಿರುತ್ತಿದ್ದ. ಆತನ ತಮಾಷೆಗೆ ಮಿತಿಯೇ ಇರಲಿಲ್ಲ. ತರಗತಿಯ ಬಹುತೇಕ ಎಲ್ಲ ವಿದ್ಯಾರ್ಥಿಗಳು ತಮ್ಮ ಕಿರುಚಿತ್ರಗಳನ್ನು ಆತನೊಂದಿಗೇ ನಿರ್ಮಿಸಲು ಹಾತೊರೆಯುತ್ತಿದ್ದರು. ಯಾವುದೇ ವಿದ್ಯಾರ್ಥಿಯ ಚಿತ್ರ ತಂಡದಲ್ಲಿ ಆತನಿದ್ದರೆ ಛಾಯಾಗ್ರಹಣಕ್ಕೆ ಸಂಬಂಧಿಸಿದ ಯಾವ ಚಿಂತೆಯೂ ಇಲ್ಲದೆ ನಿರ್ದೇಶಕನ ಹೊರೆಯನ್ನು ಆ ವಿದ್ಯಾರ್ಥಿ ನಿರಾಳವಾಗಿ ನಿಭಾಯಿಸಬಹುದಿತ್ತು. ಆದರೆ, ತನ್ನ ನಿಲುವಿಗೆ ವಿರುದ್ಧವಾಗಿ ನಡೆದುಕೊಂಡರೆ ಆತ ಸಹಕರಿಸಲು ನಿರಾಕರಿಸುತ್ತಿದ್ದ. ಹೀಗಿದ್ದೂ ಶೂಟಿಂಗ್‌ಗೆ ನಿರ್ಧರಿತವಾದ ಸಮಯಕ್ಕಿಂತ ಒಂದು ಗಂಟೆ ಮುಂಚೆಯೇ ಸ್ಥಳದಲ್ಲಿ ಹಾಜರಿರುತ್ತಿದ್ದ. 'ನಿರ್ದೇಶಕ'ನ ಕುರಿತು ತನ್ನದೇ ಆದ ರೀತಿಯಲ್ಲಿ ವ್ಯಾಖ್ಯಾನ ಮಾಡಿ, ಕೆಲಸವನ್ನು ಆರಂಭಿಸುತ್ತಿದ್ದ. ನೀವೊಂದು ವೇಳೆ ಆತನ ಸ್ನೇಹವಲಯಕ್ಕೆ ಸೇರಿದ ಅದೃಷ್ಟವಂತರಾಗಿದ್ದರೆ ಚಿತ್ರತಂಡದ ಅಧಿಕೃತ ಸದಸ್ಯನಲ್ಲದಿದ್ದರೂ ಆತ ಶೂಟ್ ಮಾಡಲು ಬರುತ್ತಿದ್ದ.

ಕಾಲೇಜಿನಲ್ಲಿ ನಾನು ಒಂದೇ ಒಂದು ಕಿರುಚಿತ್ರವನ್ನೂ ಆತನಿಲ್ಲದೆ ಮಾಡಿದ ನೆನಪಿಲ್ಲ. ನಮ್ಮ ಪದವಿಯ ಅಂತಿಮ ವರ್ಷದ ಚಿತ್ರ 'ರಿಹಾಇಶ್' (ನಿವಾಸ, 2007) ಅನ್ನು ನಾವು ನವದೆಹಲಿಯ ಜಾಮಿಯಾನಗರದ ಸುತ್ತಮುತ್ತಲ ಪ್ರದೇಶದಲ್ಲಿ ಶೂಟ್ ಮಾಡಿದ್ದೆವು. ನಮ್ಮೆಲ್ಲರ ಅಮ್ಮಂದಿರು, ಸಂಬಂಧಿಗಳು ಹಾಗೂ ಸ್ನೇಹಿತರು ನಮ್ಮ ಚಿತ್ರೀಕರಣ ತಂಡದ ಸದಸ್ಯರಾಗಿದ್ದರು. ಭಾಗಶಃ ಆತ್ಮಕಥೆ, ಭಾಗಶಃ ರಾಜಕೀಯದ ಕಥಾವಸ್ತು ಹೊಂದಿದ್ದ ಈ ಕಿರುಚಿತ್ರದಲ್ಲಿ, ಭಾರತದಲ್ಲಿ ಹೆಚ್ಚುತ್ತಿರುವ ಬಹುಸಂಖ್ಯಾತ ಬಲಪಂಥೀಯ ವಾತಾವರಣದಲ್ಲಿ ಮತೀಯ ಅಲ್ಪಸಂಖ್ಯಾತ ಮಧ್ಯಮ ವರ್ಗದವರ ಬದುಕಿನ ಒಳತೋಟಿಗಳನ್ನು, ಅವರು ಎದುರಿಸಬೇಕಾಗಿದ್ದ ಸಂಘರ್ಷಗಳನ್ನು ನಮ್ಮ ಬದುಕುಗಳ ಮೂಲಕ ಚಿತ್ರಿಸಿದ್ದೆವು.

ನಮ್ಮ ಬದುಕಿನ ಸುತ್ತಲೂ ಆವರಿಸಿದ್ದ ಹಿಂಸೆಯ ಬೆದರಿಕೆಯನ್ನು ಅರ್ಥಮಾಡಿಕೊಳ್ಳಲು 15 ವರ್ಷಗಳ ಗೆಳೆತನದ ಉದ್ದಕ್ಕೂ ನಾವು ಪ್ರಯತ್ನಿಸುತ್ತಲೇ ಬಂದಿದ್ದೆವು. ಸ್ನಾತಕೋತ್ತರ ವಿದ್ಯಾರ್ಥಿನಿಯಾಗಿ ಜಾಮಿಯಾ ಸೇರುವತನಕ ನಾನೊಬ್ಬ ಭಾರತೀಯ ಮುಸ್ಲಿಂ ಮಹಿಳೆ ಎಂಬ ನನ್ನ ಅಸ್ಮಿತೆಯನ್ನು ಅದುಮಿಡುತ್ತಲೇ ಬಂದಿದ್ದೆ. ಆ ಅಸ್ಮಿತೆ ಕುಟುಂಬದ ಚೌಕಟ್ಟಿನೊಳಗೆ ಮಾತ್ರ ತನ್ನ ಅಸ್ತಿತ್ವವನ್ನು ತೋರಿಸುತ್ತಿತ್ತು.

ಮತ್ತೊಂದೆಡೆ, ದಾನಿಶ್ ತನ್ನ ಗುರುತನ್ನು ಢಾಳಾಗಿ ಎತ್ತಿ ತೋರಿಸುತ್ತಿದ್ದ. ಅದನ್ನೊಂದು ಗೌರವದ ಬ್ಯಾಡ್ಜ್‌ನಂತೆ ಎದೆಯ ಮೇಲೆ ಹೊತ್ತು ಮೆರೆಯುತ್ತಿದ್ದ. ಆತನ ಜೋಕುಗಳಲ್ಲಿ ಪಕ್ಕಾ ಇಸ್ಲಾಮಿಕ್ ಮಾತುಗಳ ಮಸಾಲೆ ಇದ್ದೇ ಇರುತ್ತಿತ್ತು. ಅವನೊಂದಿಗೆ ಇದ್ದಾಗ ನನ್ನಲ್ಲೂ ನನ್ನ ಇತಿಹಾಸ ಹಾಗೂ ಅಸ್ಮಿತೆ ಕುರಿತು ಅದುಮಿಡುವಂಥದ್ದು ಏನಿಲ್ಲ ಎಂಬ ನಿರಾಳಭಾವ ಮೂಡಿತ್ತು.

ನಾವು ನಡೆಸುತ್ತಿದ್ದ ಚಿತ್ರೀಕರಣದ ಮೊದಲು ಹಾಗೂ ನಂತರ ನಾವಿಬ್ಬರೂ ಸಿಕ್ಕಾಪಟ್ಟೆ ವಾಗ್ವಾದ ಮಾಡಿಕೊಂಡಿದ್ದಿದೆ. ಆಗಿನ ದಿನಗಳಾದರೂ ಎಂಥವು ಅಂತೀರಿ? ಅಮೆರಿಕದ ಮೇಲೆ ನಡೆದ '9/11' ದಾಳಿಯ ಬಳಿಕ ಜಗತ್ತು ನಮ್ಮ ಸಮುದಾಯದ ಕಡೆ ನೋಡುತ್ತಿದ್ದ ರೀತಿ ನಮ್ಮಲ್ಲಿ ಗೊಂದಲವನ್ನು ಸೃಷ್ಟಿಸಿತ್ತು. ವ್ಯಾಕುಲರನ್ನಾಗಿಯೂ ಮಾಡಿತ್ತು. ದೆಹಲಿಯಲ್ಲಿ ಆಗ ನಾವು ಎದುರಿಸಿದ್ದು ಕುದಿ ದಿನಗಳ ಅನುಭವವನ್ನು. ವೈರಲ್ ಆಗುತ್ತಿದ್ದ ದೂರದ ಯಾವುದೇ ಪ್ರದೇಶದಲ್ಲಿ ಸೆರೆಹಿಡಿದಿದ್ದ ದೃಶ್ಯ ತುಣುಕುಗಳು ನಮ್ಮ ಫೋನ್‌ಗಳಲ್ಲೂ ಕಾಣಿಸಿಕೊಳ್ಳಲು ಆರಂಭಿಸಿದ್ದರಿಂದ ನಾನು ಚಿಂತೆಗೀಡಾಗಿದ್ದೆ. 21 ವರ್ಷದ ತರುಣರಾಗಿ ನಾವು ಕ್ಲಾಸ್‌ರೂಮ್‌ಗಳಲ್ಲಿ ಮಾಧ್ಯಮ ಅಂದರೇನು ಎಂದು ಅರ್ಥೈಸಿಕೊಳ್ಳುವಾಗ ಇರಾಕ್ ಇಲ್ಲವೆ ಅಫ್ಗಾನಿಸ್ತಾನದಲ್ಲಿ (ಅಮೆರಿಕ ಆಗ ಈ ಎರಡೂ ದೇಶಗಳಲ್ಲಿ ಭಯೋತ್ಪಾದನೆ ವಿರುದ್ಧ ಯುದ್ಧ ಸಾರಿತ್ತು) ಸೆರೆಹಿಡಿದಿದ್ದ ಇಂತಹ ದೃಶ್ಯ ತುಣುಕುಗಳ ಮೂಲಕ ನಮ್ಮನ್ನೂ ನಿಂದನೆಗೆ ಗುರಿಪಡಿಸಲಾಗುತ್ತಿತ್ತು.

ನಾನು ಆ ದೃಶ್ಯ ತುಣುಕುಗಳನ್ನು ನೋಡಲು ಹೋಗುತ್ತಿರಲಿಲ್ಲ. ಆದರೆ, 'ಹುಡುಗರು' ಅವುಗಳನ್ನು ತಪ್ಪದೇ ನೋಡುತ್ತಿದ್ದರು ಮತ್ತು ಹಂಚಿಕೊಳ್ಳುತ್ತಿದ್ದರು. 2005–06ರ ಸಮಯದಲ್ಲಿ ಅತ್ಯಂತ ಕೆಳಸ್ತರದ ನೋಕಿಯಾ ಫೋನ್‌ಗಳಿಗೆ ಬರುತ್ತಿದ್ದ ಅವಿಶ್ವಸನೀಯ ವಿಡಿಯೊಗಳ ಕುರಿತು ತಿಳಿಯುತ್ತಾ ಅವುಗಳಿಂದ ಜನರ ಬದುಕಿನ ಮೇಲೆ ಆಗುವ ಪರಿಣಾಮಗಳನ್ನು ಸೂಕ್ಷ್ಮವಾಗಿ ಗ್ರಹಿಸುವ ಬದಲು ಅರೆಬೆಂದ ಮಾಧ್ಯಮ ವರದಿಗಳ ಪ್ರಭಾವದಿಂದ ನಾನೂ ಒಂದೆರಡು ಬಾರಿ ಉಪದೇಶ ಮಾಡಿದ್ದುಂಟು. ಈ ಸಂಬಂಧವಾಗಿ ಕಿರಿಕಿರಿ ಆಗುವಷ್ಟರಮಟ್ಟಿಗೆ ವಾಗ್ವಾದ ಆಗಿದ್ದುಂಟು, ಗಟ್ಟಿ ಧ್ವನಿಯಲ್ಲಿ ಜಗಳಕ್ಕೆ ಇಳಿದಿದ್ದುಂಟು, ಇದಾದ ನಂತರ ನಂನಮ್ಮ ಸಂಗಾತಿಗಳನ್ನು ಸಂತೈಸಲು ಯತ್ನಿಸಿದ್ದೂ ಉಂಟು.

ದಾನಿಶ್‌ನ ಎದುರು ಹೆಚ್ಚು ಹೊತ್ತು ವಾದಿಸುತ್ತಾ ನಿಲ್ಲುವುದು ಕಠಿಣವಾಗುತ್ತಿತ್ತು. ಏಕೆಂದರೆ, ಸಂತೋಷಭರಿತವಾದ, ಹಿತಾನುಭವ ನೀಡುತ್ತಿದ್ದ ಅವನ ಸ್ನೇಹದಿಂದ ತುಂಬಾ ಹೊತ್ತು ದೂರ ಇರುವುದು ಅಸಾಧ್ಯದ ಮಾತಾಗಿತ್ತು.

ಜಾಮಿಯಾ ತೊರೆದ ಮೇಲೆ ದಾನಿಶ್ ಜತೆಗಿನ ನನ್ನ ಗೆಳೆತನ ತುಂಬಾ ಕಡಿಮೆ ವಾಗ್ವಾದಗಳಿಂದ ಕೂಡಿತ್ತು ಮತ್ತು ಹೆಚ್ಚು ಮಮತೆಯಿಂದ ತುಂಬಿತ್ತು. 2009ರಲ್ಲಿ ನಾವಿಬ್ಬರೂ ಜತೆಯಾಗಿ ಮತ್ತೊಂದು ಕಿರುಚಿತ್ರವನ್ನು ಮಾಡಿದ್ದೆವು. ಆತನ ಲೆನ್ಸ್‌ಗಳು ಚಿತ್ರರಂಗದ ದಿಗ್ಗಜ ಎನಿಸಿದ ಡಾ. ಡೇವಿಡ್ ಬೇಕರ್ ಅವರ ಗಮನವನ್ನು ಸೆಳೆದಿದ್ದವು. ಹೌದು, ಅದು ದಾನಿಶ್‌ಗೆ ತೀರಾ ಅನಿರೀಕ್ಷತವಾಗಿ ಒಲಿದ ಬಲು ಅಪ್ಯಾಯಮಾನವಾದ ಕ್ಷಣವಾಗಿತ್ತು.

ಅದೇ ಸಮಯದಲ್ಲಿ ದಾನಿಶ್ ಮುಂಬೈಗೆ ಸ್ಥಳಾಂತರಗೊಂಡ. ಬಳಿಕ ನಾವು ಯಾವಾಗಲೋ ಒಮ್ಮೆ ಭೇಟಿ ಆಗುತ್ತಿದ್ದೆವು. ಅವನ ಆ ಧೈರ್ಯ ಹಾಗೂ ಸ್ವಾತಂತ್ರ್ಯದ ಮನೋಭಾವ ಕಂಡು ಒಮ್ಮೊಮ್ಮೆ ನನಗೆ ಅಸೂಯೆಯೂ ಆಗಿದ್ದಿದೆ. ಹಾಗೆಯೇ ಆತನ ಗೆಳೆತನಕ್ಕಾಗಿ ನಾನು ಚಿರಋಣಿ ಆಗಿರುವೆ. ಮುಂದೆ ನಾನು ಪಿಎಚ್‌.ಡಿ ಮಾಡಲು ಇಂಗ್ಲೆಂಡ್‌ಗೆ ಹೋದೆ. ಭಿನ್ನ ಬಿಂದುಗಳತ್ತ ಬದುಕು ಸಾಗಿದರೂ ಪ್ರತೀ ವರ್ಷ ಮುಂಬೈ ಇಲ್ಲವೆ ದೆಹಲಿಯಲ್ಲಿ ನಾವು ತಪ್ಪದೇ ಭೇಟಿ ಮಾಡುತ್ತಿದ್ದೆವು.

ರಾಯಿಟರ್ಸ್ ಸುದ್ದಿ ಸಂಸ್ಥೆಯಲ್ಲಿ ಫೋಟೊ ಜರ್ನಲಿಸ್ಟ್ ಆಗಿ ದಾನಿಶ್ ಸೇರ್ಪಡೆಯಾದ. ಅಪಾಯಕಾರಿ ಅಸೈನ್‌ಮೆಂಟ್‌ಗಳ ಹೊಣೆ ಹೊತ್ತು ಬಿಡುವಿಲ್ಲದಂತೆ ಆತ ಒಂದು ಕಡೆಯಿಂದ ಮತ್ತೊಂದು ಕಡೆಗೆ ಸುತ್ತುತ್ತಿದ್ದ. ರಾಯಿಟರ್ಸ್ ಜತೆಗಿನ ಹತ್ತು ವರ್ಷಗಳ ವೃತ್ತಿ ಜೀವನದಲ್ಲಿ ಆತ ಮಾನವ ಸಂಘರ್ಷಗಳಿಗೆ ಸಂಬಂಧಿಸಿದಂತೆ ಎಂದಿಗೂ ಮಾಸದ ಸಾವಿರಾರು ಬಿಂಬಗಳನ್ನು ಸೆರೆಹಿಡಿದ. ಅವುಗಳಲ್ಲಿ ಕಾಬೂಲ್‌ನ ಬೆಳ್ಳಿತೆರೆಗೆ ಸಂಬಂಧಿಸಿದಂತೆ ತೆಗೆದ ಸರಣಿ ಚಿತ್ರಗಳು, ಭಾರತದಲ್ಲಿ ಕೋವಿಡ್ ಲಾಕ್‌ಡೌನ್ ಸಮಯದಲ್ಲಿ ವಲಸೆ ಕಾರ್ಮಿಕರ ಪರದಾಟದ ಬಿಂಬಗಳು, ರೋಹಿಂಗ್ಯಾ ಜನಾಂಗದ ಕರುಣಾಜನಕ ಸ್ಥಿತಿಯ ನೋಟಗಳು (ಈ ಚಿತ್ರಗಳಿಗೆ ಪ್ರತಿಷ್ಠಿತ ಪುಲಿಟ್ಜರ್ ಪ್ರಶಸ್ತಿಯೂ ಬಂತು) ಸದಾ ಕಾಲದ ನನ್ನ ಫೇವರಿಟ್.

ಮಾನವೀಯತೆಯ ಅಪ್ರತಿಮ ಕ್ಷಣಗಳನ್ನೋ ದಾರುಣ ಸನ್ನಿವೇಶಗಳನ್ನೋ ತನ್ನ ಫ್ರೇಮ್‌ಗಳಲ್ಲಿ ಸೆರೆಹಿಡಿದ ಮಾತ್ರಕ್ಕೆ ದಾನಿಶ್ ವಿರಮಿಸುತ್ತಿರಲಿಲ್ಲ. ತನ್ನ ಬಿಂಬಗಳಲ್ಲಿ ಸೆರೆಯಾದ ವ್ಯಕ್ತಿಗಳನ್ನು ಚೌಕಟ್ಟಿನ ಆಚೆಗೂ ಆತ ಹುಡುಕಿಕೊಂಡು ಹೋಗುತ್ತಿದ್ದ. ಪ್ರತಿಯೊಂದು ಬಿಕ್ಕಟ್ಟಿನ ಸಂದರ್ಭದಲ್ಲೂ ಇದು ಪುನರಾವರ್ತನೆ ಆಗುತ್ತಿತ್ತು. ಅದೇ ದಾನಿಶ್‌ನ ಕೆಲಸದ ವೈಶಿಷ್ಟ್ಯ ಕೂಡ. ದೆಹಲಿಯಿಂದ ಊರಿಗೆ ನಡೆದುಕೊಂಡು ಹೋದ ವಲಸೆ ಕಾರ್ಮಿಕ ದಯಾರಾಮ್, ಬುಂದೇಲ್‌ಖಂಡದ ತನ್ನ ಹಳ್ಳಿಗೆ ಸುರಕ್ಷಿತವಾಗಿ ತಲುಪಿರುವುದನ್ನು ಆ ಹಳ್ಳಿಗೆ ತಾನೂ ಭೇಟಿಕೊಟ್ಟು ದಾನಿಶ್ ಖಚಿತಪಡಿಸಿಕೊಂಡಿದ್ದ.

9ನೇ ಪುಟಕ್ಕೆ..

ಊರೋರ್ ಕಣ್ಣು ಮಾರಿ ಮ್ಯಾಲೆ!

ಸುನೀಲ್ ಬಾರ್ಕೂರ್

ಅದು 1874ನೆಯ ಇಸವಿ. ಬ್ರಿಟನ್ನಿನ ಜನತೆ ಅಲ್ಲಿಯ ರಾಜಮನೆತನದ ಅತ್ಯಂತ ಅದ್ದೂರಿ ಮದುವೆಯೊಂದನ್ನು ಸಾಕ್ಷೀಕರಿಸುತ್ತಿತ್ತು. ವಿಕ್ಟೋರಿಯಾ ರಾಣಿಯ ದ್ವಿತೀಯ ಪುತ್ರ, ಎಡಿನ್‌ಬರೊದ ಡ್ಯೂಕ್ ಆಗಿದ್ದ ಆಲ್ಫ್ರೆಡ್, ರಷ್ಯಾದ ರಾಜಕುಮಾರಿ ಮಾರಿಯಾ ಅಲೆಕ್ಸಾಂಡ್ರೋವ್ನಾ ಅವರನ್ನು ವರಿಸಿದ ಆ ಕ್ಷಣವನ್ನು ಕಣ್ತುಂಬಿಕೊಳ್ಳಲು ವಿಶ್ವದ ಎಲ್ಲೆಡೆಯಿಂದ ಅತಿಗಣ್ಯರು ಅಲ್ಲಿ ನೆರೆದಿದ್ದರು. ರಾಜಮನೆತನದ ಮದುವೆಯೆಂದರೆ ಕೇಳಬೇಕೇ? ಒಂದರ್ಥದಲ್ಲಿ ರಾಷ್ಟ್ರೀಯ ಉತ್ಸವದಂತಿದ್ದ ಮದುವೆಗೆ ನವವಧುವನ್ನು ಸ್ವಾಗತಿಸಲು ರಸ್ತೆಗಳಿಗೆಲ್ಲ ಸುಣ್ಣಬಣ್ಣ ಬಳಿಯಲಾಗಿತ್ತು. ಜನ ತಮ್ಮ ಮನೆಯಲ್ಲಿ ಸಿಹಿತಿಂಡಿಗಳನ್ನು ಮಾಡಿ ಸಂಭ್ರಮಿಸುತ್ತಿದ್ದರು.

ಲಂಡನ್ನಿನ ಪೀಕ್ ಫ್ರಿಯಾನ್ಸ್ ಎಂಬ ಬೇಕರಿಯ ಮುಖ್ಯ ಶೆಫ್ ಒಬ್ಬ ವಿಶೇಷ ಬಿಸ್ಕತ್ತೊಂದನ್ನು ತಯಾರಿಸಿದ. ಗೋಧಿಹಿಟ್ಟು, ಸ್ವಲ್ಪ ಸಕ್ಕರೆಯ ಪಾಕ, ತುಸು ವೆನಿಲಾ ಸೇರಿಸಿ ತಯಾರಿಸಲಾದ ಆ ಬಿಸ್ಕತ್ತು ಸಾಂಪ್ರದಾಯಿಕ ಬಿಸ್ಕತ್ತಿನಂತಿರದೇ ಚಪ್ಪಟೆಯಾಗಿ ಗೋಳಾಕಾರದಲ್ಲಿದ್ದು ತನ್ನ ಪರಿಧಿಯಾದ್ಯಂತ ಗಡಿಯಾರದ ಸೆಕೆಂಡಿನ ಗುರುತುಗಳಂತೆಯೇ ಸಣ್ಣ ಪಟ್ಟಿಗಳನ್ನು ಹೊಂದಿತ್ತು. ಮಧ್ಯ ಮೇಲ್ಮೈಯಲ್ಲಿ ತೂತುಗಳಿದ್ದು ಮಧ್ಯಭಾಗದಲ್ಲಿ ಮಾರಿಯಾ ಎಂದು ವಧುವಿನ ಹೆಸರನ್ನು ಕೆತ್ತಿ ಈ ಬಿಸ್ಕತ್ತನ್ನು ರೂಪಿಸಲಾಗಿತ್ತು. ಬೇಕರಿಯವರು ರಾಜಮನೆತನದವರಿಗೂ ಈ ಬಿಸ್ಕತ್ತುಗಳನ್ನು ಉಡುಗೊರೆಯಾಗಿ ಸಮರ್ಪಿಸಿದರು.

ಬ್ರಿಟನ್ನಿನ ರಾಜಮನೆತನದ ಅತ್ಯಂತ ಚಿರಸ್ಮರಣೀಯ ಗಳಿಗೆಯೊಂದರ ಸ್ಮರಣಿಕೆಯೆಂದು ಬಿಂಬಿಸಲ್ಪಟ್ಟ ಆ ಬಿಸ್ಕತ್ತು, ಇದೇ ಕಾರಣಕ್ಕೆ ದೇಶದಾದ್ಯಂತ ಹವಾ ಎಬ್ಬಿಸಿತು. ರಾಜಮನೆತನದ ಮದುವೆಗಿಂತ ಹೆಚ್ಚಾಗಿ ಈ ಬಿಸ್ಕತ್ತು ಸದ್ದು ಮಾಡಿತು. ಒಳ್ಳೆಯ ಮಾರ್ಕೆಟಿಂಗ್ ತಂತ್ರವನ್ನು ಬಳಸಿ ಚಾಣಾಕ್ಷತೆಯನ್ನು ಮೆರೆದ ಪೀಕ್ ಫ್ರಿಯಾನ್ಸ್ ಬೇಕರಿ ಯಶ ಸಾಧಿಸಿತ್ತು. ಕುತೂಹಲಕ್ಕಾಗಿ ಬೇಕರಿಗೆ ಭೇಟಿ ನೀಡಿ ಮಾರಿಯಾ ಬಿಸ್ಕತ್ತನ್ನು ಸವಿದ ಜನ ಮತ್ತೆ ಮತ್ತೆ ಬರತೊಡಗಿದರು. ದಿನದಿಂದ ದಿನಕ್ಕೆ ಈ ಬಿಸ್ಕತ್ತು ಜನಪ್ರಿಯವಾಗುವುದನ್ನು ಗಮನಿಸಿದ ಬ್ರಿಟನ್ನಿನ ದೊಡ್ಡ ಬಿಸ್ಕತ್ತು ತಯಾರಕ ಕಂಪನಿಗಳು ಈ ವಿನ್ಯಾಸವನ್ನು ಕಾಪಿ ಹೊಡೆದು ತಮ್ಮ ಕಂಪನಿಯ ಬ್ರ್ಯಾಂಡ್‌ನಲ್ಲಿ ಮಾರುಕಟ್ಟೆಗೆ ಪರಿಚಯಿಸಿ ಯಶಸ್ಸನ್ನು ಪಡೆದವು. ಹೀಗೆ ನಕಲಿಸುವಾಗ ಮಾರಿಯಾ ಎಂಬ ಹೆಸರು ಕೊಂಚ ಮಾರ್ಪಾಡುಗೊಂಡು ಮಾರಿ ಎಂದಾಯಿತು.

ಮಾರಿಯಾ ಅಲೆಕ್ಸಾಂಡ್ರೋವ್ನಾ

ವಿಷಯ ಅಷ್ಟಕ್ಕೇ ನಿಲ್ಲಲಿಲ್ಲ. ಬ್ರಿಟನ್ನಿನ ಬಿಸ್ಕತ್ತು ತಯಾರಕರು ಈ ಮಾರಿ ಬಿಸ್ಕತ್ತನ್ನು ಹೊರ ದೇಶಗಳಿಗೆ ರಫ್ತು ಮಾಡಲೂ ಯೋಜನೆ ರೂಪಿಸಿ ಕಾರ್ಯಪ್ರವೃತ್ತರಾದರು. ಆದರೆ, ಈ ಬಿಸ್ಕತ್ತುಗಳು ತೆಳುವಾಗಿದ್ದು ಹೆಚ್ಚು ಒಣಗಿರುವುದರಿಂದ ಸಾಗಾಣಿಕೆಯಲ್ಲಿ ಚೂರಾಗುವ ಮತ್ತು ಹೊರಗಿನ ವಾತಾವರಣದ ತೇವಾಂಶದ ಸಂಪರ್ಕಕ್ಕೆ ಬಂದರೆ ತನ್ನ ಕುರುಕಲುತನವನ್ನು ಕಳೆದುಕೊಳ್ಳುವ ಅಪಾಯವಿತ್ತು. ಆ ಕಾರಣಕ್ಕೆ ಅವುಗಳಿಗಾಗಿಯೇ ವಿಶೇಷ ಗಾಳಿಯಾಡದ ಡಬ್ಬಗಳನ್ನು ತಯಾರಿಸಿ ಹಡಗು ಮತ್ತು ರೈಲಿನ ಮೂಲಕ ರಫ್ತು ಮಾಡಲಾಯಿತು.

10ನೇ ಪುಟಕ್ಕೆ...

ಕೋಟೇಶ್ವರ, ಕುಂಭಾಶಿ, ತೆಕ್ಕಟ್ಟೆ ... ರೈಟ್ ರೈಟ್

ಶ್ರೀರಂಜನಿ ಅಡಿಗ

ಕೋಲ್ಕತ್ತದಲ್ಲಿ ಟ್ರಾಮ್, ಮುಂಬೈಗೆ ಲೋಕಲ್ ಟ್ರೈನ್, ಬೆಂಗಳೂರಿಗೆ ಬಿಎಂಟಿಸಿ, ಮೆಟ್ರೊ ಹೇಗೋ ಹಾಗೆಯೇ ಕರ್ನಾಟಕದ ಕರಾವಳಿಯಲ್ಲಿ ಖಾಸಗಿ ಬಸ್ಸುಗಳು. ಅವುಗಳು ಇಲ್ಲದಿರುವ ಕರಾವಳಿಯನ್ನು ಊಹಿಸಲಾಗದು. ಒಂದು ದಿನವಾದರೂ ಅವುಗಳ ಹಾರ್ನಿನ ದನಿಯಾಗಲೀ ರೈಟ್ ಪೋಯಿಯಾಗಲೀ ಕೇಳದಿದ್ದರೆ ಕರಾವಳಿಯಲ್ಲಿ ಕರ್ಫ್ಯೂ ಹಾಕಿದಂತಿರುತ್ತದೆ.

ನಮ್ಮ ಅಪ್ಪು, ಅಚ್ಚು ಕುಂದಾಪ್ರ ಕನ್ನಡದಲ್ಲಿ 'ಕೋಟೇಶ್ವರ, ಕುಂಭಾಶಿ, ತೆಕ್ಕಟ್ಟೆ ರೈಟ್ ರೈಟ್ ಎಂದು 'ಚಿಲ್ರೆ ಶೋಕಿ ಗಂಡು ನಾನಲ್ಲ'ದಲ್ಲಿ ಹಾಡಿದ ಮೇಲೆ 'ನಮ್ ಕುಂದಾಪ್ರ ಭಾಷಿ ಜೊತಿ' ನಮ್ಮೂರ ಬಸ್ಸುಗಳೂ ಫೇಮಸ್ ಆದವು. ಬೇರೆ ಊರುಗಳಲ್ಲಿ ಜನರು ಬಸ್ಸಿಗಾಗಿ ಸಾಲಾಗಿ ನಿಂತು ಕಾಯಬೇಕಿದ್ದರೆ, ಇಲ್ಲಿನ ಮುಖ್ಯ ಬಸ್‌ಸ್ಟ್ಯಾಂಡುಗಳಲ್ಲಿ ಬಸ್ಸುಗಳೇ ಸಾಲಾಗಿ ನಿಂತು ಜನರಿಗಾಗಿ ಕಾದು ಗೌರವದಿಂದ ಹತ್ತಿಸಿಕೊಳ್ಳುತ್ತವೆ. ಇಂಥ ಸೇವೆ ಬೇರೆಲ್ಲೂ ಕಾಣಲು ಸಾಧ್ಯವಿಲ್ಲ.

ಕಂಡಕ್ಟರು, ಕ್ಲೀನರುಗಳು ಬ್ರೆತ್ಲೆಸ್ ಆಗಿ ಕೂಗುತ್ತಿದ್ದರೆ ಇತ್ತ ಡ್ರೈವರ್, 'ರುಂಯ್ ರುಂಯ್' ಎಂದು ಆ್ಯಕ್ಸಿಲರೇಟರ್ ರೈಸ್ ಮಾಡುತ್ತಾ ಬಸ್ಸು ಹೊರಟಿದೆ ಎಂದು ಸಿಗ್ನಲ್ ಕೊಡುವ ಜಾಣ. ಇಂಥ ಕೃತಕ ಗಡಿಬಿಡಿಗೆ ಜನರು ಮೋಸ ಹೋಗುವುದಿಲ್ಲ. ಕಿಟಕಿಯಿಂದಲೇ ಕರ್ಚೀಫು, ಟವೆಲ್ಲು, ಚೀಲ ಮುಂತಾದವುಗಳನ್ನು ಹಾಕಿ ಸೀಟು ರಿಸರ್ವ್ ಮಾಡುವ ಬುದ್ಧಿಯೂ ಇಲ್ಲ. ಯಾಕೆಂದರೆ ಈ ಬಸ್ಸು ಅಲ್ಲದಿದ್ದರೆ ಇನ್ನೊಂದು ಎಂದು ತಮಗಿರುವ ಭಾಗ್ಯವನ್ನು ಚೆನ್ನಾಗಿಯೇ ಉಪಯೋಗಿಸಿಕೊಳ್ಳುವವರು.

ಸೀಟೆಲ್ಲ ತುಂಬಿದರೂ ಹೊರಡಲು ಉದಾಸೀನ ತೋರಿಸುತ್ತಿದ್ದರೆ, ಹಿಂದಿನಿಂದ ಬಂದ ಇನ್ನೊಂದು ಬಸ್ಸು 'ಇನ್ನೂ ಹೊರಡಲಿಲ್ಲವಾ' ಎಂದು ಜಿದ್ದಿಗೆ ಬಿದ್ದಂತೆ ಜೋರಾಗಿ 'ಪೋಂ... ಯ್, ಪೋಂ...ಯ್' ಎಂದು ಹಾರ್ನ್ ಹಾಕಿದಾಗಲಷ್ಟೇ ಮುಂದೋಡುವ ಮನಸ್ಸು ಮಾಡುತ್ತದೆ. ತುಂಬಿದ ಬಸ್ಸು ಹೊರಟಿತೆಂದರೆ ಕರಾವಳಿಯ ಸಾಂಸ್ಕೃತಿಕ, ಸಾಮಾಜಿಕ ಬದುಕೇ ಹೊರಟಂತೆ ತೋರುತ್ತದೆ. ದೇವರ ಪೂಜೆ ಮಾಡಿ ಬಂದ ಪುರೋಹಿತರಿಂದ ಹಿಡಿದು ಮನೆಕೆಲಸ ಮಾಡಿಬಂದ ಮಹಿಳೆಗೂ ಆಧಾರ ಇದೇ ಬಸ್ಸು. ಮೀನು ಹಿಡಿಯುವವರೂ, ಮಾರುವವರೂ ಇರುತ್ತಾರೆ; ನಾಲ್ಕೆಕರೆ ಜಮೀನಿನ 'ಒಡ್ರ'ರೂ (ಒಡೆಯರು) ಇರುತ್ತಾರೆ. ಬಡವ, ಶ್ರೀಮಂತ, ಜಾತಿ, ಧರ್ಮ ಎಲ್ಲವೂ ಅಲ್ಲಿ ಗೌಣ. ಗಮ್ಯ ಒಂದೇ ಗುರಿ. ಸಾಮರಸ್ಯದ ಭದ್ರಬುನಾದಿಯ ರಂಗಭೂಮಿಯದು.

ಹಾಗೆಯೇ ಕರಾವಳಿಯ ಬಿಸಿಯ ಬೆವರ ವಾಸನೆ, ತಂಬಾಕು, ಕಳ್ಳು, ಮೀನಿನ ವಾಸನೆ ಎಲ್ಲಾ ಸೇರಿ ಆಘ್ರಾಣ ಪರೀಕ್ಷೆಯ ಪ್ಯಾಕೇಜು ಲಭ್ಯ. ಸಮುದ್ರತೀರದ ಊರಾದರೂ ಉಳಿದ ಪ್ರಯಾಣಿಕರು ಕಿರಿಕಿರಿ ಮಾಡುವರೆಂದು ಕಂಡಕ್ಟರುಗಳು ಮೀನು ಮಾರುವ ಮಹಿಳೆಯರನ್ನು ಹತ್ತಿಸಿಕೊಳ್ಳಲು ಹಿಂದೇಟು ಹಾಕುವುದುಂಟು. ಮಾತಿನಲ್ಲಿ ಜಗಮೊಂಡಿಯರಾದ ಇವರು ಏನೋ ಗಲಾಟೆ ಮಾಡಿ ಹತ್ತಿಯೇ ಬಿಡುತ್ತಾರೆ. ಕೆಲವೊಮ್ಮೆ ಇಂಥ ಮಹಿಳೆಯರನ್ನು ಕಾಲೆಳೆದು ಮಾತನಾಡಿಸುವ ಕಂಡಕ್ಟರರು ಬಸ್ಸನ್ನಿಡೀ ನಗೆಯ ಸಂತೆಯನ್ನಾಗಿ ಮಾಡಿಬಿಡುತ್ತಾರೆ, ಮೀನಿನವಾಸನೆಯನ್ನು ಮರೆಸುವಷ್ಟು.

ಕುಂದಾಪುರ-ಉಡುಪಿ ಬಸ್ಸುಗಳು ರಾಷ್ಟ್ರೀಯ ಹೆದ್ದಾರಿಯುದ್ದಕ್ಕೂ (ಈಗ 66, ಮೊದಲು 17) ಚಲಿಸುತ್ತವೆ. ಎರಡು ನಿಮಿಷಕ್ಕೊಂದರಂತೆ ಹೋಗುವ ಬಣ್ಣಬಣ್ಣದ ಬಸ್ಸುಗಳನ್ನು ಕಾಣುತ್ತಿದ್ದರೆ ಚಿತ್ತಾರಗಳ ಕ್ಯಾನ್ವಾಸ್ ಹೋಗುತ್ತಿರುವಂತಿರುತ್ತದೆ. ಸಣ್ಣದರಲ್ಲಿ ಬಸ್ಸುಗಳ ಬಗ್ಗೆ ವ್ಯಾಮೋಹ ಬೆಳೆಸಿಕೊಂಡಿದ್ದ ನನ್ನಣ್ಣ 'ದೊಡ್ಡವನಾದ ಮೇಲೆ ಕಂಡಕ್ಟರ್ ಆಗುವೆ' ಎನ್ನುತ್ತಿದ್ದ. ಎಲ್ಲಾ ಬಸ್ಸುಗಳ ಸಮಯವನ್ನು ಬಾಯಿಪಾಠ ಮಾಡಿಕೊಂಡಿರುತ್ತಿದ್ದವನನ್ನು ನೆರೆಹೊರೆಯವರು 'ಈಗ ಉಡುಪಿಗೆ ಯಾವ ಬಸ್ಸಿದೆ?' ಎಂದೋ 'ಮಂದಾರ್ತಿಯ ಬಸ್ಸು ಹೋಯಿತೇ?' ಎಂದೋ ಕೇಳುತ್ತಿದ್ದರು. ಇದಕ್ಕೆಲ್ಲಾ ಕರಾರುವಕ್ಕಾಗಿ ಹೇಳುವ ಸಾಮರ್ಥ್ಯ ಅವನಲ್ಲಿತ್ತು.

ಈ ಬಸ್ಸುಗಳಲ್ಲಿ ಎರಡು ವಿಧ. ಒಂದು, ಎಕ್ಸ್‌ಪ್ರೆಸ್. ಅದಕ್ಕೆ ನಿಗದಿಪಡಿಸಿದ ಸ್ಥಳದಲ್ಲಿ ಮಾತ್ರ ನಿಲ್ಲುವಂಥದ್ದು. ಇನ್ನೊಂದು ಶಟಲ್ ಅಥವಾ ಲೋಕಲ್ ಬಸ್ಸು. ಈ ಶಟಲ್ ಬಸ್ಸುಗಳ ಬಗ್ಗೆ ಜೋಕೊಂದು ಪ್ರಚಲಿತದಲ್ಲಿತ್ತು- ಈ ಬಸ್ಸು ನಿಲ್ಲುವುದು ಎರಡೇ ಸ್ಥಳಗಳಲ್ಲಿ, ಒಂದು ನಿಲ್ದಾಣದಲ್ಲಿ, ಇನ್ನೊಂದು ಕೈ ಅಡ್ಡಹಾಕಿದಲ್ಲಿ. ಈ ಬಸ್ಸುಗಳ ದರ ಎಕ್ಸ್‌ಪ್ರೆಸ್ ಬಸ್ಸುಗಳಿಗೆ ಹೋಲಿಸಿದರೆ ಕೊಂಚ ಕಮ್ಮಿ. ದೂರ ಪ್ರಯಾಣಕ್ಕೆ ಎಕ್ಸ್‌ಪ್ರೆಸ್ಸಾದರೆ, ಕಿರುಪ್ರಯಾಣಕ್ಕೆ ಶಟಲ್.

ಸಮಯದ ಪರಿಪಾಲನೆ ಈ ಬಸ್ಸುಗಳಿಂದ ಕಲಿಯಬೇಕು. ಗಡಿಯಾರವಾದರೂ ಒಮ್ಮೊಮ್ಮೆ ನಡೆಯುವುದನ್ನು ಮರೆಯುತ್ತದೆ, ಆದರೆ ಬಸ್ಸುಗಳು ಮಾತ್ರ ಟೈಂ ಟು ಟೈಂ ಬಾರದೇ ಇರುವುದಿಲ್ಲ! ಬೆಳಗ್ಗೆ ಏಳುಗಂಟೆಯ ಭಾರತಿ ಬಸ್ಸು ಹೋಗುವುದರೊಳಗೆ ಮನೆ ಗುಡಿಸಿ, ಒರೆಸಿ, ಸ್ನಾನಕ್ಕೆ ಹೋಗಿರುತ್ತಿದ್ದೆ. ಮಂದಾರ್ತಿಗೆ ಹೋಗುವ ಶ್ರೀಲಕ್ಷ್ಮಿ ಎಕ್ಸ್‌ಪ್ರೆಸ್ ಎಂಟು ಗಂಟೆಗೆ ಬರುವಾಗ ತಿಂಡಿಗೆ ಪ್ಲೇಟು ಇಟ್ಟಾಗಿರುತ್ತಿತ್ತು.

10ನೇ ಪುಟಕ್ಕೆ..

ಸಂಡೂರಿನ ರೈಲ್ವೆ ಸುರಂಗ ಮಾರ್ಗದಿಂದ ನಾರಿಹಳ್ಳ ಜಲಾಶಯದ ವಿಹಂಗಮ ನೋಟ

ಅಜ್ಞಾತ ಜಲಪಾತಗಳ ಜಾಡ ಹಿಡಿದು

ಮುಂಗಾರು ಮಳೆ ಕಳೆಗಟ್ಟಿದೆ. ಕಣಿವೆಗಳಲ್ಲಿ ಕಾನನದೊಳಗೆ ಜಲಪಾತಗಳು ಮೈದುಂಬಿ, ಬೆಟ್ಟಕ್ಕೇ ಹಾಲಿನ ಅಭಿಷೇಕದಂತೆ ಹರಿಯುತ್ತಿವೆ...

ಪ್ರವಾಸ

ಸ್ವರೂಪಾನಂದ ಎಂ. ಕೊಟ್ಟೂರು

‘ಭರ್ಜರಿ ಮಳೆ ಆಗುತ್ತಿದೆ. ಕಣಿವೆಗಳಲ್ಲಿ ದಟ್ಟ ಹಸಿರಿನೊಟ್ಟಿಗೆ ಮೈದುಂಬಿದ ಜಲಪಾತಗಳ ನೋಡುವ ಸುಯೋಗ ಸಿಕ್ಕಿದೆ...’ ಚಾರಣಿಗರಾದ ಸಂಡೂರಿನ ರಾಮಘಡ ಶ್ರೀನಿವಾಸ್ ಅಂದ್ರು. ಕುತೂಹಲ ಹುಟ್ಟಿತು. ಸಂಡೂರು ಸಮಿಟರ್ಸ್ ತಂಡದೊಂದಿಗೆ ಚಾರಣಕ್ಕೆ ಹೊರಟೆ. ಅವರೆಂದಂತೆ ಈ ಸಲ ಸಂಡೂರಿನ ಮಲೆಗಳ ಜಲಮೂಲಗಳೆಲ್ಲ ಭರ್ತಿ ಆಗಿದ್ದವು. ಜಲಕನ್ಯೆಯರ ವೈಯಾರವಂತೂ ನಯನ ಮನೋಹರ!

ಸಂಡೂರೆಂದರೆ ಗಣಿಗಾರಿಕೆಗೆ ಮುಕ್ಕಾದ ಬೆಟ್ಟ-ಗುಡ್ಡಗಳು, ಅಲ್ಲಲ್ಲಿ ದಟ್ಟವಾದ ಕಾಡು, ಮಂಜಿನ ಮೇಲಾಟ... ಎಂದಷ್ಟೇ ಬಹುತೇಕರಿಗೆ ಗೊತ್ತು. ಆದರೆ ಇಲ್ಲಿಯ ಭೈರವ ತೀರ್ಥ ಮತ್ತು ಧುಮುಕು ಜಲಪಾತಗಳ ಬಗ್ಗೆ ಅಷ್ಟಾಗಿ ಗೊತ್ತಿಲ್ಲ. ಯಾಕಂದ್ರೆ ಇವು ಅಜ್ಞಾತ ಜಲಪಾತಗಳು! ನೋಡಲಿಕ್ಕೆ ಬೆಟ್ಟಗುಡ್ಡಗಳನ್ನು ಹತ್ತಿ ಇಳಿಯಬೇಕು. ಬೆವರು ಹರಿಸಬೇಕು. ಎಲ್ಲಕ್ಕಿಂತ ಮುಖ್ಯವಾಗಿ ಧೈರ್ಯ ಮಾಡಬೇಕು! ದಟ್ಟ ಕಾಡಿನ ಮಧ್ಯೆ ಇರುವ ಇವುಗಳ ಚರಣ ತಲುಪಲು ಚಾರಣ ಅಗತ್ಯ.

ನೀರ ಹಾಡ ಜಾಡು ಹಿಡಿದು...

ಬಟ್ಟಲು ಆಕಾರದ ದಟ್ಟ ಕಾಡಿನ ಮಧ್ಯದ ಪ್ರಾರಂಭದ ಕಾಲು ಹಾದಿಯಲಿ ನಡೆದರೆ ನೀರು ಹರಿಯುವ ಜಾಡು ಸಿಗುತ್ತೆ. ಅದು ಅಡಿ ಅಡಿಗೂ ಮನ ಸೆಳೆಯುವ ತಾಳಬದ್ಧ ನೀರ ಹಾಡ ಸದ್ದು. ಈ ಇಂಪಾದ ನೀರ ನಿನಾದಕ್ಕೆ ಹಿಮ್ಮೇಳ ಹಕ್ಕಿಗಳ ಚಿಲಿಪಿಲಿ ಕಲರವ. ಕಲ್ಲುಬಂಡೆಗಳ ಸಂದಿಗೊಂದಿಯಲ್ಲಿ, ಕಣ್ಣಾಮುಚ್ಚಾಲೆ ಆಡುತ್ತಾ ಕಲ್ಲುಬಂಡೆಗಳನ್ನು ಮುಳುಗೇಳಿಸುತ್ತಾ ಹರಿಯುವ ನೀರಿನ ಗತ್ತು-ಗಮ್ಮತ್ತು ಬೆರಗು ತರುತ್ತೆ. ನೀರ ಹರಿವಿನ ದಿಕ್ಕಿನತ್ತ ನಡೆದಂತೆ ಧುಮ್ಮಿಕ್ಕುವ ನೀರ ಸದ್ದು ಜೋರಾಗುತ್ತೆ. ಕಣ್ಣರಳಿಸಿ, ಕಿವಿ ನಿಮಿರಿಸಿ ಅತ್ತ ನಡೆದರೆ ಹಚ್ಚಹಸಿರಿನ ಮಧ್ಯೆ ಇದ್ದಕ್ಕಿದ್ದಂತೆ ಕಲ್ಲಿನ ಬೆಟ್ಟ ಕಾಣುತ್ತದೆ. ಅದರ ನೆತ್ತಿಯ ಮೇಲಿಂದ ಸಾಕ್ಷಾತ್ ಹರನ ಜಡೆಯಿಂದ ಗಂಗೆ ಧರೆಗೆ ಇಳಿದು ಬರುತ್ತಿರುವಂತೆ ನೀರು ಬೀಳುತ್ತೆ! ತಳ ತಲುಪಿ ಥಳುಕು ಬಳುಕಿನಲ್ಲಿ, ಧೋ ಎಂದು ಭೋರ್ಗರೆಯುವ ಜಲಪಾತದ ಬಿನ್ನಾಣ, ಸೊಬಗು-ಸೊಗಸು ಅವರ್ಣನೀಯ. ಬಂಡೆಗಳಿಗೆ ಬಿದ್ದು ಚದುರುವ ತುಂತುರು ಹನಿಗಳು ಮೈಮನ ಸ್ಪರ್ಶಿಸಿ ಪುಳಕ ತರುತ್ತವೆ.

ಧುಮುಕು ಫಾಲ್ಸ್

ಆಡುಭಾಷೆಯಲ್ಲಿ ಧುಮ್ಮು ಫಾಲ್ಸ್ ಎನ್ನುತ್ತಾರೆ. ಸುಮಾರು 120 ಅಡಿ ಎತ್ತರದಿಂದ ನೀರು ಧುಮ್ಮಿಕ್ಕಿ ಹರಿಯುತ್ತೆ. ಪದರು ಶಿಲೆಯ ಮೇಲೆ ಹಂತ ಹಂತವಾಗಿ ಬೀಳುವ ನೀರಿನ ದೃಶ್ಯ ನಯನ ಮನೋಹರ. ಇದರ ನೀರು ಸ್ವಚ್ಛ ಮತ್ತು ಶುಭ್ರ. ಆದರೆ ಯಥೇಚ್ಛ ಮಳೆ ಬಂದ ಒಂದೆರಡು ದಿನ ಮಾತ್ರ ಫಾಲ್ಸ್ ನೀರು ರೆಡ್ ಆಕ್ಸೈಡ್ ಬಣ್ಣಕ್ಕೆ ತಿರುಗುತ್ತದೆ! ಈ ಫಾಲ್ಸ್ ಸುತ್ತಮುತ್ತ ಗಣಿಗಾರಿಕೆ ನಡೆಯುತ್ತಿರುವುದು ಇದಕ್ಕೆ ಕಾರಣ. ಫಾಲ್ಸ್ ಕೆಳಗೆ ನಿಂತು ಕತ್ತು ಮೇಲೆತ್ತಿ ನೋಡಿದರೆ ಯಾರೋ ನಮ್ಮ ಮೇಲೆ ಕೆಂಪು ಬಣ್ಣದ ಓಕುಳಿ ಎರಚುತ್ತಿರುವಂತೆ ಭಾಸ ಆಗುತ್ತದೆ. ಈ ನೀರು ಅಂಕಮನಹಾಳ್ ಕೆರೆ ಸೇರುತ್ತದೆ.

ಸಂಡೂರು-ಕೂಡ್ಲಿಗಿ ಮಾರ್ಗದಲ್ಲಿ ಯಶವಂತನಗರ ಸಿಗುತ್ತೆ. ಅಲ್ಲಿಂದ ಅಂಕಮನಹಾಳ್ ರಸ್ತೆಯಲ್ಲಿ 4 ಕಿ.ಮೀ. ಕ್ರಮಿಸಿದರೆ ಎಡಕ್ಕೆ ಅಡವಿ ದಾರಿ ಸಿಗುತ್ತೆ. ಇಲ್ಲಿಯವರೆಗೆ ವಾಹನದಲ್ಲಿ ಹೋಗಬಹುದು. ಅಲ್ಲಿಂದ ಕಾಲ್ನಡಿಗೆಯಲ್ಲಿ ಸುಮಾರು 2 ಕಿ.ಮೀ. ನಡೆದರೆ ನೀರ ಹರಿವು ಸಿಗುತ್ತೆ. ಆ ನೀರು ಬರುವ ದಿಕ್ಕಿನೆಡೆಗೆ ನಡೆದರೆ ಫಾಲ್ಸ್ ಸಿಗುತ್ತೆ. ಫಾಲ್ಸ್ ನೋಡಿ, ಬಲಭಾಗದ ಬೆಟ್ಟ ಹತ್ತಿದರೆ ಫಾಲ್ಸ್ ನೆತ್ತಿ ತಲುಪುತ್ತೇವೆ. ಅಲ್ಲಿಂದ ಒಂದು ಕಿ.ಮೀ. ನಡೆದರೆ ನೀರುಕೊಳ್ಳ/ಕಡತಿ ಮಡಗು ಸಿಗಲಿದ್ದು, ಇದು ಈ ಜಲಪಾತದ ಮೂಲ ಆಗಿದೆ.

ಭೈರವ ತೀರ್ಥ ಫಾಲ್ಸ್

ಇದು ಧಾರ್ಮಿಕ ಕ್ಷೇತ್ರ ಭೈರವ ತೀರ್ಥದ ಹಿಂಭಾಗದ ಕಣಿವೆಯಲ್ಲಿದೆ. ಇದನ್ನು ಸ್ಥಳೀಯರು ಎರಡು ಭಾಗ ಮಾಡಿದ್ದು, ಮೊದಲು ಸಿಗುವ ಚಿಕ್ಕ ಫಾಲ್ಸ್‌ಗೆ ಕೆಳಗಿನ ನೀರು ಎಂದೂ ನಂತರದ್ದಕ್ಕೆ ಮೇಗಳ ನೀರು ಎಂದೂ ಕರೆಯುತ್ತಾರೆ. ಸುಮಾರು 60 ಅಡಿ ಮೇಲಿಂದ ಬೆಳ್ಳಿ ಬೆಳಕಿನಂತೆ ನೀರು ಧುಮ್ಮಿಕ್ಕಿ ಹರಿಯುತ್ತದೆ. ಈ ನೀರು ಸ್ವಚ್ಛ ಮತ್ತು ಶುಭ್ರವಾಗಿದೆ. ಇದು ಹರಿದು ನಾರಿಹಳ್ಳ ಜಲಾಶಯ ಸೇರುತ್ತದೆ. ಬಾಬಯ್ಯ ಕ್ರಾಸ್ ಅಥವಾ ನಾರಿಹಳ್ಳ ಡ್ಯಾಂ ಪಕ್ಕದಿಂದ ರೈಲ್ವೆ ಟ್ರ್ಯಾಕ್‌ಗೆ ಹೋಗಬೇಕು. ಟ್ರ್ಯಾಕ್ ಮೇಲೆ 2-3 ಕಿ.ಮೀ. ನಡೆದರೆ ವಾಟರ್ ಪೈಪ್‌ಲೈನ್ ಮೇಲೆ ಫಾಲ್ಸ್‌ಗೆ ಹೋಗುವ ದಾರಿಯ ಸೂಚಕ ಬರಹ ಇದೆ. ಅಲ್ಲಿಂದ 2 ಕಿ.ಮೀ. ನಡೆದರೆ ಕೊಲ್ಲಾರಮ್ಮನ ಅಂಗಳ ತಲುಪಿ, ಎಡಕ್ಕೆ ತಿರುಗಿ 2 ಕಿ.ಮೀ. ನಡೆದರೆ ಫಾಲ್ಸ್ ಸಿಗುತ್ತೆ.

ವೀಕ್ಷಣಾ ಸ್ಥಳ: ಸಮೃದ್ಧ ಮಳೆಯಾದರೆ ಇಲ್ಲಿ ಹತ್ತಾರು ಫಾಲ್ಸ್, ಝರಿಗಳನ್ನು ಕಾಣುತ್ತೇವೆ. ಆದರೆ ಮಳೆಗಾಲದ ಉದ್ದಕ್ಕೂ ಮೈದುಂಬಿ ಬೀಳುವ ಮತ್ತು ಇತರ ದಿನಗಳಲ್ಲಿ ಸಣ್ಣಗೆ ಬೀಳುವ ಫಾಲ್ಸ್‌ಗಳೆಂದರೆ ಈ ಭೈರವ ತೀರ್ಥ ಮತ್ತು ಧುಮುಕು ಫಾಲ್ಸ್‌ಗಳಷ್ಟೆ. ಇಂತಹ ಫಾಲ್ಸ್‌ಗಳ ನೆತ್ತಿ ಮೇಲೆ ಹೋದರೆ ರೋಮಾಂಚನ ಆಗುತ್ತದೆ. ಬೀಸುವ ತಂಗಾಳಿ ಮೈಮನ ಸೋಕಿ ಆಯಾಸ ಕರಗುತ್ತೆ. ಸುತ್ತಲಿನ ದಟ್ಟ ಕಾನನ, ಮೈದುಂಬಿರುವ ಕೆರೆ-ಕಟ್ಟೆಗಳು, ನಾರಿಹಳ್ಳ, ಹಳ್ಳ-ಕೊಳ್ಳಗಳ ವಿಹಂಗಮ ನೋಟ ಸಿಗುತ್ತದೆ.

ಈ ಫಾಲ್ಸ್‌ಗಳಿಗೆ ತಲುಪಲು ನಿಖರ ದಾರಿ ಇಲ್ಲ. ಪೊದೆ, ಮುಳ್ಳಿನ ಗಿಡಗಂಟಿಗಳು, ಹುಲ್ಲುಗಾವಲಿನಲ್ಲಿ ದಾರಿ ಮಾಡಿಕೊಂಡು ಹೋಗಬೇಕು. ಇದಕ್ಕಾಗಿ ಕೊಡಲಿ ಯಂತಹ ಆಯುಧಗಳು ಜೊತೆಗಿರಲಿ. ಕುಡಿಯಲಿಕ್ಕೆ ನೀರು, ಆಹಾರ ಒಯ್ಯಬೇಕು. ಸೊಳ್ಳೆ, ಮುಳ್ಳುಗಳಿಂದ ರಕ್ಷಣೆಗೆ ಮೈಕೈ ಮುಚ್ಚುವ ಉಡುಪು, ಶೂ ಧರಿಸಬೇಕು. ಹುಳ-ಹುಪ್ಪಡಿ, ಕಾಡುಪ್ರಾಣಿಗಳ ಬಗ್ಗೆ ಎಚ್ಚರಿಕೆ ಇರಲಿ. ಒಟ್ಟಿನಲ್ಲಿ ಸಾಮೂಹಿಕ ಚಾರಣ ಸೂಕ್ತ. ಈ ತಾಣದ ಬಗ್ಗೆ ತಿಳಿದಿರುವ ವ್ಯಕ್ತಿಗಳ ಸಹಾಯ ಪಡೆದರೆ ಇನ್ನೂ ಲೇಸು.

ಚಿತ್ರಗಳು: ಸಂಡೂರು ಸಮಿಟರ್ಸ್ ತಂಡ

ಧುಮುಕು ಜಲಪಾತ

ಮಿಂಚಿ ಮರೆಯಾದ ತಾರೆ

8ನೇ ಪುಟದಿಂದ...

ಹಿಂದೂ ಮೂಲಭೂತವಾದಿಗಳು ಜುಬೈರ್ ಎಂಬ ವ್ಯಕ್ತಿಯನ್ನು ಥಳಿಸುತ್ತಿದ್ದ ‘ಲೈವ್’ ಚಿತ್ರ ತೆಗೆದಿದ್ದ ಈ ಛಾಯಾಗ್ರಾಹಕ, ಜುಬೈರ್‌ನನ್ನು ಆತ ಚಿಕಿತ್ಸೆ ಪಡೆಯುತ್ತಿದ್ದ ಆಸ್ಪತ್ರೆಯಲ್ಲಿ ಭೇಟಿಮಾಡಿ, ಆತ ಚೇತರಿಸಿಕೊಂಡಿದ್ದನ್ನು ಕಂಡು ಸಮಾಧಾನದ ನಿಟ್ಟುಸಿರುಬಿಟ್ಟಿದ್ದ. ಮಾನವೀಯ ಸಂಘರ್ಷದ ‘ಐಕಾನಿಕ್ ಫೋಟೊ’ಗಳನ್ನು ಸೆರೆ ಹಿಡಿಯುವುದು ಅವನಿಗೆ ಎಷ್ಟು ಮುಖ್ಯವಾಗಿತ್ತೋ ಬಿಕ್ಕಟ್ಟಿನಲ್ಲಿ ಸಿಕ್ಕ ವ್ಯಕ್ತಿಗೆ ಸಾಧ್ಯವಿರುವ ಎಲ್ಲ ನೆರವು ನೀಡುವುದೂ ಅಷ್ಟೇ ಮಹತ್ವದ್ದಾಗಿತ್ತು. ಹೀಗಾಗಿ ಆತ ಅಪಾಯ ಲೆಕ್ಕಿಸದೆ ಧೈರ್ಯದಿಂದ ಮುನ್ನುಗ್ಗುತ್ತಿದ್ದ.

ಜಾಮಿಯಾದಲ್ಲಿ ತಾನು ಜೀವಿಸಿದ್ದ ಸಮುದಾಯದ ಮೇಲೆ ಆತ ಹೊಂದಿದ್ದ ಬಲವಾದ ಒಲವು, ಭಾರತ ಹಾಗೂ ಹೊರಗಿನ ಜಗತ್ತಿನ ಕುರಿತು ಆತನಲ್ಲಿದ್ದ ಕಲ್ಪನೆಗಳ ಮೆರುಗು ಆತನನ್ನು ಅಪಾಯಕಾರಿ ಕೆಲಸಗಳಿಗೆ ಒಪ್ಪುವಂತೆ ಪ್ರೇರೇಪಿಸಿದ್ದವು. ಮುಸ್ಲಿಂ ಭಯೋತ್ಪಾದಕ ಹಾಗೂ ಮುಸ್ಲಿಂ ಉಪದ್ರವ ಎಂಬ ಪದಗಳು ಆತನ ಕೆಲಸ ಹಾಗೂ ಚಿಂತನೆಗಳ ಮೇಲೆ ಪ್ರಭಾವವನ್ನು ಬೀರಿದ್ದವು. ಆತನ ಮುನ್ನುಗ್ಗುವ ಧೈರ್ಯವಂತೂ ಪ್ರಶ್ನಾತೀತ. ಹಿಂಸಾಚಾರಗಳು ನಡೆದಾಗ, ಅದು ಯಾವುದೇ ಪ್ರದೇಶದಲ್ಲಿ ಸಂಭವಿಸಿರಲಿ, ಯಾವ ಅಪಾಯವನ್ನೂ ಲೆಕ್ಕಿಸದೆ ಒಳನುಗ್ಗಿ ಫೋಟೊ ಕ್ಲಿಕ್ಕಿಸುತ್ತಿದ್ದ.

ನಾವಿಬ್ಬರೂ ಕೊನೆಯ ಬಾರಿಗೆ ಭೇಟಿಯಾಗಿದ್ದು 2020ರ ಮಾರ್ಚ್‌ನಲ್ಲಿ. ಆತ ದೆಹಲಿ ಗಲಭೆಯನ್ನು ಆಗಷ್ಟೇ ಕವರ್ ಮಾಡಿಬಂದಿದ್ದ. ನಾನು ಕೆಲ ವಾರಗಳ ಮಟ್ಟಿಗೆ ಇದ್ದುಹೋಗಲು ತವರಿಗೆ ಬಂದಿದ್ದೆ. ಆ ಸಮಯದಲ್ಲಿ ಬಲಪಂಥೀಯ ಟ್ರೋಲ್ ದಾಳಿಯಿಂದ ಆತ ಖಿನ್ನನಾಗಿದ್ದ. ಹಿಂದುತ್ವದ ಪ್ರತಿಪಾದಕರಾಗಿದ್ದ ಗಲಭೆಕೋರರು ವ್ಯಕ್ತಿಯೊಬ್ಬನನ್ನು ಸಾಯುವಂತೆ ಥಳಿಸುತ್ತಿದ್ದ ‘ಲೈವ್’ ಚಿತ್ರವನ್ನು ತಾನು ತೆಗೆದ ಸಾಹಸದ ಕಥೆಯನ್ನು ಆತ ನನ್ನೆದುರು ಹೇಳಿಕೊಂಡಿದ್ದ. ಆ ಘಟನೆ ಒಂದು ಕುತಂತ್ರದಿಂದ ಕೂಡಿತ್ತು. ಗಲಭೆಕೋರರ ಕುರಿತು ಸಹಾನುಭೂತಿ ಹೊಂದಿದ ಪತ್ರಕರ್ತನಂತೆ ನಟಿಸಿದ್ದ ಆತ, ಥಳಿತದ ಘಟನೆಯಲ್ಲಿ ಜತೆ ಸೇರಿಕೊಳ್ಳುವಂತೆ ಗಲಭೆಕೋರರಿಂದಲೇ ಆಹ್ವಾನ ಪಡೆದಿದ್ದ. ವ್ಯಕ್ತಿಯನ್ನು ಥಳಿಸುವಾಗ ದಾನಿಶ್ ಫೋಟೊ ಕ್ಲಿಕ್ಕಿಸತೊಡಗಿದಂತೆ ಗಲಭೆಕೋರರಿಗೆ ಆತನ ಮೇಲೆ ಅನುಮಾನ ಬಂದಿತ್ತು. ಆಗ ಗುರುತಿನ ಚೀಟಿ ತೋರಿಸುವಂತೆ ಅವರು ಪಟ್ಟು ಹಿಡಿದಾಗ ಆತನ ನೆರವಿಗೆ ಬಂದಿದ್ದು ಹಿಂದೂ ಧರ್ಮಕ್ಕೆ ಸೇರಿದ ಒಬ್ಬ ಸಹೋದ್ಯೋಗಿ. ಇಬ್ಬರೂ ದಿಕ್ಕಾಪಾಲಾಗಿ ಓಡಿ, ಪ್ರಾಣಾಪಾಯದಿಂದ ಬಚಾವಾಗಿದ್ದರು.

ಭಾರತದಲ್ಲಿ 1990ರಿಂದ ಈಚೆಗಿನ ಮೂರು ದಶಕಗಳ ಅವಧಿಯಲ್ಲಿ –ನಮ್ಮ ಓರಗೆಯವರು ಬೆಳೆಯುತ್ತಿರುವ ದಿನಗಳಲ್ಲಿ– ಗಲಭೆಗಳಿಗೆ ಸಂಬಂಧಿಸಿದ ಮಾಧ್ಯಮದ ಸಂಕಥನಗಳು ನನ್ನ ಗೆಳೆಯನ ದೇಹದಲ್ಲಿ ಹೇಗೆಲ್ಲ ನೆಲೆ ಪಡೆದವು ಎಂದು ನೆನೆದಾಗ ಸೋಜಿಗ ಆಗುತ್ತದೆ. ಇಂತಹ ದೇಹವನ್ನು ಹೊಂದುವ ಅರ್ಥವೇನೆಂದು ನನಗೆ ತಿಳಿದಿದೆ. ಏಕೆಂದರೆ, ದ್ವೇಷದ ನೆರಳಿನಲ್ಲಿಯೇ ಬದುಕುವಾಗ ಮಧುರ ನೆನಪುಗಳಿಗೆ ಎಲ್ಲಿಯ ಜಾಗ? ಗಲಭೆಯಿಂದ ನಲುಗಿದವರ ನೋವನ್ನು ದಾಖಲಿಸುವುದು ತನ್ನ ಕರ್ತವ್ಯವೆಂದು ಭಾವಿಸಿದ್ದ ಆತನಿಗೆ, ದುರ್ಬಲರ ಮೇಲಿನ ದಾಳಿಯನ್ನು ದಾಖಲಿಸುವುದು ತನ್ನ ಮೇಲಿನ ಹೊಣೆಯಾಗಿ ಕಂಡಿತ್ತು.

ಪೌರತ್ವ ತಿದ್ದುಪಡಿ ಕಾಯ್ದೆ (ಸಿಎಎ) ಕುರಿತು ನನ್ನೊಂದಿಗೆ ಒಮ್ಮೆ ಚರ್ಚಿಸಿದ್ದ ದಾನಿಶ್, ನಮ್ಮಂಥವರಿಗೆ ಇದು ಯಾವ ರೀತಿಯಲ್ಲೂ ಪರಿಣಾಮ ಬೀರುವುದಿಲ್ಲ ಎಂದು ಹೇಳಿದ್ದ. ಆದರೆ, ಜಾಮಿಯಾದ ರಿಕ್ಷಾವಾಲಾ ಏನು ಮಾಡಬೇಕು ಎಂದು ಪ್ರಶ್ನಿಸಿದ್ದ. ತನ್ನ ಪೂರ್ವಜರು ಎಲ್ಲಿಂದ ಬಂದರು, ಎಲ್ಲಿಗೆ ಹೋದರು ಎನ್ನುವುದಕ್ಕೆ ಆತನ ಬಳಿ ಯಾವ ಕಾಗದಪತ್ರಗಳಿವೆ ಎಂದೂ ಕೇಳಿದ್ದ. ಕಳೆದ ಒಂದು ವರ್ಷದಿಂದ ನನಗೆ ಆತನ ಆರೋಗ್ಯದ ವಿಷಯ ತೀವ್ರ ಕಳವಳ ಉಂಟುಮಾಡಿತ್ತು. ನಮ್ಮ ಇತ್ತೀಚಿನ ಸಂದೇಶಗಳು ಮೊದಲಿನಂತೆ ಅಸಹ್ಯಕರ ರಾಜಕೀಯ ಸನ್ನಿವೇಶಗಳ ಕುರಿತ ಚರ್ಚೆಗೆ ಹೆಚ್ಚು ಬಳಕೆ ಆಗುತ್ತಿರಲಿಲ್ಲ. ನಾನು ಒಬ್ಬ ಅಮ್ಮನಂತೆ, ಒಬ್ಬ ಸಹೋದರಿಯಂತೆ, ರಾಜಕೀಯದ ಕುರಿತು ನಿರಾಸಕ್ತ ಗೆಳತಿಯಂತೆ ಆತನನ್ನು ವಿಚಾರಿಸಿಕೊಳ್ಳುತ್ತಿದ್ದೆ. 2019ರಲ್ಲಿ ಶ್ರೀಲಂಕಾಕ್ಕೆ ತೆರಳಿದ್ದಾಗ ಆತ ಕೆಲಕಾಲ ಬಂಧನಕ್ಕೆ ಒಳಗಾಗಿದ್ದ. ಆತನ ಒಡನಾಡಿಗಳೆಲ್ಲ ವರದಿ ಮಾಡಲು ಈ ರೀತಿ ರಿಸ್ಕ್ ತೆಗೆದುಕೊಳ್ಳದಂತೆ ಆಕ್ಷೇಪಿಸಿದ್ದರು.

ತನ್ನ ಮುಂದಿನ ಪ್ರವಾಸ ಅಫ್ಘಾನಿಸ್ತಾನಕ್ಕೆ ಎಂದು ದಾನಿಶ್ ಕಳೆದ ತಿಂಗಳು ನನಗೆ ತಿಳಿಸಿದ್ದ. ನನಗೆ ಈ ಸುದ್ದಿ ಆತಂಕ ತರುವ ಬದಲು ಸಮಾಧಾನವನ್ನೇ ಉಂಟು ಮಾಡಿತ್ತು. ಏಕೆಂದರೆ, ಭಾರತದಲ್ಲಿ ಕೋವಿಡ್‌ನ ಬಿಂಬಗಳನ್ನು ಆತ ಸೆರೆ ಹಿಡಿಯುತ್ತಿದ್ದ ರೀತಿಗೆ ವಿಪರೀತ ಎನಿಸುವಷ್ಟು ದ್ವೇಷವನ್ನು ಆತ ಎದುರಿಸಬೇಕಿತ್ತು. ಆನ್‌ಲೈನ್‌ನಲ್ಲೂ ತೀವ್ರ ಟೀಕೆಗೆ ಗುರಿಯಾಗಿದ್ದ.

‘ಅಫ್ಘಾನಿಸ್ತಾನದಲ್ಲಿ ದೊಡ್ಡ ಸಾಹಸಕ್ಕೆ ಕೈ ಹಾಕುವ ಅಗತ್ಯವಿಲ್ಲ’ ಎಂದು ನಾನು ಬರೆದಿದ್ದೆ. ‘ನೋಡೋಣ. ಅಫ್ಘಾನಿಸ್ತಾನ ಎಂದರೇನೇ ಸಾಹಸ ಅಲ್ಲವೇ’ ಎಂದು ಉತ್ತರಿಸಿದ್ದ ಆತ, ಜತೆಗೊಂದು ನಗುವಿನ ಇಮೋಜಿ ಕಳುಹಿಸಿದ್ದ.

ವಾರದ ಹಿಂದೆ ಹಮ್ವಿಯಲ್ಲಿ (ಮಿಲಿಟರಿ ಟ್ರಕ್) ಕುಳಿತು ಆತ ಚಿತ್ರೀಕರಿಸಿದ್ದ ವಿಡಿಯೊಗಳನ್ನು ವಾಟ್ಸ್‌ಆ್ಯಪ್‌ನಲ್ಲಿ ನೋಡುತ್ತಿದ್ದೆ. ಅಲ್ಲಿನ ‘ಆ್ಯಕ್ಷನ್’ ಸೆರೆ ಹಿಡಿಯುವುದನ್ನು –ಅದೂ ಗುಡ್ಡಗಾಡಿನ ಆ ವಾಹನದ ಕುಲುಕಾಟದಲ್ಲಿ– ಈ ತಾರೆ ಹೇಗೆ ಆನಂದಿಸುತ್ತಿರಬಹುದು ಎಂದು ಯೋಚಿಸಿ ತುಟಿಯಂಚಿನಲ್ಲಿ ನಗುವೊಂದು ಮಿಂಚಿ ಮರೆಯಾಗಿತ್ತು.

ಸ್ವತಃ ಬೈಕ್ ಸವಾರಿ ಪ್ರಿಯನಾದ ದಾನಿಶ್, ಚಲಿಸುವ ವಾಹನಗಳಿಂದ ದೃಶ್ಯ ಸೆರೆ ಹಿಡಿಯುವಲ್ಲಿ ನಿಸ್ಸೀಮನಾಗಿದ್ದ. 2005ರ ವೈರಲ್ ವಿಡಿಯೊಗಳಂತೆ ಇವುಗಳೇನು ಅವಿಶ್ವಸನೀಯ ಮೂಲಗಳಿಂದ ಬಂದಂಥವಲ್ಲ. ಹಿಂಸೆಯ ಚಿತ್ರಣಗಳನ್ನು ಆತನೇ ತೆಗೆದಿದ್ದರಿಂದ ಅವುಗಳ ಸತ್ಯಾಸತ್ಯತೆ ಕುರಿತು ಸಂಶಯಗಳಿಗೆ ಜಾಗವಿಲ್ಲ. ಮತ್ತೆ ವಾದಿಸುವುದು ಏನೂ ಉಳಿದಿಲ್ಲ. ಆ ದೃಶ್ಯಗಳಿಗೆ ಪ್ರಾಣಿಗಳ ಇಮೋಜಿಗಳೊಂದಿಗೆ ನಾನು ಪ್ರತಿಕ್ರಿಯೆ ನೀಡಿದ್ದೆ. ನನ್ನ ಆತಂಕವನ್ನು ತಮಾಷೆಯ ಚಿಹ್ನೆಗಳಲ್ಲಿ ಮರೆಮಾಡಿದ್ದೆ. ನಾನೇನಾದರೂ ಇನ್ನಷ್ಟು ಪ್ರೋತ್ಸಾಹಿಸಿದ್ದರೆ ತಾಲಿಬಾನ್ ವಿರುದ್ಧ ಆತ ಮತ್ತಷ್ಟು ರಿಸ್ಕ್ ತೆಗೆದುಕೊಳ್ಳಲು ಉತ್ಸಾಹ ತೋರುತ್ತಿದ್ದ ಎಂಬ ಭಯ. ಆದರೆ, ಆತ ಎಲ್ಲವನ್ನೂ ಟ್ವಿಟರ್‌ನಲ್ಲಿ ಹಂಚಿಕೊಳ್ಳುತ್ತಿದ್ದ. ಅಂದಹಾಗೆ, ಟ್ವಿಟರ್ ಆತನತ್ತ ದ್ವೇಷದ ಮಹಾಪೂರವನ್ನೇ ಹರಿಸಿದ ವೇದಿಕೆ. ಹಾಗೆಯೇ ಆತನ ಆರಾಧನೆಗೆ ಕಾರಣವಾದ, ಆತನ ಕೆಲಸದ ಕುರಿತು ಮೆಚ್ಚುಗೆಯ ಮಳೆಯನ್ನು ಸುರಿಸಿದ ವೇದಿಕೆಯೂ ಹೌದು.

ಮುಸ್ಲಿಂ ಅಲ್ಪಸಂಖ್ಯಾತ ಹಾಗೂ ಮುಸ್ಲಿಂ ಬಹುಸಂಖ್ಯಾತ ಎರಡೂ ಸನ್ನಿವೇಶಗಳ ಕುರಿತು ತೀವ್ರ ಕುತೂಹಲವನ್ನು ಹೊಂದಿ, ತನ್ನ ಅನುಭವಗಳನ್ನು ಹಂಚಿಕೊಂಡವನು ದಾನಿಶ್. ಅವನ ಗೆಳತಿಯಾದ ನನಗೆ ಅವನ ಅಗಲಿಕೆಯ ನೋವು ಅನಂತ. ಕೆಲವು ತಿಂಗಳ ಹಿಂದೆ ಆತ ನನ್ನೊಡನೆ ಮಾತನಾಡುವಾಗ, ‘ಯಾವುದು ನಿನ್ನನ್ನು ಅಷ್ಟೊಂದು ಬ್ಯುಸಿಯಾಗಿ ಇಟ್ಟಿದ್ದು’ ಎಂದು ಕೇಳಿದ್ದ. ನಾನು ‘ಬರಹ’ ಎಂದು ಉತ್ತರಿಸಿದ್ದೆ. ‘ಮಾರಾಯ್ತಿ, ಅದೆಷ್ಟೊಂದು ಬರೆಯುತ್ತಿ’ ಎಂದು ಎಂದಿನ ತಮಾಷೆ ಧಾಟಿಯಲ್ಲಿ ಮರುಪ್ರಶ್ನೆ ಹಾಕಿದ್ದ. ‘ನಿನ್ನ ಪ್ರಕಾಶಮಾನ ಹಾಗೂ ಕುತೂಹಲದ ವ್ಯಕ್ತಿತ್ವ ನನ್ನನ್ನೂ ಸ್ಪರ್ಶಿಸಿದೆ ಹಾಗೂ ಜಾಮಿಯಾದ ಆ ಭೇಟಿ ನನ್ನನ್ನು ಶಾಶ್ವತವಾಗಿ ಬದಲಾಗುವಂತೆ ಮಾಡಿದೆ ಮಾರಾಯ’ ಎಂದು ಆತನಿಗೆ ಹೇಳದಿರುವ ವಿಷಾದ ನನ್ನನ್ನು ಈಗಲೂ ಕಾಡುತ್ತಿದೆ. ಇರಲಿ, ನಿನ್ನ ಚಿರನಿದ್ರೆ ನೆಮ್ಮದಿಯಿಂದ ಸಾಗಲಿ ಗೆಳೆಯ, ಒಳ್ಳೆಯದಕ್ಕಾಗಿ ನಮ್ಮ ಹೋರಾಟ ಹೀಗೇ ಮುಂದುವರಿಯುತ್ತದೆ.

(ಮೂಲ ಇಂಗ್ಲಿಷ್ ಲೇಖನ ‘ದಿ ವೈರ್’ನಲ್ಲಿ ಪ್ರಕಟವಾಗಿದೆ)

ಲೇಖಕಿ: ಬರ್ಲಿನ್‌ನ ಹಮ್‌ಬೋಲ್ಟ್ ವಿಶ್ವವಿದ್ಯಾಲಯದ ಸಂಶೋಧಕಿ

ಕನ್ನಡಕ್ಕೆ: ಪ್ರವೀಣ ಕುಲಕರ್ಣಿ

ಹಿಂದೂ ಮೂಲಭೂತವಾದಿಗಳಿಂದ ವ್ಯಕ್ತಿಯೊಬ್ಬನಿಗೆ ಥಳಿತ

ಅಫ್ಘನ್‌ನ ವಿಶೇಷ ಕಾರ್ಯಪಡೆ ವಿರುದ್ಧ ಸೆಣಸಾಟಕ್ಕೆ ಸನ್ನದ್ಧವಾಗುತ್ತಿರುವ ತಾಲಿಬಾನ್ ಉಗ್ರ

ಪ್ರಸಾಧನದ ಈ ಪರಿ... ಕುಂಭಮೇಳಕ್ಕೆ ಬೂದಿ ಬಳಿದುಕೊಂಡು ಸನ್ನದ್ಧವಾಗುತ್ತಿರುವ ನಾಗಾ ಸಾಧು

ಮುನ್ನೋಟ 25-07-2021 ರಿಂದ 31-07-2021

ಎಂ.ಎನ್. ಲಕ್ಷ್ಮೀನರಸಿಂಹಸ್ವಾಮಿ, ಮಾದಾಪುರ
ಜ್ಯೋತಿಷ್ಯ ವಿಶಾರದ, ಸಂಪರ್ಕಕ್ಕೆ: 8197304680

ಈ ಭವಿಷ್ಯ ರಾಶಿಯನ್ನು ಅವಲಂಬಿಸಿದೆ

ಮೇಷ — ಅಶ್ವಿನಿ, ಭರಣಿ, ಕೃತ್ತಿಕಾ 1

ಗೃಹ ನಿರ್ಮಾಣ ಯೋಜನೆಯಲ್ಲಿ ಸ್ನೇಹಿತರು ಹಾಗೂ ಕುಟುಂಬದವರ ಸಲಹೆಯನ್ನು ಪರಿಗಣಿಸುವುದು ಉತ್ತಮ. ಇದರಿಂದ ಸ್ವಲ್ಪ ಹಣ ಉಳಿಯುತ್ತದೆ. ನಿಮ್ಮ ಕಾರ್ಯದೊತ್ತಡದಲ್ಲಿ ಕುಟುಂಬದ ಕಡೆ ಗಮನಹರಿಸುವುದು ಖಂಡಿತ ಅವಶ್ಯಕ. ಉದ್ವೇಗಗೊಳ್ಳದೇ ಶಾಂತ ರೀತಿಯಿಂದ ವ್ಯವಹರಿಸಿದಲ್ಲಿ ಕೆಲಸಕಾರ್ಯಗಳಲ್ಲಿ ಸುಲಭ ಜಯವನ್ನು ಕಾಣಬಹುದು. ಹಣದ ಒಳಹರಿವು ಮಂದಗತಿಯಲ್ಲಿ ಇರುತ್ತದೆ.

ವೃಷಭ — ಕೃತ್ತಿಕಾ 2,3,4 ರೋಹಿಣಿ, ಮೃಗಶಿರಾ 1,2

ಕೆಲವೊಂದು ಸಮಸ್ಯೆಗಳ ಪರಿಹಾರಕ್ಕಾಗಿ ದೈವ ಪೂಜೆಯ ಜೊತೆಗೆ ಇತರೆ ಪರಿಹಾರ ಮಾರ್ಗಗಳನ್ನು ಕಂಡುಕೊಳ್ಳುವಿರಿ. ಯಾರೊಬ್ಬರನ್ನೂ ಹಂಗಿಸಿ ಮಾತನಾಡುವುದು ಖಂಡಿತ ಬೇಡ. ಸಾರಿಗೆ ವ್ಯವಹಾರವನ್ನು ಮಾಡುವವರಿಗೆ ಈಗ ಕೆಲಸಗಳು ದೊರೆಯುತ್ತವೆ. ಕೆಲವೊಂದು ಹಳೆಯ ವ್ಯವಹಾರಗಳಲ್ಲಿ ತೊಡಗಿಸಿದ್ದ ಹಣ ಈಗ ನಿಮ್ಮ ಕಷ್ಟಕ್ಕೆ ಒದಗುತ್ತದೆ. ದೈವದರ್ಶನಕ್ಕಾಗಿ ಸಂಸಾರಸಮೇತ ಹೋಗಿಬರುವಿರಿ.

ಮಿಥುನ — ಮೃಗಶಿರಾ 3,4 ಆರಿದ್ರಾ, ಪುನರ್ವಸು 1,2,3

ಉದ್ಯಮವನ್ನು ಸರಿದಾರಿಗೆ ತಂದು ಮುನ್ನಡೆಸುವಲ್ಲಿ ನಿಪುಣತೆಯನ್ನು ತೋರುವಿರಿ. ಭೂಮಿಯ ಕ್ರಯ ಮತ್ತು ವಿಕ್ರಯಗಳನ್ನು ಮಾಡುವವರಿಗೆ ಲಾಭವಿರುತ್ತದೆ. ರಾಜಕೀಯದಲ್ಲಿರುವ ಕೆಲವು ವ್ಯಕ್ತಿಗಳಿಗೆ ಕಾರ್ಯಕರ್ತರುಗಳ ಅಸಹಕಾರ ಎದುರಾಗಿ ಮುಜುಗರವನ್ನು ಅನುಭವಿಸಬೇಕಾಗುತ್ತದೆ. ವಿವಾಹ ಆಕಾಂಕ್ಷಿಗಳಿಗೆ ಸೂಕ್ತ ಸಂಬಂಧ ಒದಗಿಬರುವ ಸಾಧ್ಯತೆಯಿದೆ.

ಕಟಕ — ಪುನರ್ವಸು 4 ಪುಷ್ಯ, ಆಶ್ಲೇಷ

ಅತಿಯಾದ ಆತ್ಮಗೌರವವಿರುತ್ತದೆ. ಕೃಷಿಕಾರ್ಮಿಕರಿಗೆ ಉತ್ತಮ ಆದಾಯವಿರುತ್ತದೆ. ಕುಟುಂಬದ ಗೌರವವನ್ನು ಕಾಪಾಡಬೇಕಾದ ಅನಿವಾರ್ಯ ಎದುರಾಗಿ ಅದನ್ನು ಸಮರ್ಥವಾಗಿ ನಿರ್ವಹಿಸುವಿರಿ. ನಿಮ್ಮ ಎಲ್ಲಾ ವ್ಯವಹಾರಗಳ ಅಂಕಿಅಂಶಗಳನ್ನು ಗೋಪ್ಯವಾಗಿಡುವುದು ಉತ್ತಮ. ಜಾಮೀನು ನೀಡುವ ವಿಷಯಗಳಲ್ಲಿ ಎಚ್ಚರಿಕೆ ಇರಲಿ. ಇದು ನಿಮಗೆ ಸಂಕಷ್ಟವನ್ನು ತಂದೊಡ್ಡಬಹುದು.

ಸಿಂಹ — ಮುಖ, ಪೂರ್ವ ಫಲ್ಗುಣಿ, ಉತ್ತರ ಫಲ್ಗುಣಿ 1

ಉತ್ತಮ ಮಾತುಕತೆಯಿಂದ ಬಂಧುಗಳೊಡನೆ ಸಂಬಂಧಗಳನ್ನು ಸುಧಾರಣೆ ಮಾಡಿಕೊಳ್ಳುವಿರಿ. ಬಹುದಿನದ ಆಸೆಯೊಂದು ಈಡೇರುವ ಸಾಧ್ಯತೆ ಇದೆ. ವಾಹನಗಳ ಮಾರಾಟ ಮಾಡುವವರಿಗೆ ವ್ಯವಹಾರ ನಿಧಾನವಾಗಿ ಚೇತರಿಕೆಯನ್ನು ಕಾಣಬಹುದು. ನ್ಯಾಯಾಲಯದ ವಿಚಾರಗಳಿಗಾಗಿ ಆಗುತ್ತಿದ್ದ ಅಲೆದಾಟಗಳು ಕಡಿಮೆಯಾಗುತ್ತವೆ. ಹೊಸ ಪಾಲುದಾರರು ದೊರೆತು ವ್ಯವಹಾರ ವಿಸ್ತರಿಸುತ್ತದೆ.

ಕನ್ಯಾ — ಉತ್ತರ ಫಲ್ಗುಣಿ 2,3,4 ಹಸ್ತ, ಚಿತ್ತಾ 1,2

ಅಪರೂಪದ ಬಂಧುಗಳ ಆಗಮನದಿಂದ ಸಂತಸವಾಗುತ್ತದೆ ಮತ್ತು ಅವರಿಂದ ಉಡುಗೊರೆಗಳು ಸಹ ದೊರೆಯುತ್ತವೆ. ಉದ್ಯೋಗದಲ್ಲಿರುವ ಹಿರಿಯ ಅಧಿಕಾರಿಗಳಿಗೆ ಆಯಕಟ್ಟಿನ ಜಾಗಗಳಲ್ಲಿ ಸ್ಥಾನ ದೊರೆತು ಬದಲಿ ಆದಾಯದ ಸೂಚನೆ ಇರುತ್ತದೆ. ಮನೆಯ ಅನುಕೂಲಕ್ಕಾಗಿ ನವೀಕರಣ ಕಾರ್ಯವನ್ನು ಆದ್ಯತೆಯ ಮೇಲೆ ಕೈಗೆತ್ತಿಕೊಳ್ಳುವಿರಿ. ಖರ್ಚಿಗೆ ಕಡಿವಾಣವನ್ನು ಹಾಕಿ.

ತುಲಾ — ಚಿತ್ತಾ 3,4 ಸ್ವಾತಿ, ವಿಶಾಖೆ 1,2,3

ನಿಮ್ಮ ಬೇಡಿಕೆಯ ಈಡೇರಿಕೆಗಾಗಿ ಬಹಳ ಪ್ರಯಾಸಪಡುವಿರಿ. ಸ್ವಲ್ಪಮಟ್ಟಿನ ಒತ್ತಡಗಳ ನಡುವೆ ಕೆಲಸ ನಿರ್ವಹಿಸುವುದರಿಂದ ದೇಹಕ್ಕೆ ಆಯಾಸವಾಗುತ್ತದೆ. ನೀವು ತೆಗೆದುಕೊಂಡ ನಿರ್ಧಾರಗಳು ಚ್ಯುತಿಬಾರದೆ ಮುನ್ನಡೆಯುವುವು. ಹಣದ ಒಳಹರಿವು ಮಂದಗತಿಯಲ್ಲಿ ಇರುತ್ತದೆ. ಚಿನ್ನದ ಗಟ್ಟಿಗಳನ್ನು ಮಾರುವವರಿಗೆ ವ್ಯವಹಾರ ವೃದ್ಧಿಸುತ್ತದೆ. ಕೃಷಿಕರಿಗೆ ಆದಾಯ ಕಡಿಮೆ ಆಗುವ ಸಂದರ್ಭವಿದೆ.

ವೃಶ್ಚಿಕ — ವಿಶಾಖೆ 4 ಅನೂರಾಧ, ಜ್ಯೇಷ್ಠ

ಕುಟುಂಬದ ಉನ್ನತಿಗಾಗಿ ಹೊಸ ಹೊಸ ಕಾರ್ಯಗಳನ್ನು ಹಮ್ಮಿಕೊಳ್ಳುವಿರಿ. ಜೊತೆಗೆ ಹೊಸದಾದ ಜವಾಬ್ದಾರಿಯೊಂದು ಹೆಗಲೇರುತ್ತದೆ. ನಿರುದ್ಯೋಗಿಗಳಿಗೆ ಪರಿಚಿತರ ಸಹಾಯದಿಂದ ಉದ್ಯೋಗ ದೊರೆಯುತ್ತದೆ. ನಿಮ್ಮ ಏಳಿಗೆ ಕೆಲವು ಬಂಧುಗಳಿಗೆ ಇರುಸುಮುರುಸು ತರುವ ಸಂದರ್ಭವಿದೆ. ಹಣದ ಒಳಹರಿವು ಮಂದಗತಿಯಲ್ಲಿ ಇರುತ್ತದೆ.

ಧನುಸ್ಸು — ಮೂಲ, ಪೂರ್ವಾಷಾಢ, ಉತ್ತರಾಷಾಢ 1

ಕಾರ್ಯಯೋಜನೆಯ ಯಶಸ್ಸಿನಿಂದಾಗಿ ಸಂತಸವಾಗುತ್ತದೆ. ಸಂಬಂಧಿಕರಿಂದ ಸಂತಸದ ಸುದ್ದಿಯನ್ನು ಕೇಳುವಿರಿ. ದಿನದ ಕೆಲಸಕಾರ್ಯಗಳಲ್ಲಿ ಇದ್ದ ಅಡಚಣೆಗಳು ದೂರಾಗುತ್ತವೆ. ಸುತ್ತಮುತ್ತಲಿನ ಜನರೊಂದಿಗೆ ಉತ್ತಮ ಹೊಂದಾಣಿಕೆ ಕಂಡುಬರುತ್ತದೆ. ಸಮಾಧಾನದ ನಡೆಯಿಂದ ಎಲ್ಲರ ಗಮನಸೆಳೆಯುವಿರಿ. ಆಸ್ತಿ ಖರೀದಿಯ ಮಾತುಗಳು ಒಂದು ಹಂತ ತಲುಪಿ ಮನಸ್ಸಿಗೆ ನಿರಾಳವೆನಿಸುತ್ತದೆ.

ಮಕರ — ಉತ್ತರಾಷಾಢ 2,3,4 ಶ್ರವಣ, ಧನಿಷ್ಠ 1,2

ಹಿತೈಷಿಗಳೊಂದಿಗೆ ಜಂಟಿಯಾಗಿ ಮಾಡಿದ ವ್ಯವಹಾರಗಳಲ್ಲಿ ಮುನ್ನಡೆ ಇರುತ್ತದೆ. ಹಿರಿಯರಿಂದ ಸಕಾಲದಲ್ಲಿ ಉತ್ತಮ ಸಲಹೆಗಳು ದೊರೆತು ನಿಮ್ಮ ವ್ಯವಹಾರಕ್ಕೆ ಅನುಕೂಲವಾಗುತ್ತದೆ. ಈ ಹಿಂದೆ ನಿಂತಿದ್ದ ವಿದ್ಯೆಗಳನ್ನು ಈಗ ಮುಂದುವರೆಸಬಹುದು. ಬಾಯಿ ಮಾತನ್ನು ನಂಬಿ ಹಣ ಕೊಡುವುದು ಬೇಡ, ಇದು ನಿಮಗೆ ಬಹಳ ದುಬಾರಿಯಾಗಬಹುದು. ಹಣದ ಹರಿವು ಅಗತ್ಯಕ್ಕೆ ತಕ್ಕಷ್ಟು ಇದ್ದೇ ಇರುತ್ತದೆ. ವಿದ್ಯಾರ್ಥಿಗಳಿಗೆ ಅಂತಹ ಯಶಸ್ಸು ಇರುವುದಿಲ್ಲ.

ಕುಂಭ — ಧನಿಷ್ಠ 3,4 ಶತಭಿಷಾ, ಪೂರ್ವಾಭಾದ್ರ 1,2,3

ಅಧಿಕಾರವನ್ನು ಪಡೆಯುವ ಸಲುವಾಗಿ ಛಲದಿಂದ ಮುನ್ನುಗ್ಗುವಿರಿ. ಸಮಾನಮನಸ್ಕರ ಸಹಾಯದಿಂದ ನಿಮಗೆ ಮುನ್ನಡೆ ಇರುತ್ತದೆ. ನಿಮ್ಮ ಅಗತ್ಯಕ್ಕೆ ತಕ್ಕಷ್ಟು ಹಣದ ಹರಿವು ಇರುತ್ತದೆ. ಯುವಕರಿಗೆ ಉದ್ಯೋಗದಲ್ಲಿನ ಸಮಸ್ಯೆಗಳನ್ನು ಯಥೋಚಿತವಾಗಿ ಬಗೆಹರಿಸಿಕೊಳ್ಳಲು ಅವಕಾಶ ಒದಗುತ್ತದೆ. ಇದನ್ನು ಸರಿಯಾಗಿ ಬಳಸಿಕೊಳ್ಳುವುದು ಅತಿಮುಖ್ಯ. ಅನಿರೀಕ್ಷಿತ ಮೂಲದಿಂದ ಹಣ ಒದಗುತ್ತದೆ.

ಮೀನ — ಪೂರ್ವಾಭಾದ್ರ 4 ಉತ್ತರಭಾದ್ರ, ರೇವತಿ

ಯತ್ನಿಸಿದ ಕಾರ್ಯಗಳಲ್ಲಿ ಬಂಧುಮಿತ್ರರ ಸಹಕಾರದಿಂದ ಸಾಫಲ್ಯ ದೊರೆಯುತ್ತದೆ. ರಾಜಕಾರಣಿಗಳಿಗೆ ಉತ್ತಮ ಕೆಲಸ ಮಾಡಲು ಜನರಿಂದ ಪ್ರೇರೇಪಣೆ ದೊರೆಯುತ್ತದೆ. ಅನಪೇಕ್ಷಿತ ವಿಷಯಗಳ ಬಗ್ಗೆ ಚಿಂತಿಸುವುದನ್ನು ಬಿಡುವುದು ಒಳ್ಳೆಯದು. ನಿಮ್ಮ ಮುಂದಿನ ಯೋಜನೆಗಳಿಗೆ ಬೇಕಾದ ಆರ್ಥಿಕ ಸಂಪನ್ಮೂಲಗಳನ್ನು ಕ್ರೋಡೀಕರಿಸಲು ಸೂಕ್ತ ರೀತಿಯ ಆಲೋಚನೆ ಮಾಡುವುದು ಒಳಿತು. ಕೆಲವು ರಾಜಕಾರಣಿಗಳಿಗೆ ಕುಟುಂಬದವರಿಂದ ನೋವು ಉಂಟಾಗುವ ಸಾಧ್ಯತೆಗಳಿವೆ.

ಪದಬಂಧ 2697



ಮೇಲಿನಿಂದ ಕೆಳಕ್ಕೆ

1. ಕಾನೂರು ಹೆಗ್ಗಡತಿಯ ಕರ್ತೃ ಈ ರಾಷ್ಟ್ರಕವಿ 3
2. ತಲೆಕೆಳಕಾದ ದಾಸ ಯಾವಾಗಲೂ ಬರುವನು 2
3. ಮನೆಮದ್ದು ಈ ಲಿಂಬೆ ಪೇಯ 5
4. ಸುಂದರವಾಗಿ ಬಿಡಿಸಿರುವ ಒಡವೆ 5
7. ಅಧರಕ್ಕೆ ಮೃದು, ಬಾಯಿಗೆ ಸಿಹಿ, ಕಿವಿಗೆ ಇಂಪು 4
9. ರಸಭರಿತ ಮಾವು 3
11. ವಿಷದಿಂದ ಕೂಡಿದ್ದರೂ ಆಸಕ್ತಿ ಮೂಡಿಸುತ್ತದೆ 3
13. ಕುವಲಯಕ್ಕೆ ಸೇರಿದ ವೃತ್ತ ಭಾಗ 3
14. ಪದ್ಮಬ್ರಹ್ಮನ ಆರಾಧ್ಯ ದೇವಿ 4
15. ಕಾವ್ಯ ಸೃಷ್ಟಿಸುವವನ ಸೃಷ್ಟಿ ವೈಭವ 5
16. ಪತ್ರಿಕೆಯಲ್ಲಿ ಕಾಲಂ ಬರಹಗಾರ 5
17. ದುರ್ಗದ ಸುತ್ತ ಕಥೆಗಳನ್ನು ಹೆಣೆದಿರುವ ಕಾದಂಬರಿಕಾರ 3
20. ದ್ರವಿಸುವ ರಾಸಾಯನಿಕ ವಸ್ತು 3
23. ಕತ್ತರಿಸಿ ಜೋಡಿಸಿದ್ದು 2

ಎಡದಿಂದ ಬಲಕ್ಕೆ

1. ಕಲಿಯುಗದಲ್ಲಿ ದ್ವಾಪರವನ್ನು ಮನಮುಟ್ಟುವಂತೆ ತೋರಿಸಿದ ಕನ್ನಡ ಕವಿ 5
3. ಯುಗಾದಿಯ ಸಂಸ್ಕೃತ ಬೇವು 3
5. ಕೆಂಪು ಹರಳಿನಂತಹ ಬೀಜ ತುಂಬಿದ ಹಣ್ಣು 3
6. ಮುದ್ದಾಗಿ ಅಕ್ಕರೆಯಿಂದ ಬೆಳಸು 3
8. ದಾಸರಲ್ಲಿ ಶ್ರೇಷ್ಠ, ವಿಠಲ ಭಕ್ತ 4
10. ಷಹನ ಊರು 3
11. ಎಲ್ಲವನ್ನು ತುಂಬಿಕೊಳ್ಳಲು ಜಾಗ ಪಡೆದ ಅಂತರಂಗದ ಎದೆ 6
12. ಹಿಂದು ಮುಂದಾದ ದಶರಾಥಾತ್ಮಜನ ವೈರಿ 3
14. ಕೈಲಾಸದ ದಾರಿ ತೋರಿಸುವ ಕೆಲಸ 3
16. ಪಾರ್ವತಿಯ ದತ್ತ ಪುತ್ರ ದ.ರಾ.ಬೇಂದ್ರೆ 6
18. ಪೂರ್ವಾಪರದ ವಿವೇಚನೆಯ ಬುದ್ಧಿ 3
19. ಒಳ್ಳೆಯ ಮತಿಯ ಒಡೆಯ ಈ ನಾಡಿನ ಸಾಹಿತಿ 4
21. ಒಂದು ಸಂಕಲ್ಪವಾದರೆ ಇದು ವ್ಯತಿರಿಕ್ತವಾಗಿ ಭಿನ್ನ 3
22. ಅಲ್ಪಕಾರದಿಂದ ಉಂಟುಮಾಡುವವ 3
24. ಹಿಂದುಮುಂದಾಗಿ ಸಾಗಣೆ 3
25. ಹೋಳಿಗೆ, ಕಡಬುಗಳಲ್ಲಿ ತುಂಬಿರುವ ಕಾಯಿಬೆಲ್ಲ ಸವಿ ಮಿಶ್ರಣ 5

ಪದಬಂಧ ಉತ್ತರ -2696

ಮೇಲಿಂದ ಕೆಳಕ್ಕೆ

1.ಪ್ರಯತ್ನಭಂಗ 2.ಪ್ರವಾಹ 3.ತ್ವಮಸಿ 4.ಕೀಲಿಕೈ 5.ಕಪ್ಪುಹಣ 8.ರಬಡಿ 10.ಸಂಕಟಹರ 13.ಬಿಸಿಮುಟ್ಟಿಸು 14.ಪಜೀತಿ 16.ವೀಕ್ಷಕ 17. ಮಿತ್ರಕಲಹ 18.ಬೆಣ್ಣೆದೋಸೆ 20.ಸವಾಲು 21.ನವಮಿ 22.ರವವಿ

ಎಡದಿಂದ ಬಲಕ್ಕೆ

1. ಪ್ರಜಾಪ್ರಭುತ್ವ 4.ಕೀಟನಾಶಕ 6.ಮನಾಲಿ 7.ಹರಸಿ 9.ಕೈಲಾಸಂ 12.ಗಡಿಬಿಡಿ 14.ಪರದಾಟ 15.ಮುಖಸ್ತುತಿ 16.ವೀರಭೂಮಿ 18.ಬೆನ್ನಟ್ಟಿ 19.ಸುರಸ 21.ನಕಾರ 23.ವಾಸ್ತವ 24.ಸೆರೆಗಾವಲು 25.ಮಿಶ್ರವಿವಾಹ

ಲಿಂಗಪರಿವರ್ತಿತ ವ್ಯಕ್ತಿಯ ವಿದ್ವತ್ ಪ್ರಪಂಚ

ಎಚ್. ದಂಡಪ್ಪ

ಒಳನೋಟ

ಗಂಡು ಜೀವ, ಹೆಣ್ಣು ಭಾವ
ಮೂಲ: ಮಾನವಿ ಬಂದೋಪಾಧ್ಯಾಯ.
ಕನ್ನಡಕ್ಕೆ: ಬಿ ಎಸ್ ಜಯಪ್ರಕಾಶ ನಾರಾಯಣ.
ಪ್ರ: ವಂಶಿ ಪಬ್ಲಿಕೇಷನ್ಸ್, ನೆಲಮಂಗಲ, ಬೆಂಗಳೂರು-562123
ಸಂ: 9916595916
ಪು: 280 ₹250

ಮಾನವಿ ಬಂದೋಪಾಧ್ಯಾಯ ಅವರ 'A Gift of Goddess Lakshmi' ಎಂಬ ಆತ್ಮಕತೆಯನ್ನು 'ಗಂಡು ಜೀವ ಹೆಣ್ಣು ಭಾವ' ಎಂಬ ಶೀರ್ಷಿಕೆಯಡಿಯಲ್ಲಿ ಬಿ.ಎಸ್. ಜಯಪ್ರಕಾಶ ನಾರಾಯಣ ಅವರು ಕನ್ನಡಕ್ಕೆ ತಂದಿದ್ದಾರೆ. ಮಾನವಿಯವರು ಗಂಡಾಗಿ ಹುಟ್ಟಿ ಹೆಣ್ಣಿನ ಭಾವಗಳನ್ನು ಹೊತ್ತು ಅವಮಾನ, ನೋವು, ಹಿಂಸೆ, ಕಷ್ಟ ಎದುರಿಸಿ ಸಿದ್ಧಿಸಿಕೊಂಡ ಆತ್ಮವಿಕಾಸ ಮತ್ತು ಮಾಡಿದ ಸಾಧನೆಯ ಸ್ವರೂಪವನ್ನು ಹನ್ನೊಂದು ಅಧ್ಯಾಯಗಳಲ್ಲಿ ಅನಾವರಣಗೊಳಿಸಿದ್ದಾರೆ.

ಗಂಡು-ಹೆಣ್ಣು ಎಂಬುದು ಪ್ರಕೃತಿಸಹಜ ಲಿಂಗ ವ್ಯತ್ಯಾಸಗಳಷ್ಟೆ. ಇದು ಮಾನವ ಕುಲದ ಸಂತಾನದ ಮುಂದುವರಿಕೆಗಾಗಿ ಪ್ರಕೃತಿಯೇ ನಿರ್ಮಾಣ ಮಾಡಿರುವ ಜೈವಿಕ ವ್ಯತ್ಯಾಸ. ಅದನ್ನು ಬಿಟ್ಟರೆ ಹೆಣ್ಣು ಮತ್ತು ಗಂಡು ಇಬ್ಬರೂ ಅಪೂರ್ಣರೇ. ಸಾಮರ್ಥ್ಯ, ಬುದ್ಧಿವಂತಿಕೆ, ಜ್ಞಾನ ಎಲ್ಲದರಲ್ಲೂ ಇಬ್ಬರೂ ಸಮಾನರು. ಆದರೆ, ನಮ್ಮ ಸಾಮಾಜಿಕ ವ್ಯವಸ್ಥೆ ಮೇಲು ಕೀಳಿನ ಭಾವನೆಗಳನ್ನು ಉಂಟು ಮಾಡಿದೆ.

ಕೆಲವು ಜೀವಜಂತುಗಳಲ್ಲಿ ಗಂಡುಗಳು ಇಲ್ಲದೆಯೂ ಸಂತಾನೋತ್ಪತ್ತಿ ಸಾಧ್ಯವಾಗಿರುವುದನ್ನು ವಿಜ್ಞಾನಿಗಳು ಸಂಶೋಧನೆ ಮಾಡಿದ್ದಾರೆ. ಹಾಗೇನಾದರೂ ಮಾನವ ಕುಲದಲ್ಲಿ ಸಾಧ್ಯವಾದರೆ ಪುರುಷನ ಅಗತ್ಯವೇ ಇಲ್ಲ. ಸಂತಾನೋತ್ಪತ್ತಿ ಉದ್ದೇಶಬಿಟ್ಟರೆ ಗಂಡು ಮತ್ತು ಹೆಣ್ಣಿನ ಮಧ್ಯೆ ಭೇದ ಇಲ್ಲವೇ ಇಲ್ಲ ಎಂಬುದು ಜೀವಶಾಸ್ತ್ರಜ್ಞರ ಅಭಿಪ್ರಾಯ. ಆದ್ದರಿಂದ ಸಂತಾನೋತ್ಪತ್ತಿ ಸಾಮರ್ಥ್ಯವಿಲ್ಲದ ಟ್ರಾನ್ಸ್‌ಜೆಂಡರ್‌ಗಳ ಬಗ್ಗೆ ಅನಾರೋಗ್ಯಕರ ನಿಲುವುಗಳು ಬೇಕಾಗಿಲ್ಲ.

ಸಿಮೋನ್ ದ ಬುವಾ ಹೇಳುವಂತೆ, 'One is not born, but rather becomes a woman' ಸ್ತ್ರೀಯಾಗಿ ಯಾರೂ ಹುಟ್ಟಿರುವುದಿಲ್ಲ, ಆಗುತ್ತಾರಷ್ಟೆ. ಈ ಮಾತನ್ನು ಟ್ರಾನ್ಸ್‌ಜೆಂಡರ್ ವ್ಯಕ್ತಿಗಳಿಗೂ ಅನ್ವಯಿಸಿಕೊಳ್ಳಬಹುದು. ಸ್ತ್ರೀ ಮತ್ತು ಪುರುಷರು ಸಾಮಾಜಿಕವಾಗಿ ರೂಪುಗೊಳ್ಳುತ್ತಾರೆ. ಟ್ರಾನ್ಸ್‌ಜೆಂಡರ್‌ಗಳ ವಿಷಯದಲ್ಲಿಯೂ ಈ ರೂಪುಗೊಳ್ಳುವಿಕೆಯನ್ನು ಒಪ್ಪಿಕೊಳ್ಳಬೇಕು. ಆಗ ಅವರೂ ಮನುಷ್ಯರು ಎಂಬುದನ್ನು ಒಪ್ಪಿದಂತಾಗುತ್ತದೆ. ಆದರೆ, ಈ ಸಮಾಜ ಸ್ತ್ರೀಯರನ್ನೇ ಸಮಾನರು ಎಂದು ಒಪ್ಪುತ್ತಿಲ್ಲ. ಇನ್ನು ಟ್ರಾನ್ಸ್‌ಜೆಂಡರ್‌ಗಳ ಪಾಡೇನು? ಇಂತಹ ಪಾಡು ಮತ್ತು ಹಾಡನ್ನು 'ಗಂಡು ಜೀವ ಹೆಣ್ಣು ಭಾವ' ಎಂಬ ಕಥನ ನಿರೂಪಿಸುತ್ತದೆ.

ಆರ್ಥಿಕವಾಗಿ ಸಬಲವಾಗಿರುವ ಕುಟುಂಬದಲ್ಲಿ ಇಬ್ಬರು ಅಕ್ಕಂದಿರ ನಂತರ ಹುಟ್ಟಿದ ಸೋಮನಾಥ ಬಂದೋಪಾಧ್ಯಾಯನೆಂಬ ಹುಡುಗ, ಶಾಲಾ–ಕಾಲೇಜು ಮತ್ತು ತನ್ನ ಸುತ್ತಮುತ್ತಲ ಪರಿಸರದಲ್ಲಿ 'ಹೆಣ್ಣಿನಂತೆ ವರ್ತಿಸುತ್ತಿದ್ದಾನೆ' ಎಂಬ ಕಾರಣದಿಂದ ಅವಮಾನಕ್ಕೆ ಒಳಗಾಗುತ್ತಾನೆ. ತಂದೆ, ತಾಯಿ, ಅಕ್ಕಂದಿರು ನೊಂದುಕೊಳ್ಳುತ್ತಾರೆ. ಆದರೆ, ಸೋಮನಾಥನಿಗೆ ತಾನು ಹೆಣ್ಣಾಗಬೇಕು, ತನ್ನದೇ ಆದ ಸಂಸಾರ ಇರಬೇಕು ಎಂಬ ಭಾವ ಮನಸ್ಸಿನಲ್ಲಿ ಬೇರೂರಿ ಬೆಳೆಯುತ್ತಾ ಹೋಗುತ್ತದೆ. ಹಲವಾರು ಸ್ನೇಹಿತರು ಲೈಂಗಿಕವಾಗಿ ಬಳಸಿಕೊಂಡು ನಂತರ ಬಿಟ್ಟು ಹೋಗುತ್ತಾರೆ. ಆದರೆ, ಸೋಮನಾಥ ಹಟದಿಂದ ಆತ್ಮವಿಶ್ವಾಸದಿಂದ ಓದುತ್ತಾರೆ. ಬಂಗಾಳಿ ಸಾಹಿತ್ಯದಲ್ಲಿ ಎಂ.ಎ., ಎಂ.ಫಿಲ್., ಪಿಎಚ್.ಡಿ. ಪದವಿಗಳನ್ನು ಗಳಿಸಿ ಕಾಲೇಜಿನಲ್ಲಿ ಅಧ್ಯಾಪಕರಾಗುತ್ತಾರೆ. ನಂತರ ಪ್ರಿನ್ಸಿಪಾಲರಾಗಿ, ಲೇಖಕರಾಗಿ 'ಅಬೋ ಮಾನವ್' ಎಂಬ ನಿಯತಕಾಲಿಕ ನಡೆಸುತ್ತಾ ಅನೇಕ ಸೆಮಿನಾರುಗಳಲ್ಲಿ ಭಾಗವಹಿಸುತ್ತಾ ಸಾಂಸ್ಕೃತಿಕವಾಗಿ ತಮ್ಮ ಸಾಧನೆಯನ್ನು ಮಾಡುತ್ತಾರೆ.

ಭಾರತದಲ್ಲಿ ಮೊತ್ತಮೊದಲ ಬಾರಿಗೆ, 'ಲಿಂಗ ಪರಿವರ್ತನೆ' ಮಾಡಿಸಿಕೊಂಡ ವ್ಯಕ್ತಿಯೊಬ್ಬರು ಪ್ರಿನ್ಸಿಪಾಲರಾಗಿ ವಿದ್ವತ್ತನ್ನು ಗಳಿಸಿಕೊಂಡು ಸಭೆ ಸಮಾರಂಭಗಳಲ್ಲಿ ಭಾಗವಹಿಸುವುದು ಸಾಧಾರಣ ಮಾತಲ್ಲ. ಆದರೆ, ಆಹ್ವಾನ ನೀಡಿದವರೇ ಮುಸಿ ಮುಸಿ ನಗುತ್ತಾ ವ್ಯಂಗ್ಯ, ಅಣಕ ಮಾಡುತ್ತಾ ತಮಾಷೆಯ ವಸ್ತುವೆಂದು ಭಾವಿಸಿದ್ದರಿಂದ ಉಂಟಾದ ಅವಮಾನ, ನೋವು, ಆಘಾತಗಳನ್ನು ಅದುಮಿಟ್ಟುಕೊಂಡು ಮಾನವಿಯವರು ಸಾಧನೆಯ ಹಾದಿಯಲ್ಲಿ ಮುನ್ನಡೆದಿದ್ದಾರೆ.

ಸೋಮನಾಥ ಬಂದೋಪಾಧ್ಯಾಯ ಎಂಬ ಹೆಸರು ಮಾನವಿ ಬಂದೋಪಾಧ್ಯಾಯ ಎಂದು ಬದಲಾದಾಗ ಕೆಲವು ಪ್ರಮಾಣಪತ್ರಗಳು ಸೋಮನಾಥ ಎಂಬ ಹೆಸರಿನಲ್ಲಿಯೇ ಇರುತ್ತವೆ. ಅದು ಅವರ ಪದೋನ್ನತಿಗೆ ಅನನುಕೂಲವನ್ನು ಉಂಟು ಮಾಡುತ್ತದೆ. ಸರ್ಕಾರವು ಇವರ ಮನವಿಯನ್ನು ಪುರಸ್ಕರಿಸುವುದಿಲ್ಲ. ಆದರೆ, ಮಮತಾ ಬ್ಯಾನರ್ಜಿಯವರ ನೇತೃತ್ವದ ಸರ್ಕಾರ ಅಧಿಕಾರಕ್ಕೆ ಬಂದಾಗ ಇವರ ನೆರವಿಗೆ ನಿಲ್ಲುತ್ತದೆ. ಆ ಎಲ್ಲ ವಿವರಗಳನ್ನು ಮಾನವಿಯವರು ಹಂಚಿಕೊಂಡಿದ್ದಾರೆ.

ಲಿಂಗ ಪರಿವರ್ತನೆಗಾಗಿ ಮಾಡಿಸುವ ಶಸ್ತ್ರಚಿಕಿತ್ಸೆ ತುಂಬಾ ಕಠಿಣವಾದದ್ದು. ಅದೊಂದು ದೀರ್ಘವಾದ ಪ್ರಕ್ರಿಯೆ, ಅದನ್ನು ಮಾಡಿಸಿಕೊಳ್ಳಲು ಎಂಟೆದೆ ಬೇಕು. ಮನೋವಿಶ್ಲೇಷಕರು, ಮನಃಶಾಸ್ತ್ರಜ್ಞರು, ಮನೋವಿಜ್ಞಾನಿಗಳು, ಹಾರ್ಮೋನ್ ತಜ್ಞರು, ಪ್ಲಾಸ್ಟಿಕ್ ಸರ್ಜರಿ ತಜ್ಞರು ಎಲ್ಲರ ಸಮಾಲೋಚನೆಯಿಂದ ನಡೆಯಬೇಕು. ಈ ಕುರಿತು 'ನನ್ನ ಮೇಲೆ ನನಗೇ ಅನುಮಾನ' ಎಂಬ ಅಧ್ಯಾಯದಲ್ಲಿ ವಿವರಗಳಿವೆ.

ಮಾನವಿ ಅವರ ಸಾಮಾಜಿಕ ಹೋರಾಟ, ಅವರು ಬರೆದ ಪುಸ್ತಕಗಳು ಅನೇಕ ಟ್ರಾನ್ಸ್‌ಜೆಂಡರ್‌ಗಳಿಗೆ ಮಾರ್ಗದರ್ಶಕವಾಗಿವೆ. ಲಿಂಗಪರಿವರ್ತಿತರೂ ಮನುಷ್ಯರು, ಅವರಿಗೂ ಭಾವನೆಗಳಿವೆ. ಎಲ್ಲರಿಗೂ ಸಮಾನವಾಗಿ ಬದುಕುವ ಹಕ್ಕುಗಳಿವೆ ಎಂಬ ಅರಿವನ್ನು ಮೂಡಿಸಲು ಅವರು ಯತ್ನಿಸಿದ್ದಾರೆ.

'ಗಂಡು ಜೀವ ಹೆಣ್ಣು ಭಾವ'ದ ತಳಮಳಗಳು ಕೃತಿಯುದ್ದಕ್ಕೂ ಹರಳುಗಟ್ಟಿವೆ. ಎಲ್ಲ ಸವಾಲುಗಳನ್ನು ಮೆಟ್ಟಿನಿಲ್ಲುವ ಮಾನವಿ ಅವರ ಕಥೆ ಲೈಂಗಿಕ ಅಲ್ಪಸಂಖ್ಯಾತರಿಗೆ ಮಾತ್ರವಲ್ಲದೆ ಎಲ್ಲರಿಗೂ ಪ್ರೇರಣೆದಾಯಕವಾಗಿದೆ. 'ಟ್ರಾನ್ಸ್‌ಜೆಂಡರ್‌ಗಳ ಪಾಲಿಗೆ ನಿಜವಾದ ಅರ್ಥದಲ್ಲಿ ಸ್ವಾತಂತ್ರ್ಯದ ಬಾಗಿಲನ್ನು ತೆರೆದಿದ್ದೇ ನೀವು' ಎಂದು ಲೈಂಗಿಕ ಅಲ್ಪಸಂಖ್ಯಾತ ಸಮುದಾಯದ ಹಲವರು ಮಾನವಿಯವರ ಬಳಿ ಹೇಳಿಕೊಳ್ಳುತ್ತಾರಂತೆ. ಅಷ್ಟರಮಟ್ಟಿಗೆ ಅವರ ಹೋರಾಟ ಯಶಸ್ವಿಯಾಗಿದೆ ಕೂಡ. ಮನಕಲಕುವಂತಹ ವಿವರಗಳಿಂದ ಕೂಡಿರುವ ಈ ಕೃತಿಯನ್ನು ಜಯಪ್ರಕಾಶ ನಾರಾಯಣ ಅವರು ತಿಳಿಯಾದ ಕನ್ನಡದಲ್ಲಿ ಅನುವಾದಿಸಿದ್ದಾರೆ. ❖

ನವ ತಲ್ಲಣದ ಕಾವ್ಯಜಹಜು

ಕೇಶವ ಶರ್ಮ ಕೆ.



ಯಾವ ಶಹರು ಯಾವ ಬೆಳಕು
ಲೇ: ಎಚ್.ಎಸ್. ಶಿವಪ್ರಕಾಶ್
ಪ್ರ: ಅಂಕಿತ ಪುಸ್ತಕ
ಸಂ: 080-26617100
ಪು: 112 ₹120

ಆಧುನಿಕ ಕನ್ನಡದ ಕಾವ್ಯಕ್ಕೆ ಒಂದು ವಿಶಿಷ್ಟ ದಿಕ್ಕನ್ನು ಸೂಚಿಸಿದ ಕವಿಗಳಲ್ಲಿ ಶಿವಪ್ರಕಾಶರೂ ಒಬ್ಬರು. ಅವರು ಬರೆಯಲು ಪ್ರಾರಂಭ ಮಾಡಿದ ವೇಳೆಯಲ್ಲಿ ಒಂದು ಕಡೆಗೆ ಅಡಿಗರು, ಲಂಕೇಶ್, ಅನಂತಮೂರ್ತಿಯವರು ಇದ್ದರು. ಮತ್ತೊಂದು ಕಡೆಯಲ್ಲಿ ದಲಿತ ಲೇಖಕರು ತಮ್ಮ ನಿಲುವನ್ನು ಹೇಳಿದ್ದರು. ಎಡ ಮತ್ತು ಬಲ ಎನ್ನುವ ವರ್ಗೀಕರಣವೂ ಇತ್ತು. ವಸಾಹತುಶಾಹಿಯ ಪ್ರಭಾವವನ್ನು ಹೇಗೆ ಮೀರುವುದು ಎನ್ನುವ ಪ್ರಶ್ನೆಯು ವೈಚಾರಿಕರನ್ನು ಕಾಡಲು ತೊಡಗಿತ್ತು. ಪುರಾಣ, ಐತಿಹ್ಯ, ನಂಬಿಕೆಗಳು ಆಧುನಿಕ ವಿಚಾರವಾದಿಗಳಿಗೆ ಪಥ್ಯವಾಗಲಿಲ್ಲ. ಇನ್ನೊಂದೆಡೆ, ಇವುಗಳಲ್ಲಿ ಸ್ಥಳೀಯತೆಯ ನೋಟದ ಹುಡುಕಾಟವೂ ಆರಂಭವಾದ ಹೊತ್ತಿನಲ್ಲಿ ಶಿವಪ್ರಕಾಶರು 'ಸಮಗಾರ ಭೀಮವ್ವ' ಕವಿತೆಯನ್ನು ಬರೆದರು. ಸಿದ್ಧ ಜಾಡಿನಲ್ಲಿ ಹೋಗುತ್ತಿದ್ದ ಕನ್ನಡ ಕಾವ್ಯಕ್ಕೆ ಹೊಸ ಲಯವನ್ನು ನೀಡಿದ ಕವಿತೆಯಿದು. ಈ ಮೂಲಕ ಹೊಸದಾದ ತಾತ್ವಿಕ ಆಯಾಮವನ್ನೂ ಸೂಚಿಸಿದವರು ಅವರು. ಪರಂಪರೆಯ ಜೊತೆಗಿನ ಭಿನ್ನ ಒಡನಾಟದ ದಾರಿ ಅವರದು.

'ಯಾವ ಶಹರು ಯಾವ ಬೆಳಕು' ಎಂಬ ಅವರ ಹೊಸ ಕವನ ಸಂಕಲನದಲ್ಲಿ ನಾವು ಕಾಯುತ್ತಿದ್ದ ಶಿವಪ್ರಕಾಶ್ ಮತ್ತೆ ಬಂದಿದ್ದಾರೆ:

ಎಲ್ಲಾ ಕಾಣಿಸುತ್ತಿದೆ ನನಗೆ
ನೀವು ಕೇಳುತ್ತೀರಿ ನನ್ನನ್ನು
ಯಾವ ಪಾಪಿಯ ಪಾಪ
ಈ ರೋಗ, ರುಜಿನ, ಕ್ಷಾಮ, ಡಾಮರದ ಶಾಪ ಕೊಟ್ಟಿದೆ
ಈ ನೆಲಕ್ಕೆ ಜನ- ಜಾನುವಾರುಗಳಿಗೆ, ಮರ, ಗಿಡ, ಸಸಿಗಳಿಗೆ (ಥೀಬ್ಸ್ ನಗರಸ್ಥರಿಗೆ ತೈರ್ಸಿಯೆಸ್ ನೀಡಿದ ಎಚ್ಚರಿಕೆ)

'ಮಲಗು ಮಲಗವ್ವ ನನ ಮನಸೆ ಮಲಗು' (ಜೋಗುಳ), 'ಜೀವ ಜೀವ ತಬ್ಬಲಿ ಇನ್ನಿರದ ಹಾಗೆ ತಬ್ಬಲಿ' (ಸೋಕು) ಎನ್ನುವಲ್ಲಿ ಕವಿತೆಯ ಆಶಯವೇ ಕವಿತೆಯ ಲಯವೂ ಆಗಿ ಹೊಮ್ಮುತ್ತದೆ. ಇಂದು ಇರುವುದೇನು? ಮತ್ತು ನಾವು ಜಗತ್ತನ್ನು ನೋಡಬೇಕಿರುವುದು ಹೇಗೆ ಎಂಬ ತಲ್ಲಣ ಇಲ್ಲಿದೆ. ಉದ್ವಿಗ್ನತೆ (ಕಾಡಿಗೋದ ಪುಟ್ಟಿ), ವಿಷಾದ (ತವರು), ಅಗಲುವಿಕೆ(ಯಾವ್ಯಾವ ರೂಪವನ್ನು ನಾನು ತಾಳಿದ್ದರೆ), ನೋವು (ಕಪ್ಪು ನದಿ) ಮುಂತಾದ ಬಹುಮುಖ್ಯ ಕವಿತೆಗಳು ಇಲ್ಲಿವೆ. ನಾವು ಮತ್ತೆ ಮತ್ತೆ ಶಿವಪ್ರಕಾಶರ ಕವಿತೆಗಳಿಗೆ ಕಾಯುತ್ತೇವೆ. ಕವಿತೆಗಳಿಗೆ ಕಾಯುವಂತೆ ಮಾಡುವ ಕವಿಗಳು ತುಂಬಾ ಕಡಿಮೆ.

ಈ ಸಂಕಲನದಲ್ಲಿ ಅವರು ನಡೆಸುತ್ತಿರುವ ಒಂದು ಅಪೂರ್ವ ಹುಡುಕಾಟವು ಕೂಡಾ ಗಮನ ಸೆಳೆಯುವ ಮಾದರಿಯಲ್ಲಿ ಇದೆ. ಈ ಹುಡುಕಾಟದಲ್ಲಿ ಪರಂಪರೆ ಇದೆ. ಪೂರ್ವ ಮತ್ತು ಪಶ್ಚಿಮದ ಚಿಂತನೆಗಳ ಸಮನಾದ ಒಂದು ಎರಕವೂ ಇದೆ. ಆದ್ದರಿಂದಲೇ ಇಲ್ಲಿನ ಕವಿತೆಗಳಿಗೆ ಸ್ಥಳದ ಹಂಗುಗಳು ಇಲ್ಲ. ಕಾಲವೂ ಮುಖ್ಯವಲ್ಲ. ಅವುಗಳನ್ನಿವು ಮೀರಿವೆ. ಅವರ ಈ ಹಿಂದಿನ ಸಂಕಲನಗಳಲ್ಲಿ ಸ್ಥಳ, ಕಾಲವು ಅತ್ಯಂತ ಮುಖ್ಯವಾಗಿದ್ದವು. ಜಾತಿ, ಮತ, ಸ್ಥಳ ಅವರಿಗೆ ಮುಖ್ಯವಲ್ಲ. ಈ ಹೊತ್ತು ಚರಿತ್ರೆಯ ಗತಿ ಬದಲಾಗಿದೆ. ಆದ್ದರಿಂದ ಈ ಹೊತ್ತು ನಮ್ಮ ಆಯ್ಕೆಗಳಲ್ಲಿ ವ್ಯತ್ಯಾಸಗಳಾಗಿವೆ. ವಸಾಹತೋತ್ತರ ಕಾಲದ ಅಭಿವ್ಯಕ್ತಿಯು ಇನ್ನೂ ಭಿನ್ನವಾಗಿದೆ. 'ಕಳಚಿಡು ನಿನ್ನ ಜೋಡು'ಗಳನ್ನು ಈ ದೃಷ್ಟಿಯಿಂದ ಅತ್ಯಂತ ಮಹತ್ವದ ಕವಿತೆಯೂ ಹೌದು. ವರ್ತಮಾನವು ಹೇಗೆ ಇದೆ ಎಂದು ಹೇಳುವುದು ಮತ್ತು ಭೂತಕಾಲವನ್ನು ನಿರೂಪಿಸುವುದು ಇಲ್ಲಿ ಜೊತೆಯಾಗಿವೆ. ಅದರ ಜೊತೆಗೆ ಆಧುನಿಕ ಸಾಂಸ್ಕೃತಿಕ ವಲಯವು ಕೆಲವನ್ನು ಖಾಲಿಯಾಗಿಯೂ ಬಿಟ್ಟಿದೆ. ಖಾಲಿಯಾದ ಜಾಗವನ್ನು ಶಿವಪ್ರಕಾಶರು ಹೊಸ ನುಡಿಗಳ ಮೂಲಕ ಕಟ್ಟಿಕೊಡುತ್ತಿದ್ದಾರೆ. ಇದನ್ನೇ ಕೆಲವು ವಿಮರ್ಶಕರು ಮೂರನೆಯ ಜಾಗ ಎಂದು ಹೇಳುತ್ತಾರೆ. ಅಲ್ಲಿ ನಿಂತು ಜಗತ್ತನ್ನು ನೋಡುತ್ತಿದ್ದಾರೆ. ಆ ಮೂಲಕ ಅವರು ಸದ್ಯವನ್ನು ದಾಟಿದ್ದಾರೆ ಎನ್ನುವುದಕ್ಕೆ 'ಎಷ್ಟು ದೂರ ಹೋಗಬೇಕು ನಿನ್ನ ತೀರದಿಂದ' ಒಂದು ಸಾಕ್ಷಿ ಮಾತ್ರ. ಅವರ 'ಗಡಂಗು' ಪದ್ಯವು ಲೌಕಿಕವನ್ನು ಅತ್ಯಂತ ಸಮರ್ಥವಾಗಿ ಮಂಡಿಸುತ್ತದೆ. ಈ ಮಾದರಿಯ ಪದ್ಯಗಳು ಶಿವಪ್ರಕಾಶರಲ್ಲಿ ಲೌಕಿಕವನ್ನು ನೋಡುವ ಮಾರ್ಗವಾಗುತ್ತವೆ.

ವಿಮರ್ಶೆ

'ಮಗಳಿಗೆ ಪಾಠ 1'ರ ಆಪ್ತವಾದ ನಿಲುವು ಈ ಸನ್ನಿವೇಶಕ್ಕೆ ಹೊಂದುವಂತಹುದು. ಸಮಾಜವು ಅನೇಕ ವೈರುದ್ಧ್ಯಗಳನ್ನು ಒಳಗೊಂಡಿದೆ. ಅದು ಕವಿಗೆ ಗೊತ್ತು. ಈ ಸಂಕಲನದ ವಿವಿಧ ಕವಿತೆಗಳು ವಿವಿಧ ಸಾಮಾಜಿಕ ಸಂಗತಿಗಳನ್ನು ಹೇಳುತ್ತವೆ. 'ಬುದ್ಧ', 'ಅಂಬೇಡ್ಕರರ ನೆನಪುಗಳು', 'ಎಲ್ಲಿ ಬೇಕಾದರೂ ಆಗಬಹುದು' ಎನ್ನುವ ವಾಸ್ತವದ ಸ್ಥಿತಿ, ಥೀಬ್ಸ್ ನಗರ, ಗ್ರೀಕ್ ಪ್ರೇಮ ಕವಿತೆ ಮುಂತಾದವು ಭೂಗೋಲದ ಪರಿವರ್ತನೆಗಳನ್ನು ಹೇಳುತ್ತವೆ. ಅದರ ಜೊತೆಗೆ 'ಹೋಗಲು ಬಿಡು' ವಿಷಾದವನ್ನು ಸೂಚಿಸುತ್ತದೆ. 'ಗೊತ್ತಾಗಿದೆ ಈಗ ನನಗೆ' ಮನುಷ್ಯನು ನಡೆಯಬೇಕಾದ ದಾರಿಯನ್ನು ನಿರೂಪಿಸುತ್ತದೆ.

ಇವೆಲ್ಲ ಒಂದು ಬಗೆಯಲ್ಲಿ ಇದ್ದರೆ ಮತ್ತೊಂದು ಕಡೆಯಿಂದ ಇವತ್ತಿನ ಸೃಜನಶೀಲ ಬಿಕ್ಕಟ್ಟುಗಳು ಶಿವಪ್ರಕಾಶರಿಗೆ ಅತ್ಯಂತ ಮುಖ್ಯವಾದದ್ದು ಎಂದು ಅನಿಸಿದೆ. 'ಏಳು ಶಿವಪ್ರಕಾಶ ಏಳು' (ಇದು ಸ್ವಲ್ಪ ದುರ್ಬಲವಾದ ಕವಿತೆಯೂ ಹೌದು), 'ಯಾಕೆ ಕವಿತೆ ಬರೆಯುವೆ' ಮತ್ತೊಂದು ಬಗೆಯವು. ಕಾವ್ಯ ಎನ್ನುವುದು ಒಂದು ತಾತ್ವಿಕ ಆಯ್ಕೆ. 'ಬರುತ್ತೇನೆ ನಗರವೇ' ಎನ್ನುವ ಕವಿತೆಯು ಇದನ್ನು ಹೇಳುತ್ತದೆ. ಈ ಸಂಕಲನದಲ್ಲಿ ನಗರವನ್ನು ಕೇಂದ್ರ ಮಾಡಿದ್ದು, ನಗರ ಎನ್ನುವುದು ಹೇಗೆ ಒಂದು ಮಾಯಕದ ಲೋಕವನ್ನು ಹೇಳುತ್ತದೆ, ಅದರಿಂದ ನಾನು ಹೇಗೆ ಬಿಡಿಸಿಕೊಳ್ಳುತ್ತೇನೆ ಎನ್ನುವುದು 'ವಿದಾಯ'ಕ್ಕೆ ವಿಶಿಷ್ಟ ಅರ್ಥವನ್ನು ಕೊಡುತ್ತದೆ. ಲೌಕಿಕ ಮತ್ತು ಆಗಮಿಕದ ನಡುವೆ ಸುತ್ತಾಟ, ಅಲ್ಲಮ ಮತ್ತು ಬುದ್ಧರೆಡೆಗಿನ ಪ್ರೀತಿ ಹಾಗೂ ಈ ನೆಲದ ತಿಳಿವಳಿಕೆಗಳ ಒಡನಾಟಗಳಿಂದ ಹುಟ್ಟಿಕೊಳ್ಳುವ ಅವರ ಕವಿತೆಗಳ ಸಾಂಸ್ಕೃತಿಕ ಆಯಾಮವು ಎಲ್ಲ ಕಾಲಕ್ಕೂ ಮಹತ್ವದ್ದೇ ಆಗಿದೆ. ❖

ಸಂಸ್ಕೃತಿಯ ತೊಟ್ಟಿಲಲ್ಲಿ ತೂಗುತ್ತಾ...

ಕಾವೇರಿ ತೀರದ ಪಯಣ
ಲೇ: ಒ.ಕೆ.ಜೋಣಿ
ಕನ್ನಡಕ್ಕೆ: ವಿಕ್ರಂ ಕಾಂತಿಕೆರೆ
ಪ್ರ: ನವಕರ್ನಾಟಕ
ಸಂ: 080 22161900
ಪು: 240 ₹250

ನದಿಗಳನ್ನು ಸಂಸ್ಕೃತಿಯ ತೊಟ್ಟಿಲುಗಳು ಎಂದೇ ಗುರ್ತಿಸಲಾಗುತ್ತದೆ. ಮಾನವನ ಬದುಕಿನ ಮೇಲೆ ಅವುಗಳು ಬೀರುವ ಪ್ರಭಾವ ಅಗಾಧವಾದುದು. ದಂಡೆಯ ಮೇಲಿನ ಊರುಗಳಂತೂ ತಮ್ಮ ಬಹುತೇಕ ಅಗತ್ಯವನ್ನು ಪೂರೈಸಿಕೊಳ್ಳುವುದು ನದಿಗಳಿಂದಲೇ. ಆದ್ದರಿಂದಲೇ ಈ ಜಲಮೂಲಗಳನ್ನು ಜೀವನದಿ ಎಂದು ಕರೆಯುವುದು. ಕರ್ನಾಟಕ ಮತ್ತು ತಮಿಳುನಾಡಿನ ನೆಲದಲ್ಲಿ ಹರಿಯುವ ಕಾವೇರಿ ಅಂತಹ ಜೀವನದಿಗಳಲ್ಲೊಂದು. ಕಾವೇರಿ ನದಿಯು ಬೆಳೆಸಿ, ಪೋಷಿಸಿದ ಸಂಸ್ಕೃತಿಯನ್ನು ಅರಿಯುವ ಹಂಬಲದಿಂದ ಪತ್ರಕರ್ತ ಒ.ಕೆ. ಜೋಣಿಯವರು ಕರ್ನಾಟಕದ ತಲಕಾವೇರಿಯಿಂದ ತಮಿಳುನಾಡಿನ ಪೂಂಪುಹಾರ್‌ವರೆಗೆ ಯಾತ್ರೆ ನಡೆಸಿ ದಾಖಲಿಸಿದ ಅನುಭವಗಳ ಕಥನವೇ 'ಕಾವೇರಿ ತೀರದ ಪಯಣ'.

ಹಾಗೆಯೇ ನದಿಯು ಸಮುದ್ರ ಸೇರಿದ ಬಿಂದುವಿನಿಂದ ಘಟ್ಟದಲ್ಲಿರುವ ಉಗಮದ ಕೇಂದ್ರದವರೆಗೆ ನಡೆಸಿದ 'ಯು' ಟರ್ನ್ ಯಾನದ ಅನುಭವಗಳು ಸಹ ಇಲ್ಲಿವೆ. ನದಿ ತೀರದ ಪರಿಧಿಯನ್ನು ಹೀಗೆ ಒಂದು ಸುತ್ತು ಹಾಕಿ ಕಂಡದ್ದನ್ನೆಲ್ಲ 'ಕಾಣಿಸುವ' ಪ್ರಯತ್ನ ಅಪರೂಪದ್ದು.

ಜೋಣಿಯವರು ನಡೆಸುವ ಕಾವೇರಿ ಸಂಸ್ಕೃತಿಯ ತಲಸ್ಪರ್ಶಿ ಹುಡುಕಾಟ ಸೋಜಿಗವನ್ನು ಉಂಟು ಮಾಡುತ್ತದೆ. ಅವರು ಆಳಕ್ಕೆ ಇಳಿಯುತ್ತಾ, ಇಳಿಯುತ್ತಾ ಪೌರಾಣಿಕ ಪ್ರಸಂಗಗಳು, ಐತಿಹ್ಯಗಳು, ಸ್ಥಳ ಪುರಾಣಗಳನ್ನೂ ಜಾಲಾಡುತ್ತಾರೆ. ಚಾರಿತ್ರಿಕ ದಾಖಲೆಗಳಿಗೂ ಕೈಹಾಕುತ್ತಾರೆ. ದಂಡೆಯಲ್ಲಿ ತಾವು ಓಡಾಡಿ ಕಂಡ ಸದ್ಯದ ಸ್ಥಿತಿಯನ್ನೂ ವಸ್ತುನಿಷ್ಠವಾಗಿ ದಾಖಲಿಸುತ್ತಾರೆ. ಹೀಗಾಗಿ ನದಿಯ ಪ್ರವಾಹದಂತೆಯೇ ಇಲ್ಲಿ ಲೆಕ್ಕವಿಲ್ಲದಷ್ಟು ಮಾಹಿತಿಗಳು ಇಡುಕಿರಿದು ಹರಿಯುತ್ತವೆ.

ಹಾಗೆ ನೋಡಿದರೆ, 'ನದಿಯೊಂದರ ಉಗಮ ಸ್ಥಾನದಿಂದ' ಎನ್ನುವ ಮೊದಲ ಅಧ್ಯಾಯವೇ ಕುತೂಹಲಕಾರಿಯಾಗಿದೆ. ತಲಕಾವೇರಿಯ ನೀರಿನ ಹೊಂಡವನ್ನೇ ಎಲ್ಲರೂ ಕಾವೇರಿಯ ಉಗಮಸ್ಥಾನ ಎಂದು ನಂಬುತ್ತಾರೆ. ಆದರೆ, ಲೇಖಕರಿಗೆ ಸಿಗುವ ಸ್ವಾಮಿ ಆನಂದತೀರ್ಥರು ಉಗಮಸ್ಥಾನ ತೋರಿಸಲು ಅವರನ್ನು ತೀರ್ಥೋದ್ಭವ ಕ್ಷೇತ್ರದ ಬದಲು ಅದೇ ಬ್ರಹ್ಮಗಿರಿ ಬೆಟ್ಟದ ಬೇರೊಂದು ಸ್ಥಳಕ್ಕೆ ಕರೆದೊಯ್ಯುತ್ತಾರೆ!

ಕೊಡಗು, ಮೈಸೂರು, ಶ್ರೀರಂಗಪಟ್ಟಣ... ಹೀಗೆ ಕಾವೇರಿ ತೀರದ ಹಲವು ರಾಜಮನೆತನಗಳ ಕಥೆಗಳು ಈ ಕೃತಿಯಲ್ಲಿ ಮೆರವಣಿಗೆ ಹೊರಡುತ್ತವೆ. ಬೆಳ್ಳೂರಿನ ಕೊಕ್ಕರೆಗಳು ಗರಿಬಿಚ್ಚಿ ಹಾರುತ್ತವೆ. ಆಂಡಾಳ್, ತ್ಯಾಗರಾಜರಾದಿಯಾಗಿ ಹಲವು ದಿಗ್ಗಜರ ಸಂಗೀತದ ನಿನಾದ ಸಹ ಕೇಳಿಸುತ್ತದೆ. 'ಕಾವೇರಿ ನಮ್ಮದು' ಎಂದು ಜಗಳ ಕಾಯುವ ಎರಡೂ ರಾಜ್ಯಗಳ ಜನರ ಕಿವಿಯಲ್ಲಿ ಈ ಕೃತಿ, 'ಕಾವೇರಿ ನಿಮ್ಮಿಬ್ಬರದು, ಮಲಿನ ಮಾಡದೆ ರಕ್ಷಿಸಿಕೊಳ್ಳಿ' ಎಂದು ಪಿಸುಗುಟ್ಟಿದಂತೆ ಭಾಸವಾಗುತ್ತದೆ. ಎರಡೂ ಸಂಸ್ಕೃತಿಗಳ ಸಂಗಮವೂ ಇಲ್ಲಿ ಆಗಿದೆ. ಮೊದಲೇ ವಿವರಿಸಿದಂತೆ ಇಲ್ಲಿ ಇಡುಕಿರಿದ ಮಾಹಿತಿಗಳ ಮಹಾಪೂರದ ಜತೆ ಓದುಗನೂ ಓಡಬೇಕು. ಬೊಗಸೆ ನೀರು ಬೇಕಾದವರಿಗೂ ಬಿಂದಿಗೆಯಿಂದಲೇ ಹನಿಸಿದಂತೆ, ಕೃತಿಯಲ್ಲಿ ವಿವರಗಳು ಕಿಕ್ಕಿರಿದಿವೆ. ಮಲಯಾಳಂನ ಈ ಹೊತ್ತಿಗೆಯನ್ನು ಮೂಲ ಕನ್ನಡದ್ದೇ ಎನಿಸುವಂತೆ ಪತ್ರಕರ್ತ ವಿಕ್ರಂ ಕಾಂತಿಕೆರೆ ಅನುವಾದಿಸಿದ್ದಾರೆ. ❖

ರೈಟ್ ರೈಟ್...

8ನೇ ಪುಟದಿಂದ...

ಒಮ್ಮೊಮ್ಮೆ 'ಓ ಶಂಕರ್ ವಿಠಲ್ ಹೋಯಿತು, ನಾನಿನ್ನೂ ದನ ಕರೆದಿಲ್ಲ ಎಂದು ಅಮ್ಮ ಹಟ್ಟಿಗೆ ಓಡುವುದಿತ್ತು. ದುರ್ಗಾಪ್ರಸಾದ ಮೋಟಾರ್ ಬರುವಾಗ ಸೈಕಲ್ ಹತ್ತಿ ರಸ್ತೆಯ ತಿರುವಿನಲ್ಲಿರುತ್ತಿದ್ದರೆ ಮಾತ್ರ ಶಾಲೆಯನ್ನು ಸರಿಯಾಗಿ 9.15ಕ್ಕೆ ಸೇರಿರುತ್ತಿದ್ದೆ. ದಾರಿಯಲ್ಲಿ ಮೂರು ಕುಂದಾಪುರದ ಎಕ್ಸ್‌ಪ್ರೆಸ್, ಎರಡು ಉಡುಪಿಗೆ, ಒಂದು ಶಟಲ್ ಬಸ್ಸು ಸಿಕ್ಕಿಯೇ ಸಿಗುತ್ತವೆ.

ಈ ಬಸ್ ಡ್ರೈವರು, ಕಂಡಕ್ಟರುಗಳ ಬಗ್ಗೆ ಹೇಳದಿದ್ದರೆ ಬರಹ ಅಪೂರ್ಣ. ಒಮ್ಮೆ ಬೆಂಗಳೂರಿನಲ್ಲಿ ಹೋಟೆಲ್ಲಿಗೆ ಹೋದಾಗ ಅಲ್ಲಿ ಕೆಲಸಕ್ಕಿದ್ದ ಪರಿಚಯದ ಕಂಡಕ್ಟರರೊಬ್ಬರನ್ನು ಕಂಡು ಅಚ್ಚರಿಯಾಗಿತ್ತು. ಕಂಡಕ್ಟರ್ ಕೆಲಸ ಬಿಟ್ಟಿದ್ದಾಗಿ ಹೇಳಿ ಕುಶಲ ಕೇಳಿದ್ದರು. ಹೀಗೆ ಪ್ರತಿದಿನ ಒಂದೇ ಬಸ್ಸಿನಲ್ಲಿ ಪ್ರಯಾಣಿಸುವವರೊಂದಿಗೆ ಆತ್ಮೀಯ ಭಾವ ಮೂಡಿ ಸಹೋದರನೋ, ಸ್ನೇಹಿತನೋ ಎಂಬ ಭಾವ ಉದಯಿಸಿಬಿಟ್ಟಿರುತ್ತದೆ. ಒಂದು ದಿನ ಬಾರದಿದ್ದರೆ 'ನಿನ್ನೆ ಏಕೆ ಬರಲಿಲ್ಲ' ಎಂದು ಕೇಳುವಷ್ಟು ಸಲುಗೆಯಿರುತ್ತದೆ.

ಇನ್ನು ಈ ಬಸ್ಸು ಡ್ರೈವರುಗಳಂತೂ ಬಾಲಿವುಡ್ ಹೀರೊಗಳಿಗೂ ಸಡ್ಡು ಹೊಡೆಯುವಂತಹ ಸುರಸುಂದರಾಂಗರು. ಕೂಲಿಂಗ್ ಗ್ಲಾಸ್ ಏರಿಸಿ, ಜೀನ್ಸ್ ಪ್ಯಾಂಟು ತೊಟ್ಟು ಹೋಗುತ್ತಿದ್ದರೆ ಅಮೀರ್ ಖಾನೂ, ರಣವೀರ್ ಕಪೂರನೂ ಸುಳ್ಳು. ಹೀಗಾಗಿ ಅನೇಕ ಕಾಲೇಜು ಹುಡುಗಿಯರು ಡ್ರೈವರನ ಸೌಂದರ್ಯಕ್ಕೆ ಫಿದಾ ಆಗಿ ಒಂದಷ್ಟು ದಿನ, ಜನರ ಬಾಯಿಗೆ ಆಹಾರವಾಗಿಯೂ ಇದ್ದರು, ಇನ್ನು ಕೆಲವರು ಅವರನ್ನೇ ಮದುವೆಯಾಗಿದ್ದರು.

ಕುಂದಾಪುರ, ಉಡುಪಿಯಂಥ ಮುಖ್ಯ ನಿಲ್ದಾಣಗಳಲ್ಲಿ ಸಣ್ಣಸಣ್ಣ ವ್ಯಾಪಾರಿಗಳು ಜಾಸ್ತಿ. ಅದರಲ್ಲೂ ಉಡುಪಿಯಲ್ಲಿರುತ್ತಿದ್ದ ಚಿಕ್ಕು ವ್ಯಾಪಾರಿಯೊಬ್ಬ, ಹಣ್ಣಿನ ಬುಟ್ಟಿಯನ್ನು ಪ್ರಯಾಣಿಕರ ಮುಖದೆದುರು ಹಿಡಿದು 'ಛೀಕೂ, ಛೀಕೂ ಎಂದು ಹೇಳುತ್ತಿದ್ದ ರೀತಿ ಹಣ್ಣಿಗಿಂತ ಆಕರ್ಷಕವಾಗಿರುತ್ತಿತ್ತು. ಸೈಕಲ್ಲಿನಲ್ಲಿ ಐಸ್‌ಕ್ರೀಂ ಮಾರುವಾತ ಕಿಟಕಿ ಬದಿ ವಿರಾಜಮಾನರಾಗಿರುವ ಮಕ್ಕಳನ್ನೇ ಗುರಿಯಾಗಿಸಿ ಚೋಕೋಬಾರ್, ಪೆಪ್ಸಿ ಎಂದು ಅಲ್ಲಲ್ಲೇ ಸುತ್ತುವವ. ಕುಂಟರು, ಕೈ ಇಲ್ಲದವರು, ಭಿಕ್ಷುಕರು ಮುಂತಾದವರಿಗೆ ಕೊನೆಯಿಲ್ಲ. ಅದರಲ್ಲೂ ಕುಂದಾಪುರದಲ್ಲಿರುತ್ತಿದ್ದ ಭಿಕ್ಷುಕ 'ನಾಕಾಣೆ ಕೊಡಿ'ಯಿಂದ ಆರಂಭಿಸಿ, 'ಬೀಡಿ ಕೊಡಿ'ಯವರೆಗೆ ಬಂದು ಅಂತ್ಯದಲ್ಲಿ 'ಹ್ವಾಯ್, ಎಂತಾದರೂ ಕೊಡಿ'ಯವರೆಗೆ ಬಂದು ನಿಲ್ಲುತ್ತಿದ್ದ.

ಇಷ್ಟು ಬಣ್ಣಬಣ್ಣದ ಬಸ್ಸುಗಳು, ಕೊಡುವ ಅನುಭವಗಳ ನಡುವೆ ಬೆಳೆದ ನನಗೆ ಬೆಂಗಳೂರಿನ ಹಸಿರು, ನೀಲಿ ಬಣ್ಣದ ಬಸ್ಸುಗಳು ಇಂಗ್ಲಿಷ್ ಶಾಲೆಯ ಯೂನಿಫಾರ್ಮ್ ತೊಟ್ಟ ಮಕ್ಕಳಂತೆ ಕಂಡಿದ್ದಲ್ಲದೆ, ಉಡುಪಿ, ಕುಂದಾಪುರದ ಸುಮಾರು 40 ಕಿ.ಮೀ. ದೂರವನ್ನು ಮುಕ್ಕಾಲು ಗಂಟೆಯೊಳಗೆ ಪೂರೈಸುವ ಬಸ್ಸುಗಳೆದುರು ಎರಡು ಗಂಟೆ ಕೂತಿದ್ದರೂ ಇಳಿಯುವ ಜಾಗ ಬಾರದಿದ್ದ ಮೇಲೆ, ಬಸ್ಸು ಪ್ರಯಾಣ ಹೀಗೂ ಉಂಟೇ ಎಂಬ ಚೋದ್ಯವನ್ನು ಹುಟ್ಟಿಸಿಬಿಟ್ಟಿತ್ತು. ಅಲ್ಲದೆ ಇಲ್ಲಿನಂತೆ ಪಿಕ್‌ಪಾಕೆಟ್ ಕಳ್ಳರು, ಚಿಲ್ಲರೆ ಮತ್ತೆ ಕೊಡುವೆನೆಂದು ಟಿಕೆಟ್ಟಿನ ಹಿಂದೆ ಬರೆದು ಕೊಡುವ ಕಂಡಕ್ಟರ್‌ಗಳು ಅಲ್ಲಿ ಇಲ್ಲವೇಇಲ್ಲ.

ಈ ಬಸ್ಸುಗಳ ಓಡಾಟವಿದ್ದರೆ ಮಾತ್ರ ಕರಾವಳಿಯಲ್ಲಿ ಜೀವಸಂಚಾರ. ಇಲ್ಲದಿದ್ದರೆ ಭಣಭಣ. ಎರಡೆರಡು ಬಾರಿಯ ಲಾಕ್‌ಡೌನ್‌ನಿಂದ ಓಡಾಟವಿಲ್ಲದೆ ಮೈದಾನದಲ್ಲೋ, ಖಾಲಿ ಜಾಗದಲ್ಲೋ ಸಾಲಾಗಿ, ಶಿಸ್ತಿನಲ್ಲಿ ನಿಂತ ಎಪಿಎಂ, ದುರ್ಗಾಂಬಾ, ಭಾರತಿ ಮುಂತಾದ ಬಸ್ಸುಗಳನ್ನು ನೋಡಿದಾಗ, ಆಟವಾಡುವ ಮಗು ಸುಮ್ಮನೆ ಒಂದುಬದಿ ಚಟುವಟಿಕೆಯಿಲ್ಲದೆ ಕೂತರೆ ಆಗುವಂಥ ತಳಮಳ ನನ್ನನ್ನು ಕಾಡಿತ್ತು. ಹೆಚ್ಚಿನ ಬಸ್ಸುಗಳು ತುಕ್ಕುಹಿಡಿದು, ಬಳ್ಳಿಗಳು ಸುತ್ತುವರೆದು, ಹಕ್ಕಿಗಳ, ಪ್ರಾಣಿಗಳ ಆವಾಸಸ್ಥಾನವಾಗಿದ್ದು ಕಂಡು ಉಸಿರೇ ನಿಂತಂತಾಗಿತ್ತು. ಲಾಕ್‌ಡೌನ್ ಸಡಿಲವಾದ ಮೇಲೆ ಬಸ್ಸುಗಳ ಓಡಾಟ ನಿಧಾನಕ್ಕೆ ಶುರುವಾಗಿದ್ದು ಮುಂಜಾವಿನ ಚಿಲಿಪಿಲಿಯಂತೆ ಆಹ್ಲಾದಕರವಾಗಿದೆ.

'It's not about the destination, it's about the journey' ಎನ್ನುವಂತೆ ಊರಿಗೆ ಹೋದಾಗೆಲ್ಲಾ ಈ ಎಲ್ಲಾ ಅನುಭವಗಳನ್ನು ಮತ್ತೆ ನನ್ನದಾಗಿಸಿಕೊಳ್ಳಲು, ಬಸ್ಸಿನ ಪ್ರಯಾಣವನ್ನು ಮಿಸ್ ಮಾಡಿಕೊಳ್ಳುವುದಿಲ್ಲ. ಕಳೆದ ದಿನಗಳನ್ನು ಮತ್ತೊಮ್ಮೆ ಬೊಗಸೆಯಲ್ಲಿ ಬಾಚಿಕೊಳ್ಳುವ ಸರ್ವಪ್ರಯತ್ನ ಮಾಡುತ್ತೇನೆ.

ನೀವೂ ಆ ಕಡೆ ಹೋದರೆ ಉಡುಪಿ-ಕುಂದಾಪುರ ನಡುವಿನ ಪ್ರಯಾಣವನ್ನು ಸುಮ್ಮನೆ ಮಾಡಲಾದರೂ ಬಸ್ಸು ಹತ್ತಿ. ❖

ಕಥೆ

ಕೆರೊಲಾಯಿ ಕಿಪಲೂದಿ ಅವರ ಹಂಗೇರಿಯನ್ ಕಥೆ
(ಕನ್ನಡಕ್ಕೆ: ಎಚ್.ಆರ್.ಸುರೇಶ)

ಹೊಟ್ಟೆಯೊಳಗಿನ ಬೆಂಕಿ



ಕಲೆ: ಸುಜಾತಾ ಶೆಟ್ಟಿ

'ನಿನ್ನ ಪತ್ರವನ್ನು ಆಕೆ ಎಲ್ಲಿಟ್ಟಿದ್ದಳು ಎಂಬುದು ಗೊತ್ತೆ?'

'ಬಟ್ಟೆ ಹೊಲಿಯುವ ಮೇಜಿನ ಸೆಳಖಾನೆಯಲ್ಲಿ ಇಟ್ಟಿದ್ದಳು. ಗುಲಾಬಿ ದಾರವೊಂದರಿಂದ ಅವು ಕಟ್ಟಲ್ಪಟ್ಟಿದ್ದವು. ಅವನ್ನು ನೀವು ಸುಲಭವಾಗಿ ಗುರುತಿಸಬಹುದಾಗಿದ್ದು, ಒಟ್ಟು 30 ಪತ್ರಗಳಿದ್ದವು.'

'ಪತ್ರಗಳನ್ನು ಸೆಳಖಾನೆಯಿಂದ ತೆಗೆದು ಕೊಡಲು ಮುಂದಾಗುತ್ತಿದ್ದಂತೆಯೇ ಆತುರಾತುರವಾಗಿ ಮುಂದೆ ನುಗ್ಗಿದ ಆಕೆ ಪತ್ರಗಳ ಕಟ್ಟನ್ನು ನನ್ನ ಕೈಯಿಂದ ಕಿತ್ತುಕೊಂಡಳು. ಆಕೆ ಕಿತ್ತುಕೊಂಡ ರಭಸಕ್ಕೆ ಪತ್ರಗಳು ಕೆಳಗೆ ಬಿದ್ದಾವೆಂಬ ಹೆದರಿಕೆಯಿಂದ ಅವುಗಳತ್ತ ಕಣ್ಣೆತ್ತಿಯೂ ನಾನು ನೋಡಲಿಲ್ಲ. ಪತ್ರಗಳು ಸಿಕ್ಕಿದ್ದೊಂದೇ ತಡ ಆಕೆ ಬಿರಬಿರನೆ ನಡೆದುಬಿಟ್ಟಳು.'

'ಇದಾಗಿ ಒಂದು ವಾರ ಕಳೆದಿರಬೇಕು. ರಕ್ತದ ಹನಿಬಿದ್ದ ಬಲಗೈನ ಭಾಗದಲ್ಲಿ ಸರ್ಪ ಕಚ್ಚಿದಾಗ ಆಗುವಂಥದ್ದೇ ಬಾಧೆ ಆರಂಭವಾಯಿತು. ಮೊದಮೊದಲು ನಾನದನ್ನು ಗಂಭೀರವಾಗಿ ತೆಗೆದುಕೊಂಡಿರಲಿಲ್ಲ. ಆದರೆ ಬಾಧೆ ಕ್ರಮೇಣ ಹೆಚ್ಚಾಗತೊಡಗಿತು. ನಿದ್ರೆ ಎಂಬುದು ಗಾವುದ ಗಾವುದ ದೂರ ಓಡಿಹೋಯಿತು. ಹಗಲಿನಲ್ಲೂ ದುಃಸ್ವಪ್ನಗಳು ಕಾಡತೊಡಗಿದವು. ಇಲ್ಲಿಂದ ಮುಂದಿನ ಕಥೆಯೆಲ್ಲ ನಿಮಗೆ ತಿಳಿದೇ ಇದೆ. ನಾನು ಹೋಗುತ್ತಿದ್ದೇನೆ. ನಾನು ನಿಮಗೆ ಕೊಟ್ಟ ತೊಂದರೆಗಾಗಿ ಕ್ಷಮೆ ಯಾಚಿಸುತ್ತೇನೆ.' ಈ ಪತ್ರವನ್ನು ಓದಿ ಮುಗಿಸುತ್ತಿದ್ದಂತೆಯೇ ಅವರ್ಣನೀಯ ಅನುಭವವೊಂದು ವೈದ್ಯನಿಗಾಯಿತು. ಈವರೆಗಿನ ದೊಡ್ಡ ದೊಡ್ಡ ಶಸ್ತ್ರಚಿಕಿತ್ಸೆಗಳೂ ನೀಡಲಾರದಂಥ ಅನುಭವವನ್ನು ಆ ಪತ್ರ ನೀಡಿದಂತೆನಿಸಿತ್ತು. ಈ ಘಟನೆಗಿಂತ ಮೊದಲು ಏನು ನಡೆದಿತ್ತು?

ಪೂರ್ಣ ಕಥೆ prajavani.net ನಲ್ಲಿ.

ಮೊಬೈಲ್‌ನಲ್ಲಿ ಕಥೆ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.
https://www.prajavani.net/short-story

ಕವಿತೆ

ಟಿ. ದೇವಿದಾಸ್
ಬರೆದ ಕವಿತೆ
ಸ್ವ-ಗತ

ಮೊಬೈಲ್‌ನಲ್ಲಿ ಕವಿತೆ ಓದಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ.
https://www.prajavani.net/poetry

ಊರೋರ್ ಕಣ್ಣು ಮಾರಿ ಮ್ಯಾಲೆ!

8ನೇ ಪುಟದಿಂದ...

ಮಾರಿ ಬಿಸ್ಕತ್ತು

ಹೀಗೆ ವಿದೇಶಗಳಿಗೆ ರಫ್ತುಗೊಂಡ ಮಾರಿ ಬಿಸ್ಕತ್ತುಗಳು ಅಲ್ಲಿಯೂ ಜನಪ್ರಿಯತೆ ಗಳಿಸಿ ಸ್ಥಳೀಯವಾಗಿ ತಯಾರಾಗತೊಡಗಿದವು. ಕಾಲಕ್ರಮೇಣ ದೇಶದಿಂದ ದೇಶಕ್ಕೆ ತನ್ನ ರುಚಿಯ ಜಾದೂ ಮಾಡುತ್ತ, ಸ್ಥಳೀಯ ಬಿಸ್ಕತ್ತು ತಯಾರಕರ ವ್ಯಾಪಾರ ವಹಿವಾಟನ್ನು ಹೆಚ್ಚಿಸಿದ ಜಗತ್ತಿನ ಅತ್ಯಂತ ಜನಪ್ರಿಯ ಬಿಸ್ಕತ್ತುಗಳ ವಿಧಗಳಲ್ಲೊಂದೆಂಬ ಖ್ಯಾತಿಗಳಿಸಿದವು.

ಮಾರಿ ಬಿಸ್ಕತ್ತುಗಳ ಜನಪ್ರಿಯತೆಯ ಹಿಂದೆ ಹಲವು ಕಾರಣಗಳಿವೆ. ಈ ಬಿಸ್ಕತ್ತು ಪರಿಚಯವಾದ ಸಮಯದಲ್ಲಿ ಮಾರುಕಟ್ಟೆಯಲ್ಲಿ ಎರಡು ತರಹದ ಬಿಸ್ಕತ್ತುಗಳು ತಯಾರಾಗುತ್ತಿದ್ದವು. ಒಂದೆರಡು ದಿನಗಳಲ್ಲಿಯೇ ಕೆಡುವ, ಬೇಕರಿಯಲ್ಲಿ ದೊರಕುವ ಬಿಸ್ಕತ್ತುಗಳು ಒಂದೆಡೆಯಾದರೆ, ಎರಡನೆಯವು ಹಡಗುಗಳಲ್ಲಿ ಬಳಕೆಯಾಗುವಂಥವುಗಳು. ಈ ಎರಡನೆಯ ವಿಧದ ಬಿಸ್ಕತ್ತುಗಳು ಹಡಗುಗಳಲ್ಲಿ ದೂರ ಪಯಣಕ್ಕೆ ಸಾಗುವ ಕಾರ್ಮಿಕರಿಗಾಗಿಯೇ ತಯಾರಿಸಲ್ಪಡುತ್ತಿದ್ದು ರುಚಿಯಲ್ಲಿ ಸಪ್ಪೆಯಾಗಿರುತ್ತಿದ್ದವು. ಸಂಗ್ರಹಣೆಯ ಅನುಕೂಲ ಮತ್ತು ಕಡಿಮೆ ವೆಚ್ಚದ ದೃಷ್ಟಿಯಿಂದಷ್ಟೇ ತಯಾರಿಸಲ್ಪಡುತ್ತಿದ್ದ ಇವುಗಳಿಗೆ ಹೊರಗಡೆ ಮಾರುಕಟ್ಟೆಯಲ್ಲಿ ಬೇಡಿಕೆ ಇರಲಿಲ್ಲ.

ಅದು ಔದ್ಯೋಗಿಕ ಕ್ರಾಂತಿಯ ಸಮಯ. ಜನರ ಕೆಲಸ ಮಾಡುವ ಸಮಯ ಬದಲಾಗಿ ಕೆಲಸದ ಮಧ್ಯೆ ಚಹಾ ವಿರಾಮ ತೆಗೆದುಕೊಳ್ಳುವ ಹೊಸ ಪ್ರವೃತ್ತಿ ಹುಟ್ಟಿಕೊಂಡಿತು. ಈ ಚಹಾದ ಜೊತೆಗೆ ಕುರುಕಲು ತಿಂಡಿಗಳ ತಿನ್ನುವ ಹೊಸ ಹವ್ಯಾಸ ಕೂಡ ಜನಪ್ರಿಯವಾಗುತ್ತ ಬಂದು, ಕುರುಕಲುಗಳ ತಿಂಡಿಗಳ ಪಟ್ಟಿಯಲ್ಲಿ ಬಿಸ್ಕತ್ತು ಮುಂಚೂಣಿಯಲ್ಲಿತ್ತು. ಈ ಸಮಯದಲ್ಲಿ ರಾಣಿಯ ಮದುವೆಗೆಂದು ತಯಾರಾದ ವಿಶೇಷ ಬಿಸ್ಕತ್ತೆನ್ನುವ ಹಣೆಪಟ್ಟಿ ಹೊತ್ತುಕೊಂಡು ಬಂದ ಈ ಮಾರಿ ಜನರ ಗಮನ ಸೆಳೆಯಿತು. ಇನ್ನು ಗೋಧಿಯನ್ನು ಹೆಚ್ಚು ಬೆಳೆದು ಅದನ್ನು ರಫ್ತು ಮಾಡಲು ಪರದಾಡುತ್ತಿದ್ದ ಸ್ಪೇನ್‌ನಂತಹ ದೇಶಗಳಿಗೆ ಗೋಧಿ ಹಿಟ್ಟನ್ನೇ ಪ್ರಮುಖವಾಗಿ ಬಳಸಿ ತಯಾರಾಗುವ ಈ ಬಿಸ್ಕತ್ತು, ಗೋಧಿಯನ್ನು ಹೊಸರೂಪದಲ್ಲಿ ಸ್ಥಳೀಯವಾಗಿ ಬಳಸುವುದರ ಜೊತೆಜೊತೆಗೆ ರಫ್ತನ್ನೂ ಮಾಡಲು ಹೊಸ ದಾರಿ ತೋರಿತು.

ಕಡಿಮೆ ಪ್ರಮಾಣದ ಸಕ್ಕರೆಯ ಅಂಶದ ಕಾರಣಕ್ಕೆ, ಡಯಟ್ ಬಗ್ಗೆ ಹೆಚ್ಚು ಯೋಚಿಸುವ ಜನರಿಗೆ ಹೆಚ್ಚು ಆಪ್ತವಾಗಿರುವ ಈ ಮಾರಿ ಬಿಸ್ಕತ್ತುಗಳನ್ನು ಕೆಲವೆಡೆ ಚೀಸ್, ಕ್ರೀಮ್‌ಗಳ ಫಿಲ್ಲಿಂಗ್ಸ್ ಬಳಸಿಯೂ ಸೇವಿಸುವುದುಂಟು. ಮಾರಿ ಬಿಸ್ಕತ್ತಿನ ಹಿಟ್ಟನ್ನು ಬಳಸಿ ಪುಡ್ಡಿಂಗನ್ನೂ ತಯಾರಿಸಲಾಗುತ್ತದೆ.

ವಿಪರ್ಯಾಸವೆಂದರೆ, ಜಗತ್ತಿನಾದ್ಯಂತ ಬಿಸ್ಕತ್ತು ಪ್ರೇಮಿಗಳಿಗೆ ಅವರ ಅರಿವಿಲ್ಲದಂತೆಯೇ ತನ್ನ ಹೆಸರಿನ ಬಲದಿಂದಲೇ ಖ್ಯಾತಿ ಗಳಿಸಿ ಹೊಟ್ಟೆ ಪೂಜೆಯ ಸಾಧನವಾಗಿರುವ ಈ ಬಿಸ್ಕತ್ತಿನ ಮೂಲ ಮಹಿಳೆ ಮಾರಿಯಾ ಅಲೆಕ್ಸಾಂಡ್ರೋವ್ನಾ ಜೀವನ ಮಾತ್ರ ಅಷ್ಟೇನೂ ಸಿಹಿಯಾಗಿರಲಿಲ್ಲ. ರಷ್ಯಾದ ಕ್ರಾಂತಿಯಲ್ಲಿ ತನ್ನ ಕುಟುಂಬದವರನ್ನು ಕಳೆದುಕೊಂಡ ಆಕೆ ನಂತರ ಮೊದಲ ವಿಶ್ವಯುದ್ಧದಲ್ಲಿ ತನ್ನ ಗಂಡ ಅರಸೊತ್ತಿಗೆಯನ್ನೂ ಕಳೆದುಕೊಳ್ಳುವ ದುರಂತಕ್ಕೆ ಸಾಕ್ಷಿಯಾದಳು. ತನ್ನ ಕೊನೆಯ ದಿನಗಳನ್ನು ಸ್ವಿಟ್ಜರ್ಲೆಂಡ್‌ನಲ್ಲಿ ಹೆಚ್ಚುಕಡಿಮೆ ಒಂಟಿಯಾಗಿಯೇ ಕಳೆದು 1920ರಲ್ಲಿ ಸಾವನ್ನಪ್ಪಿದಾಗ ಅದು ಎಲ್ಲೂ ಸುದ್ದಿಯಾಗಲೇ ಇಲ್ಲ. ❖

ಆಲ್ಫ್ರೆಡ್ ಮತ್ತು ಮಾರಿಯಾ ಅಲೆಕ್ಸಾಂಡ್ರೋವ್ನಾ ಮದುವೆ

ಎಲ್ಲಿ ಕಾಣೆಯಾದರು ಸುಡುಗಾಡು ಸಿದ್ಧರು?

ಚಮತ್ಕಾರ ಮಾಡಿ ಹೊರತೆಗೆದ ಆಂಜನೇಯ ಮೂರ್ತಿಯನ್ನು ನೆರೆದವರಿಗೆ ತೋರಿಸುತ್ತಿರುವ ಸುಡುಗಾಡು ಸಿದ್ಧ ಕಲಾವಿದ

ಚಿತ್ರ-ಲೇಖನ: ಪ್ರಕಾಶ ಕಂದಕೂರ

'ಜ... ಜ... ಜ... ಗಾಳಿ ವಿದ್ಯ, ಬಯಲು ವಿದ್ಯ, ಲೋಕದ ವಿದ್ಯ. ವಿದ್ಯ ಅಂದ್ರ ಚಮತ್ಕಾರ. ಅದು ಭಾಳ ದೊಡ್ಡದಿರತ್ತೈತಿ. ಇಲ್ಲೊಂದ್ ಬೀಜ ಐತ್ರಿ. ಈ ಬೀಜಕ್ಕ ಮೂರ ಮಂತ್ರ-ಮೂರು ತಂತ್ರ. ಹ್ಲೂತ್... ಹರ ಹರ ಹರ ಹರ...'

ಮಂತ್ರದ ರೀತಿಯಲ್ಲಿ ಈ ಸಾಲುಗಳು ಕಿವಿಯ ಮೇಲೆ ಬಿದ್ದವು. ಇದೇನಪ್ಪ ಹೊಸ ಮಂತ್ರ, ಏನಿದರ ಮಜಕೂರು ಎನ್ನುತ್ತಾ ಆ ಧ್ವನಿ ಕೇಳಿಬರುತ್ತಿದ್ದ ಗುಂಪಿನ ಕಡೆಗೆ ಹೆಜ್ಜೆ ಹಾಕಿದೆ. ದಾರಿ ಪಕ್ಕದ ಮರದ ಅಡಿಯಲ್ಲಿ ಏನೋ ಗಡಿಬಿಡಿ ನಡೆದಿತ್ತು. ಮಕ್ಕಳು ಹಾಗೂ ಮಹಿಳೆಯರ ಗುಂಪುಗೂಡಿತ್ತು. ಆ ಗುಂಪಿನೊಳಗಿನಿಂದ ಚಿಂವ್ ಎನ್ನುವ ಸದ್ದು. ಥರಾವರಿ ಮಂತ್ರಗಳ ಉಚ್ಚಾರ. ಮರುಕ್ಷಣವೇ ನಗೆಯ ಅಲೆ. ಏನಿದರ ಮಜಕೂರು ಎಂದು ಕುತೂಹಲ. ಗುಂಪಿನ ಮಧ್ಯೆ ವ್ಯಕ್ತಿಯೊಬ್ಬರು ಒಂದು ಗಂಟಿನ ಚೀಲದೊಂದಿಗೆ ವಿರಾಜಮಾನರಾಗಿದ್ದರು. ಮಂತ್ರ ಪಠಣ ಮಾಡುತ್ತಿದ್ದುದು ಅವರೇ. 'ಈ ಬೀಜಕ್ಕ ಮೂರ ಮಂತ್ರ-ಮೂರು ತಂತ್ರ. ಹ್ಲೂತ್... ಹರ ಹರ ಹರ ಹರ...' ಎನ್ನುತ್ತಲೇ ಆ ಬೀಜವನ್ನು ಬಾಯಲ್ಲಿಟ್ಟುಕೊಂಡು ಬಸವಣ್ಣನ ಚಿಕ್ಕ ಮೂರ್ತಿಯನ್ನು ಹೊರತೆಗೆದುಬಿಟ್ಟರು. ನೆರೆದವರೆಲ್ಲ ಅವಾಕ್ಕಾಗಿ ನೋಡುತ್ತಿದ್ದರು.

ಆ ವ್ಯಕ್ತಿ ಮುಖಕ್ಕೆ ಕುಂಕುಮ ಮತ್ತು ವಿಭೂತಿ ಬಳಿದುಕೊಂಡಿದ್ದರು. ಲಿಂಗದಕಾಯಿ, ರುದ್ರಾಕ್ಷಿ ಮಾಲೆ ಕೊರಳು ತುಂಬಿದ್ದವು. ತಲೆಗೆ ಸುತ್ತಿರುವ ರುಮಾಲಿಗೆ ಮುತ್ತಿನ ಮಣಿಗಳ ಹಾರದಿಂದ ಸಿಂಗಾರ, ತುದಿಯಲ್ಲಿ ನವಿಲುಗರಿಗಳ ಅಲಂಕಾರ ಸಹ ಇತ್ತು. ಅಲ್ಲದೆ, ಬಣ್ಣದ ಬಟ್ಟೆಗಳಿಂದ ಮಾಡಿದ ಪೋಷಾಕು ಧರಿಸಿದ್ದ ಅವರು ಆಕರ್ಷಕವಾಗಿ ಕಾಣುತ್ತಿದ್ದರು. ತಮ್ಮದೇ ಆದ ಶೈಲಿಯಲ್ಲಿ ಮಾತನಾಡುತ್ತ, ಚಮತ್ಕಾರಗಳನ್ನು ಮಾಡುತ್ತ ಗುಂಪಿನ ಕೇಂದ್ರಬಿಂದುವಾಗಿದ್ದರು.

ತಮ್ಮ ಕೈಚಳಕದಿಂದ ಒಂದಾದ ಮೇಲೊಂದರಂತೆ ಲಾಡು ಗಾತ್ರದ ಸುಮಾರು 10 ಕಲ್ಲುಗಳನ್ನು ನುಂಗಿ, ನಮ್ಮೊಂದಿಗೆ ಮಾತನಾಡುತ್ತಲೇ ಅದೇ ಕಲ್ಲುಗಳನ್ನು ಒಂದೊಂದಾಗಿ ಗಂಟಲಿನಿಂದ ಹೊರತೆಗೆದು ಎಲ್ಲರನ್ನು ಚಕಿತಗೊಳಿಸಿದರು. ತೆಂಗಿನ ಕಾಯಿ (ಗಿಟಗ) ದಾರದ ಅಂತರದಲ್ಲಿ ಅವರು ಹೇಳಿದಂತೆಯೇ ಸಂಚರಿಸುತ್ತಿತ್ತು. ಜೋಳಿಗೆಯಿಂದ ಆಗಾಗ ವಿಧವಿಧ ಗೊಂಬೆಗಳನ್ನು ಹೊರತೆಗೆದು ಚಿಕ್ಕ ಮಕ್ಕಳನ್ನು ಆಕರ್ಷಿಸುತ್ತಿದ್ದರು. ಹಾವು, ಚೇಳು, ಕಪ್ಪೆಗಳನ್ನು ತೆಗೆದು ಭಯಭೀತಗೊಳಿಸುತ್ತಿದ್ದರು. ಆಗಾಗ ನಗೆ ಚಟಾಕಿ ಸಿಡಿಸಿ ಹೊಟ್ಟೆ ಹುಣ್ಣಾಗುವಂತೆ ಜನರನ್ನು ನಗಿಸುತ್ತಿದ್ದರು. ಅವರ ಮೋಡಿ ಆಟಕ್ಕೆ ಮನಸೋತ ಮಕ್ಕಳು ಚಪ್ಪಾಳೆ ಬಾರಿಸಿ ಸಂಭ್ರಮಿಸುತ್ತಿದ್ದರು.

ಸಿದ್ಧರು ಹೇಳಿದಂತೆ ಮಾತು ಕೇಳುವ ಒಣಕೊಬ್ಬರಿ

> ಎಷ್ಟು ನೋಡಿದರೂ ಸಾಲದು, ಮತ್ತೆ ಮತ್ತೆ ನೋಡಬೇಕೆನ್ನಿಸುವ ಈ ಚಮತ್ಕಾರವನ್ನು ಪ್ರದರ್ಶಿಸುವವರು ಬೇರಾರೂ ಅಲ್ಲ; 'ಸುಡುಗಾಡು ಸಿದ್ಧರು'. ಅವರ ಮಾತು, ಚಮತ್ಕಾರ ಕೂಡ ಅವರ ವೇಷಭೂಷಣಗಳಷ್ಟೇ ಆಕರ್ಷಕವಾಗಿರುತ್ತದೆ. ಆದರೆ ಏನು ಮಾಡುವುದು, ಆ ಸಮುದಾಯದವರಿಗೇ ಈಗ ಈ ಕಲೆಯತ್ತ ಆಕರ್ಷಣೆ ಕಡಿಮೆ ಆಗಿದೆಯಲ್ಲ?!

ಹ್ಲೂತ್... ಹರ ಹರ ಹರ... ನೋಡ್ರಿ ಗಣಪ

ಎಷ್ಟು ನೋಡಿದರೂ ಸಾಲದು, ಮತ್ತೆ ಮತ್ತೆ ನೋಡಬೇಕೆನ್ನಿಸುವ ಈ ಚಮತ್ಕಾರವನ್ನು ಪ್ರದರ್ಶಿಸುವವರು ಬೇರಾರೂ ಅಲ್ಲ; 'ಸುಡುಗಾಡು ಸಿದ್ಧರು'. ಅವರ ಮಾತು, ಚಮತ್ಕಾರ ಕೂಡ ಅವರ ವೇಷಭೂಷಣಗಳಷ್ಟೇ ಆಕರ್ಷಕವಾಗಿರುತ್ತವೆ. 15ರಿಂದ 20 ನಿಮಿಷಗಳ ಕಾಲ ನಡೆಯುವ ಈ ಚಮತ್ಕಾರವನ್ನು ಒಮ್ಮೆ ನೋಡಿದರೆ ಸಾಕು, ಅದು ಜೀವನದುದ್ದಕ್ಕೂ ನೆನಪಿನಲ್ಲಿ ಉಳಿದುಬಿಡುತ್ತದೆ. ಹಿಂದೆ ರಾಜ ಮಹಾರಾಜರೂ ಇವರನ್ನು ಆಸ್ಥಾನಕ್ಕೆ ಕರೆಸಿ, ಇವರ ಚಮತ್ಕಾರಗಳನ್ನು ವೀಕ್ಷಿಸುತ್ತಿದ್ದರು ಎನ್ನುವ ಮಾತಿದೆ.

ಇಂತಹ ಆಕರ್ಷಕ, ಐತಿಹಾಸಿಕ, ಜನಪದ ಸೊಗಡಿನ 'ಸುಡುಗಾಡು ಸಿದ್ಧರ ಆಟ' ಇಂದು ಕ್ಷೀಣಿಸುತ್ತಿದೆ. ಇದನ್ನು ಪ್ರದರ್ಶಿಸುವವರ ಸಂಖ್ಯೆ ನಾಡಿನಾದ್ಯಂತ ದಿನದಿಂದ ದಿನಕ್ಕೆ ಗಣನೀಯವಾಗಿ ಇಳಿಯುತ್ತಿದೆ. ಇಂದಿನ ಪೀಳಿಗೆಯ ನಿರಾಸಕ್ತಿಯಿಂದಾಗಿ ಅಪರೂಪದ ಈ ಸಾಂಪ್ರದಾಯಿಕ ಆಟ ಅವನತಿಯತ್ತ ಸಾಗುತ್ತಿದೆ. ಹೀಗೇ ಆದಲ್ಲಿ ಕೆಲ ವರ್ಷಗಳಲ್ಲಿಯೇ 'ಸುಡುಗಾಡು ಸಿದ್ಧರ ಆಟ' ಇತಿಹಾಸದ ಪುಟ ಸೇರುವುದರಲ್ಲಿ ಯಾವುದೇ ಅನುಮಾನ ಇಲ್ಲ.

ಪರಿಶಿಷ್ಟ ಜಾತಿಗೆ ಸೇರುವ ಸುಡುಗಾಡು ಸಿದ್ಧರ 53 ಕುಟುಂಬಗಳು ಪ್ರಸ್ತುತ ಕೊಪ್ಪಳದ ಕಲಕೇರಿ ಗ್ರಾಮದಲ್ಲಿವೆ. ತಾಲ್ಲೂಕಿನಲ್ಲಿರುವ ಸುಡುಗಾಡು ಸಿದ್ಧರ ಒಟ್ಟು ಕುಟುಂಬಗಳ ಸಂಖ್ಯೆಯೂ ಇದೇ ಆಗಿದೆ. ಆದರೆ, ಅದರಲ್ಲಿ ಗುರಪ್ಪ ಗಂಟಿ, ಯಲ್ಲಪ್ಪ ಗಂಟಿ, ಚಂದ್ರಪ್ಪ ಒಂಟೆತ್ತಿನವರ, ರಾಮಣ್ಣ ಗಂಟಿ, ಹುಲುಗಪ್ಪ ಗಂಟಿ, ಸಾಬಣ್ಣ ಒಂಟೆತ್ತಿನವರ ಮತ್ತು ಹನುಮಂತ ಗಂಟಿ ಎಂಬುವವರ ಕುಟುಂಬಗಳು ಮಾತ್ರ ಈ ವೃತ್ತಿಯಲ್ಲಿ ತೊಡಗಿವೆ. ಉಳಿದವರು ಬೇರೆ ಬೇರೆ ವೃತ್ತಿಗಳನ್ನು ಆಯ್ದುಕೊಂಡುಬಿಟ್ಟಿದ್ದಾರೆ. ಕೆಲವರು ಉತ್ತಮ ಶಿಕ್ಷಣ ಪಡೆದು ಉನ್ನತ ಹುದ್ದೆಯಲ್ಲಿದ್ದಾರೆ. ಈ ಸಮುದಾಯದ ರುದ್ರೇಶ್ ಎನ್ನುವವರು ಈಗ ಹೆಚ್ಚುವರಿ ಜಿಲ್ಲಾಧಿಕಾರಿ ಹುದ್ದೆಯಲ್ಲಿದ್ದಾರೆ. ಕೊಪ್ಪಳ ಜಿಲ್ಲೆಯ 50 ಜನ ಮಾತ್ರ ಈ ವೃತ್ತಿ ನಡೆಸುತ್ತಿದ್ದಾರೆ.

ಸುಡುಗಾಡು ಕಾಯುವುದು ಈ ಸಮುದಾಯದ ಮೂಲ ವೃತ್ತಿ. ಕೆಟ್ಟ ಗಳಿಗೆಗಳಲ್ಲಿ ಇವರು ಇಡೀ ಊರಿಗೆ ದಿಗ್ಬಂಧನ ಹಾಕಿ ಜನರನ್ನು ರಕ್ಷಿಸುತ್ತಿದ್ದರು ಎಂದೂ ಹೇಳಲಾಗುತ್ತದೆ. ಊರಲ್ಲಿ ಯಾವುದೇ ಸಮುದಾಯದ ವ್ಯಕ್ತಿ ಮರಣ ಹೊಂದಿದರೂ ಇವರಿಗೆ ಕಾಣಿಕೆ ನೀಡಿಯೇ ಮುಂದಿನ ವಿಧಿವಿಧಾನಗಳನ್ನು ನೆರವೇರಿಸುವ ಪದ್ಧತಿ ಈಗಲೂ ಇದೆ. ಹೆಣ ಹೂಳಲು ತೋಡಿದ ಗುಂಡಿಯಲ್ಲಿ ಇವರು ಕುಳಿತು ಹೊರಬಂದ ನಂತರವೇ ಅದರಲ್ಲಿ ಶವ ಇಡುತ್ತಾರೆ. ಈ ಸಮುದಾಯದ ಕೆಲ ಜನ ಕಾವಿ ಬಟ್ಟೆಯನ್ನು ಧರಿಸುತ್ತಾರೆ.

ಅಳಿವಿನ ಅಂಚಿನಲ್ಲಿರುವ ಈ ಸಮುದಾಯದ ಕಲೆಯನ್ನು ಉಳಿಸುವ ಸಲುವಾಗಿ ಕೆಲ ವರ್ಷಗಳ ಹಿಂದೆ ಜಾತ್ರೆ, ಉತ್ಸವಗಳಿಗೆ ಕರೆದು ಪ್ರದರ್ಶನ ಕೊಡಿಸಲಾಗುತ್ತಿತ್ತು. ಕೆಲ ಶಾಲೆಗಳಲ್ಲೂ ಇವರ ಪ್ರದರ್ಶನ ನಡೆಯುತ್ತಿತ್ತು. ಆದರೆ ಪ್ರಸ್ತುತ ಕೋವಿಡ್ ಕಾರಣದಿಂದ ಯಾವ ಜಾತ್ರೆಯೂ ಇಲ್ಲ, ಯಾವ ಉತ್ಸವವೂ ಇಲ್ಲ. ಶಾಲೆಗಳು ಬಾಗಿಲು ಹಾಕಿಯೇ ವರ್ಷ ಕಳೆದಿದೆ. ಇಂತಹ ಸಂದರ್ಭದಲ್ಲಿ ಈ ಸಮುದಾಯ ಹೆಚ್ಚೇ ಪರಿತಪಿಸಿದೆ.

ತಲೆಯಿಂದ ತಲೆಗೆ ಸಾಗಿ ಬಂದಿರುವ 'ಸುಡುಗಾಡು ಸಿದ್ಧರ ಆಟ'ವನ್ನು ಅವರದೇ ಸಮುದಾಯದ ಇಂದಿನ ಯುವಜನರು ಯಾಕೋ ಕಡೆಗಣಿಸಿದ್ದಾರೆ. ಈ ವಿದ್ಯೆ ಕಲಿಯಲು ಸಾಕಷ್ಟು ಏಕಾಗ್ರತೆ, ಶ್ರಮ ಬೇಕು. ಇದು ಪುಸ್ತಕದಲ್ಲಿ ನೋಡಿ ಕಲಿಯುವ ವಿದ್ಯೆ ಅಲ್ಲ. ಕಲಿಯುವೆನೆಂದು ಮುಂದೆ ಬರುವ ಅಲ್ಲೊಬ್ಬ, ಇಲ್ಲೊಬ್ಬ ಯುವಕರು ಕೆಲ ದಿನಗಳಲ್ಲೇ ಪಲಾಯನ ಮಾಡಿಬಿಡುತ್ತಿದ್ದಾರೆ ಎನ್ನುವುದು ಈ ಕಲೆಯನ್ನು ದಾಟಿಸಲು ಕಾಯುತ್ತಿರುವ ಹಿರಿಯ ಜೀವಗಳ ಅಳಲು. ತಮ್ಮ ಈ ವಿದ್ಯೆಯನ್ನು ಮರೆಯಾಗದಂತೆ ಕಾಪಿಡಲು ಸರ್ಕಾರದಿಂದ ಏನಾದರೂ ನೆರವಿನಹಸ್ತ ಸಿಕ್ಕೀತೇ ಎನ್ನುವ ನಿರೀಕ್ಷೆಯನ್ನೂ ಇಟ್ಟುಕೊಂಡಿದ್ದಾರೆ. ❖

ಮಜ ಮಜ ಮಜಕೂರ

• ಎಂ.ಎಸ್.ಪೂಜಾರ

ಗಣಿತದಲ್ಲಿ ಗರ್ದಿ ಗಮ್ಮತ್ತು

ಭಾಗಕಾರದಲ್ಲಿ ಬೆಡಗು

- ಬೇರೆಬೇರೆ ಅಂಕಿ ಇರುವ ಮೂರು ಅಂಕಿಗಳ ಒಂದು ಸಂಖ್ಯೆ ಬರೆದುಕೊಳ್ಳಿ. ಆ ಸಂಖ್ಯೆಯ ಎಲ್ಲಾ ಅಂಕಿಗಳನ್ನು ಬದಲಿಸುತ್ತಾ ಆಗುವ ಒಟ್ಟು ಸಂಖ್ಯೆಗಳನ್ನು ಒಂದರ ಕೆಳಗೆ ಒಂದರಂತೆ ಬರೆದುಕೊಳ್ಳಿ. ಒಟ್ಟು 6 ಸಂಖ್ಯೆಗಳಾಗುತ್ತವೆ. (ಯಾವ ಸಂಖ್ಯೆ ತೆಗೆದುಕೊಂಡರೂ 6 ಸಂಖ್ಯೆಯಾಗುತ್ತವೆ) ಈಗ ಅವುಗಳ ಮೊತ್ತವನ್ನು ಕಂಡುಹಿಡಿದು ಆ ಸಂಖ್ಯೆಗೆ ನೀವು ಆಯ್ದುಕೊಂಡ ಸಂಖ್ಯೆಯ ಎಲ್ಲಾ ಅಂಕಿಗಳ ಕೂಡಿಸಿದ ಸಂಖ್ಯೆಯಿಂದ ಭಾಗಿಸಿದರೆ ಉತ್ತರ-ಅಂದರೆ ಭಾಗಲಬ್ಧ ಯಾವಾಗಲೂ 222 ಆಗಿರುತ್ತದೆ !

ಉದಾ: 826 (ಬೇರೆ ಬೇರೆ ಅಂಕಿ ಇರುವ ಒಂದು ಸಂಖ್ಯೆ)
862
+ 286
268
628
682
(ಈ ಸಂಖ್ಯೆಯ ಅಂಕಿಗಳನ್ನು ಬದಲಿಸಿದಾಗ ಆಗುವ ಒಟ್ಟು ಸಂಖ್ಯೆಗಳು)
ಒಟ್ಟು ಮೊತ್ತ 3552

ಮೊದಲ ಸಂಖ್ಯೆ ಎಲ್ಲಾ ಅಂಕಿ ಕೂಡಿಸಿದಾಗ = 8+2+6 = 16

16) 3552 (222
32
35
32
00

ಯಾವಾಗಲೂ ಭಾಗಲಬ್ಧ 222

ಅದಲು ಬದಲು ಕಂಚೀ ಕದಲು...

ಇಲ್ಲಿ ಕೊಟ್ಟಿರುವ ಪದಗಳ ಅಕ್ಷರಗಳನ್ನೇ ಪುನಃ ಬಳಸಿಕೊಂಡು ಅಷ್ಟೇ ಅಕ್ಷರಗಳ ಬೇರೊಂದು ಪದ ರಚಿಸಬಲ್ಲಿರಾ?

1. ರೀ, ನಗಬಾರದು
2. ಲೆ, ದ್ರಾಕ್ಷಿಮಾರು
3. ಓ! ನರಿಕಾಟ
4. ರಿ, ಬೇಗತೊಳೆ

• ಕಲೆ-ಪರಿಕಲ್ಪನೆ: ಸುರೇಶ ಆರ್. ಅರ್ಕಸಾಲಿ

ಪದ ಹಿಗ್ಗು

ಕಿಡಿ - ಹೊಗೆ - ಕುರಿ - ಸೇವೆ
ಕಡಿ - ಕಳೆ - ಶರ - ಸತಿ

1.		ನ್ನ		5.		ಮಾ	
2.		ತು		6.		ಚ	
3.		ರ		7.		ಹ	
4.		ಹ		8.		ಮಿ	

ನಾಲಗೆ ತೊಡರು

- ಇದನ್ನು ಬೇಗ-ಬೇಗನೆ ಅನ್ನಲು ಪ್ರಯತ್ನಿಸಿ

ಬಸಪ್ಪನ ಹೊಸಮನೆ ಪ್ರವೇಶದ ಕಸಕಸಿ ಹಾಕಿದ ಬಿಸಿಬಿಸಿ ಪಾಯಸ ಕಸವಿಸಿ ಇಲ್ಲದೆ ಖುಷಿಖುಷಿಯಿಂದ ತುಸು ತುಸು ಕುಡಿದೆ.

ಟ್ವೆಂಟಿ – 20 ಮ್ಯಾಚ್

ಎಡಗಡೆ ಕೊಟ್ಟಿರುವ ಎರಡು ಪದಗಳ ನಡುವೆ ಬಲಭಾಗದ ಒಂದು ಅಕ್ಷರ ಆಯ್ಕೆಮಾಡಿ ಮಧ್ಯದಲ್ಲಿ ಸೇರಿಸಿದರೆ ಅದು ಎರಡೂ ಪದಗಳಿಗೆ ಬೆಸುಗೆಯಾಗಿ ಐದು ಅಕ್ಷರಗಳ ಹೊಸಪದ ಉಂಟಾಗುತ್ತದೆ. ಹೊಂದಿಸಿರಿ.

1.	ಸರ ___ ರಾಜು	A	ಗೋ
2.	ಶಾಮ ___ ದರ	B	ತಿ
3.	ಉಪ ___ ರಣ	C	ಚಿ
4.	ಹೊಸ ___ ಗುರು	D	ಬ
5.	ಗಜ ___ ಹಾರ	E	ಯೌ
6.	ರಮಾ ___ ಮಾರ	F	ಡಿ
7.	ಜನ ___ ವನ	G	ಜ
8.	ನವ ___ ವನ	H	ವ
9.	ಗಣ ___ ಮಾಡು	I	ತ
10.	ಗಾಳಿ ___ ಪುರ	J	ರು
11.	ರವಿ ___ ಕರ	K	ಸುಂ
12.	ಗರ ___ ಮನೆ	L	ಶಂ
13.	ಅರ ___ ಮನೆ	M	ಜೀ
14.	ದೊಡ್ಡ ___ ಮೀನು	N	ವಿ
15.	ಅಣು ___ ಜ್ಞಾನಿ	O	ಕು
16.	ಹಸಿ ___ ತೋಟ	P	ತಿ
17.	ಹಯ ___ ದನ	Q	ವಿ
18.	ಸರ ___ ಸಾಲು	R	ಳಿ
19.	ರಜ ___ ಗಿರಿ	S	ಕ
20.	ಕರ ___ ಮರಿ	T	ಡಿ

ಸಿಂಧೂರ ಲಕ್ಷ್ಮಣ



ಸಿಂಧೂರ ಲಕ್ಷ್ಮಣ ದೇಶದ ಅಪ್ರತಿಮ ಸ್ವಾತಂತ್ರ್ಯ ಹೋರಾಟಗಾರ ಎಂದು ಹೆಸರಾದವ. ಶೌರ್ಯ ಮತ್ತು ಸಾಹಸ ಮೆರೆಯುತ್ತಿದ್ದ ಆತ ಮೊದಲು ಮಾಡುತ್ತಿದ್ದುದು ವಾಲೀಕಾರಿಕೆ ವೃತ್ತಿಯನ್ನು

ಅಜಾನುಬಾಹು ಹಾಗೂ ಸ್ಫುರದ್ರೂಪಿಯಾಗಿದ್ದ ಲಕ್ಷ್ಮಣನನ್ನು ಮಹಾಭಾರತದ ಭೀಮನಿಗೆ ಹೋಲಿಕೆ ಮಾಡಲಾಗುತ್ತಿತ್ತಂತೆ. ಓಡುವ ಕುದುರೆಯನ್ನೇ ಏರಿ, ಸವಾರಿ ಮಾಡುವ ನಿಷ್ಣಾತ ಆತನಾಗಿದ್ದ

ಬ್ರಿಟಿಷರ ವಿರುದ್ಧ ಸ್ವಾತಂತ್ರ್ಯದ ಕಹಳೆಯನ್ನು ಮೊಳಗಿಸಿದ ಆತನನ್ನು ಹಿಡಿಯಲು ಕಂಪನಿ ಸರ್ಕಾರ ಸೈನ್ಯವನ್ನು ನಿಯೋಜಿಸಿತ್ತು. ಆದರೆ, ಸೈನ್ಯದ ಕೈಗೆ ಸಿಗದೆ ಆತ ಪರಾರಿಯಾಗುತ್ತಿದ್ದ

ಸಮಾನಮನಸ್ಕರ ತಂಡ ಕಟ್ಟಿಕೊಂಡು ಬ್ರಿಟಿಷ್ ಸರ್ಕಾರದ ಖಜಾನೆಗೆ ಲಗ್ಗೆ ಇಡುತ್ತಿದ್ದ ಆತ, ಜನರಿಂದ ಸಂಗ್ರಹಿಸಿದ ಹಣವನ್ನು ಲೂಟಿ ಮಾಡಿ, ಬಡವರಿಗೆ ಹಂಚುತ್ತಿದ್ದ



ಲಕ್ಷ್ಮಣನನ್ನು ಹಿಡಿಯಲು ಆಗದ ಬ್ರಿಟಿಷರು ಆತನ ಗೆಳೆಯನಾಗಿದ್ದ ವೆಂಕಪ್ಪಗೌಡರ ಮೇಲೆ ಒತ್ತಡ ಹೇರಿ ಔತಣಕ್ಕೆ ಕರೆಯುವಂತೆ ಮಾಡಿದರು. ಮೋಸದಿಂದ ಆತನನ್ನು ಗುಂಡಿಕ್ಕಿ ಕೊಂದರು

ಅಪ್ರತಿಮ ಹೋರಾಟಗಾರನಾಗಿದ್ದ ಲಕ್ಷ್ಮಣ ತುಂಬು ಯೌವನದಲ್ಲೇ ಮೋಸದಿಂದ ಸಾವನ್ನಪ್ಪಿದ. ದೇಶಪ್ರೇಮಿಯಾಗಿದ್ದ ಆತನ ನೆನಪಿಗಾಗಿ ಹಲವು ಊರುಗಳಲ್ಲಿ ಆತನ ಪ್ರತಿಮೆಗಳನ್ನು ಸ್ಥಾಪಿಸಲಾಗಿದೆ

ಶಬ್ದಗಳಲ್ಲಿ ಸರಸ...

ನಿಮಗೆಷ್ಟು ಜನ ಗೊತ್ತು ?

- ಇಲ್ಲಿ ಕೊಟ್ಟಿರುವ 'ಜನ' ಎಂಬ ಪದಗಳಿಗೆ ಎಡಭಾಗದಲ್ಲಿ ಒಂದು ಅಕ್ಷರ ಹಾಗೂ ಬಲಭಾಗದಲ್ಲಿ ಎರಡು ಅಕ್ಷರಗಳನ್ನು ಕೊಟ್ಟಿರುವ 24 ಅಕ್ಷರಗಳ ಪಟ್ಟಿಯಿಂದ ಆರಿಸಿ ತುಂಬಿ ಒಟ್ಟು 16 ಪದಗಳನ್ನು 'ಜನ' ಎಂಬ ಪದದಿಂದ ಅಂತ್ಯವಾಗುವಂತೆ ರಚಿಸಬಲ್ಲಿರಾ?

ನಿ	ನೀ	ಕ	ಅ	ನಿ	ಪ್ರ
ಉ	ನೀ	ಲಾಂ	ರಾಂ	ಯೋ	ವ
ತ್ತೇ	ಭ್ಯಂ	ರಂ	ಟಂ	ಯೋ	ಮಂ
ಗುಂ	ಭೋ	ಭಾ	ಅಂ	ವ್ಯಂ	ಸ್ಪೃ

1. __ ಜನ
2. __ ಜನ
3. __ ಜನ
4. __ ಜನ
5. __ ಜನ
6. __ ಜನ
7. __ ಜನ
8. __ ಜನ
9. __ __ ಜನ
10. __ __ ಜನ
11. __ __ ಜನ
12. __ __ ಜನ
13. __ __ ಜನ
14. __ __ ಜನ
15. __ __ ಜನ
16. __ __ ಜನ

ಮಜ ಮಜ ಮಜಕೂರದ ಜುಲೈ 18ರ ಸಂಚಿಕೆ ಪ್ರಶ್ನೆಗಳಿಗೆ ಸರಿ ಉತ್ತರ ನೀಡಿದ ಮಕ್ಕಳ ಹೆಸರುಗಳನ್ನು ನೋಡಲು ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಕಳೆದ ಸಂಚಿಕೆಯ ಸರಿ ಉತ್ತರಗಳು

ಪದ ಹಿಗ್ಗು

1. ಮುದ್ದತ್ತು, 2. ವಚನ, 3. ಹರಿತ್ತು, 4. ಮಹಿಳೆ 5. ಜನನ, 6. ಇಟಲಿ, 7. ಅರಳು, 8. ಕನ್ನಡ

ಅದಲು-ಬದಲು ಕಂಚಿ ಕದಲು

1. ಹೊಸ ಕಳೆ, 2. ಮದಕರಿ, 3. ಹರದಾರಿ 4. ಪಟ್ಟುಹಿಡಿ

ಟ್ವೆಂಟಿ – 20 ಮ್ಯಾಚ್

A ವಿಭಾಗ:- 1–ಕ 2–ಡ 3–ಅ 4-ಬ
B ವಿಭಾಗ:- 1–ಡ 2 –ಕ 3–ಅ 4-ಬ
C ವಿಭಾಗ:- 1–ಕ 2–ಡ 3–ಅ 4-ಬ
D ವಿಭಾಗ:- 1–ಕ 2–ಡ 3–ಬ 4-ಅ
E ವಿಭಾಗ:- 1–ಡ 2–ಕ 3–ಬ 4-ಅ

ಸರಿ ಉತ್ತರ ನೀಡಿದ ಆಯ್ದ ಮೂವರು ಪುಟಾಣಿಗಳು



ಪರಿಣಿತ ಕೆ., ಬೆಂಗಳೂರು

ಆರ್. ಅಪೇಕ್ಷ, ತಿ.ನರಸೀಪುರ (ಮೈಸೂರು)

ಆಯುಷ್. ಎಂ. ಎನ್., ಭಾಗ್ಯನಗರ (ಕೊಪ್ಪಳ)

ಸರಿ ಉತ್ತರ ಮುಂದಿನ ವಾರ

ಸರಿ ಉತ್ತರ ನೀಡಿದ ಮಕ್ಕಳ ವಿವರವನ್ನು ಪ್ರಜಾವಾಣಿ ವೆಬ್‌ಸೈಟ್‌ನಲ್ಲಿ ಹಾಗೂ ಆಯ್ದ ಮೂವರು ಮಕ್ಕಳ ಚಿತ್ರಗಳನ್ನು ಮುಂದಿನ ಸಂಚಿಕೆಯಲ್ಲಿ ಪ್ರಕಟಿಸಲಾಗುವುದು. ಟ್ವೆಂಟಿ–20 ಮ್ಯಾಚ್ ಮತ್ತು ಪುಟಾಣಿ ಪದಬಂಧದ ಸರಿ ಉತ್ತರಗಳ ಜತೆಗೆ ಮಗುವಿನ ಹೆಸರು, ತರಗತಿ, ಶಾಲೆಯ ಹೆಸರು, ಊರು ಹಾಗೂ ವಿಳಾಸವನ್ನು ಕಳುಹಿಸಬೇಕು.

ಉತ್ತರ ಕಳುಹಿಸಲು ಇಮೇಲ್ ವಿಳಾಸ:

majakoora@prajavani.co.in

ಸಿ.ಎಂ ಯಡಿಯೂರಪ್ಪ ಅಳಲು ● ಸಿ.ಎಂ ಸ್ಥಾನಕ್ಕೆ ಫ್ರಂಟ್ ರನ್ನರ್ ಅಲ್ಲ–ಜೋಶಿ ● ಲಾಬಿ ಮಾಡೋಲ್ಲ –ನಿರಾಣಿ

‘ನೆಮ್ಮದಿಯ ಆಡಳಿತ ನಡೆಸಲು ಸಾಧ್ಯವಾಗಲಿಲ್ಲ’

ಪ್ರಜಾವಾಣಿ ವಾರ್ತೆ



ಶಿವಮೊಗ್ಗ: ‘ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ದಿನದಿಂದ ಇಲ್ಲಿಯವರೆಗೂ ಹಲವು ಸವಾಲುಗಳನ್ನು ಎದುರಿಸಿದ್ದೇನೆ’ ಎಂದು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಹೇಳಿದರು.

ಜಿಲ್ಲೆಯಲ್ಲಿ ₹1074 ಕೋಟಿ ವೆಚ್ಚದ ವಿವಿಧ ಯೋಜನೆಗಳ ಉದ್ಘಾಟನೆ, ₹ 560 ಕೋಟಿ ವೆಚ್ಚದ ಹಲವು ಯೋಜನೆಗಳಿಗೆ ಬೆಂಗಳೂರಿನ ಗೃಹ ಕಚೇರಿಯಿಂದ ವರ್ಚುಯಲ್ ಮೂಲಕ ಶಂಕುಸ್ಥಾಪನೆ ನೆರವೇರಿಸಿ ಅವರು ಮಾತನಾಡಿದರು.

‘ಹಿಂದೆಂದೂ ಕಂಡಿರದ ಪ್ರಕೃತಿ ವಿಕೋಪ, ಕೊರೊನಾ ಸಂಕಷ್ಟದ ಸವಾಲುಗಳಲ್ಲೇ ಸಮಯ ಕಳೆಯಬೇಕಾಯಿತು. ಈಗ ಮತ್ತೆ ಪ್ರವಾಹದ ಪರಿಸ್ಥಿತಿ ಎದುರಿಸಬೇಕಿದೆ. ನೆಮ್ಮದಿಯಾಗಿ ಆಡಳಿತ ನಡೆಸಲು ಸಾಧ್ಯವಾಗಿಲ್ಲ’ ಎಂದು ಅವರು ಅಳಲು ತೋಡಿಕೊಂಡರು.

‘ಎರಡು ವರ್ಷಗಳಲ್ಲಿ ಶಿವಮೊಗ್ಗ ಜಿಲ್ಲೆಯ ಸಮಗ್ರ ಅಭಿವೃದ್ಧಿಗೆ ಗರಿಷ್ಠ ಪ್ರಯತ್ನ ಮಾಡಿದ ತೃಪ್ತಿ ಇದೆ. ರೈತರ ಬದುಕು ಹಸನಾಗಿಸಲು ನೀರಾವರಿ ಯೋಜನೆಗಳಿಗೆ ಆದ್ಯತೆ ನೀಡಿರುವೆ. ಏತನೀರಾವರಿ ಯೋಜನೆಗಳಿಗೆ ದಾಖಲೆ ಪ್ರಮಾಣದ ಅನುದಾನ ನೀಡಿರುವೆ. ಜಿಲ್ಲೆಯ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸಿರುವೆ’ ಎಂದು ಹೇಳಿದರು.

ಮಿತ್ರ ಮಂಡಳಿ ಇಲ್ಲ: ಬಿಜೆಪಿಯಲ್ಲಿ ಮಿತ್ರ ಮಂಡಳಿ ಇಲ್ಲ. 17 ಶಾಸಕರು ಬಿಜೆಪಿ ಟಿಕೆಟ್ ಪಡೆದು ಚುನಾವಣೆ ಎದುರಿಸಿದ್ದಾರೆ. ಮುಖ್ಯಮಂತ್ರಿ ಬದಲಾವಣೆ ಬಗ್ಗೆ ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ತೀರ್ಮಾನ ಕೈಗೊಳ್ಳಲಿದ್ದಾರೆ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಹೇಳಿದ್ದಾರೆ.

ಕಾದು ನೋಡ ಬೇಕಿದೆ: ಶೆಟ್ಟರ್

ಹುಬ್ಬಳ್ಳಿ: ‘ಮುಖ್ಯಮಂತ್ರಿ ಬದಲಾವಣೆ ವಿಷಯದಲ್ಲಿ ವರಿಷ್ಠರು ಯಾವ ನಿರ್ಧಾರ ತೆಗೆದುಕೊಳ್ಳುತ್ತಾರೆ ಎನ್ನುವ ಸ್ಪಷ್ಟತೆಯಿಲ್ಲ. ಕಾದು ನೋಡಬೇಕಿದೆ’ ಎಂದು ಸಚಿವ ಜಗದೀಶ್ ಶೆಟ್ಟರ್ ಹೇಳಿದರು.

ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ‘ಸಿ.ಎಂ ಬದಲಾವಣೆ ಕುರಿತು ನನಗೆ ಮಾಹಿತಿ ಇಲ್ಲ. ವರಿಷ್ಠರನ್ನು ಭೇಟಿಯಾಗಲು ನಾನು ದೆಹಲಿಗೆ ಹೋಗಿಲ್ಲ. ಇಲಾಖೆಯ ವಿಚಾರಕ್ಕೆ ಸಂಬಂಧಿಸಿದಂತೆ ನಾನು ಗುಜರಾತ್-ದೆಹಲಿಗೆ ತೆರಳಿದ್ದೆ’ ಎಂದು ತಿಳಿಸಿದರು.

‘ಸಿ.ಎಂ.ಸ್ಥಾನಕ್ಕೆ ಸ್ಪರ್ಧಿ ಅಲ್ಲ’

ಪ್ರಲ್ಹಾದ ಜೋಶಿ

ಹುಬ್ಬಳ್ಳಿ: ‘ಮುಖ್ಯಮಂತ್ರಿ ಸ್ಥಾನಕ್ಕೆ ಫ್ರಂಟ್ ರನ್ನರ್ರೂ ಅಲ್ಲ ಬ್ಯಾಕ್ ರನ್ನರ್ರೂ ಅಲ್ಲ. ವರಿಷ್ಠರು ಈ ಬಗ್ಗೆ ನನ್ನ ಜತೆ ಯಾವುದೇ ಚರ್ಚೆ ಮಾಡಿಲ್ಲ’ ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಹೇಳಿದರು.

ಸುದ್ದಿಗಾರರ ಜೊತೆಗೆ ಮಾತನಾಡಿದ ಅವರು, ‘ಮುಖ್ಯಮಂತ್ರಿ ಯಾರಾಗಬೇಕು ಎಂಬುದನ್ನು ಪಕ್ಷದ ರಾಷ್ಟ್ರೀಯ ಅಧ್ಯಕ್ಷರು, ಪ್ರಧಾನಿ ನಿರ್ಧರಿಸುತ್ತಾರೆ’ ಎಂದು ತಿಳಿಸಿದರು.

‘ಬಿ.ಎಸ್. ಯಡಿಯೂರಪ್ಪ ಮತ್ತು ವರಿಷ್ಠರ ಮಧ್ಯೆ ಏನೆಲ್ಲ ಮಾತುಕತೆ ನಡೆದಿದೆ. ಯಡಿಯೂರಪ್ಪ ಅವರಿಗೆ ರಾಜೀನಾಮೆ ನೀಡಿ ಎಂದು ಹೇಳಿದ್ದಾರೋ, ಇಲ್ಲವೋ ಎನ್ನುವುದು ತಮಗೆ ಗೊತ್ತಿಲ್ಲ’ ಎಂದು ಹೇಳಿದರು.

‘ವಾರಾಣಸಿಗೆ ಹೋಗಿದ್ದು ದೇವರ ದರ್ಶನಕ್ಕೆ’

ಕಲಬುರ್ಗಿ: ‘ಪಕ್ಷದ ಎಲ್ಲ ಶಾಸಕರು ಮುಖ್ಯಮಂತ್ರಿ ಆಗಲು ಸಮರ್ಥರಿದ್ದಾರೆ. ಆದರೆ, ನಾನು ಲಾಬಿ ಮಾಡಿ ಮುಖ್ಯಮಂತ್ರಿ ಅನಿಸಿಕೊಳ್ಳಲು ಇಷ್ಟಪಡುವುದಿಲ್ಲ’ ಎಂದು ಸಚಿವ ಮುರುಗೇಶ ನಿರಾಣಿ ಹೇಳಿದರು.

‘ಮುಖ್ಯಮಂತ್ರಿ ಬದಲಾವಣೆ ಕುರಿತು ಏನನ್ನೂ ಹೇಳಲಾರೆ. ಹೈಕಮಾಂಡ್ ನಿರ್ಧರಿಸಲಿದೆ. ನಾನು ವಾರಾಣಸಿಗೆ ಹೋಗಿದ್ದು ದೇವರ ದರ್ಶನಕ್ಕಾಗಿ. ಪ್ರತಿ ತಿಂಗಳು ಒಂದೊಂದು ದೇವಸ್ಥಾನಕ್ಕೆ ಹೋಗುತ್ತೇನೆ’ ಎಂದು ಅವರು ಶನಿವಾರ ಇಲ್ಲಿ ಪ್ರತಿಕ್ರಿಯಿಸಿದರು.

ಕಲ್ಯಾಣ ಕರ್ನಾಟಕ ಮಾನವ ಸಂಪನ್ಮೂಲ, ಕೃಷಿ ಮತ್ತು ಸಾಂಸ್ಕೃತಿಕ ಸಂಘದ ಅಧ್ಯಕ್ಷ ಬಸವರಾಜ ಪಾಟೀಲ ಸೇಡಂ ಅವರನ್ನು ಭೇಟಿಯಾಗಿದ್ದ ನಿರಾಣಿ, ಕೆಲಹೊತ್ತು ಗೋಪ್ಯ ಮಾತುಕತೆ ನಡೆಸಿದರು. ಸುಲಫಲ ಮಠದ ಡಾ.ಸಾರಂಗಧರ ದೇಶಿಕೇಂದ್ರ ಸ್ವಾಮೀಜಿ ಜೊತೆಗೂ ಗೋಪ್ಯವಾಗಿ ಚರ್ಚಿಸಿದರು.

ನಂತರ ಸೇಡಂ ಅವರನ್ನು ಭೇಟಿಯಾದ ಶಾಸಕ ಬಸವರಾಜ ಮತ್ತಿಮೂಡ, ಮೇಲ್ಮನೆ ಸದಸ್ಯ ಶಶೀಲ್ ಜಿ. ನಮೋಶಿ, ‘ನಿರಾಣಿ ಸಾಹೇಬರಿಗೆ ನಿಮ್ಮ ಆಶೀರ್ವಾದ ಬೇಕು’ ಎಂದು ಸೇಡಂ ಅವರನ್ನು ಕೋರಿದರು.

‘ಗುರುಪೌರ್ಣಿಮೆ ಅಂಗವಾಗಿ ಹಿರಿಯರು ಹಾಗೂ ಗುರುಗಳ ಆಶೀರ್ವಾದ ಪಡೆದಿದ್ದೇನೆ. ಇದಕ್ಕೆ ವಿಶೇಷ ಅರ್ಥ ಕಲ್ಪಿಸಬೇಕಿಲ್ಲ’ ಎಂದು ನಿರಾಣಿ ಅವರು ಪ್ರತಿಕ್ರಿಯಿಸಿದರು.

ಪತ್ರಿಕಾಗೋಷ್ಠಿಯಲ್ಲಿ, ‘ನಾನು ಕಲಬುರ್ಗಿ ಜಿಲ್ಲಾ ಉಸ್ತುವಾರಿ ಸಚಿವನಾದ ನಂತರ ನನಗೆ ರೆಡ್‌ಕಾರ್ಪೆಟ್ ಸ್ವಾಗತ ಸಿಕ್ಕಂತಾಗಿದೆ’ ಎಂದು ಸೂಚ್ಯವಾಗಿ ಹೇಳಿದರು.

ಖರ್ಗೆ ಸಿಎಂ ಅಭ್ಯರ್ಥಿಯೆಂದು ಘೋಷಿಸಿ: ಕಟೀಲ್ ಸವಾಲು

ಪ್ರಜಾವಾಣಿ ವಾರ್ತೆ

ಚಿತ್ರದುರ್ಗ: ‘ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದರೆ ದಲಿತ ನಾಯಕ ಮಲ್ಲಿಕಾರ್ಜುನ ಖರ್ಗೆ ಅವರನ್ನು ಮುಖ್ಯಮಂತ್ರಿ ಮಾಡುವುದಾಗಿ ಘೋಷಣೆ ಮಾಡಿ’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರಿಗೆ ಸವಾಲು ಹಾಕಿದರು.

ಇಲ್ಲಿ ಶನಿವಾರ ಏರ್ಪಡಿಸಿದ್ದ ಬಿಜೆಪಿ ರಾಜ್ಯ ಪದಾಧಿಕಾರಿಗಳ ಸಭೆಯನ್ನು ಉದ್ಘಾಟಿಸಿ ಮಾತನಾಡಿದ ಅವರು, ‘ದಲಿತರ ಬಗ್ಗೆ ಪ್ರೀತಿ, ವಿಶ್ವಾಸವಿದ್ದರೆ ಮೊದಲು ನೀವು ನಿರ್ಧಾರ ಪ್ರಕಟಿಸಿ’ ಎಂದು ಹೇಳಿದರು.

‘ಮತ್ತೆ ಸಿ.ಎಂ ಆಗುವ ಕನಸು ಬಿಡಿ. ಮುಖ್ಯಮಂತ್ರಿಯಾಗಿದ್ದಾಗ ದಲಿತ ನಾಯಕರನ್ನು ತುಳಿದಿರಿ. ಇಡೀ ಸಮುದಾಯವನ್ನು ಮರೆತು ಅಧಿಕಾರ ನಡೆಸಿದ್ದೀರಿ. ನಿಮಗೆ ದಲಿತರ ಬಗ್ಗೆ ಮಾತನಾಡುವ ನೈತಿಕತೆ ಇದೆಯೇ’ ಎಂದು ಪ್ರಶ್ನಿಸಿದರು.

‘ಡಾ.ಜಿ.ಪರಮೇಶ್ವರ ಅವರನ್ನು ಸೋಲಿಸಿದರು. ಶ್ರೀನಿವಾಸ ಪ್ರಸಾದ್, ಮಲ್ಲಿಕಾರ್ಜುನ ಖರ್ಗೆ, ಬಿ.ಎನ್. ಚಂದ್ರಪ್ಪ, ಆರ್. ಧ್ರುವನಾರಾಯಣ ಅವರನ್ನು ಮಣಿಸಿದರು. ಈಗ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಅವರನ್ನು ಮುಗಿಸುವ ಷಡ್ಯಂತ್ರ ನಡೆಸುತ್ತಿದ್ದಾರೆ’ ಎಂದು ಅವರು ಆರೋಪಿಸಿದರು.

ಭಾಷಣದುದ್ದಕ್ಕೂ ಮುಖ್ಯಮಂತ್ರಿ ಯಡಿಯೂರಪ್ಪ ಅವರ ಆಡಳಿತವನ್ನು ಶ್ಲಾಘಿಸಿದ ಅವರು, ನೆರೆ ಹಾವಳಿ, ಕೋವಿಡ್ ಸಂಕಷ್ಟದ ನಡುವೆಯೂ ಯಡಿಯೂರಪ್ಪ ಅದ್ಭುತ ಆಡಳಿತ ನೀಡಿದ್ದಾರೆ ಎಂದು ಹೇಳಿದರು.

ಬಿ.ವೈ.ವಿಜಯೇಂದ್ರ ಗೈರು: ಸಭೆಗೆ ಪಕ್ಷದ ಉಪಾಧ್ಯಕ್ಷ ಬಿ.ವೈ. ವಿಜಯೇಂದ್ರ ಗೈರು ಹಾಜರಾಗಿದ್ದುದು ಎದ್ದು ಕಾಣುತ್ತಿತ್ತು. ‘ಗೈರು ಹಾಜರಿಗೆ ವಿಜಯೇಂದ್ರ ಅಧ್ಯಕ್ಷರ ಅನುಮತಿ ಪಡೆದಿದ್ದಾರೆ’ ಎಂದು ವಕ್ತಾರ ಗಣೇಶ್ ಕಾರ್ಣಿಕ್ ಹೇಳಿದರು.

ಐದು ಜಿಲ್ಲೆಗಳ ಕಾಂಗ್ರೆಸ್ ಮುಖಂಡರಿಂದ ಸುರ್ಜೇವಾಲ ಅಭಿಪ್ರಾಯ ಸಂಗ್ರಹ

ಸಿದ್ದರಾಮಯ್ಯ, ಡಿಕೆಶಿ ಹೊರಗಿಟ್ಟು ಸಭೆ

ಪ್ರಜಾವಾಣಿ ವಾರ್ತೆ

ರಣದೀಪ್ ಸಿಂಗ್ ಸುರ್ಜೇವಾಲ

ತುಮಕೂರು: ಕೆಪಿಸಿಸಿ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲ ಅವರು ಶನಿವಾರ ಇಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ.ಶಿವಕುಮಾರ್ ಮತ್ತು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರನ್ನು ಜಿಲ್ಲಾ ಕಾಂಗ್ರೆಸ್ ಮುಖಂಡರ ಸಭೆಯಿಂದ ಹೊರಗಿಟ್ಟು ಅಭಿಪ್ರಾಯ ಸಂಗ್ರಹಿಸಿದರು.

ಪಕ್ಷ ಸಂಘಟನೆ ಸಲುವಾಗಿ ತುಮಕೂರು, ಚಿತ್ರದುರ್ಗ, ದಾವಣಗೆರೆ, ಚಿಕ್ಕಬಳ್ಳಾಪುರ, ಕೋಲಾರ ಜಿಲ್ಲೆಯ ನಾಯಕರ ಸಭೆ ನಗರದ ರೆಸಾರ್ಟ್‌ವೊಂದರಲ್ಲಿ ನಡೆಯಿತು.

ಪ್ರತಿ ಜಿಲ್ಲೆಯ ಮುಖಂಡರ ಸಭೆಯನ್ನು ಪ್ರತ್ಯೇಕವಾಗಿ ಸುರ್ಜೇವಾಲ ನಡೆಸಿದರು. ರಾಜ್ಯದ ಇಬ್ಬರೂ ನಾಯಕರನ್ನು ಸಭೆಯಿಂದ ದೂರವಿಟ್ಟಿದ್ದರು. ಬೆಳಿಗ್ಗೆಯಿಂದ ಸಂಜೆವರೆಗೂ ಏಕಾಂಗಿಯಾಗಿ ಆಯಾ ಜಿಲ್ಲೆಯ ನಾಯಕರಿಂದ ಮಾಹಿತಿ ಪಡೆದುಕೊಂಡರು.

ಕೋಲಾರ ಜಿಲ್ಲೆಯ ನಾಯಕರಿಂದ ಅಭಿಪ್ರಾಯ ಸಂಗ್ರಹಿಸುವ ಸಮಯದಲ್ಲಿ ಮಾತ್ರ ಸಿದ್ದರಾಮಯ್ಯ, ಶಿವಕುಮಾರ್ ಅವರನ್ನು ಕರೆಸಲಾಯಿತು. ಸಭೆ ಆರಂಭದ ಐದು ನಿಮಿಷಗಳ ಕಾಲ ಇಬ್ಬರು ಇದ್ದರು. ನಂತರ ಹೊರಗೆ ಕಳುಹಿಸಲಾಯಿತು. ಬಳಿಕ ಸುರ್ಜೇವಾಲ ಅವರೇ ಸಭೆಯನ್ನು ಮುಂದುವರಿಸಿದರು. ಐದು ಜಿಲ್ಲೆಗಳ ಮುಖಂಡರ ಜತೆಗೂ ಸಭೆ ನಡೆಸಿದರು. ಪಕ್ಷ ಬಲಪಡಿಸಲು ಪ್ರತಿ ಜಿಲ್ಲೆಗೂ ಪ್ರತ್ಯೇಕ ಕಾರ್ಯತಂತ್ರ ರೂಪಿಸಲು ನಿರ್ದೇಶನ ನೀಡಿದರು ಎಂದು ಮೂಲಗಳು ತಿಳಿಸಿವೆ.

ಪಕ್ಷ ಸಂಘಟನೆಗೆ ಇರುವ ತೊಡಕುಗಳು, ಮುಂದೆ ಬಲಪಡಿಸಲು ಏನೆಲ್ಲ ಕಾರ್ಯತಂತ್ರ ರೂಪಿಸಬೇಕು ಎಂಬ ಬಗ್ಗೆ ಚರ್ಚೆ ನಡೆಯಿತು. ಮುಂಬರುವ ಜಿಲ್ಲಾ ಹಾಗೂ ತಾಲ್ಲೂಕು ಪಂಚಾಯಿತಿ ಚುನಾವಣೆಯಲ್ಲಿ ಹೆಚ್ಚು ಸ್ಥಾನಗಳಲ್ಲಿ ಗೆಲುವು ಸಾಧಿಸಲು ಸಿದ್ಧತೆ ಮಾಡಿಕೊಳ್ಳುವುದು, ತಳಮಟ್ಟದಿಂದ ಪಕ್ಷ ಸಂಘಟನೆಗೆ ಮಾಡುವಂತೆ ತಿಳಿಸಿದರು. ಮುಂದಿನ ವಿಧಾನಸಭೆ ಚುನಾವಣೆಗೆ ಈಗಿನಿಂದಲೇ ಸಿದ್ಧರಾಗುವಂತೆ ಸಲಹೆ ನೀಡಿದರು ಎನ್ನಲಾಗಿದೆ.

‘ಬಿಎಸ್‌ವೈ ಬಳಸಿ, ಬಿಸಾಕಿದ ಬಿಜೆಪಿ’

ಸಭೆಯ ನಂತರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಸುರ್ಜೇವಾಲ, ‘ಕೇಂದ್ರ, ರಾಜ್ಯದಲ್ಲಿ ಬಿಜೆಪಿ ನೇತೃತ್ವದ ಸರ್ಕಾರ ಭ್ರಷ್ಟಾಚಾರದಲ್ಲಿ ಮುಳುಗಿದೆ. ಪೌಷ್ಟಿಕ ಆಹಾರವಾಗಿ ಮಕ್ಕಳಿಗೆ ಮೊಟ್ಟೆ ನೀಡುವಲ್ಲೂ ಕಮಿಷನ್ ಪಡೆಯಲು ಸಚಿವರು ಮುಂದಾಗಿದ್ದಾರೆ. ಇದಕ್ಕಿಂತ ಹೀನ ಕೃತ್ಯ ಮತ್ತೊಂದಿಲ್ಲ’ ಎಂದರು.

ಪ್ರಧಾನಿ ನರೇಂದ್ರ ಮೋದಿ, ಗೃಹ ಸಚಿವ ಅಮಿತ್ ಶಾ ಅವರು ಪಕ್ಷದ ನಾಯಕರನ್ನು ಬಳಸಿಕೊಂಡು ಕಸದ ತೊಟ್ಟಿಗೆ ಬಿಸಾಡುತ್ತಾರೆ. ಬಿಜೆಪಿ ಕಟ್ಟಿ ಬೆಳೆಸಿದ ಎಲ್.ಕೆ.ಅಡ್ವಾನಿ, ಮುರಳಿ ಮನೋಹರ ಜೋಷಿ, ಜಸ್ವಂತ್ ಸಿಂಗ್ ಅವರಂತಹ ನಾಯಕರನ್ನು ಕಸದ ತೊಟ್ಟಿಗೆ ಹಾಕಿದ್ದಾರೆ. ಈಗ ಬಿ.ಎಸ್. ಯಡಿಯೂರಪ್ಪ ಅವರಿಗೂ ಅದೇ ಗತಿ ಬಂದಿದೆ. ಬಳಸಿಕೊಂಡು ಬಿಸಾಡಲಾಗುತ್ತಿದೆ ಎಂದು ದೂರಿದರು.

ಸಿದ್ದರಾಮಯ್ಯ ಮಾತನಾಡಿ, ‘ಸೋಲಿನ ಭಯದಿಂದ ಜಿಲ್ಲಾ ಹಾಗೂ ತಾಲ್ಲೂಕು ಪಂಚಾಯಿತಿಗಳಿಗೆ ಚುನಾವಣೆ ನಡೆಸಲು ಬಿಜೆಪಿ ಸಿದ್ಧವಿಲ್ಲ. ಆದರೆ ರಾಜ್ಯ ಚುನಾವಣೆ ಆಯೋಗ ಮೀಸಲಾತಿ ಪಟ್ಟಿ ಪ್ರಕಟಿಸಿ, ಸಿದ್ಧತೆ ಮಾಡಿಕೊಂಡಿದೆ. ಡಿಸೆಂಬರ್ ಒಳಗೆ ಚುನಾವಣೆ ಬರಲಿದೆ’ ಎಂದು ಹೇಳಿದರು.

ಕಾಂಗ್ರೆಸ್ ತೆಗಿಬೇಕು!

ಸಿದ್ದರಾಮಯ್ಯ ಅವರು ಪತ್ರಿಕಾಗೋಷ್ಠಿಯಲ್ಲಿ ಮಾತನಾಡುವ ಸಮಯದಲ್ಲಿ ‘ರಾಜ್ಯ ಉಳಿಯಬೇಕಾದರೆ ಕಾಂಗ್ರೆಸ್ ಪಕ್ಷ ತೆಗಿಯಬೇಕು’ ಎಂದು ಎರಡು ಬಾರಿ ಹೇಳಿದರು.

ನಂತರ ತಪ್ಪಿನ ಅರಿವಾಗಿ ಇಲ್ಲ, ‘ಬಿಜೆಪಿ ತೆಗಿಯಬೇಕು’ ಎಂದು ಸ್ಪಷ್ಟಪಡಿಸಿದರು.

ಕ್ಲಬ್‌ಹೌಸ್‌ಗೆ ಬನ್ನಿ
ಪ್ರಜಾವಾಣಿ ಆಲದಮರ
ಪುಸ್ತಕ- ಲೇಖಕ - ಓದುಗ - ಉದ್ಯಮ
ಹೀಗೊಂದು ಸಮುದ್ರ ಮಥನ

ಕೇಶವ ಮಳಗಿ ಓದುಗ- ಲೇಖಕ

ರಮೇಶ ಉಡುಪ ನವಕರ್ನಾಟಕ ಪಬ್ಲಿಕೇಷನ್ಸ್

ಜಿ.ಎನ್.ಮೋಹನ್ ಬಹುರೂಪಿ ಬುಕ್ ಹಬ್

ಗುರುಪ್ರಸಾದ್ ಡಿ.ಎನ್. ಆಕೃತಿ ಬುಕ್ಸ್

ವಸಂತ ಶೆಟ್ಟಿ ಮೈಲ್ಯಾಂಗ್ ಬುಕ್ಸ್

ಮತ್ತು ನೀವು
25-7-2021 ಭಾನುವಾರ, ಬೆಳಿಗ್ಗೆ 10.30ರಿಂದ 12.30ರವರೆಗೆ

ಪ್ರಜಾವಾಣಿ LIVE
Prajavani.net Prajavani Prajavani
ಫೇಸ್‌ಬುಕ್, ಯೂಟ್ಯೂಬ್, ಟ್ವಿಟರ್‌ನಲ್ಲಿ ಏಕಕಾಲಕ್ಕೆ ನೇರ ಪ್ರಸಾರ
ಸಂವಾದ
ಬಿಜೆಪಿಯ ಒಗ್ಗಟ್ಟು ಉಳಿಯಬಹುದೆ?
ಸಂವಾದದಲ್ಲಿ ಭಾಗವಹಿಸುವವರು

ಸಂದೀಪ್ ಶಾಸ್ತ್ರಿ ರಾಜಕೀಯ ವಿಶ್ಲೇಷಕ

ಸಿದ್ದನಗೌಡ ಪಾಟೀಲ ಸಿಪಿಐ ರಾಜ್ಯ ಮುಖಂಡ

ರವೀಂದ್ರ ರೇಷ್ಮೆ ಹಿರಿಯ ಪತ್ರಕರ್ತ ಅಂಕಣಕಾರ

ಮುಜಾಫರ್ ಅಸ್ಸಾದಿ ರಾಜಕೀಯ ವಿಶ್ಲೇಷಕ

ಸೋಮವಾರ, 26-7-2021 ಸಮಯ- ಬೆಳಿಗ್ಗೆ 11 ರಿಂದ 12

ಕಲ್ಯಾಣ, ಉತ್ತರ ಕರ್ನಾಟಕ ಆರ್ಯ ಈಡಿಗ ಸಮಾವೇಶ ಇಂದು

ಗಂಗಾವತಿ (ಕೊಪ್ಪಳ ಜಿಲ್ಲೆ): ಉತ್ತರ ಕರ್ನಾಟಕ ಹಾಗೂ ಕಲ್ಯಾಣ ಕರ್ನಾಟಕದ ಆರ್ಯ ಈಡಿಗ ಸಮುದಾಯದ ಚಿಂತನ-ಮಂಥನ ಸಮಾವೇಶವನ್ನು ಜು.25ರಂದು ಬೆಳಿಗ್ಗೆ 10.30ಕ್ಕೆ ಇಲ್ಲಿಯ ಶ್ರೀಕ್ಷೇತ್ರ ಹೇಮಗುಡ್ಡದ ದುರ್ಗಾ ದೇವಸ್ಥಾನದ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ.

ಕರ್ನಾಟಕ ಪ್ರದೇಶ ಆರ್ಯ ಈಡಿಗ ಸಂಘದ ರಾಜ್ಯ ಘಟಕದ ಅಧ್ಯಕ್ಷ ತಿಮ್ಮೇಗೌಡ ಅವರು ಸಮಾವೇಶದ ಅಧ್ಯಕ್ಷತೆ ವಹಿಸಲಿದ್ದು, ಸಚಿವ ಕೋಟ ಶ್ರೀನಿವಾಸ ಪೂಜಾರಿ ಸಮಾರಂಭ ಉದ್ಘಾಟಿಸುವರು.

ಬಿಜೆಪಿ ರಾಜ್ಯ ಘಟಕದ ಉಪಾಧ್ಯಕ್ಷ ಮಾಲೀಕಯ್ಯ ಗುತ್ತೇದಾರ, ಪ್ರಣವಾನಂದ ಸ್ವಾಮೀಜಿ ಪಾಲ್ಗೊಳ್ಳುವರು. ಈ ಭಾಗದ ಸಮಾಜದ 3 ಸಾವಿರಕ್ಕೂ ಹೆಚ್ಚು ಜನರು ಭಾಗವಹಿಸಲಿದ್ದಾರೆ.

‘ಆರ್ಯ ಈಡಿಗ ಅಭಿವೃದ್ಧಿ ನಿಗಮ ಸ್ಥಾಪನೆ, ಸಿಗಂದೂರು ಚೌಡೇಶ್ವರಿ ದೇವಸ್ಥಾನವನ್ನು ಸರ್ಕಾರ ತನ್ನ ವಶಕ್ಕೆ ಪಡೆಯುವುದಕ್ಕೆ ವಿರೋಧ, ರಾಜಕೀಯ ಪ್ರಾತಿನಿಧ್ಯ ಸೇರಿದಂತೆ ವಿವಿಧ ವಿಷಯಗಳ ಕುರಿತು ಚರ್ಚೆ ನಡೆಸಲಾಗುವುದು’ ಎಂದು ವಿಧಾನ ಪರಿಷತ್ ಮಾಜಿ ಸದಸ್ಯ ಎಚ್.ಆರ್. ಶ್ರೀನಾಥ್ ತಿಳಿಸಿದ್ದಾರೆ.

‘ರಾಜ್ಯದಲ್ಲಿ 80 ಲಕ್ಷ ಜನಸಂಖ್ಯೆ ಹೊಂದಿರುವ ಆರ್ಯ ಈಡಿಗ ಸಮುದಾಯವು ಶಿಕ್ಷಣ, ಉದ್ಯೋಗ, ವ್ಯಾಪಾರ, ರಾಜಕೀಯ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಹಿಂದುಳಿದಿದೆ. ಕುಲ ಕಸುಬಾದ ಸೇಂದಿ ಇಳಿಸುವುದನ್ನು ನಿಲ್ಲಿಸಿದ ಬಳಿಕ ಈಡಿಗ ಸಮಾಜದವರು ಸಂಕಷ್ಟದಲ್ಲಿದ್ದು ವಿವಿಧ ಬೇಡಿಕೆಗಳ ಈಡೇರಿಕೆಗಾಗಿ ಸರ್ಕಾರಕ್ಕೆ ಮನವಿ ಮಾಡಲಾಗುತ್ತಿದೆ’ ಎಂದು ಅವರು ಹೇಳಿದ್ದಾರೆ.

‘ಪಾಳೇಗಾರಿಕೆಗೆ ಮರಳುವ ಆತಂಕ’

ಬೆಂಗಳೂರು: ‘ಮಠಾಧೀಶರ ಒಂದು ಗುಂಪು ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅವರ ಪರ ನಿಂತಿರುವ ಪರಿಯನ್ನು ನೋಡಿದರೆ ನಾವು ಪ್ರಜಾಪ್ರಭುತ್ವದಿಂದ ಮಧ್ಯಯುಗದ ಪಾಳೇಗಾರಿಕೆಯ ಕಾಲಕ್ಕೆ ಮರಳುತ್ತಿದ್ದೇವೆಯೆ ಎಂಬ ಆತಂಕ ಮೂಡುತ್ತಿದೆ’ ಎಂದು ಬಿಜೆಪಿ ಮುಖಂಡರೂ ಆಗಿರುವ ಮಾಜಿ ಸಚಿವ ಬಿ.ಸೋಮಶೇಖರ್ ಹೇಳಿದ್ದಾರೆ.

ಪಿವಿ ಬ್ರ್ಯಾಂಡ್ ಸ್ಪಾಟ್

ಪತ್ರಿಕೆಯಲ್ಲಿ ಪ್ರಕಟವಾಗುತ್ತಿರುವ ಪಿವಿ ಬ್ರ್ಯಾಂಡ್ ಸ್ಪಾಟ್ ಪ್ರಸ್ತುತಿಯ ಲೇಖನ ಸಿದ್ಧಪಡಿಸುವಲ್ಲಿ ನಮ್ಮ ಪತ್ರಕರ್ತರ ಯಾವುದೇ ಪಾತ್ರ ಇರುವುದಿಲ್ಲ. ಸಂಸ್ಥೆಯ ಜಾಹೀರಾತು ಮತ್ತು ಬ್ರ್ಯಾಂಡ್ ವಿಭಾಗಗಳ ಪ್ರಸ್ತುತಿಯಾಗಿರುವ ‘ಪಿವಿ ಬ್ರ್ಯಾಂಡ್ ಸ್ಪಾಟ್’ನ ಮಾಹಿತಿಯನ್ನು (ಕಂಟೆಂಟ್) ಓದುಗರು ಜಾಹೀರಾತು ಎಂದೇ ಭಾವಿಸಬಹುದು.

ಕರ್ನಾಟಕ ಸರ್ಕಾರ
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಉಡುಪಿ
ಟೆ.ಪ್ರ.ಸಂ: ಕಾಇಂ/ಗ್ರಾಕುನೀ&ನೈವಿಉ/ಟೆಂಡರ್ ನಂ.06/2021–22/ಎಇಂ–2/653 ದಿನಾಂಕ: 23.07.2021

ಅಲ್ಪಾವಧಿ ಟೆಂಡರ್ ಪ್ರಕಟಣೆ
(ಇ–ಪ್ರೊಕ್ಯೂರ್‌ಮೆಂಟ್ ಪದ್ಧತಿಯಲ್ಲಿ e-procurement portal ನಡಿಯಲ್ಲಿ ಮಾತ್ರ)

ಕರ್ನಾಟಕ ರಾಜ್ಯಪಾಲರ ಪರವಾಗಿ ಉಡುಪಿ ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗದ ಕಾರ್ಯನಿರ್ವಾಹಕ ಇಂಜಿನಿಯರ್‌ರವರಿಂದ “ಜಲ್ ಜೀವನ್ ಮಿಷನ್” ಯೋಜನೆಯಡಿಯಲ್ಲಿ ಮನೆ ಮನೆಗೆ ನಳ್ಳಿ ಸಂಪರ್ಕದ ಮೂಲಕ ನೀರು ಸರಬರಾಜು ಮಾಡುವ ಅಂದಾಜು ಮೊತ್ತ ರೂ. 80.00 ಲಕ್ಷಗಳಿಂದ ರೂ. 375.00 ಲಕ್ಷಗಳವರೆಗಿನ ಕಾರ್ಕಳ ತಾಲ್ಲೂಕಿನ 1 ಪ್ಯಾಕೇಜ್ ಕಾಮಗಾರಿಗಳಿಗೆ, ಕುಂದಾಪುರ ತಾಲ್ಲೂಕಿನ 4 ಪ್ಯಾಕೇಜ್ ಕಾಮಗಾರಿಗಳಿಗೆ ಮತ್ತು ಉಡುಪಿ ತಾಲ್ಲೂಕಿನ 1 ಕಾಮಗಾರಿಗಳಿಗೆ ಇ–ಪ್ರೊಕ್ಯೂರ್‌ಮೆಂಟ್ ಪದ್ಧತಿಯಲ್ಲಿ ಟೆಂಡರನ್ನು (Standard Tender Documents for Procurement of Works)ನ ನಿಬಂಧನೆಗೊಳಪಟ್ಟಂತೆ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯಲ್ಲಿ ಎನ್ರೋಲ್ಮೆಂಟ್ ದಾಖಲಾತಿಗಳೊಂದಿಗೆ ನೊಂದಾಯಿಸಿದ ಅರ್ಹ ದರ್ಜೆಯ ಗುತ್ತಿಗೆದಾರರಿಂದ ದ್ವಿಲಕೋಟೆ ಪದ್ಧತಿಯಲ್ಲಿ ಟೆಂಡರುಗಳನ್ನು ಆಹ್ವಾನಿಸಲಾಗಿದ್ದು, ಇ–ಪ್ರೊಕ್ಯೂರ್‌ಮೆಂಟ್ ಮೂಲಕ ನಮೂದಿಸಿದ ದಿನಾಂಕದಂದು **Government of Karnataka e-procurement portal website https://www.eproc.karnataka.gov.in** ಆನ್‌ಲೈನ್ ಮುಖಾಂತರ ಸ್ವೀಕರಿಸಲಾಗುವುದು. (1) ಇ–ಟೆಂಡರ್ ಡಾಕ್ಯುಮೆಂಟ್‌ಗಳನ್ನು ಪಡೆದುಕೊಳ್ಳುವ **ದಿನಾಂಕ: 24.07.2021** ರಿಂದ. (2) ಭರ್ತಿ ಮಾಡಿದ ಟೆಂಡರುಗಳನ್ನು ಸ್ವೀಕರಿಸುವ ಕೊನೆಯ **ದಿನಾಂಕ: 04.08.2021** ರ **4.00 (PM) ಗಂಟೆಯವರೆಗೆ.** (3) ಸ್ವೀಕರಿಸಿದ ಟೆಂಡರುಗಳನ್ನು ತೆರೆಯುವ **ದಿನಾಂಕ: 05.08.2021** ರ **4.30** (PM) ಗಂಟೆಯ ನಂತರ

ಇನ್ನಿತರೆ ನಿಬಂಧನೆಗಳು, ಇಎಂಡಿ ವಿವರ, ಗುತ್ತಿಗೆದಾರರ ದರ್ಜೆ ಮತ್ತು ಷರತ್ತುಗಳನ್ನು ಹಾಗೂ ಟೆಂಡರ್ ತಿದ್ದುಪಡಿಗಳನ್ನು ಅಥವಾ ಬದಲಾವಣೆಗಳನ್ನು ಅಂತರ್ಜಾಲದ ವೆಬ್‌ಸೈಟ್: https://www.eproc.karnataka.gov.in ನಲ್ಲಿ ಪಡೆಯಬಹುದಾಗಿದೆ. ಇ–ಪ್ರೊಕ್ಯೂರ್‌ಮೆಂಟ್ ಪದ್ಧತಿಯ ಬಗ್ಗೆ ಹೆಚ್ಚಿನ ಮಾಹಿತಿಯನ್ನು ಇ–ಪ್ರೊಕ್ಯೂರ್‌ಮೆಂಟ್ ಪ್ಲಾಟ್‌ಫಾರಂನವರಿಂದ ಪಡೆಯಬಹುದಾಗಿದೆ.

ಸಹಿ/– ಕಾರ್ಯನಿರ್ವಾಹಕ ಇಂಜಿನಿಯರ್
ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ವಿಭಾಗ, ಉಡುಪಿ
ವಾಸಾಇ/ಸನಿಉ/ಎಂಸಿಎ/238/21–22 ದಿ:23.7.2021

2ಎ ಮೀಸಲಾತಿಗೆ ಶಿಫಾರಸು: ಸಿ.ಎಂಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಲಿಂಗಾಯತ ಪಂಚಮಸಾಲಿ ಸಮುದಾಯಕ್ಕೆ ಪ್ರವರ್ಗ 2ಎ ಮೀಸಲಾತಿ ನೀಡಲು ಕ್ರಮ ಕೈಗೊಳ್ಳುವುದಾಗಿ ಮುಖ್ಯಮಂತ್ರಿ ಬಿ.ಎಸ್. ಯಡಿಯೂರಪ್ಪ ಅಧಿವೇಶನದಲ್ಲಿಯೇ ಭರವಸೆ ನೀಡಿದ್ದರು. ಮುಖ್ಯಮಂತ್ರಿ ಸ್ಥಾನದಿಂದ ಅವರ ನಿರ್ಗಮನ ಖಚಿತವಾದರೆ, ಸಮುದಾಯಕ್ಕೆ 2ಎ ಮೀಸಲಾತಿಗೆ ಶಿಫಾರಸು ಮಾಡಿಯೇ ಹೋಗಬೇಕು’ ಎಂದು ಅಖಿಲ ಭಾರತ ಲಿಂಗಾಯತ ಪಂಚಮಸಾಲಿ ಸಮಾಜ ಟ್ರಸ್ಟ್ ಹಾಗೂ ಅಖಿಲ ಭಾರತ ಲಿಂಗಾಯತ ಪಂಚಮ ಸಾಲಿ ಮಹಾಸಭಾ ಒತ್ತಾಯಿಸಿದೆ.

ಯಡಿಯೂರಪ್ಪ ಹಿಂದೆ ಆರು ತಿಂಗಳ ಸಮಯ ಕೇಳಿದ್ದರು. ಸೆ.15ಕ್ಕೆ ಆ ಗಡುವು ಮುಗಿಯಲಿದೆ. ಅವರು ವಿಶೇಷ ಸಚಿವ ಸಂಪುಟ ಸಭೆ ಕರೆದು, ಪಂಚಮಸಾಲಿ ಲಿಂಗಾಯತ ಸಮುದಾಯಕ್ಕೆ ಪ್ರವರ್ಗ 2ಎ ಹಾಗೂ ಲಿಂಗಾಯತ ಸಮುದಾಯಗಳಿಗೆ ಇತರೆ ಹಿಂದುಳಿದ ವರ್ಗಗಳ ಮೀಸಲಾತಿಗೆ ಶಿಫಾರಸು ಮಾಡಬೇಕು ಎಂದು ಟ್ರಸ್ಟ್ ಮತ್ತು ಮಹಾಸಭಾದ ರಾಜ್ಯ ಕಾರ್ಯಕಾರಿಣಿಯಲ್ಲಿ ಶನಿವಾರ ನಿರ್ಣಯ ಕೈಗೊಳ್ಳಲಾಗಿದೆ.

‘ಯಡಿಯೂರಪ್ಪನವರು ನುಡಿದಂತೆ ನಡೆಯಬೇಕು. ಬೇರೆ ಯಾರಾದರೂ ಮುಖ್ಯಮಂತ್ರಿಯಾಗಿ ಬಂದರೂ, ನಿಗದಿತ ಗಡುವಿನಲ್ಲಿ ಬೇಡಿಕೆ ಈಡೇರಿಸುವ ನಿಲುವಿಗೆ ಬದ್ಧವಾಗಿರಬೇಕು’ ಎಂದು ಕೂಡಲಸಂಗಮ ಪೀಠದ ಬಸವಜಯ ಮೃತ್ಯುಂಜಯ ಸ್ವಾಮೀಜಿ ಹೇಳಿದರು.

‘ಮೀಸಲಾತಿಗೆ ಸಂಬಂಧಿಸಿದಂತೆ ಚರ್ಚೆ ನಡೆಸಲು ಎರಡು ದಿನದಲ್ಲಿ ದೆಹಲಿ ಪ್ರವಾಸ ಕೈಗೊಳ್ಳಲಿದ್ದೇನೆ. ಅಲ್ಲಿ ಅಗತ್ಯಬಿದ್ದರೆ ರಾಷ್ಟ್ರೀಯ ನಾಯಕರನ್ನು ಭೇಟಿಯಾಗುತ್ತೇನೆ’ ಎಂದರು.

‘ಸೆ.15ರ ಒಳಗೆ ಬೇಡಿಕೆ ಈಡೇರದಿದ್ದರೆ ಅ.1ರಿಂದ ಧರಣಿ ಸತ್ಯಾಗ್ರಹ ಮತ್ತೆ ಮುಂದುವರಿಯಲಿದೆ. ‘ಪಂಚಮಸಾಲಿ ಪ್ರತಿಜ್ಞಾ ಪಂಚಾಯತ್’’ ಧ್ಯೇಯವಾಕ್ಯದಡಿ ಇಷ್ಟಲಿಂಗ ಪೂಜೆ ಮೂಲಕ ಜನಜಾಗೃತಿ ಹಮ್ಮಿಕೊಳ್ಳಲಾಗುವುದು. ಇದು ಬೀದರ್‌ನಿಂದ ಮಲೆಮಹದೇಶ್ವರ ಬೆಟ್ಟದವರೆಗೆ ನಡೆಯಲಿದೆ’ ಎಂದು ತಿಳಿಸಿದರು.

‘ಯಡಿಯೂರಪ್ಪ ಅವರು ಬದಲಾದರೆ, ಮುಖ್ಯಮಂತ್ರಿ ಸ್ಥಾನಕ್ಕೆ ಪಂಚಮಸಾಲಿ ಸಮುದಾಯದವರನ್ನು ಪರಿಗಣಿಸಬೇಕು ಎಂಬುದು ಬೆದರಿಕೆ ಅಲ್ಲ. ಸಾತ್ವಿಕ ಹಕ್ಕೊತ್ತಾಯ. ರಾಜ್ಯದಲ್ಲಿ ಬಿಜೆಪಿ ನೆಲೆಯೂರಲು ಈ ಸಮುದಾಯದ ಕೊಡುಗೆ ದೊಡ್ಡದಿದೆ’ ಎಂದು ಸ್ವಾಮೀಜಿ ಹೇಳಿದರು.

ಜಲಸಂಪನ್ಮೂಲ ಇಲಾಖೆ (ಸಣ್ಣ ನೀರಾವರಿ)
ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ ಕಛೇರಿ, ಶಿವಮೊಗ್ಗ
ಸೆಕ್ಷನ್1: ಅಲ್ಪಾವಧಿ ಟೆಂಡರ್ ಪ್ರಕಟಣೆ (ಇ–ಪ್ರೊಕ್ಯೂರ್‌ಮೆಂಟ್)– ಕೆ.ಡಬ್ಲೂ–4

ಐ.ಎಫ್.ಟಿ. ಸಂ: 04/2021–22 ದಿನಾಂಕ : 12.07.2021

ಕಾರ್ಯಪಾಲಕ ಇಂಜಿನಿಯರ್, ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ಇಲಾಖೆ ವಿಭಾಗ, ಶಿವಮೊಗ್ಗರವರ ಕಛೇರಿಯಿಂದ ಸ್ಟ್ಯಾಂಡರ್ಡ್ ಟೆಂಡರ್ ಕೆ.ಡಬ್ಲೂ –2&3ರ ಅನ್ವಯ ತರೀಕೆರೆ & ಶಿಕಾರಿಪುರ ಉಪವಿಭಾಗ ವ್ಯಾಪ್ತಿಯ 04 ಕಾಮಗಾರಿಗಳ ಟೆಂಡರ್ ಪ್ರಕಟಣೆಯನ್ನು ಹೊರಡಿಸಲಾಗಿರುತ್ತದೆ. ಇಡಲಾದ ಅಂದಾಜು ಮೊತ್ತ ಕನಿಷ್ಟ **ರೂ. 1.80** ಲಕ್ಷಗಳು ಮತ್ತು ಗರಿಷ್ಟ **ರೂ. 53.54** ಲಕ್ಷಗಳಿರುತ್ತದೆ. ಸದರಿ ಟೆಂಡರಿನಲ್ಲಿ ಭಾಗವಹಿಸಲು ಇಚ್ಚಿಸುವ ಗುತ್ತಿಗೆದಾರರು ಟೆಂಡರ್‌ನ್ನು ಒಪ್ಪಿಕೊಳ್ಳುವ ಕನಿಷ್ಠ ಅರ್ಹತಾ ಪ್ರಮಾಣಗಳನ್ನು ಹಾಗೂ ಇತರೆ ಹೆಚ್ಚಿನ ವಿವರಗಳನ್ನು ಇ–ಪ್ರೊಕ್ಯೂರ್‌ಮೆಂಟ್‌ನ ವೆಬ್‌ಸೈಟ್ ವಿಳಾಸ: **http://eproc.karnataka.gov.in**ನಲ್ಲಿ ದಿನಾಂಕ: **19.07.2021** ರಿಂದ ಲಾಗಿನ್ ಆಗುವ ಮೂಲಕ ಪಡೆದುಕೊಳ್ಳಬಹುದು. ಟೆಂಡರ್‌ಗಳನ್ನು ಸಲ್ಲಿಸುವ ಕಡೆಯ ದಿನಾಂಕ: **29.07.2021**. ಇನ್ನುಳಿದಂತೆ ವೆಬ್ ಸೈಟ್‌ನಲ್ಲಿರುವ ವಿವರಗಳೇ ಅಂತಿಮ.

ಸಹಿ/– ಕಾರ್ಯಪಾಲಕ ಇಂಜಿನಿಯರ್,
ಸಣ್ಣ ನೀರಾವರಿ ಮತ್ತು ಅಂತರ್ಜಲ ಅಭಿವೃದ್ಧಿ ವಿಭಾಗ ಕಛೇರಿ, ಶಿವಮೊಗ್ಗ
ವಾ.ಸಾ.ಸಂ.ಇ./ಶಿ/ನಂ 119–07
ಝೇಂಕಾರ್/2021–22

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ
ಮುಕ್ತ ಗಂಗೋತ್ರಿ, ಮೈಸೂರು - 570 006.
ಪ್ರಕಟಣೆ

1996 ರಲ್ಲಿ ಸ್ಥಾಪನೆಯಾದ ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯವು ಇಪ್ಪತ್ತೈದು ವರ್ಷಗಳನ್ನು ಪೂರೈಸಿ ಬೆಳ್ಳಿ ಹಬ್ಬದ ಸಂಭ್ರಮದಲ್ಲಿದ್ದು ಇದುವರೆವಿಗೂ ರಾಜ್ಯದ ಲಕ್ಷಾಂತರ ವಿದ್ಯಾರ್ಥಿಗಳಿಗೆ ಉನ್ನತ ಶಿಕ್ಷಣದ ಅವಕಾಶವನ್ನು ಕಲ್ಪಿಸಿದೆ. ಇದೀಗ ವಿಶ್ವವಿದ್ಯಾನಿಲಯದಲ್ಲಿ ಹಿರಿಯ ವಿದ್ಯಾರ್ಥಿಗಳ ಸಂಘವನ್ನು ಕರ್ನಾಟಕ ರಾಜ್ಯ ಸಂಘಗಳ ನೋಂದಣಿ ಕಾಯ್ದೆಯನ್ವಯ ಸ್ಥಾಪಿಸಲಾಗಿದ್ದು ನೋಂದಣಿ ಸಂಖ್ಯೆ: DRMY/SOR/82/2020–21 ಆಗಿದೆ. ಹಿರಿಯ ವಿದ್ಯಾರ್ಥಿ ಸಂಘದ ಮೂಲಕ ಅನೇಕ ಶೈಕ್ಷಣಿಕ ಮತ್ತು ಸಾಮಾಜಿಕ ಕಾರ್ಯಗಳನ್ನು ಹಮ್ಮಿಕೊಳ್ಳಲು ಯೋಜಿಸಿದ್ದು ವಿಶ್ವವಿದ್ಯಾನಿಲಯದ ಎಲ್ಲಾ ಹಿರಿಯ ವಿದ್ಯಾರ್ಥಿಗಳು ಸಂಘದ ಸದಸ್ಯತ್ವವನ್ನು ಕಡ್ಡಾಯವಾಗಿ ಪಡೆಯಲು ಕೋರಲಾಗಿದೆ.

ಧನಸಹಾಯಕ್ಕಾಗಿ ಮನವಿ: ವಿಶ್ವವಿದ್ಯಾನಿಲಯದ ಬೆಳ್ಳಿ ಹಬ್ಬದ ಈ ಸಂದರ್ಭದಲ್ಲಿ ಹಿರಿಯ ವಿದ್ಯಾರ್ಥಿ ಸಂಘದ ಭವನ ನಿರ್ಮಿಸಲು ಯೋಜಿಸಲಾಗಿದ್ದು, ಹಿರಿಯ ವಿದ್ಯಾರ್ಥಿಗಳು ಸಂಘದ ಸದಸ್ಯತ್ವವನ್ನು ಪಡೆಯುವುದರ ಜೊತೆಗೆ ಉದಾರವಾಗಿ ಧನಸಹಾಯವನ್ನು ನೀಡುವ ಮೂಲಕ ಈ ಯೋಜನೆ ಸಾಕಾರಗೊಳಸಲು ಸಹಕರಿಸಬೇಕೆಂದು ಕೋರಿದೆ. ಕರಾಮುವಿಯ ಹಿರಿಯ ವಿದ್ಯಾರ್ಥಿಗಳು ಸದಸ್ಯತ್ವ ಪಡೆಯಲು ಸಂಪರ್ಕಿಸಬೇಕಾದ ಜಾಲತಾಣ ವಿಳಾಸ: **https://ksoumysuru.ac.in/alumni/**

ಸಹಿ/– ಕುಲಸಚಿವರು

ಮಯೂರ
ಆಗಸ್ಟ್ 2021 ಸಂಚಿಕೆಯಲ್ಲಿ
ಸುಮಧುರ ಬರಹಗಳ ಗುಚ್ಛ



ಪ್ರಬಂಧಗಳು
ಒಂದಕ್ಕಂಜುವರಯ್ಯಾ...
ಮಲ್ಲಿಕಾರ್ಜುನ ಹುಲಗಬಾಳಿ
ನಂದಿನಿ ಎಂಬ ಗೋವು
ಮಧುರಾ ಕರ್ಣಮ್

ಅನನ್ಯ
ನನ್ನೂರೇ ನನ್ನ ರೂಪಕ ಲೋಕ
ಇಟಲಿ ನಾಟಕಕಾರ ದಾರಿಯೋ ಫೋ ಆತ್ಮಕತೆಯ ಭಾಗಗಳನ್ನು ಕನ್ನಡಕ್ಕೆ ತಂದಿದ್ದಾರೆ ಎಸ್. ಗಂಗಾಧರಯ್ಯ

ಕತೆಗಳು
- ರಾಜಶ್ರೀ ಟಿ. ರೈ ಪೆರ್ಲ
- ಅಲಕ ತೀರ್ಥಹಳ್ಳಿ
- ಪ್ರೇಮಕುಮಾರ್ ಹರಿಯಬ್ಬೆ
- ಡಾ. ಪ್ರೇಮಲತ ಬಿ.
- ಪಿ.ಬಿ. ಪ್ರಸನ್ನ
- ಕೇಶವರೆಡ್ಡಿ ಹಂದ್ರಾಳ
- ಷೀಬಾ ಇ.ಕೆ.

ನಂದಾದೀಪ



ಕವಿ ಸಿದ್ದಲಿಂಗಯ್ಯ ಕನ್ನಡ ಸಂಸ್ಕೃತಿಯ ಅಪೂರ್ವ ಆಸ್ಫೋಟ
ನಟರಾಜ್ ಹುಳಿಯಾರ್

ಅನನ್ಯ ದ್ರಾವಿಡ ದೃಶ್ಯಧ್ಯಾನ ಜೆ.ಎಂ.ಎಸ್ ಮಣಿ
ಕೆ.ವಿ. ಸುಬ್ರಹ್ಮಣ್ಯಂ

ಮಾತು-ಕತೆ



ಅಂತರಾಳದ ದನಿಗೆ ಭಾಷೆಯ ದೀವಿಗೆ
ಅಮೆರಿಕದ ಲೇಖಕಿ ಮಾಯಾ ಏಂಜೆಲೊ ಅವರ ಸಂದರ್ಶನದ ಅನುವಾದ: ಹೇಮಾ ಎಸ್.

₹15 ನಿಮ್ಮ ಪ್ರತಿಗಳಿಗೆ ಏಜೆಂಟರನ್ನು ಸಂಪರ್ಕಿಸಿ
editormy@mayura.co.in /mayuramonthly
mayuraezine.com 080-45557333/264

ವರಿಷ್ಠರ ಹೊಯ್ದಾಟ: ಬಿಎಸ್‌ವೈ ಹೊಸ ಆಟ?

ಒಂದನೇ ಪುಟದಿಂದ

ಈ ಹೇಳಿಕೆ ಹೊರಬಿದ್ದ ಆಸುಪಾಸಿನಲ್ಲೇ ಯಡಿಯೂರಪ್ಪ ನಡೆ, ಮಠಾಧೀಶರ ಅಬ್ಬರ, ಉಳಿದ ನಾಯಕರ ಮೌನ ಇವೆಲ್ಲವೂ ಪಕ್ಷದ ಆಂತರ್ಯದಲ್ಲಿ ನಡೆಯುತ್ತಿರುವ ‘ಕೂಡುವ–ಕಳೆಯುವ ಲೆಕ್ಕ’ದ ಕಡೆಗೆ ಬೊಟ್ಟು ಮಾಡುತ್ತವೆ.

ಈ ಎಲ್ಲ ತರ್ಕಗಳನ್ನೂ ಮೀರಿ, ಪರಿಣಾಮ ಏನಾದರೂ ಆಗಲಿ; ಯಡಿಯೂರಪ್ಪ ಪದಚ್ಯುತಿ ಮಾಡಿಯೇ ಬಿಡುತ್ತೇವೆ ಎಂಬ ನಿರ್ದುಷ್ಟ, ನಿಷ್ಠುರ ನಿರ್ಧಾರಕ್ಕೆ ‘1–2’ ನಾಯಕರು ಬಂದರೂ ಅಚ್ಚರಿಯಿಲ್ಲ. ಯಡಿಯೂರಪ್ಪ ಹಾಕಿಕೊಂಡಿರುವ ಗಡುವಿನೊಳಗೆ ಈ ನಿರ್ಣಯ ಹೊರ ಬಿದ್ದೀತು ಎಂಬ ಭರವಸೆ ಮುಖ್ಯಮಂತ್ರಿ ವಿರೋಧಿ ಬಣದಲ್ಲಿ ಚಿಗುರುತ್ತಲೇ ಇದೆ.

ತರ್ಕಕ್ಕೆ ಹಲವು ಮಜಲು: ‘ಯಡಿಯೂರಪ್ಪ ಪದಚ್ಯುತಿ ಕ್ಷಣಮಾತ್ರದ ಕೆಲಸ. ಅದರ ದೂರಗಾಮಿ ಪರಿಣಾಮಗಳು ಅನೇಕ. ಹೀಗಾಗಿ, ಅಳೆದು ತೂಗಿ ನಿರ್ಧಾರ ಮಾಡಬೇಕಾದ ಹಂಗಿನಲ್ಲಿ ವರಿಷ್ಠರಿದ್ದಾರೆ’ ಎನ್ನುತ್ತವೆ ಬಿಜೆಪಿ ಮೂಲಗಳು.

ವರಿಷ್ಠರು ಇಡೀ ರಾಜ್ಯದ ಎಲ್ಲ ವಿಧಾನಸಭಾ ಕ್ಷೇತ್ರಗಳಲ್ಲೂ ಖಾಸಗಿ ಸಂಸ್ಥೆಯ ಮೂಲಕ ಸಮೀಕ್ಷೆ ನಡೆಸುತ್ತಿದ್ದಾರೆ. ಬಿಜೆಪಿ ಶಾಸಕರ ಸಾಮರ್ಥ್ಯ, ಆ ಕ್ಷೇತ್ರದ ಎದುರಾಳಿಯ ಸದ್ಯದ ಸ್ಥಿತಿ, ಯಡಿಯೂರಪ್ಪ ಬದಲಾದರೆ ಏನು ಎಂಬ ಮಾಹಿತಿ ಕಲೆ ಹಾಕಲಾಗುತ್ತಿದೆ. ಅದರ ವರದಿ ಕೈಸೇರಿದ ಬಳಿಕವೇ ತೀರ್ಮಾನ ಹೊರಬೀಳುವ ಸಾಧ್ಯತೆ ಹೆಚ್ಚು ಎಂಬ ಚರ್ಚೆಯೂ ನಡೆದಿದೆ.

ಸಂಘದ ಸಿದ್ಧಾಂತ ನೆಚ್ಚಿಕೊಂಡು 40 ಕ್ಷೇತ್ರಗಳ ಗೆಲುವು ಸಲೀಸು. ಚುನಾವಣೆ ಕಾಲದಲ್ಲಿ ಮೋದಿ ಪ್ರಚಾರದ ಜತೆಗೆ ಸಿಬಿಐ, ಐಟಿ, ಇಡಿ ಬಳಕೆಯ ಕೈಚಳಕದ ಪರಿಣಾಮದಿಂದ ಇನ್ನೂ 35–40 ಸೀಟುಗಳು ಬರಬಹುದು. ಇವಲ್ಲದೇ ಯಡಿಯೂರಪ್ಪ ಪ್ರಭಾವದಿಂದಲೇ ಬರುವ ಸಂಖ್ಯೆ 35–40ರಷ್ಟಿದೆ. ಹಿಂದಿನ ಚುನಾವಣೆಗಳ ಲೆಕ್ಕಾಚಾರವೂ ಇದನ್ನೇ ಹೇಳುತ್ತದೆ. ಒಂದು ವೇಳೆ ಯಡಿಯೂರಪ್ಪ ಅವರನ್ನು ಇಳಿಸಿದರೆ ಇದು ಉಲ್ಟಾ ಆಗಬಹುದು ಎಂಬ ಚರ್ಚೆಯೂ ವರಿಷ್ಠರ ಮಟ್ಟದಲ್ಲಿ ನಡೆಯುತ್ತಿದೆ.

ಮುಖ್ಯವಾಗಿ ದಕ್ಷಿಣ ಭಾರತದ ಒಟ್ಟು 150 ಲೋಕಸಭಾ ಕ್ಷೇತ್ರಗಳಲ್ಲಿ 2019ರಲ್ಲಿ ಬಿಜೆಪಿ ಗೆದ್ದಿರುವುದು 38. ಆ ಪೈಕಿ 25 ಸ್ಥಾನ ಕರ್ನಾಟಕದ ಕೊಡುಗೆ. ಲೋಕಸಭೆ ಚುನಾವಣೆಯಲ್ಲಿ ಈ ಸಂಖ್ಯೆ ದೊಡ್ಡದೇ. ಅದರ ಮೇಲೂ ಆಗಬಹುದಾದ ಪರಿಣಾಮಗಳ ಬಗ್ಗೆ ನಾಯಕರು ಗಂಭೀರ ಆಲೋಚನೆಯಲ್ಲಿದ್ದಾರೆ.

ಬಿಜೆಪಿ ಶಾಸಕರು ಹೆಚ್ಚಿನ ಸಂಖ್ಯೆಯಲ್ಲಿ ಗೆದ್ದಿರುವುದು ಉತ್ತರ ಮತ್ತು ಮಧ್ಯ ಕರ್ನಾಟಕದ ಭಾಗದಲ್ಲಿ. ಅವರಲ್ಲಿ ಬಹುತೇಕರು ಯಡಿಯೂರಪ್ಪ ನಾಯಕತ್ವ ನೆಚ್ಚಿಕೊಂಡು ಜನತಾ ಪರಿವಾರದಿಂದ ಬಂದವರೇ ಹೆಚ್ಚು. ಅವರ ವೈಯಕ್ತಿಕ ವರ್ಚಸ್ಸಿನ ಜತೆಗೆ, ಯಡಿಯೂರಪ್ಪ ಸೆಳೆವ ಮತಗಳೇ ಗೆಲುವಿಗೆ ಕಾರಣ. ಯಡಿಯೂರಪ್ಪ ನಿರ್ಲಿಪ್ತರಾದರೆ ಅಥವಾ ತಿರುಗಿಬಿದ್ದರೆ ಇಲ್ಲಿ ಬಿಜೆಪಿ ವಿಜಯದ ಹಾದಿ ಕಷ್ಟವಾಗಬಹುದು ಎಂಬ ಅಂಶವೂ ಪರಿಗಣನೆಯಲ್ಲಿದೆ.

ಯಡಿಯೂರಪ್ಪ ಬದಲಿಗೆ ಬೇರೊಬ್ಬ ಲಿಂಗಾಯತ ನಾಯಕನನ್ನು ಮುಖ್ಯಮಂತ್ರಿ ಗಾದಿಗೇರಿಸಿದರೆ ಆ ಸಮುದಾಯದ ಮತಗಳನ್ನು ಪೂರ್ಣ ಪ್ರಮಾಣದಲ್ಲಿ ಸೆಳೆಯಬಲ್ಲರು ಎಂಬ ಭರವಸೆ ಇಲ್ಲ. ಇನ್ನೊಂದೆಡೆ ಬಿಜೆಪಿಗೆ ಉತ್ತರದ ರಾಜ್ಯಗಳಲ್ಲಿ ಇರುವಂತಹ ಬಲಿಷ್ಠ ಹಿಂದುಳಿದ ವರ್ಗಗಳ ನಾಯಕರು ಕರ್ನಾಟಕದಲ್ಲಿಲ್ಲ. ಒಕ್ಕಲಿಗರ ಮತಗಳನ್ನು ಜೆಡಿಎಸ್, ಕಾಂಗ್ರೆಸ್‌ನಿಂದ ಕಸಿದು ಬಿಜೆಪಿಯೆಡೆಗೆ ಸೆಳೆಯಬಲ್ಲ ನಾಯಕತ್ವದ ಕೊರತೆಯೂ ಬಿಜೆಪಿ ವರಿಷ್ಠರ ಹಿಂದೇಟಿಗೆ ಕಾರಣ ಎನ್ನಲಾಗುತ್ತಿದೆ.

ಈ ಹಂತದಲ್ಲಿ ನಾಯಕತ್ವ ಬದಲಾದರೆ ಮುಂಬರುವ ಜಿಲ್ಲಾ ಪಂಚಾಯಿತಿ ಹಾಗೂ ತಾಲ್ಲೂಕು ಪಂಚಾಯಿತಿ ಚುನಾವಣೆ ಹಾಗೂ 2022ರ ಜನವರಿಯೊಳಗೆ ನಡೆಯಬೇಕಾದ ವಿಧಾನಪರಿಷತ್ತಿನ 25 (ಸ್ಥಳೀಯ ಸಂಸ್ಥೆಗಳಿಂದ) ಕ್ಷೇತ್ರಗಳ ಚುನಾವಣೆಯ ಮೇಲೂ ಪರಿಣಾಮ ಬೀರಬಹುದು ಎಂಬ ಆತಂಕವೂ ಬಿಜೆಪಿ ನಾಯಕರಿಗೆ ಶುರುವಾಗಿದೆ. ತೀರ್ಮಾನದ ವಿಳಂಬಕ್ಕೆ ಇವೆಲ್ಲವೂ ಕಾರಣ ಎಂಬುದು ಆ ಪಕ್ಷದ ಶಾಸಕರ ಮಧ್ಯೆ ನಡೆಯುತ್ತಿರುವ ಚರ್ಚೆ.

ಬಿಎಸ್‌ವೈ ನಿಗೂಢ ನಡೆ?

ರಾಜೀನಾಮೆ ಕೊಡಲು ಸಿದ್ಧ ಎಂದು ಹೇಳುತ್ತಿದ್ದರೂ ಯಡಿಯೂರಪ್ಪನವರ ನಡೆ ಮಾತ್ರ ನಿಗೂಢ.

ವರಿಷ್ಠರು ಸೂಚಿಸಿದ್ದಾರೆ, ಪದಚ್ಯುತಿ ಖಚಿತ ಎಂದು ಬಿಜೆಪಿ ನಾಯಕರು ಹೇಳುತ್ತಲೇ ಇದ್ದಾರೆ. ಹಾಗಿದ್ದ ಮೇಲೆ, 25ಕ್ಕೆ ಸಂದೇಶ ಬರುತ್ತದೆ ಎಂದು ಬಹಿರಂಗವಾಗಿ ಹೇಳುವ ಅಗತ್ಯ ಏನಿತ್ತು. ಯಾವ ಸಂದೇಶವನ್ನು ರವಾನಿಸಲು ಹೀಗೆ ಹೇಳಿದರು ಎಂಬ ಚರ್ಚೆಯೂ ನಡೆಯುತ್ತಿದೆ.

‘ಎರಡು ತಿಂಗಳ ಹಿಂದೆ ರಾಜೀನಾಮೆ ನಿರ್ಧಾರ ಮಾಡಿದ್ದೆ’ ಎಂದು ಹೇಳಿದ ಯಡಿಯೂರಪ್ಪ, ಮಠಾಧೀಶರ ಗುಂಪನ್ನು ಸೇರಿಸಿ ಬಲಪ್ರದರ್ಶನ ಮಾಡುತ್ತಿರುವುದು ಏಕೆ? 25ರಂದೇ ಸಂದೇಶ ಬರುವುದಾದರೆ ಮಠಾಧೀಶರು ಸ್ವಯಂ ಪ್ರೇರಣೆಯಿಂದ ಸಮಾವೇಶ ಆಯೋಜಿಸಿದ್ದಾರೆಯೇ? ಹೀಗೆ ಮಾಡುವ ಮೂಲಕ ತಮ್ಮನ್ನು ಕೆಳಗಿಳಿಸಿದರೆ ಲಿಂಗಾಯತರು ತಿರುಗಿಬೀಳುವುದು ಖಚಿತ ಎಂಬ ಸಂದೇಶ ರವಾನಿಸುವುದು ಯಡಿಯೂರಪ್ಪ ಉದ್ದೇಶವೇ? ತಮ್ಮ ಮಗ ಬಿ.ವೈ.ವಿಜಯೇಂದ್ರಗೆ ರಾಜಕೀಯ ಭವಿಷ್ಯ ಕಲ್ಪಿಸುವುದರ ಜತೆಗೆ, ತಾವು ಹೇಳಿದವರನ್ನೇ ಮುಖ್ಯಮಂತ್ರಿ ಮಾಡಿಸಿ, ಅಧಿಕಾರದ ಅಂಕೆ ತಮ್ಮ ಕೈಯಲ್ಲೇ ಇರುವಂತೆ ನೋಡಿಕೊಳ್ಳುವ ಅಂದಾಜು ಇದ್ದಂತಿದೆ ಎಂಬ ವಿಶ್ಲೇಷಣೆ ಪಕ್ಷದೊಳಗೆ ನಡೆದಿದೆ.

ಯಡಿಯೂರಪ್ಪ ಅಷ್ಟು ಸುಲಭಕ್ಕೆಲ್ಲ ಅಧಿಕಾರ ಬಿಟ್ಟುಕೊಡುವ ಜಾಯಮಾನದವರಲ್ಲ. ಕೊನೆ ಗಳಿಗೆಯ ಆಟ ಹಾಕುವುದು ಅವರಿಗೆ ಗೊತ್ತು ಎಂದು ಹೇಳುತ್ತಾರೆ ಅವರ ಜತೆ ನಿಕಟವಾಗಿ ಗುರುತಿಸಿಕೊಂಡಿರುವ ಶಾಸಕರು.

ಈ ಆತಂಕದಿಂದಲೇ, ಇದೇ 25ರಂದು ನಡೆಯಬೇಕಿದ್ದ ಶಾಸಕರ ಭೋಜನ ಕೂಟ ರದ್ದುಪಡಿಸುವಂತೆ ವರಿಷ್ಠರು ಸೂಚಿಸಿದರು ಎಂಬ ಮಾತುಗಳೂ ಇವೆ. ಹಾಗೊಂದು ವೇಳೆ ಮೇಲಿನ ತರ್ಕವೆಲ್ಲ ಸರಿಯಾದರೆ, 29ರಂದು ನಡೆಯಬೇಕಿದ್ದ ಶಿವಮೊಗ್ಗದ ಕಾರ್ಯಕ್ರಮಗಳನ್ನು 24ಕ್ಕೇ ಮುಗಿಸಿದ್ದು ಯಾಕೆ? ಎಂಬ ಪ್ರಶ್ನೆಯೂ ಇದೆ.

‘1–2’ ನಾಯಕರು ಮಾತ್ರ ಕೊಡಬಹುದಾದ ಉತ್ತರಕ್ಕೆ ಯಾರೊಬ್ಬರೂ ಏನನ್ನೂ ಹೇಳಲಾರರು. ಅವರ ತೀರ್ಮಾನವೇ ಯಡಿಯೂರಪ್ಪನವರ ಭವಿಷ್ಯ ನಿರ್ಣಯಿಸಲಿದೆ ಎಂಬುದಷ್ಟೇ ನಿಜ.

ಬೆಂಗಳೂರು ಚಿನ್ನದ ಧಾರಣೆ

ಶುದ್ಧ ಚಿನ್ನ 10ಗ್ರಾಂಗೆ	₹49,300 ▲
ಬೆಳ್ಳಿ ಕೆ.ಜಿಗೆ	₹69,200 ▲

ಮುಂಬೈ ಧಾರಣೆ

ಶೇಂಗಾ

24-7-2021

ಜಾವಾ 70/80(ಹೊಸ)	10050-10100
ಜಾವಾ 80/90(ಹೊಸ)	9150-9200
ದಪ್ಪ ಮಧ್ಯಪ್ರದೇಶ(ಹೊಸ)	9700-9800
ದಪ್ಪ ಗುಜರಾತ್(ಹೊಸ)	9300-9400

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1490 (1460)
ಒಂದು ವಾರದ ಡೆಲಿವರಿ	1485 (1455)
ಸೋಯಾ ಕಚ್ಚಾ	1365 (1360)
ಪಾಮ್ ವಾರದ ಡೆಲಿವರಿ	1226 (1218)
ಸೂರ್ಯಕಾಂತಿ ಎಣ್ಣೆ ಕಚ್ಚಾ	1380 (1380)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10 ಗ್ರಾಂ
47,650 (47,600)
ಬೆಳ್ಳಿ ಕೆ.ಜಿ 67,200 (67,000)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

ಪರಸ್ಪರ ಅಂತರ ಕಾಯ್ದುಕೊಳ್ಳಿ

‘620 ವೈದ್ಯಕೀಯ ಉಪಕರಣಗಳ ಬೆಲೆ ಇಳಿಕೆ’

ನವದೆಹಲಿ (ಪಿಟಿಐ): ಪಲ್ಸ್ ಆಕ್ಸಿಮೀಟರ್, ರಕ್ತದೊತ್ತಡ ಪರೀಕ್ಷಕ ಸೇರಿದಂತೆ 620ಕ್ಕೂ ಹೆಚ್ಚಿನ ವೈದ್ಯಕೀಯ ಉಪಕರಣಗಳ ಬೆಲೆಯಲ್ಲಿ ಇಳಿಕೆ ಆಗಿದೆ ಎಂದು ರಾಸಾಯನಿಕ ಮತ್ತು ರಸಗೊಬ್ಬರ ಸಚಿವಾಲಯ ಶನಿವಾರ ತಿಳಿಸಿದೆ.

ಜುಲೈ 20ರಿಂದ ಅನ್ವಯ ಆಗುವಂತೆ ಆಕ್ಸಿಮೀಟರ್, ಗ್ಲೂಕೊಮೀಟರ್, ರಕ್ತದೊತ್ತಡ ಪರೀಕ್ಷಕ, ನೆಬ್ಯುಲೈಸರ್ ಮತ್ತು ಡಿಜಿಟಲ್ ಥರ್ಮೋಮೀಟರ್‌ಗಳ ತಯಾರಿಕಾ ವೆಚ್ಚ ಮತ್ತು ಮಾರಾಟದ ನಡುವಿನ ವ್ಯತ್ಯಾಸವು ಶೇ 70ಕ್ಕಿಂತ ಜಾಸ್ತಿ ಆಗುವಂತಿಲ್ಲ ಎಂದು ರಾಷ್ಟ್ರೀಯ ವೈದ್ಯಕೀಯ ಮತ್ತು ಔಷಧೀಯ ವಸ್ತುಗಳ ಬೆಲೆ ನಿಗದಿ ಆಯೋಗವು (ಎನ್‌ಪಿಪಿಎ) ನಿರ್ಬಂಧ ವಿಧಿಸಿದೆ. ಈ ಹಿನ್ನೆಲೆಯಲ್ಲಿ ಕಂಪನಿಗಳು ಬೆಲೆಯಲ್ಲಿ ಇಳಿಕೆ ಮಾಡಿವೆ.

ಜುಲೈ 23, 2021ರಂತೆ, ಒಟ್ಟಾರೆ 684 ಉಪಕರಣಗಳಿದ್ದು ಅವುಗಳಲ್ಲಿ 620 (ಶೇ 91) ಉಪಕರಣಗಳ ‘ಎಂಆರ್‌ಪಿ’ಯಲ್ಲಿ ಇಳಿಕೆ ಮಾಡಲಾಗಿದೆ. ಆಮದಾಗಿರುವ ಮತ್ತು ದೇಶದಲ್ಲಿ ತಯಾರಾಗಿರುವ ಉಪಕರಣಗಳು ಇವುಗಳಲ್ಲಿ ಸೇರಿವೆ ಎಂದು ಸಚಿವಾಲಯವು ಪ್ರಕಟಣೆಯಲ್ಲಿ ತಿಳಿಸಿದೆ.

ಆಮದಾಗಿರುವ ಪಲ್ಸ್ ಆಕ್ಸಿಮೀಟರ್, ರಕ್ತದೊತ್ತಡ ಪರೀಕ್ಷಕ, ನೆಬ್ಯುಲೈಸರ್ ಉಪಕರಣಗಳ ಬೆಲೆಯಲ್ಲಿ ಗರಿಷ್ಠ ಇಳಿಕೆ ಆಗಿದೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹525
12 ಮೊಟ್ಟೆಗೆ	₹70
ಮೈಸೂರು	
100 ಮೊಟ್ಟೆಗೆ	₹525

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1480 (1450)
ಸೋಯಾ (ರಿಫೈನ್ಡ್)	₹1400 (1400)
ಸೂರ್ಯಕಾಂತಿ (ರಿಫೈನ್ಡ್)	₹1470(1460)
ಪಾಮೋಲಿನ್	₹1228 (1220)

ಐಟಿಸಿ ಲಾಭ ಶೇ 30 ಹೆಚ್ಚಳ

ನವದೆಹಲಿ (ಪಿಟಿಐ): ಐಟಿಸಿ ಲಿಮಿಟೆಡ್‌ನ ನಿವ್ವಳ ಲಾಭವು ಹಿಂದಿನ ಹಣಕಾಸು ವರ್ಷದ ಜೂನ್ ತ್ರೈಮಾಸಿಕಕ್ಕೆ ಹೋಲಿಸಿದರೆ ಈ ಬಾರಿ ಶೇ 30ರಷ್ಟು ಹೆಚ್ಚಾಗಿದೆ.

ಹಿಂದಿನ ಹಣಕಾಸು ವರ್ಷದ ಜೂನ್ ತ್ರೈಮಾಸಿಕದಲ್ಲಿ ನಿವ್ವಳ ಲಾಭವು ₹ 2,567 ಕೋಟಿಗಳಷ್ಟಿತ್ತು. ಈ ಹಣಕಾಸು ವರ್ಷದ ಜೂನ್ ತ್ರೈಮಾಸಿಕದಲ್ಲಿ ₹ 3,343 ಕೋಟಿಗಳಿಗೆ ಏರಿಕೆ ಆಗಿದೆ ಎಂದು ಕಂಪನಿಯು ಷೇರುಪೇಟೆಗೆ ಮಾಹಿತಿ ನೀಡಿದೆ

ಕಾರ್ಯಾಚರಣಾ ವರಮಾನ ಶೇ 35.91ರಷ್ಟು ಹೆಚ್ಚಾಗಿದ್ದು ₹ 10,478 ಕೋಟಿಗಳಿಂದ ₹ 14,240 ಕೋಟಿಗಳಿಗೆ ಏರಿಕೆ ಆಗಿದೆ ಎಂದು ಕಂಪನಿಯು ಮಾಹಿತಿ ನೀಡಿದೆ.

ಕಂಪನಿಯ ಒಟ್ಟಾರೆ ವೆಚ್ಚವು ₹ 7,967 ಕೋಟಿಗಳಿಂದ ₹ 10,220 ಕೋಟಿಗಳಿಗೆ ಶೇ 28ರಷ್ಟು ಹೆಚ್ಚಾಗಿದೆ.

ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಗೋಯಲ್ ವಿಶ್ವಾಸ

ಹೆಚ್ಚಿನ ವಿದೇಶಿ ಹೂಡಿಕೆ ಆಕರ್ಷಣೆ

ನವದೆಹಲಿ (ಪಿಟಿಐ): ಪ್ರಸಕ್ತ ಹಣಕಾಸು ವರ್ಷದಲ್ಲಿಯೂ ಭಾರತವು ಹೆಚ್ಚಿನ ವಿದೇಶಿ ನೇರ ಹೂಡಿಕೆ (ಎಫ್‌ಡಿಐ) ಆಕರ್ಷಿಸುವುದನ್ನು ಮುಂದುವರಿಸಲಿದೆ ಎಂಬ ವಿಶ್ವಾಸವನ್ನು ಕೇಂದ್ರ ವಾಣಿಜ್ಯ ಮತ್ತು ಕೈಗಾರಿಕಾ ಸಚಿವ ಪೀಯೂಷ್ ಗೋಯಲ್ ವ್ಯಕ್ತಪಡಿಸಿದ್ದಾರೆ.

2020ರಲ್ಲಿ ಕೋವಿಡ್ ಸಾಂಕ್ರಾಮಿಕದ ಕಾರಣದಿಂದಾಗಿ ಜಾಗತಿಕವಾಗಿ ಎಫ್‌ಡಿಐ ಕುಸಿತ ಕಂಡಿದ್ದರೂ ಭಾರತದಲ್ಲಿ ಗರಿಷ್ಠ ಪ್ರಮಾಣದ ಹೂಡಿಕೆ ಆಗಿತ್ತು ಎಂದು ಅವರು ಹೇಳಿದ್ದಾರೆ.

2020-21ರಲ್ಲಿ ಭಾರತಕ್ಕೆ ಎಫ್‌ಡಿಐ ಒಳಹರಿವು ಶೇ 19ರಷ್ಟು ಏರಿಕೆ ಕಂಡು ₹ 4.41 ಲಕ್ಷ ಕೋಟಿಗಳಷ್ಟಾಗಿದೆ. ಈಕ್ವಿಟಿ, ಮರು ಹೂಡಿಕೆ ಮೇಲಿನ ಗಳಿಕೆ ಮತ್ತು ಬಂಡವಾಳವನ್ನೂ ಒಳಗೊಂಡು ಒಟ್ಟಾರೆ ಎಫ್‌ಡಿಐ ಹೂಡಿಕೆಯು ಶೇ 10ರಷ್ಟು ಹೆಚ್ಚಾಗಿ ₹ 6.04 ಲಕ್ಷ ಕೋಟಿಗಳಿಗೆ ತಲುಪಿದೆ. 2019-20ನೇ ಹಣಕಾಸು ವರ್ಷದಲ್ಲಿ ₹ 5.50 ಲಕ್ಷ ಕೋಟಿಗಳಷ್ಟಿತ್ತು.

ಸಿಐಐ-ಹೊರಾಸಿಸ್ ಇಂಡಿಯಾ ಆಯೋಜಿಸಿದ್ದ ವೆಬಿನಾರ್‌ನಲ್ಲಿ ಮಾತನಾಡಿದ ಅವರು, ದೇಶದ ರಫ್ತು ವಹಿವಾಟು ಸಹ ಉತ್ತಮ ಬೆಳವಣಿಗೆ ಕಾಣುತ್ತಿದ್ದು ಪ್ರಸಕ್ತ ಹಣಕಾಸು ವರ್ಷದ ಅಂತ್ಯದ ವೇಳೆಗೆ ₹ 29.60 ಲಕ್ಷ ಕೋಟಿಗಳಿಗೆ ತಲುಪಲಿದೆ ಎಂದು ಅವರು ಹೇಳಿದ್ದಾರೆ.

ಮುಖ್ಯಾಂಶಗಳು

- 2020–21ರಲ್ಲಿ ಎಫ್‌ಡಿಐ ಒಳಹರಿವು ಶೇ 19ರಷ್ಟು ಹೆಚ್ಚಳ
- ರಫ್ತು ವಹಿವಾಟಿನ ಗುರಿ ತಲುಪುವ ವಿಶ್ವಾಸ

ಜುಲೈ 1 ರಿಂದ 21ರವರೆಗಿನ ಅವಧಿಯಲ್ಲಿ ರಫ್ತು ವಹಿವಾಟು ಮೌಲ್ಯವು ₹ 1.62 ಲಕ್ಷ ಕೋಟಿಗಳಷ್ಟಾಗಿದ್ದು, ಜುಲೈ ತಿಂಗಳ ಅಂತ್ಯದ ವೇಳೆಗೆ ₹ 2.44 ಲಕ್ಷ ಕೋಟಿಗಳಷ್ಟಾಗುವ ಅಂದಾಜು ಮಾಡಲಾಗಿದೆ. ₹ 29.60 ಲಕ್ಷ ಕೋಟಿಗಳ ಗುರಿ ತಲುಪುವ ಹಾದಿಯಲ್ಲಿದ್ದೇವೆ ಎನ್ನುವುದನ್ನು ಇದು ತೋರಿಸುತ್ತಿದೆ ಎಂದು ಅವರು ತಿಳಿಸಿದ್ದಾರೆ.

ವ್ಯಾಪಾರ ಒಪ್ಪಂದಕ್ಕೆ ಸಂಬಂಧಿಸಿದಂತೆ ಭಾರತವು ಸದ್ಯ ಇಂಗ್ಲೆಂಡ್, ಆಸ್ಟ್ರೇಲಿಯಾ, ಕೆನಡಾ ಮತ್ತು ಯುಎಇ ಸೇರಿದಂತೆ 16 ದೇಶಗಳೊಂದಿಗೆ ಮಾತುಕತೆ ನಡೆಸುತ್ತಿದೆ. ಭಾರತಕ್ಕೆ ಮಾರುಕಟ್ಟೆ ಪ್ರವೇಶ ಪಡೆಯಲು ಹಾಗೂ ದೊಡ್ಡ ಪ್ರಮಾಣದಲ್ಲಿ ಸರಕು ಮತ್ತು ಸೇವೆಗಳಲ್ಲಿ ವ್ಯಾಪಾರ ಮಾಡಲು ಅನುಕೂಲ ಆಗುವಂತೆ ಕೆಲವು ದೇಶಗಳೊಂದಿಗೆ ಒಪ್ಪಂದ ಮಾಡಿಕೊಳ್ಳಾಗುತ್ತಿದೆ ಎಂದು ತಿಳಿಸಿದ್ದಾರೆ.

ಐಸಿಐಸಿಐ ಬ್ಯಾಂಕ್ ಲಾಭ ಶೇ 52ರಷ್ಟು ಹೆಚ್ಚಳ

ಮುಂಬೈ (ಪಿಟಿಐ): ಐಸಿಐಸಿಐ ಬ್ಯಾಂಕ್‌ನ ನಿವ್ವಳ ಲಾಭವು ಜೂನ್ ತ್ರೈಮಾಸಿಕದಲ್ಲಿ ಶೇ 52ರಷ್ಟು ಹೆಚ್ಚಾಗಿದ್ದು ₹ 4,747 ಕೋಟಿಗೆ ತಲುಪಿದೆ.

ಬ್ಯಾಂಕ್‌ನ ಒಟ್ಟಾರೆ ವರಮಾನವು ₹ 26,067 ಕೋಟಿಗಳಿಂದ ₹ 24,379 ಕೋಟಿಗಳಿಗೆ ಇಳಿಕೆ ಆಗಿದೆ. ಹಿಂದಿನ ಹಣಕಾಸು ವರ್ಷದ ಜೂನ್ ತ್ರೈಮಾಸಿಕ್ಕೆ ಹೋಲಿಸಿದರೆ, ಭವಿಷ್ಯದಲ್ಲಿ ಎದುರಾಗಬಹುದಾದ ಆರ್ಥಿಕ ನಷ್ಟ ಭರಿಸಲು ತೆಗೆದಿರಿಸುವ ಮೊತ್ತವು ₹ 2,852 ಕೋಟಿಗಳಿಗೆ ಇಳಿಕೆ ಕಂಡಿದೆ. ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ₹ 7,594 ಕೋಟಿ ತೆಗೆದಿರಿಸಲಾಗಿತ್ತು.

ಕೋವಿಡ್‌ನ ಎರಡನೇ ಅಲೆಯಿಂದಾಗಿ ಏಪ್ರಿಲ್ ಮತ್ತು ಮೇನಲ್ಲಿ ವಹಿವಾಟಿನ ಮೇಲೆ ಪರಿಣಾಮ ಉಂಟಾಗಿದ್ದು, ಇದರಿಂದಾಗಿ ಬಾಕಿ ಮತ್ತು ವಸೂಲಾಗದ ಸಾಲದಲ್ಲಿ (ಎನ್‌ಪಿಎ) ಏರಿಕೆ ಆಗಿದೆ ಎಂದು ಬ್ಯಾಂಕ್‌ನ ಕಾರ್ಯನಿರ್ವಾಹಕ ನಿರ್ದೇಶಕ ಸಂದೀಪ್ ಬಾತ್ರಾ ಹೇಳಿದ್ದಾರೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ ಸಕಲೇಶಪುರ	
ಕೂಳೆ	600-6500
ನಡುಗೋಲು	700-750
ರಾಶಿ	800-850
ರಾಶಿ ಉತ್ತಮ	900-950
ಜರಡಿ	1000-1050
ಹೆರಕಿದ್ದು	1200-1300
ಹಸಿರು ಸಾಧಾರಣ	800-850
ಹಸಿರು ಉತ್ತಮ	1000-1050
ಹಸಿರು ಅತಿ ಉತ್ತಮ	1300-1400

ಕಾಳು ಮೆಣಸು	385
ರಾಮನಗರ ರೇಷ್ಮೆ	
ಮಿಶ್ರತಳಿ	218-431
ದ್ವಿತಳಿ	252-495

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	13400	12500	12500	189 ಸೆಂಟ್ಸ್
ಎಸಿ	5665	4900	4900	
ಆರ್‌ಪಿ	6450	5900	6050	ಲಂಡನ್
ಆರ್‌ಸಿ	3430	3500	3500	1899 ಡಾಲರ್ಸ್

‘ಇವಿ’ ಆಮದು ಸುಂಕ ಇಳಿಕೆ ನಿರೀಕ್ಷೆ: ಮಸ್ಕ್

ನವದೆಹಲಿ (ಪಿಟಿಐ): ಭಾರತದಲ್ಲಿ ಆಮದು ಮಾಡಿಕೊಳ್ಳುವ ವಿದ್ಯುತ್ ಚಾಲಿತ ವಾಹನ ಮಾರಾಟದಲ್ಲಿ ಕಂಪನಿಯು ಯಶಸ್ವಿಯಾದಲ್ಲಿ ತಯಾರಿಕಾ ಘಟಕ ಸ್ಥಾಪಿಸಬಹುದು ಎಂದು ಟೆಸ್ಲಾ ಕಂಪನಿಯ ಟೆಸ್ಲಾ ಕಂಪನಿಯ ಮುಖ್ಯ ಕಾರ್ಯನಿರ್ವಹಣಾ ಅಧಿಕಾರಿ (ಸಿಇಒ) ಎಲಾನ್ ಮಸ್ಕ್ ಹೇಳಿದ್ದಾರೆ.

ಸದ್ಯ ಭಾರತದಲ್ಲಿ ಇರುವ ಆಮದು ಸುಂಕವು ವಿಶ್ವದಲ್ಲಿಯೇ ಅತಿ ಹೆಚ್ಚಿನ ಪ್ರಮಾಣದ್ದಾಗಿದೆ. ಹೀಗಾಗಿ ಎಲೆಕ್ಟ್ರಿಕ್ ವಾಹನಗಳಿಗೆ ತಾತ್ಕಾಲಿಕ ಸುಂಕ ಪರಿಹಾರವನ್ನು ನಿರೀಕ್ಷಿಸಲಾಗುತ್ತಿದೆ ಎಂದು ಹೇಳಿದ್ದಾರೆ. ಭಾರತದಲ್ಲಿ ಟೆಸ್ಲಾ ಕಾರುಗಳನ್ನು ಬಿಡುಗಡೆ ಮಾಡುವಂತೆ ಟ್ವಿಟರ್ ಹಿಂಬಾಲಕರು ಕೇಳಿದ್ದಕ್ಕೆ ಮಸ್ಕ್ ಅವರು ಈ ರೀತಿ ಪ್ರತಿಕ್ರಿಯೆ ನೀಡಿದ್ದಾರೆ.

ಪ್ರಸ್ತುತ, ಭಾರತವು ₹ 29.60 ಲಕ್ಷಕ್ಕೂ ಅಧಿಕ ಮೌಲ್ಯ (ಸಿಐಎಫ್--ವೆಚ್ಚ, ವಿಮೆ ಮತ್ತು ಸಾಗಣೆ ವೆಚ್ಚ) ಹೊಂದಿರುವ ಸಂಪೂರ್ಣ ಆಮದು ಮಾಡಿದ ಕಾರುಗಳ ಮೇಲೆ ಶೇ 100 ರಷ್ಟು ಆಮದು ಸುಂಕವನ್ನು ವಿಧಿಸುತ್ತಿದೆ.

ಶುದ್ಧ ಇಂಧನದ ವಾಹನಗಳನ್ನು ಡೀಸೆಲ್ ಅಥವಾ ಪೆಟ್ರೋಲ್ ವಾಹನಗಳಂತೆಯೇ ಪರಿಗಣಿಸಲಾಗುತ್ತದೆ. ಈ ಧೋರಣೆಯು ಭಾರತದ ಹವಾಮಾನ ಬದಲಾವಣೆ ಗುರಿ ಈಡೇರಿಕೆಗೆ ಪೂರಕವಾಗಿಲ್ಲ ಎಂದು ಮಸ್ಕ್ ಹೇಳಿದ್ದಾರೆ.

ಆಮದು ಸುಂಕ ತಗ್ಗಿಸುವಂತೆ ಟೆಸ್ಲಾ ಕಂಪನಿಯು ಕೇಳಿರುವುದಾಗಿ ಸರ್ಕಾರದ ಹಿರಿಯ ಅಧಿಕಾರಿಯೊಬ್ಬರು ಶುಕ್ರವಾರ ತಿಳಿಸಿದ್ದರು.

ಭಾರತದಲ್ಲಿ ತಯಾರಿಕಾ ಘಟಕ ಸ್ಥಾಪಿಸುವ ಸುವರ್ಣಾವಕಾಶವನ್ನು ಟೆಸ್ಲಾ ಕಂಪನಿ ಹೊಂದಿದೆ ಎಂದು ಕೇಂದ್ರ ಸಚಿವ ನಿತಿನ್ ಗಡ್ಕರಿ ಅವರು ಈಚೆಗಷ್ಟೇ ಹೇಳಿದ್ದರು. ಕಂಪನಿಯು ಈಗಾಗಲೇ ಭಾರತೀಯ ವಾಹನ ತಯಾರಕರಿಂದ ವಿವಿಧ ಬಿಡಿಭಾಗಗಳನ್ನು ಪಡೆಯುತ್ತಿದೆ. ಇಲ್ಲಿ ನೆಲೆಯನ್ನು ಸ್ಥಾಪಿಸುವುದು ಕಂಪನಿಗೆ ಆರ್ಥಿಕವಾಗಿ ಲಾಭದಾಯಕವಾಗಲಿದೆ ಎಂದು ಗಡ್ಕರಿ ಅಭಿಪ್ರಾಯಪಟ್ಟಿದ್ದಾರೆ.

ಗಣರಾಜ್ಯ ದಿನ ಹಿಂಸಾಚಾರ: ಕೇಂದ್ರಕ್ಕೆ ಕಡತ

ನವದೆಹಲಿ (ಪಿಟಿಐ): ಗಣರಾಜ್ಯ ದಿನದಂದು ದೆಹಲಿಯಲ್ಲಿ ನಡೆದಿದ್ದ ಹಿಂಸಾಚಾರ ಪ್ರಕರಣಗಳಿಗೆ ಸಂಬಂಧಿಸಿದಂತೆ ಸರ್ಕಾರಿ ಅಭಿಯೋಜಕರ (ಪಿ.ಪಿ) ಸಮಿತಿಯನ್ನು ರಚಿಸಬೇಕು ಎಂಬ ಬಗ್ಗೆ ದೆಹಲಿ ಸರ್ಕಾರದ ಸಚಿವ ಸಂಪುಟದ ತೀರ್ಮಾನವನ್ನು ಒಳಗೊಂಡ ಕಡತವನ್ನು ಲೆಫ್ಟಿನಂಟ್ ಗವರ್ನರ್ ಅವರ ಕಚೇರಿಯು ಕೇಂದ್ರ ಗೃಹ ಸಚಿವಾಲಯಕ್ಕೆ ರವಾನಿಸಿದೆ.

ಸಮಿತಿ ರಚಿಸಬೇಕು ಎಂಬ ಪೊಲೀಸ್ ಇಲಾಖೆ ಪ್ರಸ್ತಾವವನ್ನು ಸಚಿವ ಸಂಪುಟ ತಿರಸ್ಕರಿಸಿತ್ತು. ಈ ಬೆಳವಣಿಗೆಯು ಕೇಂದ್ರ ಸರ್ಕಾರ, ಲೆಫ್ಟಿನಂಟ್ ಗವರ್ನರ್ ಅನಿಲ್ ಬೈಜಲ್ ಜೊತೆಗೆ ದೆಹಲಿ ಸರ್ಕಾರದ ಇನ್ನೊಂದು ಸಂಘರ್ಷ ಎಂದು ಹೇಳಲಾಗಿದೆ.

ವಿಷಯಕ್ಕೆ ಸಂಬಂಧಿಸಿದಂತೆ ಲೆಫ್ಟಿನಂಟ್ ಗವರ್ನರ್ ಮತ್ತು ಎಎಪಿ ಸರ್ಕಾರದ ನಡುವೆ ಭಿನ್ನಾಭಿಪ್ರಾಯಗಳಿವೆ. ಹೀಗಾಗಿ ಈ ವಿಷಯವನ್ನು ರಾಷ್ಟ್ರಪತಿಗಳ ವಿವೇಚನೆಗೇ ಬಿಡಲಾಗಿದೆ. ಸಂಪುಟದ ತೀರ್ಮಾನಕ್ಕೆ ಸಂಬಂಧಿಸಿದ ಕಡತವನ್ನು ಗೃಹ ಸಚಿವಾಲಯಕ್ಕೆ ಮುಂದಿನ ಕ್ರಮಕ್ಕೆ ಶಿಫಾರಸು ಮಾಡಿ ಕಳುಹಿಸಲಾಗಿದೆ ಎಂದು ಉನ್ನತ ಮೂಲಗಳು ತಿಳಿಸಿವೆ

ಯುಎಚ್‌ಐ: ಜನರಿಂದ ಸಲಹೆ–ಸೂಚನೆ ಆಹ್ವಾನ

ನವದೆಹಲಿ (ಪಿಟಿಐ): ಮಹತ್ವಾಕಾಂಕ್ಷೆಯ ನ್ಯಾಷನಲ್ ಡಿಜಿಟಲ್ ಹೆಲ್ತ್ ಮಿಷನ್‌ನಡಿ ಅಭಿವೃದ್ಧಿಪಡಿಸಲಾಗುತ್ತಿರುವ ಯುಎಚ್‌ಐ (ಯುನಿಫೈಡ್ ಹೆಲ್ತ್ ಇಂಟರ್‌ಫೇಸ್) ವಿನ್ಯಾಸ ಹಾಗೂ ಸ್ವರೂಪ ಕುರಿತ ಕರಡನ್ನು ಕೇಂದ್ರ ಸರ್ಕಾರ ಪ್ರಕಟಿಸಿದ್ದು, ಸಾರ್ವಜನಿಕರಿಂದ ಪ್ರತಿಕ್ರಿಯೆ ಆಹ್ವಾನಿಸಿದೆ.

‘ಜನರು ನೀಡುವ ಸಲಹೆ–ಸೂಚನೆಗಳನ್ನು ಕ್ರೋಡೀಕರಿಸಿ, ಈ ಇಂಟರ್‌ಫೇಸ್‌ಗೆ ಅಂತಿಮ ರೂಪ ನೀಡಲಾಗುವುದು’ ಎಂದು ರಾಷ್ಟ್ರೀಯ ಆರೋಗ್ಯ ಪ್ರಾಧಿಕಾರ (ಎನ್‌ಎಚ್‌ಎ) ಶನಿವಾರ ಬಿಡುಗಡೆ ಮಾಡಿರುವ ಪ್ರಕಟಣೆಯಲ್ಲಿ ತಿಳಿಸಿದೆ.

ಸಲಹೆ–ಸೂಚನೆಗಳನ್ನು ndhm@nha.gov.in ಇ-ಮೇಲ್ ಐಡಿಗೆ ಕಳುಹಿಸಬೇಕು. ಆಗಸ್ಟ್ 23 ಕೊನೆಯ ದಿನವಾಗಿದೆ.

ಬಿನಯ್ ಪೋಷಕರಿಗೆ ಸಿಬಿಐ ಸಮನ್ಸ್

ಕೋಲ್ಕತ್ತ (ಪಿಟಿಐ): ಜಾನು ವಾರು ಕಳ್ಳಸಾಗಣೆ ಪ್ರಕರಣದಲ್ಲಿ ಉದ್ಯಮಿ ಬಿನಯ್ ಮಿಶ್ರಾ ಅವರ ಪೋಷಕರಿಗೆ ಸಿಬಿಐ ಸಮನ್ಸ್ ಜಾರಿ ಮಾಡಿದೆ. ಮಿಶ್ರಾ ಅವರು ಆಡಳಿತಾರೂಢ ತೃಣಮೂಲ ಕಾಂಗ್ರೆಸ್‌ನ ಆಪ್ತವಲಯದಲ್ಲಿ ಗುರುತಿಸಿಕೊಂಡಿದ್ದಾರೆ.

ಸಿಬಿಐನ ನಿಜಾಮ್ ಪ್ಯಾಲೆಸ್ ಕಚೇರಿಗೆ ಬುಧವಾರ ಹಾಜರಾಗಬೇಕು ಎಂದು ಪೋಷಕರಿಗೆ ಸೂಚಿಸಲಾಗಿದೆ. ಮಿಶ್ರಾ ಅವರ ವಿರುದ್ಧವೂ ವಾರಂಟ್ ಮತ್ತು ನೋಟಿಸ್ ಜಾರಿಯಾಗಿದ್ದರೂ ಅವರು ಇನ್ನೂ ಸಿಬಿಐಗೆ ಸಿಕ್ಕಿಬಿದ್ದಿಲ್ಲ.

ಪ್ರಜಾವಾಣಿ

ಕ್ಲಾಸಿಫೈಡ್ಸ್

ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Drivers

ಬೈಕ್ ರೈಡರ್ಸ್ ಬೇಕಾಗಿದ್ದಾರೆ, ಸಂಪಾದಿಸಿ ತಿಂಗಳಿಗೆ 30000 ಹಾಗೂ ಬೈಕ್ ಚಲಾಯಿಸಿ ನಿಮ್ಮ ಬಿಡುವಿನ ಸಮಯದಲ್ಲಿ ಖಚಿತಾ ಸಂಪಾದನೆ ಅಧಿಕ ಇನ್ಸೆಂಟಿವ್ ವಿಮೆ ಹಾಗೂ ಅಧಿಕ ಪ್ರಯೋಜನಗಳು ಕೂಡಲೇ ಕರೆ ಮಾಡಿ : 080-41434143

Wanted

REQUIRED
MARKETING MANAGER / OFFICER
Required for Indias well known Solar Water Heater manufacturing company for their Karnataka operations. Candidates with any graduation having experience in similar field may apply.
Mail ID: hr@sudarshansaur.com
समझदारी की सोच! Sudarshan Saur

ಬಂದ ದಿನವೇ ಕೆಲಸ (ಮಾರ್ಕೆಟಿಂಗ್‌ಅಲ್ಲ) MNC ಕಂಪನಿಗಳಿಗೆ Primary,SSLC, PUC, ITI, any Degree Pass/Fail. ಯುವಕ, ಯುವತಿಯರು ಕೆಲಸಕ್ಕೆ ಬೇಕಾಗಿದ್ದಾರೆ. ESI/ PFನೊಂದಿಗೆ ಊಟ, ವಸತಿಯಿರುತ್ತದೆ. ಸಂಬಳ+ಓಟಿ.15,000 86,000. 7259685221, 7760116548

ಅಡುಗೆ ಮತ್ತು ಮನೆ ಕೆಲಸ ಮಾಡಲು ಜನ ಬೇಕಾಗಿದ್ದಾರೆ. ಊಟ, ವಸತಿ ಉಚಿತ. ಫೋನ್ 9886170123/ 9916123456

Part-Time Jobs

ಕನ್ನಡ ಮತ್ತು ಇಂಗ್ಲೀಷ್ ಓದಲು,ಬರೆಯಲು ಬರುವ ಯುವಕ/ಯುವತಿಯರಿಗೆ,ಗೃಹಿಣಿಯರಿಗೆ ವಯಸ್ಸಾದವರು ಮನೆಯಲ್ಲೇ ಕುಳಿತು ನಾವು ಕೊಡುವ ಬುಕ್ ಬರೆಯುವ ಮೂಲಕ ತಿಂಗಳಿಗೆ 12,000-15,000 ವರೆಗೆ ಸಂಪಾದಿಸಿ.ಕೊರಿಯರ್ ಸೌಲಭ್ಯವಿದೆ.8884777502, 8884777503

General

TVS ಬ್ರಿಟಾನಿಯಾ ವಿಡಿಯೋಕಾನ್ ಗಳಿಗೆ 7th,SSLC,PUC, ಡಿಗ್ರಿಯವರು ITI ನವರುಗಳು ಕರ್ನಾಟಕದ ಎಲ್ಲಾ ಜಿಲ್ಲೆಗಳಿಗೆ ನೇರನೇಮಕಾತಿಯಿರುತ್ತದೆ. ESI, PF ನೊಂದಿಗೆ 16,600- 60,000/- ವಸತಿಯೂಟವಿರುತ್ತದೆ. ಸಂಪರ್ಕಿಸಿ: 7760014526, 9739544856

ತಕ್ಷಣ ಬೇಕಾಗಿದ್ದಾರೆ MNCಕಂಪನಿಗಳಿಗೆ SSLC,PUC,ITI Diplomaದವರು ಕೆಲಸಕ್ಕೆ ಬೇಕಾಗಿದ್ದಾರೆ ಉಚಿತ ವಸತಿಯೂಟದೊಂದಿಗೆ ಸಂಬಳ: 15,800 to 45000/-.8904170684, 8884435270

ಕರ್ನಾಟಕದಾದ್ಯಂತ ಪುನರಾರಂಭವಾಗಿರುವ ಪ್ರಸಿದ್ಧ ಕಂಪನಿ ಹಾಗೂ ಆಫೀಸ್ ಕೆಲಸಗಳಿಗೆ ಯುವಕಯುವತಿಯರು ಬೇಕಾಗಿದ್ದಾರೆ ವಸತಿಯೂಟದೊಂದಿಗೆ Salary+OT 16,800-45000/-. 9980295449, 9902839010

ಪುರುಷರು/ಮಹಿಳೆಯರು ಸಾಮಾನ್ಯ ಕಂಪ್ಯೂಟರ್ ಜ್ಞಾನವುಳ್ಳವರಿಗೆ ಆನ್ ಲೈನ್ ನಲ್ಲಿ ಕೆಲಸಮಾಡಿ ವಾರವಾರ ಆದಾಯ ಪಡೆಯಲು ಕರೆಮಾಡಿ. 8762024160

Marketing & Sales

WANTED EXPERIENCED Sales Managers for Cement, Contact: 9916449766/ 9986696546, acecemex@gmail.com

ಭವಿಷ್ಯ

Astrology

★॥ಶ್ರೀಅಂಬಾಭವಾನಿದೇವಿ॥★ ಜ್ಯೋತಿಷ್ಯರು ಪ್ರೀತಿಪ್ರೇಮ ವಶೀಕರಣ, ದಾಂಪತ್ಯ, ಸಾಲದಬಾದೆ ಇನ್ಯಾವುದೇ ಕಠಿಣ_ಗುಪ್ತ ಸಮಸ್ಯೆಗಳಿಗೆ 5_ನಿಮಿಷಗಳಲ್ಲಿ ಪರಿಹಾರ. ವಶೀಕರಣ_ಸ್ಪೆಷಲಿಸ್ಟ್. 7204848318

ಕೆಲಸದ ನಂತರ ಕಾಣಿಕೆ. ಸ್ತ್ರೀ ಪುರುಷ ವಶೀಕರಣ. ನಿಮ್ಮ ಯಾವುದೇ ಗುಪ್ತಸಮಸ್ಯೆಗಳಿಗೆ, ಇಷ್ಟಪಟ್ಟವರು. ನಿಮ್ಮಂತೆ ಆಗಲು, 2 ದಿನದಲ್ಲಿ ಪರಿಹಾರ: 9591580089.

ಸ್ತ್ರೀವಶೀಕರಣ, ಪುರುಷವಶೀಕರಣ ಪ್ರೀತಿಪ್ರೇಮ ಇಷ್ಟಪಟ್ಟವರು ನಿಮ್ಮಂತಾಗಲು 11ಗಂಟೆಗಳಲ್ಲಿ ಸ್ತ್ರೀಯರಿಗೆ ಕಡಿಮೆ ಖರ್ಚಿನಲ್ಲಿ ಪರಿಹಾರ. 9845544363

ಒಂದೇ ಕರೆಯಲ್ಲಿ ಶಾಶ್ವತ ಪರಿಹಾರ ಸ್ತ್ರೀಪುರುಷ ವಶೀಕರಣ ಸ್ಪೆಷಲಿಸ್ಟ್ 100% ಗ್ಯಾರಂಟಿ ಪರಿಹಾರ ಪಂಡಿತ್.ಕೃಷ್ಣಪ್ರಸಾದ್.ಉಚಿತ ಭವಿಷ್ಯ ಖಚಿತ ಪರಿಹಾರ ಶ್ರೀಕ್ಷೇತ್ರ_ಧರ್ಮಸ್ಥಳ. 7022443071

ನಿಮ್ಮ ನಿಗೂಢ ಹಾಗೂ ಕಠಿಣ ಸಮಸ್ಯೆಗಳಿಗೆ ಕೇವಲ 1 ಗಂಟೆಯಲ್ಲಿ ಪರಿಹಾರ ಇದು ಚಮತ್ಕಾರ ಅಲ್ಲ. ಸಿದ್ಧಿಸಾಧಕರ ಸಾಧನೆ: 9148244231

ಸಾರ್ವಜನಿಕ ಪ್ರಕಟಣೆ

PUBLIC NOTICE

Under the authority and instructions given to me by my client, I N.S. Bhat Advocate, Hubli, do hereby issue this public notice as under: That my client intends to purchase of Commercial Land with building bearing CTS No. 17/1B measuring 1560 Sq.Yards., situated at CTS Ward No. III, of M. Timmasagar Village of Hubli Taluk from its owner. Therefore if any persons have any interest, right or title over the said land & if any case is pending & if any injunction order is passed by any court should file their objections to the under signed within 7 days from the date of publishing of this notice with necessary documents. In case if no objection is received within the said date my client will proceed to purchase the property and if any objections are received after 7 days will not be binding upon my client.

N. S. Bhat, Advocate, GF-19, Tirumala Trade Centre, Neeligin Road, HUBLI-580 029
Mobile: 94485-60516
Place: Hubli Date: 24.07.2021

PUBLIC NOTICE

I herebycal upon the General Public, I hereby notified that my clients has purchased sites Carved in 10 Guntas of land in Survey no. 64/7 (Old sy no 64/4) of Kogilu Village, Yelhanka Hobali, Bangalore North Thaluk from Smt Jayashree D/o Late Jagdeesh Residing at Thindlu Village, Vidyaranyapura Post, Bangalore 97. After purchasing the sites from her my clients got BBMP Katha in their names and constructed houses and they are in peaceful possession, after selling the Survey no 64/7 has lost the agriculture status, since RTC stands in Smt Jayashree D/o, Late Jagadeesh name taking this advantage once again she is trying to sell the entire 10 guntas to porspective buyers there for I hereby cal upon public to not deal with Smt Jayashree D/o Late Jagadeesh in respect of the said property. In the event of anybody doing so, the same will not be binding on my clients.

B.N. NARAYANA SWAMY, B.A., L.L.B (Advocate)
Office at 38/2, 15th cross, 2nd block, Govindraja garden, RT Nagar, Bangalore-560032.

ಶಿಕ್ಷಣ

Coaching Classes

OFF/ ONLINE COACHING
IIT JAM/JEST - 2022/2023
PHYSICS, CHEMISTRY & MATHS by Ex-Loyola Professors
OUR IIT TOPPERS - 2020
Rohan Jain -IIT Delhi (AIR - 89)
Abinove - IIT Guwahati (AIR - 212)
Niveditha - IIT Hyderabad (AIR -256)
Harshavardhan - IIT Gandhi Nagar (AIR - 303)
Samarth Mishra - IIT (AIR - 468)
and Many NITians
JRS SANTIAGO ACADEMY, Chennai-94
95660 92362/ 97910 93763/ 97892 80002
www.jrssantiagoacademy.com

ರಿಯಲ್ ಎಸ್ಟೇಟ್ ಸೆಲ್ಲಿಂಗ್

Mysore

GOVIANU LUXURIA, High-end Luxury Flat at Mysore, Zoo Road, near Mysore Mall, Rera-003588, www.govianu.com. 8088330330

EDUCATION CORNER

ಶ್ರೀ ಕೃಷ್ಣಸೂರಿ ವೇದಗಮ ಪಾಠಶಾಲಾ

ಮೇಲುಕೋಟೆ 571431 (ಮಂಡ್ಯ ಜಿಲ್ಲೆ)

ಯಜುರ್ವೇದ ತರಗತಿಗಳ ನೂತನ ಬ್ಯಾಚ್ ಪ್ರಾರಂಭ

ಶ್ರೀ ಶ್ರೀ ಕೃಷ್ಣಪ್ರೇಮಿ ಸ್ವಾಮಿಗಳ ಆಶೀರ್ವಾದಗಳೊಂದಿಗೆ, ಅಖಿಲ ಭಾರತ ಸಾಧು ಸಂಗಮ ಇವರಿಂದ ಮೇಲ್ಕಾಣಿಸಿದ ಪಾಠಶಾಲೆಯನ್ನು ಗುರುಕುಲ ಮಾದರಿಯಲ್ಲಿ ನಡೆಸಲಾಗುತ್ತಿದೆ. ಕೃಷ್ಣ ಯಜುರ್ವೇದ ತರಗತಿನ ನೂತನ ಬ್ಯಾಚ್ 2021ರ ಆಗಸ್ಟ್ ತಿಂಗಳಲ್ಲಿ ಆರಂಭಿಸಲಾಗುತ್ತಿದೆ. ಉಪನಯನ ಸಂಸ್ಕಾರ ಪೂರ್ಣಗೊಂಡಿರುವ, 8–12 ವರ್ಷ ವಯೋಮಾನದ ಬ್ರಾಹ್ಮಣ ಮಕ್ಕಳಿಗೆ ಪ್ರವೇಶಾತಿ ನೀಡಲಾಗುತ್ತದೆ. ಪ್ರವೇಶ ಪಡೆದ ಮಕ್ಕಳಿಗೆ ಊಟ, ವಸತಿ ಮತ್ತು ವೈದ್ಯಕೀಯ ಸೌಲಭ್ಯಗಳನ್ನು ಒದಗಿಸಲಾಗುತ್ತದೆ. ಮಕ್ಕಳಿಗೆ ವೇದದ ಜೊತೆಗೆ ಸಂಸ್ಕೃತ ಮತ್ತು ಇಂಗ್ಲಿಷ್ ಕೂಡ ಬೋಧಿಸಲಾಗುತ್ತದೆ. ಆಸಕ್ತಿಯುಳ್ಳ ವಿದ್ಯಾರ್ಥಿಗಳಿಗೆ, ಎನ್‌ಐಒಎಸ್ ಇವರು ಕೈಗೊಳ್ಳುವ 10ನೇ ತರಗತಿ ಪರೀಕ್ಷೆ ಎದುರಿಸಲು ತರಬೇತಿ ಕೂಡ ನೀಡಲಾಗುತ್ತದೆ.

ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ: ಕೆ. ವೆಂಕಟರಮಣಿ
ಮೊಬೈಲ್: 8105322119, 8431595511

ಯುವ ಶಿಕ್ಷಣ ಉದ್ಯಮಿಯಾಗಬೇಕೆ?

100% ವಿದ್ಯಾರ್ಥಿ ವೇತನದೊಂದಿಗೆ*

ಒಂದು ವರ್ಷದ ಕಲಿಕಾ ಕಾರ್ಯಕ್ರಮ
ಆನ್ ಲೈನ್ ತರಗತಿಗಳು + ವೈಯಕ್ತಿಕ ತರಗತಿಗಳು ಬೆಂಗಳೂರಿನ ಹತ್ತಿರದಲ್ಲಿ
ಹೆಡ್‌ಸ್ಟ್ರೀಮ್ಸ್ ನ ಸಾರಥ್ಯದಲ್ಲಿ: ಹೆಡ್‌ಸ್ಟ್ರೀಮ್ಸ್ ಲಾಭ ರಹಿತ ಸಂಸ್ಥೆಯಾಗಿದ್ದು 2008 ರಿಂದ ಯುವಕರ ಜೊತೆ ಕೆಲಸ ಮಾಡುತ್ತಿದೆ
ವೆಬ್ ಸೈಟ್ ವಿಳಾಸ: https://headstreams.org/holacourse

ಅರ್ಹತೆಗಳು
- 18 ರಿಂದ 30 ವರ್ಷಗಳಾಗಿರಬೇಕು
- ಹೆಚ್ಚಿನ ವೇಗದ ಇಂಟರ್ನೆಟ್ ಹೊಂದಿರಬೇಕು
- ಕನ್ನಡ ಓದಲು ಮತ್ತು ಮಾತನಾಡಲು ಬರಬೇಕು ಹಾಗೂ ಸಾಮಾನ್ಯ ಇಂಗ್ಲೀಷ್ ಜ್ಞಾನ ಹೊಂದಿರಬೇಕು

ಅರ್ಜಿ ಸಲ್ಲಿಸಲು ಕೊನೆಯ ದಿನಾಂಕ:- ಜುಲೈ 28, 2021
ಭೇಟಿ ನೀಡಿ http://bit.ly/holacourse
*ಆಯ್ಕೆಯಾದ ಅಭ್ಯರ್ಥಿಗಳಿಗೆ ಮಾತ್ರ
ಹೆಚ್ಚಿನ ಮಾಹಿತಿಗಾಗಿ +91-8095962200 ಗೆ SMS / WhatsApp ಮಾಡಿ

HEALTH SPECIAL

ವಿಜಯ ಇಂಟರ್‌ನ್ಯಾಷನಲ್ ಹೆಲ್ತ್‌ಕೇರ್

ಯಾವುದೇ ಅಡ್ಡಪರಿಣಾಮವಿಲ್ಲದೆ ಹಲವು ಸಮಸ್ಯೆಗಳ ಚಿಕಿತ್ಸೆಗೆ ಸಂಪರ್ಕಿಸಿ

- ಲೈಂಗಿಕ ರೋಗಗಳು
- ಉದ್ರೇಕದ ಸಮಸ್ಯೆ
- ಲೈಂಗಿಕ ನಿರಾಸಕ್ತಿ
- ನಿದ್ರಾ ಸ್ಖಲನ
- ಶೀಘ್ರ ಸ್ಖಲನ
- ಲಿಂಗ ಚಿಕ್ಕದಾಗುವುದು
- ನರ ದೌರ್ಬಲ್ಯ
- ಅವಧಿಗೆ ಮೊದಲೇ ಸ್ಖಲನ
- ಆತಂಕ, ದೌರ್ಬಲ್ಯ
- ಕಡಿಮೆ ವೀರ್ಯಾಣು
- ಮುಷ್ಠಿ ಮೈಥುನದ ಅಡ್ಡಪರಿಣಾಮ

100% NO SIDE EFFECTS
ಪರೀಕ್ಷಿಸಲು ಭಯಬೇಡ, ನಮ್ಮ ಹೆಲ್ತ್‌ಕೇರ್‌ನಲ್ಲಿ ಹಿರಿಯ ತಜ್ಞರಿರುತ್ತಾರೆ
1ನೇ ಮಹಡಿ, ಮಲ್ಲೇಶ್ವರಂ ಆರ್ಕೇಡ್, 7ನೇ ಕ್ರಾಸ್ ಮಾರ್ಗೋಸಾ ರಸ್ತೆ Above Axis Bank, ಮಲ್ಲೇಶ್ವರಂ, ಬೆಂಗಳೂರು-03 97422 72259

Industrial & Factory

Outskirts

CONVERTED LAND for sale. NH 75. Nelamangala. 26275 Sq ft. Contact 9591932764 or 9972148777

ಬಿಲ್ಡರ್ ಎಸೆನ್ಷಿಯಲ್

Water Proofing Materials

ಲೀಕೇಜ್.. ಲೀಕೇಜ್.. ನಿಮ್ಮಮನೆ, ಕಛೇರಿಯ ಮೇಲ್ಛಾವಣಿ, ಸಂಪ್‌ಟ್ಯಾಂಕ್, ಬಾತ್‌ರೂಂ, ಗೋಡೆಯ ಬಿರುಕುಗಳನ್ನು ನೂತನ ತಂತ್ರಜ್ಞಾನದಿಂದ ಸ್ಥಗಿತಗೊಳಿಸಲಾಗುವುದು. ಸಂಪರ್ಕಿಸಿ: 9880916988

ಇತರೆ

For Sale

ಮಾರಾಟಕ್ಕಿದೆ ನಮ್ಮಲ್ಲಿ ಬೇವಿನ ಹಿಂಡಿ ಹೊಟ್ಟು ಮತ್ತು ಉಳಿಕೆ ದೊರೆಯುತ್ತದೆ. ಕೊಳ್ಳಲು ಇಚ್ಛೆಯುಳ್ಳವರು ತಮ್ಮ ನಿಗದಿಯಾದ ಬೆಲೆಯನ್ನು ಈ ಕೆಳಗಿನ ವಿಳಾಸಕ್ಕೆ 7 ದಿನಗಳ ಒಳಗೆ ಬರೆಯಿರಿ. Box No 29845 C/o Prajavani, Bangalore-1

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.

ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

EDUCATION SPECIAL

We are coming out with special offer for Admission Notice, Education Success Congratulation Ads

DH Classifieds More value, more impact
For details contact: Jerry: 9731810277 Vishal: 9845114560 Tanveer: 9886213331
E-mail: dhclassifieds@deccanherald.co.in

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com or Scan QR code to access booking form

26ನೇ ವರ್ಷದ ಪುಣ್ಯಸ್ಮರಣೆ

ಭೋಜರೆಡ್ಡಿಯವರ
ಶ್ರೀ. ವೆಂಕಟಸ್ವಾಮಿ ರೆಡ್ಡಿ H/o ಶ್ರೀಮತಿ. ದೊಡ್ಡತಾಯಮ್ಮ
ನಿಧನ : 25-7-1995 (ದೊಡ್ಡಬಾಣಸವಾಡಿ)

ನಿಮ್ಮ ಆದರ್ಶ ಜೀವನ ನಮಗೆ ಎಂದೆಂದೂ ಮಾರ್ಗದರ್ಶಕ, ನಿಮ್ಮ ನೆನಪು ನಮಗೆ ಸದಾ ಹಸಿರು ಮತ್ತು ಸ್ಪೂರ್ತಿದಾಯಕ.

ಸದಾ ಸ್ಮರಿಸುವ:
ಮಗ: ಬಿ.ವಿ.ಶ್ರೀನಿವಾಸರೆಡ್ಡಿ (ಮರಿ)
ಸೊಸೆ: ಶೈಲಜ,
ಮೊಮ್ಮಕ್ಕಳು: ವಿಜಯ್, ವಿನಯ್, ಶ್ವೇತ & ರೂಪಾಶ್ರೀ
ಮರಿಮಗಳು: ತ್ರಿಶಿಕಾ ರೆಡ್ಡಿ

ಚಿರಸ್ಮರಣೆ

ಶ್ರೀಮತಿ ಗೌರಾಂಬ
ನಿಧನ: 25–07–2020
ಸದಾ ಸ್ಮರಿಸುವ ಕುಟುಂಬ ವರ್ಗ
ಪತಿ: ಕೇಶವಮೂರ್ತಿ, ನಿವೃತ್ತ ಅಬಕಾರಿ ಅಧೀಕ್ಷಕರು
ಮಕ್ಕಳು: ಪುನೀತ, ನಮಿತ, ಗುರುಪ್ರಸಾದ್.
ಅಳಿಯಂದಿರು: ಜಿ.ಎಸ್. ರಘು, ಸತೀಶ್. ಎನ್.
ಸೊಸೆ: ಸವಿತ, ಮೊಮ್ಮಕ್ಕಳು ಹಾಗೂ ಬಂಧು–ಮಿತ್ರರು

ಚಿರಸ್ಮರಣೆ



ಶ್ರೀ.ಕೆ.ಆರ್.ನಾರಾಯಣರೆಡ್ಡಿ ಶ್ರೀಮತಿ॥ ಕಾಂತಮ್ಮ
ಮಾಜಿ ವಿ.ಪಿ. ಛೇರ್ಮನ್ ಮತ್ತು ಪ್ರಥಮ ಸಂಚಾಲಕರು
ಶ್ರೀ ಸೋಮೇಶ್ವರ ಸ್ವಾಮಿ ದೇವಸ್ಥಾನ ಹಳೇಮಡಿವಾಳ-ಬೆಂಗಳೂರು-68
‘ನಿಮ್ಮ ನೆನಪು ಸದಾ ಹಚ್ಚ ಹಸಿರು ನಿಮ್ಮ ಆದರ್ಶವೇ ನಮಗೆ ದಾರಿದೀಪ ನಿಮ್ಮ ಮಾರ್ಗದರ್ಶನವೆ ನಮಗೆ ಚೇತನ’
ಸದಾ ಸ್ಮರಿಸುವ :
ಮಕ್ಕಳು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು, ಮರಿಮೊಮ್ಮಕ್ಕಳು ಮತ್ತು ಕುಟುಂಬವರ್ಗದವರು.

LOOKING FOR JOB OPPORTUNITY
Refer Classifieds on Wednesday

ಪ್ರಜಾವಾಣಿ ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು

ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ
ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ದಯವಿಟ್ಟು ಸಂಪರ್ಕಿಸಿ:
Santhosh Kumar : 9880856233
Jerry : 9731810277 | Ravichandra : 9901641752
Vishal : 9845114560 | Anitha R: 9900428036
ನಿಮ್ಮ ಮಾರ್ಗದರ್ಶನಕ್ಕಾಗಿ ಕೆಲವು ಅನುಕೂಲಕರ ಫಾರ್ಮಾಟ್ಸ್ ಹಾಗೂ ಟೆಕ್ಸ್ಟ್ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್‌ನ್ನು ಕೂಡ ನಾವು ಆರಂಭಿಸಿದ್ದೇವೆ. ದಯವಿಟ್ಟು ಲಾಗಾನ್ ಮಾಡಿರಿ
https://homages.deccanherald.com
ಅಥವಾ QR code ಸ್ಕ್ಯಾನ್ ಮಾಡಿ
ನಮ್ಮ ಆನ್‌ಲೈನ್ ಬುಕ್ಕಿಂಗ್ ಫಾರಂ ಪಡೆಯಿರಿ.

ರಾಜಸ್ಥಾನ: ಸಂಪುಟ ವಿಸ್ತರಣೆ ಸಾಧ್ಯತೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಪಂಜಾಬ್‌ನ ರಾಜಕೀಯ ಬದಲಾವಣೆಯ ಬಳಿಕ, ಕಾಂಗ್ರೆಸ್ ತನ್ನ ಗಮನವನ್ನು ರಾಜಸ್ಥಾನದತ್ತ ಹೊರಳಿಸಿದೆ. ರಾಜಸ್ಥಾನದಲ್ಲಿ ಮುಖ್ಯಮಂತ್ರಿ ಅಶೋಕ್ ಗೆಹ್ಲೋಟ್ ಮತ್ತು ಪಿಸಿಸಿ ಮಾಜಿ ಮುಖ್ಯಸ್ಥ ಸಚಿನ್ ಪೈಲಟ್ ನಡುವಿನ ಮೂರು ವರ್ಷಗಳ ಸಂಘರ್ಷಕ್ಕೆ ಅಂತ್ಯ ಹಾಡುವ ನಿಟ್ಟಿನಲ್ಲಿ ಯತ್ನಗಳು ನಡೆಯುತ್ತಿವೆ.

ಮುಂದಿನ ವಾರ ರಾಜ್ಯದಲ್ಲಿ ಸಂಪುಟ ವಿಸ್ತರಣೆ ಮತ್ತು ಕೆಲವು ನೇಮಕಾತಿ ಸಾಧ್ಯತೆ ಇದೆ ಎಂದು ಪಕ್ಷದ ಮೂಲಗಳು ತಿಳಿಸಿವೆ. ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ.ವೇಣುಗೋಪಾಲ್ ಮತ್ತು ರಾಜಸ್ಥಾನದ ಉಸ್ತುವಾರಿ ಪ್ರಧಾನ ಕಾರ್ಯದರ್ಶಿ ಅಜಯ್ ಮಾಕನ್ ಅವರು ಜೈಪುರಕ್ಕೆ ಭೇಟಿ ನೀಡಲಿದ್ದು, ಹಿರಿಯ ನಾಯಕರ ಜತೆ ಮಾತುಕತೆ ನಡೆಸಲಿದ್ದಾರೆ. ಮುಖ್ಯಮಂತ್ರಿ ನಿವಾಸದಲ್ಲಿ ಸಭೆ ನಡೆಯುವ ನಿರೀಕ್ಷೆಯಿದೆ.

ಗೆಹ್ಲೋಟ್ ತಂಡದ ವಿರುದ್ಧ ಪೈಲಟ್ ಬಳಗವು ಫೋನ್ ಕದ್ದಾಲಿಕೆ ಆರೋಪ ಮಾಡಿದ ಬಳಿಕ, ಪೈಲಟ್ ಅವರನ್ನು ಉಪಮುಖ್ಯಮಂತ್ರಿ ಮತ್ತು ರಾಜಸ್ಥಾನ ಪಿಸಿಸಿ ಮುಖ್ಯಸ್ಥರ ಹುದ್ದೆಗಳಿಂದ ತೆಗೆದುಹಾಕಲಾಗಿತ್ತು.

18 ಶಾಸಕರೊಂದಿಗೆ ಬಂಡಾಯವೆದ್ದಿದ್ದ ಅವರನ್ನು ಆ ಬಳಿಕ ಸಮಾಧಾನ ಮಾಡಲಾಗಿತ್ತು.

ಅಸ್ಸಾಂ ಘಟಕಕ್ಕೆ ಬೋರಾ ಅಧ್ಯಕ್ಷ: ರಾಜ್ಯಸಭಾ ಸದಸ್ಯ ರಿಪುನ್ ಬೋರಾ ಅವರಿಂದ ತೆರವಾಗಿದ್ದ ಅಸ್ಸಾಂ ರಾಜ್ಯ ಘಟಕದ ಅಧ್ಯಕ್ಷ ಸ್ಥಾನಕ್ಕೆ ಭೂಪೆನ್ ಬೋರಾ ಅವರನ್ನು ಕಾಂಗ್ರೆಸ್ ಪಕ್ಷವು ಶನಿವಾರ ನೇಮಕ ಮಾಡಿದೆ.

ಲೋಕನ್ ಸಿಂಗ್ ಅವರನ್ನು ಮಣಿಪುರ ಪ್ರದೇಶ ಕಾಂಗ್ರೆಸ್ ಸಮಿತಿಯ ಹಂಗಾಮಿ ಅಧ್ಯಕ್ಷರನ್ನಾಗಿ ನೇಮಿಸಿ ಆದೇಶ ಹೊರಡಿಸಲಾಗಿದೆ.

ವರದಿ ಪರಿಶೀಲಿಸುತ್ತಿರುವ ಭಾರತೀಯ ಔಷಧ ನಿಯಂತ್ರಕರು

ಸದ್ಯದಲ್ಲೇ ಮಕ್ಕಳಿಗೆ ಕೋವಿಡ್ ಲಸಿಕೆ ಲಭ್ಯ

ಪ್ರಜಾವಾಣಿ ವಾರ್ತೆ

ನವದೆಹಲಿ: ಮಕ್ಕಳಿಗಾಗಿ, ದೇಶೀಯವಾಗಿ ಅಭಿವೃದ್ಧಿಪಡಿಸಲಾಗಿರುವ ಕೋವಿಡ್–19ನ ಎರಡು ಲಸಿಕೆಗಳು ಶೀಘ್ರದಲ್ಲೇ ಲಸಿಕಾ ಅಭಿಯಾನಕ್ಕೆ ಲಭ್ಯವಾಗಲಿವೆ.

12ರಿಂದ 18 ವರ್ಷ ವಯೋಮಾನದ 13ರಿಂದ 14 ಕೋಟಿ ಹದಿವಯಸ್ಸಿನವರಿಗೆ ಲಸಿಕೆ ನೀಡಬೇಕಿದೆ. ದೇಶದಾದ್ಯಂತ ವರದಿಯಾಗಿರುವ ಒಟ್ಟು ಮೂರು ಕೋಟಿ ಕೋವಿಡ್–19 ಪ್ರಕರಣಗಳಲ್ಲಿ, 20 ವರ್ಷಕ್ಕಿಂತ ಕಡಿಮೆ ವಯೋಮಾನದವರು ಶೇ.11ರಷ್ಟಿದ್ದಾರೆ.

12ರಿಂದ 18 ವರ್ಷ ವಯೋಮಾನದವರಿಗೆ ನೀಡಬೇಕಿರುವ ಲಸಿಕೆಗಳ ಪ್ರಾಯೋಗಿಕ ಪರೀಕ್ಷೆ ನಡೆಸಿರುವ ಔಷಧ ಸಂಸ್ಥೆ ಝೈಡಸ್ ಕಾಡಿಲ ನೀಡಿರುವ ವರದಿಯನ್ನು ಭಾರತೀಯ ಔಷಧ ನಿಯಂತ್ರಕರು ಪರಿಶೀಲನೆ ನಡೆಸುತ್ತಿದ್ದಾರೆ. ಭಾರತ್ ಬಯೋಟೆಕ್ ಸಂಸ್ಥೆ ಕೂಡಾ 2ರಿಂದ 8 ವಯೋಮಾನದವರಿಗೆ ನೀಡಬೇಕಿರುವ ಲಸಿಕೆಯ ಪ್ರಯೋಗ ನಡೆಸುತ್ತಿದೆ.

‘ದೇಶದಾದ್ಯಂತ ಕೊರೊನಾ ಲಸಿಕೆಗಳ ಅನುಮೋದನೆ ಮತ್ತು ಲಭ್ಯತೆಯು ಈ ಪ್ರಾಯೋಗಿಕ ಪರೀಕ್ಷೆಗಳ ದತ್ತಾಂಶಗಳನ್ನು ಅವಲಂಬಿಸಿದೆ’ ಎಂದು ಕೇಂದ್ರ ಆರೋಗ್ಯ ಸಹಾಯಕ ಸಚಿವ ಭಾರತಿ ಪವಾರ್ ಲೋಕಸಭೆಗೆ ತಿಳಿಸಿದ್ದಾರೆ.

ಯುರೋಪ್ ಔಷಧ ನಿಯಂತ್ರಣ ಮೊಡೆರ್ನಾ ಲಸಿಕೆಯನ್ನು 12–17ರ ವಯೋಮಾನದ ಮಕ್ಕಳಿಗೆ ನೀಡಲು ಅನುಮೋದನೆ ನೀಡಿದೆ. ಫೈಜರ್–ಬಯೋಎನ್‌ಟೆಕ್ ಲಸಿಕೆಯನ್ನು 12–15ರ ವಯೋಮಾನದ ಮಕ್ಕಳಿಗೆ ನೀಡಲು ಅಮೆರಿಕ ಅನುಮೋದನೆ ನೀಡಿದೆ. ಲಸಿಕೆಗಳ ಪೂರೈಕೆಗೆ ಸಂಬಂಧಿಸಿದಂತೆ ಭಾರತವು ಎರಡೂ ಸಂಸ್ಥೆಗಳ ಜೊತೆ ಮಾತುಕತೆ ನಡೆಸುತ್ತಿದೆ. ಆದರೆ ಈ ಸಂಸ್ಥೆಗಳು ಹಲವು ದೇಶಗಳ ಲಸಿಕೆ ಬೇಡಿಕೆ ಪೂರೈಸುತ್ತಿರುವ ಕಾರಣ ಪ್ರಕ್ರಿಯೆ ವಿಳಂಬವಾಗುತ್ತಿದೆ.

ಕೋವಿಡ್: 7 ದಿನಗಳಲ್ಲಿ ಗರಿಷ್ಠ ಪ್ರಕರಣ

ಬೆಂಗಳೂರು: ರಾಜ್ಯದಲ್ಲಿ 1,857 ಮಂದಿ ಕೋವಿಡ್ ಪೀಡಿತರಾಗಿರುವುದು ಶನಿವಾರ ದೃಢಪಟ್ಟಿದೆ. ಒಂದು ವಾರದ ಅವಧಿಯಲ್ಲಿ ವರದಿಯಾದ ಗರಿಷ್ಠ ಪ್ರಕರಣಗಳು ಇವಾಗಿವೆ.

ಇಳಿಕೆ ಕಂಡಿದ್ದ ಪ್ರಕರಣಗಳ ಸಂಖ್ಯೆ ಏಳು ದಿನಗಳಿಂದ ಏರುಗತಿಯಲ್ಲಿದೆ. ಒಂದು ದಿನದಲ್ಲಿ 1.53 ಲಕ್ಷ ಮಾದರಿಗಳನ್ನು ಪರೀಕ್ಷೆ ಮಾಡಲಾಗಿದ್ದು, ಶೇ 1.21ರಷ್ಟು ಸೋಂಕು ದೃಢಪ್ರಮಾಣ ವರದಿಯಾಗಿದೆ. 14 ಜಿಲ್ಲೆಗಳಲ್ಲಿ ಹೊಸ ಪ್ರಕರಣಗಳ ಸಂಖ್ಯೆ ಎರಡಂಕಿ ಹಾಗೂ 9 ಜಿಲ್ಲೆಗಳಲ್ಲಿ ಒಂದಂಕಿಯಲ್ಲಿದೆ. ರಾಯಚೂರು ಹಾಗೂ ಯಾದಗಿರಿಯಲ್ಲಿ ಪ್ರಕರಣ ವರದಿಯಾಗಿಲ್ಲ.

ರಾಜ್ಯ ಕೋವಿಡ್ ಅಂಕಿ–ಅಂಶ

28,93,556 ▲ ಒಟ್ಟು ಸೋಂಕಿತರು (28,91,699 ನಿನ್ನೆಯ ವಿವರ)

23,905 ▼ ಸಕ್ರಿಯ ಪ್ರಕರಣಗಳು

28,33,276 ▲ ಗುಣಮುಖರಾದವರು

36,352 ಒಟ್ಟು ಸಾವು ▲

ದಿನದ ಏರಿಕೆ		
ಹೊಸ ಪ್ರಕರಣ	1,857	▲
ಗುಣಮುಖ	2,050	▼
ಸಾವು	29	▼

ಆಧಾರ: ರಾಜ್ಯ ಆರೋಗ್ಯ ಇಲಾಖೆ
ಪ್ರಜಾವಾಣಿ ಗ್ರಾಫಿಕ್ಸ್

ಸಿಬಿಎಸ್‌ಇ: 10, 12ನೇ ತರಗತಿ ಫಲಿತಾಂಶ ಪ್ರಕಟ

ನವದೆಹಲಿ: ಭಾರತೀಯ ಪ್ರೌಢ ಶಿಕ್ಷಣ ಪರೀಕ್ಷಾ ಮಂಡಳಿಯು (ಸಿಬಿಎಸ್‌ಇ) 10 ಮತ್ತು 12ನೇ ತರಗತಿಯ ಫಲಿತಾಂಶವನ್ನು ಶನಿವಾರ ಪ್ರಕಟಿಸಿದೆ.

ವಿಶೇಷ ಸಂದರ್ಭದಲ್ಲಿ ಫಲಿತಾಂಶ ನಿರ್ಧರಿಸಿರುವುದರಿಂದ, ಕಳೆದ ವರ್ಷದಂತೆಯೇ ಈ ಬಾರಿಯೂ ಮೆರಿಟ್ ಲಿಸ್ಟ್ ಇಲ್ಲ ಎಂದು ಮಂಡಳಿ ತಿಳಿಸಿದೆ.

ಬಾಲಕರು ಮತ್ತು ಬಾಲಕಿಯರ ನಡುವೆ ಉತ್ತೀರ್ಣ ಪ್ರಮಾಣ 10ನೇ ತರಗತಿಯಲ್ಲಿ ಸರಿಸಮನಾಗಿದ್ದರೆ, 12ನೇ ತರಗತಿಯಲ್ಲಿ ಬಾಲಕಿಯರು ಬಾಲಕರಿಗಿಂತಲೂ ಶೇ 0.2ರಷ್ಟು ಮುನ್ನಡೆ ಕಾಯ್ದುಕೊಂಡಿದ್ದಾರೆ.

ಕೋವಿಡ್ ಸಾಂಕ್ರಾಮಿಕ ಪರಿಸ್ಥಿತಿಯಿಂದಾಗಿ ಈ ವರ್ಷ 10 ಮತ್ತು 12ನೇ ತರಗತಿ ಪರೀಕ್ಷೆಗಳನ್ನು ರದ್ದುಗೊಳಿಸಲಾಗಿತ್ತು. ಪರ್ಯಾಯ ಮೌಲ್ಯಮಾಪನ ನೀತಿಗನುಗುಣವಾಗಿ ಫಲಿತಾಂಶ ನಿರ್ಧರಿಸಲಾಗಿದೆ.

‘10ನೇ ತರಗತಿಯಲ್ಲಿ ಬಾಲಕಿಯರು ಮತ್ತು ಬಾಲಕರು ಸೇರಿ ತೇರ್ಗಡೆ ಪ್ರಮಾಣ ಶೇ 99.98ರಷ್ಟು ಇದೆ. 12ನೇ ತರಗತಿಯಲ್ಲಿ ಬಾಲಕಿಯರ ತೇರ್ಗಡೆ ಪ್ರಮಾಣ ಶೇ 99.86ರಷ್ಟು ಇದ್ದು, ಬಾಲಕರ ತೇರ್ಗಡೆ ಪ್ರಮಾಣ ಶೇ 99.66ರಷ್ಟು ಇದೆ’ ಎಂದು ಸಿಬಿಎಸ್‌ಇ ಮುಖ್ಯ ಕಾರ್ಯನಿರ್ವಾಹಕ ಮತ್ತು ಕಾರ್ಯದರ್ಶಿ ಗ್ಯಾರಿ ಅರತೂನ್ ತಿಳಿಸಿದ್ದಾರೆ.

ಈ ವರ್ಷ ಫಲಿತಾಂಶ ನಿರ್ಧಾರದ ಮಾನದಂಡವೇ ಬೇರೆಯಾಗಿರುವ ಕಾರಣ ಉತ್ತರ ಪತ್ರಿಕೆಗಳ ಮರು ಮೌಲ್ಯಮಾಪನ ಇಲ್ಲ. ಆದರೆ, ಅಂಕಗಳ ಕೂಡುವಿಕೆಯಲ್ಲಿ ಲೋಪ ಆಗಿದ್ದರೆ ಸರಿಪಡಿಸಲು ಅವಕಾಶವಿದೆ ಎಂದು ಅವರು ತಿಳಿಸಿದರು.

ನ್ಯಾಯಮೂರ್ತಿಗಳ ನೇಮಕ

ಮಾಹಿತಿ ನೀಡಲು ‘ಸುಪ್ರೀಂ’ ನಿರಾಕರಣೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಸುಪ್ರೀಂಕೋರ್ಟ್‌ನಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ವಕೀಲರನ್ನು ವಿವಿಧ ಹೈಕೋರ್ಟ್‌ಗಳ ನ್ಯಾಯಮೂರ್ತಿ ಹುದ್ದೆಗೆ ಪರಿಗಣಿಸುವಂತೆ ಕೋರಿ ಮುಖ್ಯ ನ್ಯಾಯಮೂರ್ತಿಗಳಿಗೆ ಸುಪ್ರೀಂ ಕೋರ್ಟ್ ಬಾರ್ ಅಸೋಸಿಯೇಷನ್ ಬರೆದಿದೆ ಎನ್ನಲಾದ ಪತ್ರದ ಬಗ್ಗೆ ಉತ್ತರಿಸಲು ಸುಪ್ರೀಂ ಕೋರ್ಟ್ ನಿರಾಕರಿಸಿದೆ. ಆರ್‌ಟಿಐ ಮೂಲಕ ಪಡೆದಿರುವ ಮಾಹಿತಿಗೆ ಪ್ರತಿಕ್ರಿಯೆ ನೀಡಲು ಕೋರ್ಟ್ ಒಪ್ಪಿಲ್ಲ.

ವಿಶ್ವಾಸದಲ್ಲಿ ನೀಡಲಾದ ಮಾಹಿತಿ ಮತ್ತು ಮೂರನೇ ವ್ಯಕ್ತಿಯ ಮಾಹಿತಿ ಆಗಿರುವುದರಿಂದ ಪಾರದರ್ಶಕತೆ ಕಾನೂನಿನ ಅಡಿಯಲ್ಲಿ ಅದಕ್ಕೆ ವಿನಾಯಿತಿ ನೀಡಲಾಗಿದೆ ಎಂದು ನ್ಯಾಯಾಲಯ ಹೇಳಿದೆ. ಆರ್‌ಟಿಐ ಕಾಯ್ದೆಯ ಸೆಕ್ಷನ್ 8 (1) (ಇ) ಮತ್ತು 11 (1) ಅಡಿ ಮಾಹಿತಿ ನೀಡಲು ಅಧಿಕಾರಿಗಳು ನಿರಾಕರಿಸಿದ್ದಾರೆ.

ನ್ಯಾಯಮೂರ್ತಿಗಳ ನೇಮಕ ಕುರಿತಂತೆ ಪತ್ರ ಬರೆಯಲಾಗಿದೆ ಎಂದು ಸುಪ್ರೀಂ ಕೋರ್ಟ್ ಬಾರ್ ಅಸೋಸಿಯೇಷನ್ ಅಧ್ಯಕ್ಷ ವಿಕಾಸ್ ಸಿಂಗ್ ಅವರು ಬಹಿರಂಗವಾಗಿ ಹೇಳಿಕೊಂಡ ನಂತರ, ವಕೀಲರಾದ ಅಮೃತಪಾಲ್ ಸಿಂಗ್ ಖಾಲ್ಸಾ ಎಂಬುವರು ಮಾಹಿತಿ ಕೋರಿ, ಆರ್‌ಟಿಐ ಕಾಯ್ದೆಯಡಿ ಅರ್ಜಿ ಸಲ್ಲಿಸಿದ್ದರು.

ಮೇ 31ರಂದು ಬಾರ್ ಅಸೋಸಿಯೇಷನ್ ಕಳುಹಿಸಿದ ಪ್ರಸ್ತಾವನೆಯ ಪ್ರತಿ, ಆದೇಶ, ಪತ್ರ ಸಂವಹನ ಅಥವಾ ಇನ್ನಾವುದೇ ದಾಖಲೆಗಳನ್ನು ಒದಗಿಸುವಂತೆ ಖಾಲ್ಸಾ ತಮ್ಮ ಅರ್ಜಿಯಲ್ಲಿ ಕೋರಿದ್ದರು. ಈ ಕುರಿತು ಬರೆಯಲಾದ ಟಿಪ್ಪಣಿಗಳನ್ನೂ ಕೇಳಿದ್ದರು.

ಅಲ್ಲದೆ, ಸುಪ್ರೀಂ ಕೋರ್ಟ್‌ನಲ್ಲಿ ವೃತ್ತಿ ಮಾಡುತ್ತಿರುವ ವಕೀಲರನ್ನು ಹೈಕೋರ್ಟ್ ನ್ಯಾಯಾಧೀಶರ ಹುದ್ದೆಗೆ ಪರಿಗಣಿಸಲು, ಮುಖ್ಯ-ನ್ಯಾಯಮೂರ್ತಿಗಳು ಎಲ್ಲ ಹೈಕೋರ್ಟ್‌ಗಳ ಮುಖ್ಯ ನ್ಯಾಯಮೂರ್ತಿಗಳಿಗೆ ನೀಡಿದ್ದಾರೆ ಎನ್ನಲಾದ ಪತ್ರ ಅಥವಾ ಆದೇಶದ ಪ್ರತಿ ಒದಗಿಸುವಂತೆ ಕೋರಿದ್ದರು.

ಪಾಕ್ ಡ್ರೋನ್ ಚಟುವಟಿಕೆ ಪ್ರತಿಭಟನೆ ದಾಖಲಿಸಿದ ಭಾರತ

ಜಮ್ಮು (ಪಿಟಿಐ): ಜಮ್ಮು ಪ್ರದೇಶದಲ್ಲಿ ಪಾಕಿಸ್ತಾನ ನಡೆಸಿದ ಡ್ರೋನ್ ಚಟುವಟಿಕೆಗಳ ಬಗ್ಗೆ ಭಾರತ ಶನಿವಾರ ಗಡಿ ಭದ್ರತಾ ಪಡೆ ಮತ್ತು ಪಾಕಿಸ್ತಾನ ರೇಂಜರ್ಸ್ ನಡುವಿನ ಸೆಕ್ಟರ್ ಕಮಾಂಡರ್ ಮಟ್ಟದ ಸಭೆಯಲ್ಲಿ ತೀವ್ರ ಪ್ರತಿಭಟನೆ ದಾಖಲಿಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

‘ಡಿಜಿಎಂಒಗಳು ಕದನ ವಿರಾಮ ಒಪ್ಪಂದ ಘೋಷಿಸಿದ (ಫೆಬ್ರುವರಿಯಲ್ಲಿ) ನಂತರ ಎರಡು ಗಡಿ ಕಾವಲು ಪಡೆಗಳ ನಡುವೆ ನಡೆದ ವಲಯ ಕಮಾಂಡರ್ ಮಟ್ಟದ ಮೊದಲ ಸಭೆ ಇದು’ ಎಂದು ಬಿಎಸ್‌ಎಫ್ ವಕ್ತಾರರು ತಿಳಿಸಿದ್ದಾರೆ.

ಜಮ್ಮು ಪ್ರದೇಶದಲ್ಲಿ ಪಾಕಿಸ್ತಾನ ಸೇನೆ ನಡೆಸುತ್ತಿರುವ ಡ್ರೋನ್ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಬಿಎಸ್‌ಎಫ್ ಪ್ರತಿನಿಧಿಗಳು ತೀವ್ರ ಪ್ರತಿಭಟನೆ ದಾಖಲಿಸಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಸುಚೇತ್‌ಗಡ ಪ್ರದೇಶದ ಅಂತರ ರಾಷ್ಟ್ರೀಯ ಗಡಿ (ಐಬಿ)ಯಲ್ಲಿ ಪಾಕಿಸ್ತಾನ ರೇಂಜರ್ಸ್‌ನ ಕೋರಿಕೆಯ ಮೇರೆಗೆ ಈ ಸಭೆ ನಡೆಯಿತು.

ಕಾರ್ಯಾಚರಣೆಯ ವಿಷಯಗಳನ್ನು ಪರಿಹರಿಸಲು ಅಗತ್ಯವಿದ್ದಾಗ ಫೀಲ್ಡ್ ಕಮಾಂಡರ್‌ಗಳ ನಡುವೆ ತ್ವರಿತ ಸಂವಹನ ಪುನರುಜ್ಜೀವನಗೊಳಿಸಲು ನಿರ್ಧರಿಸಲಾಗಿದೆ ಎಂದು ವಕ್ತಾರರು ತಿಳಿಸಿದ್ದಾರೆ.

ಪಾಕಿಸ್ತಾನದ ಡ್ರೋನ್ ಚಟುವಟಿಕೆಗಳು, ಭಯೋತ್ಪಾದಕ ಚಟುವಟಿಕೆಗಳು ಮತ್ತು ಗಡಿಯುದ್ದಕ್ಕೂ ಸುರಂಗಗಳನ್ನು ಅಗೆಯುವುದು ಮತ್ತು ಗಡಿ ನಿರ್ವಹಣೆಗೆ ಸಂಬಂಧಿಸಿದ ಇತರ ವಿಷಯಗಳ ಬಗ್ಗೆ ಬಿಎಸ್‌ಎಫ್ ನಿಯೋಗವು ಮುಖ್ಯವಾಗಿ ಒತ್ತು ನೀಡಿ, ಚರ್ಚಿಸಿತು.

ಅಂತರರಾಷ್ಟ್ರೀಯ ಗಡಿಯಲ್ಲಿ ಶಾಂತಿ ಮತ್ತು ಸೌಹಾರ್ದ ಕಾಪಾಡಿಕೊಳ್ಳಲು ಎರಡೂ ಕಡೆಯವರು ತಮ್ಮ ಬದ್ಧತೆ ವ್ಯಕ್ತಪಡಿಸಿದ್ದಾರೆ ಎಂದು ಬಿಎಸ್‌ಎಫ್ ವಕ್ತಾರರು ತಿಳಿಸಿದ್ದಾರೆ.

ಸುಚೇತ್‌ಗಡದ ಅಂತರರಾಷ್ಟ್ರೀಯ ಗಡಿಯಲ್ಲಿ ಶನಿವಾರ ಗಡಿ ಭದ್ರತಾ ಪಡೆ ಮತ್ತು ಪಾಕಿಸ್ತಾನ ರೇಂಜರ್ಸ್ ನಡುವೆ ಸೆಕ್ಟರ್ ಕಮಾಂಡರ್ ಮಟ್ಟದ ಸಭೆಯಲ್ಲಿ ಪಾಲ್ಗೊಂಡಿದ್ದ ಸಿಬ್ಬಂದಿ –ಪಿಟಿಐ ಚಿತ್ರ

‘ಪತ್ರಕರ್ತರ ವಿರುದ್ಧ ಬೇಹುಗಾರಿಕೆ ತಂತ್ರಜ್ಞಾನ ಬಳಕೆ ಕಳವಳಕಾರಿ’

ವಾಷಿಂಗ್ಟನ್ (ಪಿಟಿಐ): ಸರ್ಕಾರವನ್ನು ಟೀಕಿಸುವವರು, ಪತ್ರಕರ್ತರು ಹಾಗೂ ನಾಗರಿಕರ ಮೇಲೆ ಬೇಹುಗಾರಿಕೆ ನಡೆಸುವ ಸಲುವಾಗಿ ಗೂಢಚರ್ಯೆ ತಂತ್ರಜ್ಞಾನ ಬಳಸುವುದನ್ನು ತಾನು ವಿರೋಧಿಸುವುದಾಗಿ ಅಮೆರಿಕ ಹೇಳಿದೆ.

ಪೆಗಾಸಸ್ ತಂತ್ರಾಂಶವನ್ನು ಗೂಢಚರ್ಯೆಗಾಗಿ ದುರ್ಬಳಕೆ ಮಾಡಲಾಗಿದೆ ಎಂಬ ಆರೋಪಗಳ ಕುರಿತು ಪ್ರತಿಕ್ರಿಯಿಸಿರುವ ದಕ್ಷಿಣ ಹಾಗೂ ಮಧ್ಯ ಏಷ್ಯಾ ವ್ಯವಹಾರಗಳ ಹಂಗಾಮಿ ಸಹಾಯಕ ಕಾರ್ಯದರ್ಶಿ ಡೀನ್ ಥಾಂಪ್ಸನ್, ‘ನ್ಯಾಯಾಲಯಗಳ ಆದೇಶವಿಲ್ಲದೇ, ಈ ರೀತಿ ಗೂಢಚರ್ಯೆ ನಡೆಸುವುದು ಕಳವಳಕಾರಿ’ ಎಂದಿದ್ದಾರೆ.’

‘ಭಾರತದಲ್ಲಿ ಪೆಗಾಸಸ್ ತಂತ್ರಾಂಶವನ್ನು ದುರ್ಬಳಕೆ ಮಾಡಿರುವ ಆರೋಪಕ್ಕೆ ಸಂಬಂಧಿಸಿದ ಪ್ರಕರಣದ ಬಗ್ಗೆ ತಮಗೆ ನಿರ್ದಿಷ್ಟ ಮಾಹಿತಿ ಇಲ್ಲ’ ಎಂದೂ ಅವರು ಸ್ಪಷ್ಟಪಡಿಸಿದ್ದಾರೆ.

‘ಇದು ಸಣ್ಣ ವಿಷಯವಲ್ಲ. ಕಂಪನಿಗಳು ತಾವು ಅಭಿವೃದ್ಧಿಪಡಿಸುವ ತಂತ್ರಾಂಶವನ್ನು ಗೂಢಚರ್ಯೆಗೆ ಬಳಸದಂತೆ ತಡೆಯುವುದನ್ನು ಖಾತರಿಪಡಿಸಬೇಕು. ಈ ಬಗ್ಗೆ ಎಲ್ಲರೂ ಧ್ವನಿ ಎತ್ತಬೇಕು’ ಎಂದೂ ಹೇಳಿದರು.

ಐಎನ್‌ಎಸ್ ಮೀಡಿಯಾ ಪ್ರಕರಣ ಇ.ಡಿಗೆ ದೆಹಲಿ ಕೋರ್ಟ್ ನೋಟಿಸ್

ನವದೆಹಲಿ (ಪಿಟಿಐ): ಐಎನ್‌ಎಸ್ ಮೀಡಿಯಾ ಹಣ ಅಕ್ರಮ ವರ್ಗಾವಣೆ ಪ್ರಕರಣದ ಸಂಬಂಧ ಕೇಂದ್ರದ ಮಾಜಿ ಹಣಕಾಸು ಸಚಿವ ಪಿ.ಚಿದಂಬರಂ ಅರ್ಜಿ ಆಧರಿಸಿ ದೆಹಲಿ ಕೋರ್ಟ್ ಶನಿವಾರ ಜಾರಿ ನಿರ್ದೇಶನಾಲಯಕ್ಕೆ (ಇ.ಡಿ) ನೋಟಿಸ್ ನೀಡಿದೆ.

ವಿಶೇಷ ನ್ಯಾಯಾಧೀಶರಾದ ಎಂ.ಕೆ.ನಾಗಪಾಲ್ ಅವರು, ಈ ಸಂಬಂಧ ಪ್ರತಿಕ್ರಿಯಿಸಲು ಸೂಚಿಸಿ ನೋಟಿಸ್ ಜಾರಿ ಮಾಡಿದರು. ಚಿದಂಬರಂ ಪರವಾಗಿ ವಕೀಲ ಅರ್ಶ್‌ದೀಪ್ ಸಿಂಗ್ ಖುರಾನಾ ಅರ್ಜಿ ಸಲ್ಲಿಸಿದ್ದರು. ಪ್ರಕರಣದಲ್ಲಿ ಸಲ್ಲಿಸಿರುವ ದೋಷಾರೋಪ ಪಟ್ಟಿ, ಪೂರಕ ದಾಖಲೆಗಳನ್ನು ಹಾಜರುಪಡಿಸಲು ಇ.ಡಿಗೆ ಸೂಚಿಸಬೇಕು ಎಂದೂ ಅವರು ಕೋರಿದ್ದರು.

ದಾಖಲೆಗಳ ಪುಟಸಂಖ್ಯೆಗಳ ಗೊಂದಲ ಬಗೆಹರಿಸಬೇಕು, ನಾಪತ್ತೆಯಾಗಿರುವ ದಾಖಲೆಗಳನ್ನು ಹಾಜರುಪಡಿಸಬೇಕು ಎಂದೂ ಇ.ಡಿಗೆ ಸೂಚಿಸಲಾಗಿದೆ. ಈ ಪ್ರಕರಣದ ಸಂಬಂಧ ಚಿದಂಬರಂ ಅವರನ್ನು ಆಗಸ್ಟ್ 21, 2009ರಂದು ಸಿಬಿಐ ಬಂಧಿಸಿದ್ದು, ಅಕ್ರಮ ಹಣ ವರ್ಗಾವಣೆ ಆರೋಪಕ್ಕೆ ಸಂಬಂಧಿಸಿ ಅದೇ ವರ್ಷ ಅಕ್ಟೋಬರ್ 16ರಂದು ಇ.ಡಿ ಬಂಧಿಸಿತ್ತು.

ತಾಲಿಬಾನ್ ನಿಯಂತ್ರಣಕ್ಕೆ ಕರ್ಫ್ಯೂ

ಕಾಬೂಲ್ (ಎಎಫ್‌ಪಿ): ಅಫ್ಗಾನಿಸ್ತಾನದಲ್ಲಿ ತಾಲಿಬಾನ್‌ನಿಂದಾಗಿ ಹೆಚ್ಚುತ್ತಿರುವ ಹಿಂಸಾಚಾರವನ್ನು ನಿಯಂತ್ರಿಸಲು ಶನಿವಾರದಿಂದ 34 ಪ್ರಾಂತ್ಯಗಳ ಪೈಕಿ 31ರಲ್ಲಿ ರಾತ್ರಿ ಕರ್ಫ್ಯೂ ವಿಧಿಸಲಾಗಿದೆ.

ತಾಲಿಬಾನ್ ಚಟುವಟಿಕೆಗಳನ್ನು ಹತ್ತಿಕ್ಕುವ ನಿಟ್ಟಿನಲ್ಲಿ ಈ ಕ್ರಮಕೈಗೊಳ್ಳಲಾಗಿದೆ. ಕಾಬೂಲ್, ಪಂಜಶಿರ್ ಮತ್ತು ನಂಗರ್‌ಹಾರ್‌ನಲ್ಲಿ ಮಾತ್ರ ಕರ್ಫ್ಯೂ ಜಾರಿಗೊಳಿಸಿಲ್ಲ ಎಂದು ಗೃಹ ಸಚಿವಾಲಯದ ಪ್ರಕಟಣೆ ತಿಳಿಸಿದೆ.

ತಾಲಿಬಾನ್ ಮತ್ತು ಅಫ್ಗಾನಿಸ್ತಾನ ಪಡೆಗಳ ನಡುವೆ ಸಂಘರ್ಷ ತೀವ್ರವಾಗಿದ್ದು, 260ಕ್ಕೂ ಹೆಚ್ಚು ತಾಲಿಬಾನ್ ಉಗ್ರರನ್ನು ಹತ್ಯೆ ಮಾಡಿರುವುದಾಗಿ ಅಧಿಕಾರಿಗಳು ತಿಳಿಸಿದ್ದಾರೆ.

ಪಾಕಿಸ್ತಾನವು ಮುನ್ನೆಚ್ಚರಿಕಾ ಕ್ರಮವಾಗಿ ಅಫ್ಗನ್‌ದೊಂದಿಗಿನ ತನ್ನ ಗಡಿಯಲ್ಲಿ ಸೇನಾ ಪಡೆ ನಿಯೋಜಿಸಿದೆ.

ಅಕ್ರಮವಾಗಿ ಬಂದೂಕು ಪರವಾನಗಿ ನೀಡಿದ ಪ್ರಕರಣ

ಜಮ್ಮು–ಕಾಶ್ಮೀರ, ದೆಹಲಿಯಲ್ಲಿ ಸಿಬಿಐ ದಾಳಿ

ಪ್ರಜಾವಾಣಿ ವಾರ್ತೆ

ಶ್ರೀನಗರ: ಅಕ್ರಮವಾಗಿ ಬಂದೂಕು ಪರವಾನಗಿ ನೀಡಿದ ಹಗರಣಕ್ಕೆ ಸಂಬಂಧಿಸಿದಂತೆ ಶನಿವಾರ ದಾಳಿ ನಡೆಸಿರುವ ಸಿಬಿಐ, ಶ್ರೀನಗರದಲ್ಲಿರುವ ಹಿರಿಯ ಐಎಎಸ್ ಅಧಿಕಾರಿ ಶಾಹಿದ್ ಚೌಧರಿ ನಿವಾಸ ಸೇರಿದಂತೆ ಜಮ್ಮು ಮತ್ತು ಕಾಶ್ಮೀರ ಹಾಗೂ ದೆಹಲಿಯ ವಿವಿಧೆಡೆ ಶೋಧ ನಡೆಸಿದೆ.

ಶ್ರೀನಗರ, ಅನಂತನಾಗ್, ಬಾರಾಮುಲ್ಲಾ, ಜಮ್ಮು, ಉಧಂಪುರ, ರಾಜೌರಿ ಹಾಗೂ ದೆಹಲಿಯ ಹಲವು ಸ್ಥಳಗಳು ಸೇರಿದಂತೆ 40 ಕಡೆಗಳಲ್ಲಿ ಏಕಕಾಲದಲ್ಲಿ ದಾಳಿ ನಡೆದಿದೆ.

ಈ ವೇಳೆ ಐಎಎಸ್ ಅಧಿಕಾರಿ ಚೌಧರಿ ನಿವಾಸ, 20 ಗನ್‌ಹೌಸ್‌ಗಳು ಸೇರಿದಂತೆ ಸರ್ಕಾರಿ ಅಧಿಕಾರಿಗಳು ಹಾಗೂ ನಿವೃತ್ತ ಅಧಿಕಾರಿಗಳ ಕಚೇರಿ ಹಾಗೂ ಮನೆಗಳಲ್ಲಿ ಶೋಧ ನಡೆಸಲಾಗಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದರು.

ಚೌಧರಿ ಅವರು ಪ್ರಸ್ತುತ ಜಮ್ಮು ಮತ್ತು ಕಾಶ್ಮೀರದ ಬುಡಕಟ್ಟು ವ್ಯವಹಾರಗಳ ಕಾರ್ಯದರ್ಶಿ ಮತ್ತು ಯುವ ಜನ ಯೋಜನೆ ಸಿಇಒ ಆಗಿದ್ದಾರೆ. ಅವರು ಕಥುವಾ, ರಿಯಾಸಿ, ರಜೌರಿ ಮತ್ತು ಉಧಂಪುರ ಜಿಲ್ಲೆಗಳಲ್ಲಿ ಜಿಲ್ಲಾಧಿಕಾರಿಯಾಗಿ ಕಾರ್ಯ ನಿರ್ವಹಿಸಿದ್ದರು. ಆ ವೇಳೆ ಅವರು ಸಾವಿರಾರು ಬಂದೂಕುಗಳಿಗೆ ಅಕ್ರಮವಾಗಿ ಪರವಾನಗಿ ನೀಡಿದ್ದರು ಎಂದು ಆರೋಪಿಸಲಾಗಿದೆ.

ಇದೇ ರೀತಿಯಲ್ಲಿ, 2019ರ ಡಿಸೆಂಬರ್‌ನಲ್ಲಿ ಶ್ರೀನಗರ, ಜಮ್ಮು, ಗುರುಗ್ರಾಮ (ಹರಿಯಾಣ), ಮೊಹಾಲಿ (ಪಂಜಾಬ್) ಮತ್ತು ನೋಯ್ಡಾ (ಉತ್ತರ ಪ್ರದೇಶ)ದ 17 ಸ್ಥಳಗಳಲ್ಲಿ ಸಿಬಿಐ ದಾಳಿ ನಡೆಸಿತ್ತು. ಪ್ರಕರಣಕ್ಕೆ ಸಂಬಂಧಿಸಿದಂತೆ 8 ಮಂದಿ ನಿವೃತ್ತ ಜಿಲ್ಲಾಧಿಕಾರಿಗಳ/ಜಿಲ್ಲಾ ಮ್ಯಾಜಿಸ್ಟ್ರೇಟ್‌ಗಳ ನಿವಾಸದಲ್ಲಿ ಶೋಧ ನಡೆಸಲಾಗಿತ್ತು.

ನಿವೃತ್ತ ಐಎಎಸ್ ಅಧಿಕಾರಿ ರಾಜೀವ್ ರಂಜನ್, ಕುಪ್ವಾರಾ ಜಿಲ್ಲಾಧಿಕಾರಿಯಾಗಿದ್ದ ಸಂದರ್ಭದಲ್ಲಿ ಇತ್ರಿತ್ ಹುಸೇನ್ ರಫೀಕ್ ಅವರೊಂದಿಗೆ ಸೇರಿ ನಕಲಿ ದಾಖಲೆಗಳ ಆಧಾರದಲ್ಲಿ ಸಾಕಷ್ಟು ಬಂದೂಕುಗಳಿಗೆ ಪರವಾನಗಿ ನೀಡಿದ್ದಾರೆ ಎಂಬ ಆರೋಪದಲ್ಲಿ, 2020ರ ಮಾರ್ಚ್‌ನಲ್ಲಿ ಅವರಿಬ್ಬರನ್ನೂ ಸಿಬಿಐ ಬಂಧಿಸಿತ್ತು.

ಹಗರಣ ಸಂಬಂಧ ರಾಜಸ್ಥಾನದ ಭಯೋತ್ಪಾದನಾ ನಿಗ್ರಹ ದಳ (ಎಟಿಎಸ್) ತನಿಖೆ ನಡೆಸಿದ ಸಂದರ್ಭದಲ್ಲಿ, ಸಾರ್ವಜನಿಕ ಅಧಿಕಾರಿಗಳು ಮತ್ತು ಹಿರಿಯ ಐಎಎಸ್ ಅಧಿಕಾರಿಗಳ ಹೆಸರು ಕೇಳಿ ಬಂದಿತ್ತು. ಆ ನಂತರದಲ್ಲಿ ಜಮ್ಮು ಮತ್ತು ಕಾಶ್ಮೀರ ಸರ್ಕಾರವು 2018ರಲ್ಲಿ ಸಿಬಿಐ ತನಿಖೆಗೆ ಶಿಫಾರಸು ಮಾಡಿತ್ತು.

ಜಮ್ಮು ಮತ್ತು ಕಾಶ್ಮೀರದ ವಿವಿಧ ಜಿಲ್ಲೆಗಳಲ್ಲಿ ಎರಡು ಲಕ್ಷಕ್ಕೂ ಹೆಚ್ಚು ಬಂದೂಕು ಪರವಾನಗಿ ನೀಡುವಲ್ಲಿ ಅಕ್ರಮ ನಡೆದಿದೆ ಎನ್ನಲಾಗಿದ್ದು, ಈ ಬಗ್ಗೆ ಸಿಬಿಐ ತನಿಖೆ ನಡೆಸುತ್ತಿದೆ.

ಸಂಕ್ಷಿಪ್ತ ಸುದ್ದಿ

ರಾಜ್ಯಸಭೆ ಚುನಾವಣೆ: ಜವಾಹರ ಸರ್ಕಾರ್ ಟಿಎಂಸಿ ಅಭ್ಯರ್ಥಿ

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳ ವಿಧಾನಸಭೆಯಿಂದ ರಾಜ್ಯಸಭೆಗೆ ನಡೆಯುವ ಉಪಚುನಾವಣೆಯಲ್ಲಿ ತೃಣಮೂಲ ಕಾಂಗ್ರೆಸ್ ಪಕ್ಷವು, ಮಾಜಿ ಅಧಿಕಾರಿ ಜವಾಹರ್ ಸರ್ಕಾರ್ ಅವರನ್ನು ತನ್ನ ಅಭ್ಯರ್ಥಿಯನ್ನಾಗಿ ಕಣಕ್ಕಿಳಿಸಲು ನಿರ್ಧರಿಸಿದೆ.

ದಿನೇಶ್ ತ್ರಿವೇದಿ ಅವರು ಈ ವರ್ಷದ ಆರಂಭದಲ್ಲಿ ರಾಜೀನಾಮೆ ನೀಡಿದ್ದರಿಂದ ಈ ಸ್ಥಾನ ತೆರವಾಗಿತ್ತು. ಹೀಗಾಗಿ ಆಗಸ್ಟ್ 9ರಂದು ಉಪಚುನಾವಣೆ ನಡೆಸಲಾಗುವುದು ಎಂದು ಚುನಾವಣಾ ಆಯೋಗ ತಿಳಿಸಿದೆ. 42 ವರ್ಷಗಳ ಸಾರ್ವಜನಿಕ ಸೇವೆಯಲ್ಲಿದ್ದ ಜವಾಹರ್ ಸರ್ಕಾರ್ ಅವರು ಪ್ರಸಾರ ಭಾರತಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಯಾಗಿಯೂ ಕಾರ್ಯನಿರ್ವಹಿಸಿದ್ದಾರೆ.

ಚಿನ್ನ ಕಳ್ಳ ಸಾಗಣೆ: ಇಂಡಿಗೊ, ಸ್ಪೈಸ್‌ಜೆಟ್ ಸಿಬ್ಬಂದಿ ಬಂಧನ

ನವದೆಹಲಿ (ಪಿಟಿಐ): ಅಕ್ರಮವಾಗಿ ಚಿನ್ನ ಕಳ್ಳ ಸಾಗಣೆ ಮಾಡಿದ ಆರೋಪದ ಮೇಲೆ ಇಂಡಿಗೊ ಮತ್ತು ಸ್ಪೈಸ್‌ಜೆಟ್ ಏರ್‌ಲೈನ್ಸ್‌ನ ನಾಲ್ವರು ಸಿಬ್ಬಂದಿ ಸೇರಿ ದಂತೆ ಏಳು ಮಂದಿಯನ್ನು ಕಸ್ಟಮ್ಸ್ ಇಲಾಖೆ ಅಧಿಕಾರಿಗಳು ಶನಿವಾರ ಬಂಧಿಸಿದ್ದಾರೆ.

ಆರೋಪಿಗಳು ಸೌದಿ ಅರೇಬಿಯಾದ ಜೆಡ್ಡಾದಿಂದ ಇಲ್ಲಿನ ಇಂದಿರಾ ಗಾಂಧಿ ಅಂತರರಾಷ್ಟ್ರೀಯ ವಿಮಾನ ನಿಲ್ದಾಣ ದಲ್ಲಿ ಬಂದಿಳಿದಾಗ ಇವರನ್ನು ಬಂಧಿಸಲಾಗಿದೆ. ₹72.46 ಲಕ್ಷ ಮೌಲ್ಯದ ಚಿನ್ನವನ್ನು ಅಕ್ರಮವಾಗಿ ದೇಶದಲ್ಲಿ ಸಾಗಿಸುತ್ತಿದ್ದರು ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಕಾಶಿ ವಿಶ್ವನಾಥ ದೇವಾಲಯಕ್ಕೆ ಜಾಗ ಕೊಟ್ಟ ಜ್ಞಾನವಾಪಿ ಮಸೀದಿ

ಲಖನೌ: ವಾರಾಣಸಿಯಲ್ಲಿ ಜ್ಞಾನ ವಾಪಿ ಮಸೀದಿಯನ್ನು ನೋಡಿಕೊಳ್ಳುತ್ತಿರುವ ಉತ್ತರ ಪ್ರದೇಶ ಸುನ್ನಿ ಸೆಂಟ್ರಲ್ ವಕ್ಫ್ ಮಂಡಳಿಯು ಕಾಶಿ ವಿಶ್ವನಾಥ ದೇವಾಲಯಕ್ಕೆ ಒಂದು ಸಾವಿರ ಚದರ ಅಡಿ ಭೂಮಿಯನ್ನು ನೀಡಿದೆ.

ದೇವಾಲಯ ಮತ್ತು ಮಸೀದಿಯ ಮಾಲೀಕತ್ವದ ಬಗ್ಗೆ ಕಾಶಿ ವಿಶ್ವನಾಥ ದೇವಾಲಯ ಹಾಗೂ ಉತ್ತರ ಪ್ರದೇಶ ಸುನ್ನಿ ಸೆಂಟ್ರಲ್ ವಕ್ಫ್ ಮಂಡಳಿ ನಡುವೆ ನಡೆಯುತ್ತಿರುವ ಕಾನೂನು ಸಮರದ ಮಧ್ಯೆ ಈ ಬೆಳವಣಿಗೆಯು ಮಹತ್ವ ಪಡೆದುಕೊಂಡಿದೆ.

ವಿನಿಮಯದ ಒಪ್ಪಂದದ ಪ್ರಕಾರ, ಪಟ್ಟಣದ ಭಾನ್ಸ್ ಫಟಕ್ ಪ್ರದೇಶದಲ್ಲಿ ದೇವಾಲಯಕ್ಕೆ ಒಂದು ಸಾವಿರ ಚದರ ಅಡಿ ಭೂಮಿಯನ್ನು ವಕ್ಫ್ ಮಂಡಳಿಯು ಬಿಟ್ಟುಕೊಟ್ಟಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಗುಂಡಣ್ಣ

25 ವರ್ಷಗಳ ಹಿಂದೆ — ಗುರುವಾರ, 25-7-1996

● ಕಾವೇರಿ ನೀರು ಬಿಡುಗಡೆ: ಕೇಂದ್ರ ಮಧ್ಯಸ್ಥಿಕೆಗೆ ತಮಿಳುನಾಡು ಅಗ್ರಹ

ಮದ್ರಾಸ್, ಜುಲೈ 24 (ಪಿಟಿಐ)– ತಮಿಳುನಾಡು ರೈತರ ಸಾಂಬಾ ಬೆಳೆಗೆ ನೀರು ಬಿಡುವಂತೆ ಕರ್ನಾಟಕಕ್ಕೆ ಸೂಚನೆ ನೀಡಬೇಕು ಎಂದು ಮುಖ್ಯಮಂತ್ರಿ ಎಂ. ಕರುಣಾನಿಧಿ ಇಂದು ವಿಧಾನಸಭೆಯಲ್ಲಿ ಕೇಂದ್ರ ಸರ್ಕಾರವನ್ನು ಆಗ್ರಹಪಡಿಸಿದರು.

ತಮಿಳು ಮಾನಿಲ ಕಾಂಗ್ರೆಸ್‌ನ ಸಿ. ಜ್ಞಾನಶೇಖರನ್ ಮತ್ತು ದೇವೇಂದ್ರ ಕುಲವೆಳ್ಳಾಳರ್ ಸಮಾಜಂನ ಡಾ.ಕೆ. ಕೃಷ್ಣಸ್ವಾಮಿ ಅವರ ಪ್ರಶ್ನೆಗೆ ಉತ್ತರಿಸಿದ ಮುಖ್ಯಮಂತ್ರಿ ಕರುಣಾನಿಧಿ ಅವರು, ಕಾವೇರಿ ನೀರಾವರಿ ಪ್ರದೇಶದ ರೈತರ ಪರಿಸ್ಥಿತಿಯನ್ನು ಅರ್ಥ ಮಾಡಿಕೊಂಡು ಕರ್ನಾಟಕ ನೀರು ಬಿಡುಗಡೆ ಮಾಡಬೇಕು. ಈ ವಿವಾದವನ್ನು ಎರಡು ರಾಷ್ಟ್ರಗಳ ಸಮಸ್ಯೆ ಎಂದು ಪರಿಗಣಿಸದೆ ಭಾರತದ ಎರಡು ರಾಜ್ಯಗಳ ಸಮಸ್ಯೆ ಎಂದು ಪರಿಗಣಿಸಬೇಕು ಎಂದರು.

50 ವರ್ಷಗಳ ಹಿಂದೆ — ಭಾನುವಾರ, 25-7-1996

● ಭೂರಹಿತ ಗ್ರಾಮಸ್ಥರಿಗೆ ನಿವೇಶನ: ಕೇಂದ್ರದಿಂದ ಧನಸಹಾಯ

ನವದೆಹಲಿ, ಜುಲೈ 24– ಗ್ರಾಮಾಂತರ ಪ್ರದೇಶದಲ್ಲಿ ಭೂಹೀನರಿಗೆ ಮನೆ ನಿವೇಶನ ನೀಡಲು ರಾಜ್ಯ ಸರ್ಕಾರಗಳಿಗೆ ನೂರಕ್ಕೆ ನೂರರಷ್ಟು ಸಹಾಯಧನ ಮಂಜೂರು ಮಾಡುವ ಯೋಜನೆಯೊಂದನ್ನು ಕೇಂದ್ರ ಸರ್ಕಾರ ಪರಿಶೀಲಿಸುತ್ತಿದೆ

ರಾಜ್ಯಾಂಗ, ಪಾರ್ಲಿಮೆಂಟರಿ ಅಧ್ಯಯನ ಸಂಸ್ಥೆ ಆಶ್ರಯದಲ್ಲಿ ‘ವಸತಿ–ಕೊಳಚೆ ನಿರ್ಮೂಲನ’ ಕುರಿತು ವಿಚಾರಗೋಷ್ಠಿಯನ್ನು ಉದ್ಘಾಟಿಸಿದ ಮರಾಮತ್ ಮತ್ತು ವಸತಿ ಶಾಖೆ ರಾಜ್ಯ ಸಚಿವ ಐ.ಕೆ. ಗುಜ್ರಾಲ್ ಅವರು ಈ ವಿಷಯವನ್ನು ತಿಳಿಸಿದರು.

ಕೊಳಚೆ ಪ್ರದೇಶಗಳಲ್ಲಿ ಮನೆ ಕಟ್ಟಿಕೊಳ್ಳುವುದಕ್ಕಾಗಿ ರಾಜ್ಯ ವಸತಿ ಮಂಡಳಿಗೆ ಸಹಾಯ ಮಾಡಲು ಇತ್ತೀಚೆಗೆ ವಸತಿ ಮತ್ತು ನಗರದ ಪ್ರದೇಶ ಅಭಿವೃದ್ಧಿ ಕಾರ್ಪೊರೇಷನ್ ರಚಿಸಲಾಯಿತೆಂದು ಹೇಳಿದರು.

ದಿನ ಭವಿಷ್ಯ

ಭಾನುವಾರ ಜುಲೈ 25, 2021

ಶ್ರೀ ಪ್ಲವ ನಾಮ ಸಂವತ್ಸರ ದಕ್ಷಿಣಾಯಣ ಗ್ರೀಷ್ಮ ಋತು ಆಷಾಢ ಮಾಸ ಕೃಷ್ಣ ಪಕ್ಷ ಮಳೆ ನಕ್ಷತ್ರ ಪುಷ್ಯ ಪ್ರತಿಪದೆ ಗಂ. 0-18 (ಬೆ. 6-18) ಉಪರಿ ದ್ವಿತೀಯಾ ಗಂ. 57-17 (ಬೆ.ಝಾ. 5-13 ಭಾನುವಾರ ನಿತ್ಯ ನಕ್ಷತ್ರ ಶ್ರವಣ ಗಂ. 16-37 (ಹ. 12-49) ಆಯುಃ ನಾಮ ಯೋಗ ಗಂ. 52-55 ಕೌಲವ ಕರಣ ಗಂ. 0-18 ಉಪರಿ ತೈತಲ ಕರಣ ಗಂ. 28-38 ವಿಷ ಗಂ. 26-29 ಅಮೃತ ಗಂ. 50-9 ರಾಹುಕಾಲ: ಮ. ಗಂ. 4-30 ರಿಂದ 6-00 ಗುಳಿಕ ಮ. ಕಾಲ ಗಂ 3-00ರಿಂದ 4-30 ಯಮಗಂಡ ಕಾಲ ಮ. ಗಂ 12-00 ರಿಂದ 1-30 : ಸೂರ್ಯೋದಯ: 6-07 ಸೂರ್ಯಾಸ್ತ: 6-45 ಅದೃಷ್ಟ ಸಂಖ್ಯೆ 1 6

ಮೇಷ: ನೂಲು ತೆಗೆಯುವ, ಶೃಂಗಾರ ಸಾಮಗ್ರಿ ಹಾಗೂ ಔಷಧ ತಯಾರಕರಿಗೆ ವಿಶೇಷ ಬೇಡಿಕೆಯಿಂದಾಗಿ ಉತ್ತಮ ಲಾಭ. ಸ್ವಂತ ಉದ್ಯಮ, ಫ್ಯಾಕ್ಟರಿಗಳನ್ನು ನಡೆಸುತ್ತಿರುವವರಿಗೆ ಉತ್ತಮ ಆದಾಯ ತರಲಿದೆ.

ವೃಷಭ: ಕೈಗೊಂಡ ಕೆಲಸ ಕಾರ್ಯಗಳನ್ನು ಅಚ್ಚುಕಟ್ಟಾಗಿ ನಿರ್ವಹಿಸಲಿದ್ದೀರಿ. ಹಿರಿಯರ ಪ್ರಶಂಸೆಗೆ ಪಾತ್ರರಾಗುವಿರಿ. ನವ ದಂಪತಿಗಳಿಗೆ ಸಂತಾನ ಭಾಗ್ಯ. ಆಪ್ತರೊಬ್ಬರಿಗೆ ಹಣಕಾಸಿನ ನೆರವು ನೀಡುವ ಸಾಧ್ಯತೆ ಕಂಡುಬರುತ್ತಿದೆ.

ಮಿಥುನ: ಗುತ್ತಿಗೆ ವ್ಯವಹಾರ ನಡೆಸುತ್ತಿರುವವರಿಗೆ ಸರ್ಕಾರದ ಕಾಮಗಾರಿಗಳು ದೊರೆತು ಸಂತಸ ನೀಡಲಿದೆ. ಮಂಗಳ ಕಾರ್ಯಗಳಿಗಾಗಿ ಮಕ್ಕಳೊಂದಿಗೆ ಚರ್ಚಿಸುವ ಸಾಧ್ಯತೆ. ಬಾಕಿ ಇರುವ ಕೆಲಸಗಳನ್ನು ಪೂರ್ಣಗೊಳಿಸಿ.

ಕರ್ಕಾಟಕ: ಉದ್ಯಮವನ್ನು ವಿಸ್ತರಿಸುವ ಸಲುವಾಗಿ ಸಿದ್ಧತೆ ನಡೆಸಲು ಸಕಾಲವಾಗಿದೆ. ನಿಮ್ಮ ಕಾರ್ಯಕ್ಷೇತ್ರವನ್ನು ವಿದೇಶಗಳಲ್ಲೂ ವಿಸ್ತರಿಸಲು ಅನುಮತಿಯನ್ನು ಪಡೆಯಲಿದ್ದೀರಿ.

ಸಿಂಹ: ರಫ್ತು ಮಾರಾಟಗಾರರಿಗೆ ಉತ್ತಮ ವ್ಯವಹಾರ ಕುದುರುವುದರಿಂದ ಆದಾಯ ಹೆಚ್ಚಲಿದೆ. ನಟ ನಟಿಯರು ಕಲಾವಿದರುಗಳಿಗೆ ಹೆಚ್ಚಿನ ಅವಕಾಶಗಳು ದೊರಕುವ ಸಾಧ್ಯತೆ ಕಂಡುಬರುತ್ತಿದೆ.

ಕನ್ಯಾ: ಕೃಷಿಕರಿಗೆ ಬೆಳೆದ ಫಸಲಿಗೆ ಉತ್ತಮ ಬೆಲೆ ದೊರಕುವುದರಿಂದಾಗಿ ಕೃಷಿ ಕೆಲಸಗಳಲ್ಲಿ ಉತ್ಸಾಹ ಮೂಡಲಿದೆ. ತೈಲ ಉತ್ಪನ್ನಗಳ ಮಾರಾಟಗಾರರಿಗೆ ಉತ್ತಮ ಲಾಭ. ಹೊಸ ವ್ಯಕ್ತಿಗಳ ಆಗಮನದಿಂದ ಸಂತೋಷದ ವಾತಾವರಣ.

ತುಲಾ: ಪ್ರಭಾವಿ ವ್ಯಕ್ತಿಗಳೊಂದಿಗಿನ ಒಡನಾಟದಿಂದಾಗಿ ಹೆಚ್ಚಿನ ಸ್ಥಾನವನ್ನು ಪಡೆದುಕೊಳ್ಳಲಿದ್ದೀರಿ. ಸರ್ಕಾರದ ಉನ್ನತ ಹುದ್ದೆಗಳಲ್ಲಿ ಕೆಲಸಗಳನ್ನು ನಿರ್ವಹಿಸುವ ಅವಕಾಶ ದೊರಕಲಿದೆ.

ವೃಶ್ಚಿಕ: ಜಾಹೀರಾತುಗಳ ಮೂಲಕ ವಹಿವಾಟನ್ನು ಹೆಚ್ಚಿಸಿಕೊಳ್ಳಲಿದ್ದೀರಿ. ವಿದೇಶಿ ಉತ್ಪನ್ನಗಳ ಮಾರಾಟದಿಂದಾಗಿ ಹೇರಳ ಲಾಭ. ಮಂಗಳ ಕಾರ್ಯಗಳಲ್ಲಿ ಭಾಗಿ ಸಾಧ್ಯತೆ.

ಧನು: ರಾಸಾಯನಿಕ ವಸ್ತುಗಳ ರಫ್ತು ವ್ಯಾಪಾರಗಳಿಂದ ಅಧಿಕ ವರಮಾನ ದೊರಕಲಿದೆ. ಗೃಹ ನಿರ್ಮಾಣ ಕೆಲಸಗಳು ಶೀಘ್ರಗತಿಯಲ್ಲಿ ಸಾಗುವವು. ಸಮಾಧಾನಕರವಾಗಿ ಕೆಲಸಗಳನ್ನು ನಿರ್ವಹಿಸಿ.

ಮಕರ: ಸಣ್ಣ ಕೈಗಾರಿಕೋದ್ಯಮಿಗಳಿಗೆ ಸರ್ಕಾರದಿಂದ ಸಹಾಯಧನ ದೊರಕಲಿದೆ. ಹೊಸ ಕೆಲಸಗಳಿಗೆ ಮಾಡುವ ಪ್ರಯತ್ನಕ್ಕೆ ಸ್ನೇಹಿತರಿಂದ ಸಹಾಯ.

ಕುಂಭ: ಸರ್ಕಾರಿ ಕೆಲಸಗಳಲ್ಲಿರುವವರಿಗೆ ಬಡ್ತಿ ಅಥವಾ ಸ್ಥಳ ಬದಲಾವಣೆಯ ಸಾಧ್ಯತೆ. ಹೊಸ ನಿವೇಶನ ಖರೀದಿ ಅಥವಾ ಗೃಹ ನಿರ್ಮಾಣ ಕಾರ್ಯಗಳು ಚುರುಕುಗೊಳ್ಳಲಿದೆ. ಕಾರ್ಯಬಾಹುಳ್ಯದಿಂದಾಗಿ ಮಾನಸಿಕ ಒತ್ತಡ.

ಮೀನ: ವಿವಿಧ ಮೂಲಗಳಿಂದ ಹೆಚ್ಚಿನ ಆದಾಯವು ಹರಿದುಬರಲಿದೆ. ವಾಹನ ಮಾರಾಟದಿಂದ ಉತ್ತಮ ಲಾಭ ಗಳಿಸಲಿದ್ದೀರಿ. ಮಕ್ಕಳ ಹೆಚ್ಚಿನ ವಿದ್ಯಾಭ್ಯಾಸದ ಧಾವಂತದಿಂದಾಗಿ ಆರೋಗ್ಯದಲ್ಲಿ ವ್ಯತ್ಯಯವಾದೀತು.

ನಿಮ್ಮ ಜನ್ಮದಿನ 25-ಜುಲೈ ಇಂದು ಅತ್ಯಂತ ಶುಭದಾಯಕವಾಗಿದ್ದು, ನಿಮ್ಮ ಗ್ರಹ ಸಂಚಾರದ ಉತ್ತಮತೆಯಿಂದಾಗಿ ಗುರುಕೃಪೆಗೆ ಪಾತ್ರರಾಗಲಿದ್ದೀರಿ. ನೀವು ಬಯಸಿದ ಸ್ವಂತ ಉದ್ದಿಮೆಯನ್ನು ಪ್ರಾರಂಭಿಸಲು ಸಕಾಲ. ನಡೆಸುವ ಕೆಲಸ ಕಾರ್ಯಗಳಲ್ಲಿ ಯಶಸ್ಸನ್ನು ಸಾಧಿಸಲಿದ್ದೀರಿ. ಸಮಸ್ಯೆಗಳಿಗೆ ಸೂಕ್ತ ಪರಿಹಾರ ದೊರೆತು ನೆಮ್ಮದಿ ಮೂಡಲಿದೆ.

ಪದಬಂಧ 4668 – ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1. ನೆಲದಲ್ಲಿ ಕೊರೆದು ಮಾಡಿರುವ ಗುಪ್ತದಾರಿ (5)
3. ರತಿ ಪತಿಯಿಂದ ಮೂಡಿದ ಬಯಕೆ (3)
5. ಕಳೆಯುವ ಲೆಕ್ಕವಿದು (5)
7. ಪಕ್ಷದ ಎರಡನೆಯ ದಿನ (3)
8. ಇದಂತೂ ಕೆಲಸಕ್ಕೆ ಬಾರದ ಮಾತು (5)
10. ಬಯ್ಯಲಿಕ್ಕೇ ಈ ಆಸೆಯೂ ಕಾರಣವೇ? (3)
11. ಅದೇ ತಾನೇ ಲಗ್ನವಾದ ಗಂಡ ಹೆಂಡತಿ (5)
14. ದಿಕ್ಕನ್ನು ತೋರಿಸುವ ಯಂತ್ರ (3)
15. ಕೊಳ್ಳೆ ಹೊಡೆಯುವವನು (5)

ಮೇಲಿಂದ ಕೆಳಕ್ಕೆ
1. ಕೇಳಲು ಬಲು ಹಿತಕರವಾದುದು (3)
2. ಕಣದಲ್ಲಿ ಲೆಕ್ಕ ಮಾಡುತ್ತಿರುವವನು, ಲೆಕ್ಕಿಗ (3)
4. ಸುಕ್ಕು ಇಲ್ಲಿ ಕಾಣುತ್ತಿದೆ (3)
6. ಕ್ಷಣ ಕ್ಷಣಕ್ಕೂ ಸೊಗಸಾಗಿ ಕಾಣುತ್ತಿರುವ ಶುಭಚಿಹ್ನೆ (3)
7. ಸೀಸೆಯ ಮುಚ್ಚಳ (3)
8. ಧಾನ್ಯ ಕುಟ್ಟಲು ಬಳಸುತ್ತಿದ್ದ ಸಾಧನ (3)
9. ಬೊಕ್ಕಸ ದೋಚಿರುವ ಅಸುರ (3)
10. ಜೈನ ದೇವಾಲಯ (3)
12. ದಂಗೆಯೊಳಗೆ ಪಲ್ಲಕ್ಕಿ ಕಾಣುತ್ತಿದೆಯೇ? (3)
13. ತೀರದ ಹತ್ತಿರದಲ್ಲಿದ್ದಾಗ ಕವಿದ ಅಂಧಕಾರ (3)



4667ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ: 1. ಉಪಯೋಗ 3. ಒಡ್ಡೋಲಗ 5. ಜುಲುಮೆ 6. ರಿಕಾಪು 8. ದುರುಳ 9. ನಿಮಿಷ 10. ನಗದು 12. ತಾಲವ್ಯ 14. ರಣಹೇಡಿ 15. ನತದೃಷ್ಟ

ಮೇಲಿಂದ ಕೆಳಕ್ಕೆ: 1. ಉಪಕಾರಿ 2. ಗಲೇಜು 3. ಒಲುಮೆ 4. ಗಟ್ಟಕುಳ 7. ಪುರುಷ 8. ದುಮ್ಮಾನ 9. ನಿರುತ್ತರ 11. ದುರಾದೃಷ್ಟ 12. ತಾಯ್ನುಡಿ 13. ವ್ಯಸನ

ಸುಡೊಕು 5054

	5			7			3	
7			2		3	6		8
		6		4			2	
4		3		1		8		6
	1		9		4		7	
9		8		3		4		1
1		9	3		5		8	7
	6			9			1	
5		7	4		1	9		3

ಆಡುವುದು ಹೇಗೆ? ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5053 ಸುಡೊಕು

2	4	1	6	8	3	9	7	5
9	8	5	2	4	7	6	1	3
7	6	3	1	9	5	8	4	2
4	5	9	8	2	1	7	3	6
6	1	7	3	5	4	2	9	8
8	3	2	9	7	6	4	5	1
3	2	4	7	1	8	5	6	9
5	9	6	4	3	2	1	8	7
1	7	8	5	6	9	3	2	4

ಹಾಕಿ: ಶುಭಾರಂಭ ಮಾಡಿದ ಭಾರತದ ಪುರುಷರ ತಂಡ; ನ್ಯೂಜಿಲೆಂಡ್‌ಗೆ ಸೋಲು

ಹರ್ಮನ್ ಕೈಚಳಕ: ಗೆಲುವಿನ ಪುಳಕ

ಟೋಕಿಯೊ (ಪಿಟಿಐ): ಹರ್ಮನ್‌ಪ್ರೀತ್ ಸಿಂಗ್ ಎರಡು ಗೋಲು ಗಳಿಸಿ ಮಿಂಚಿದರೆ, ಗೋಲ್‌ಕೀಪರ್ ಪಿ.ಆರ್.ಶ್ರೀಜೇಶ್ ಗೋಲುಪೆಟ್ಟಿಗೆ ಮುಂದೆ 'ಗೋಡೆ'ಯಾಗಿ ನಿಂತರು. ಇದರ ಪರಿಣಾಮ ಭಾರತ ಹಾಕಿ ತಂಡ ಶುಭಾರಂಭ ಮಾಡಿತು.

ಶನಿವಾರ ನಡೆದ 'ಎ' ಗುಂಪಿನ ಪಂದ್ಯದಲ್ಲಿ ಭಾರತ 3–2ರಿಂದ ನ್ಯೂಜಿಲೆಂಡ್ ವಿರುದ್ಧ ಗೆಲುವು ಸಾಧಿಸಿತು. ಕೊನೆಯ ಹಂತದಲ್ಲಿ ನ್ಯೂಜಿಲೆಂಡ್ ಭರ್ಜರಿ ಆಟವಾಡಿ ತಿರುಗೇಟು ನೀಡಲು ಪ್ರಯತ್ನಿಸಿತು. ಹೀಗಾಗಿ ಪಂದ್ಯ ರೋಚಕವಾಯಿತು. ಆದರೆ ಸವಾಲನ್ನು ಮೀರಿ ನಿಂತ ಮನಪ್ರೀತ್ ಸಿಂಗ್ ಬಳಗ ವಿಜಯಿಯಾಯಿತು.

ಒಯಿ ಹಾಕಿ ಕ್ರೀಡಾಂಗಣದಲ್ಲಿ 10ನೇ ನಿಮಿಷದಲ್ಲಿ ಚೆಂಡನ್ನು ಗುರಿ ಮುಟ್ಟಿಸಿದ ರೂಪಿಂದರ್ ಪಾಲ್ ಸಿಂಗ್ ಭಾರತಕ್ಕೆ ಮುನ್ನಡೆ ತಂದುಕೊಟ್ಟರು. 26 ಮತ್ತು 33ನೇ ನಿಮಿಷದಲ್ಲಿ ಹರ್ಮನ್‌ಪ್ರೀತ್ ಸಿಂಗ್ ಗಳಿಸಿದ ಗೋಲುಗಳೊಂದಿಗೆ ತಂಡದ ಮುನ್ನಡೆ ಮತ್ತಷ್ಟು ಹೆಚ್ಚಿತು.

ವಿಶ್ವ ಕ್ರಮಾಂಕದಲ್ಲಿ ನಾಲ್ಕನೇ ಸ್ಥಾನದಲ್ಲಿರುವ ಭಾರತಕ್ಕೆ ಎಂಟನೇ ಸ್ಥಾನದಲ್ಲಿರುವ ನ್ಯೂಜಿಲೆಂಡ್ ಆರನೇ ನಿಮಿಷದಲ್ಲೇ ಆಘಾತ ನೀಡಿತು. ಪೆನಾಲ್ಟಿ ಕಾರ್ನರ್ ಅವಕಾಶದಲ್ಲಿ ಕೇನ್ ರಸೆಲ್ ಗೋಲು ಗಳಿಸಿದರು. 3–1ರ ಹಿನ್ನಡೆಯಲ್ಲಿದ್ದಾಗ 43ನೇ ನಿಮಿಷದಲ್ಲಿ ಸ್ಟೀಫನ್ ಜೆನಿಸ್ ಗೋಲು ಗಳಿಸಿ ಭರವಸೆ ಮೂಡಿಸಿದರು. ಆದರೆ ನಂತರ ಶ್ರೀಜೇಶ್ ಅವರನ್ನು ವಂಚಿಸಿ ಚೆಂಡನ್ನು ಗುರಿ ಸೇರಿಸಲು ತಂಡಕ್ಕೆ ಸಾಧ್ಯವಾಗಲಿಲ್ಲ.

ಗೋಲು ಗಳಿಸದೇ ಇದ್ದರೂ ಸ್ಟ್ರೈಕರ್ ಮನದೀಪ್ ಸಿಂಗ್ ಉತ್ತಮ ಅವಕಾಶಗಳನ್ನು ಸೃಷ್ಟಿಸಿಕೊಳ್ಳುವಲ್ಲಿ ಯಶಸ್ವಿಯಾದರು. 10ನೇ ನಿಮಿಷದಲ್ಲಿ ತಂಡಕ್ಕೆ ಪೆನಾಲ್ಟಿ ಕಾರ್ನರ್ ಅವಕಾಶ ಸಿಗಲು ಅವರು ಕಾರಣರಾದರು. ಅದನ್ನು ರೂಪಿಂದರ್ ಗೋಲಾಗಿ ಪರಿವರ್ತಿಸಿದರು. ನಂತರ ಪ್ರಬಲ ದಾಳಿಗೆ ಮುಂದಾದ ನ್ಯೂಜಿಲೆಂಡ್ ನಾಲ್ಕು ಸತತ ಪೆನಾಲ್ಟಿ ಕಾರ್ನರ್‌ಗಳನ್ನು ಗಳಿಸಿತು.

ಮರುಹೋರಾಟ ನಡೆಸಿದ ಭಾರತ ಗುರ್ಜಂತ್ ಮೂಲಕ ಗೋಲು ಗಳಿಸುವ ಅವಕಾಶ ಹೊಂದಿತ್ತು. ಆದರೆ ಎದುರಾಳಿ ತಂಡದ ಗೋಲ್‌ಕೀಪರ್ ಲಿಯಾನ್ ಹೇವಾರ್ಡ್ ಅವರು ಅಡ್ಡಿಯಾದರು. ಮೊದಲಾರ್ಧದ ಮುಕ್ತಾಯಕ್ಕೆ ನಾಲ್ಕು ನಿಮಿಷಗಳು ಇದ್ದಾಗ ಮನಪ್ರೀತ್ ಸಿಂಗ್ ಅವರ ಮುನ್ನಡೆಯನ್ನೂ ಹೇವಾರ್ಡ್ ವಿಫಲಗೊಳಿಸಿದರು. ನಿಗದಿತ ಅವಧಿ ಮುಕ್ತಾಯಕ್ಕೆ ಮೂರು ನಿಮಿಷಗಳು ಇದ್ದಾಗ ಭಾರತದ ಮುನ್ನಡೆ ಮತ್ತಷ್ಟು ಹೆಚ್ಚಿಸಲು ಲಲಿತ್ ಉಪಾಧ್ಯಾಯ ಪ್ರಯತ್ನಿಸಿದರು. ಆದರೆ ಆಗಲೂ ಹೇವಾರ್ಡ್ ಅಡ್ಡಿಯಾದರು.

ನಂತರ ನ್ಯೂಜಿಲೆಂಡ್ ಸಮಬಲ ಸಾಧಿಸುವ ಗೋಲಿಗಾಗಿ ಭಾರಿ ಹೋರಾಟ ನಡೆಸಿತು. ಭಾರತದ ಆವರಣದಲ್ಲಿ ಸತತ ಆಕ್ರಮಣ ನಡೆಸಿತು. ಆದರೆ ಮೋಹಕ ಗೋಲ್‌ಕೀಪಿಂಗ್ ಮೂಲಕ ಶ್ರೀಜೇಶ್ ಆ ತಂಡಕ್ಕೆ ನಿರಾಸೆ ಉಂಟುಮಾಡಿದರು. ಮುಂದಿನ ಹಣಾಹಣಿಯಲ್ಲಿ ಭಾರತ ಬಲಿಷ್ಠ ಆಸ್ಟ್ರೇಲಿಯಾವನ್ನು ಎದುರಿಸಲಿದೆ. ಈ ಪಂದ್ಯ ಭಾನುವಾರ ನಡೆಯಲಿದೆ. ಮೊದಲ ಪಂದ್ಯದಲ್ಲಿ ಆಸ್ಟ್ರೇಲಿಯಾ 5–3ರಲ್ಲಿ ಆತಿಥೇಯ ಜಪಾನ್ ವಿರುದ್ಧ ಜಯ ಗಳಿಸಿತು.

ಎರಡು ಗೋಲು ಗಳಿಸಿದ ಹರ್ಮನ್‌ಪ್ರೀತ್ ಸಿಂಗ್ (ಮಧ್ಯ) ಅವರನ್ನು ಆಟಗಾರರು ಅಭಿನಂದಿಸಿದರು. ರೂಪಿಂದರ್ ಪಾಲ್ (ಬಲ) ಇದ್ದಾರೆ –ರಾಯಿಟರ್ಸ್ ಚಿತ್ರ

> ಒಲಿಂಪಿಕ್ಸ್‌ನಂಥ ದೊಡ್ಡ ಕೂಟಗಳಲ್ಲಿ ಮೂರು ಪಾಯಿಂಟ್ ಗಳಿಸುವುದು ದೊಡ್ಡ ಸಾಧನೆಯೆ. ಎರಡು ಮತ್ತು ಮೂರನೇ ಕ್ವಾರ್ಟರ್‌ನಲ್ಲಿ ತಂಡ ಉತ್ತಮ ಸಾಮರ್ಥ್ಯ ಪ್ರದರ್ಶಿಸಿತು. ಉಳಿದ ಎರಡು ಕ್ವಾರ್ಟರ್‌ಗಳಲ್ಲಿ ಸ್ವಲ್ಪ ಪ್ರಯಾಸದಲ್ಲೇ ಆಡಿತು.
> **ಗ್ರಹಾಂ ರೀಡ್,** ಭಾರತ ತಂಡದ ಕೋಚ್

ಇತರ ಪಂದ್ಯಗಳ ಫಲಿತಾಂಶಗಳು

ಜಪಾನ್ ವಿರುದ್ಧ ಆಸ್ಟ್ರೇಲಿಯಾಗೆ	5-3 ರಲ್ಲಿ ಜಯ
ಬೆಲ್ಜಿಯಂಗೆ ನೆದರ್ಲೆಂಡ್ಸ್ ವಿರುದ್ಧ	3-1 ರಲ್ಲಿ ಜಯ
ಅರ್ಜೆಂಟೀನಾ–ಸ್ಪೇನ್ ಪಂದ್ಯ	1-1 ರಲ್ಲಿ ಡ್ರಾ

ಮಂಕಾದ ಸೌರಭ್



ಟೋಕಿಯೊ (ಪಿಟಿಐ): ಶೂಟಿಂಗ್ ರೇಂಜ್‌ನಲ್ಲಿ ಮೊದಲ ದಿನ ಭಾರತಕ್ಕೆ ನಿರಾಸೆ ಕಾಡಿತು. ಸೌರಭ್ ಚೌಧರಿ ಪದಕದ ಸುತ್ತಿನಲ್ಲಿ ಮಂಕಾದರು.

ಪುರುಷರ 10 ಮೀಟರ್ಸ್ ಏರ್ ಪಿಸ್ತೂಲ್ ಸ್ಪರ್ಧೆಯಲ್ಲಿ ಪಾಲ್ಗೊಂಡಿದ್ದ ಸೌರಭ್, ಏಳನೇ ಸ್ಥಾನಕ್ಕೆ ತೃಪ್ತರಾದರು. 25 ಶಾಟ್‌ಗಳ ಫೈನಲ್‌ನಲ್ಲಿ ಅವರು 137.4 ಸ್ಕೋರ್ ಗಳಿಸಲಷ್ಟೇ ಶಕ್ತರಾದರು. ಅರ್ಹತಾ ಸುತ್ತಿನಲ್ಲಿ ಅಗ್ರಸ್ಥಾನ (586 ಸ್ಕೋರ್) ಗಳಿಸಿದ್ದ ಸೌರಭ್, ಫೈನಲ್‌ನಲ್ಲಿ ನಿಖರ ಗುರಿ ಹಿಡಿಯಲಿಲ್ಲ.

ಅಭಿಷೇಕ್ ವರ್ಮಾ (575) ಅರ್ಹತಾ ಹಂತದಲ್ಲೇ ಹೊರಬಿದ್ದರು. ಇರಾನ್‌ನ ಜಾವೇದ್ ಫೊರೊಗಿ (244.8) ಒಲಿಂಪಿಕ್ ದಾಖಲೆಯೊಂದಿಗೆ ಚಿನ್ನ ಜಯಿಸಿದರು. ಸರ್ಬಿಯಾದ ದಮಿರ್ ಮಿಕೆಚ್ ಮತ್ತು ಚೀನಾದ ಪಾಂಗ್ ವೀ ಕ್ರಮವಾಗಿ ಬೆಳ್ಳಿ ಮತ್ತು ಕಂಚಿನ ಪದಕ ಪಡೆದರು.

ಮಹಿಳೆಯರ 10 ಮೀ. ಏರ್ ರೈಫಲ್‌ನಲ್ಲಿ ಸ್ಪರ್ಧಿಸಿದ್ದ ಇಳವೆನ್ನಿಲ ವಾಳರಿವನ್ ಮತ್ತು ಅಪೂರ್ವಿ ಚಾಂಡೇಲಾ ಅರ್ಹತಾ ಸುತ್ತಿನಲ್ಲೇ ಹೋರಾಟ ಮುಗಿಸಿದರು.

ಮಹಿಳೆಯರಿಗೆ ಆರಂಭಿಕ ನಿರಾಸೆ

ಟೋಕಿಯೊ (ಪಿಟಿಐ): ಮಹಿಳಾ ಹಾಕಿಯಲ್ಲಿ ಭಾರತ ತಂಡ ಜಯದ ಆರಂಭ ಪಡೆಯಲು ವಿಫಲವಾಯಿತು.

'ಎ' ಗುಂಪಿನ ಹಣಾಹಣಿಯಲ್ಲಿ 1–5 ಗೋಲುಗಳಿಂದ ನೆದರ್ಲೆಂಡ್ಸ್‌ಗೆ ಶರಣಾಯಿತು.

ಮೊದಲ ಎರಡು ಕ್ವಾರ್ಟರ್‌ಗಳಲ್ಲಿ ದಿಟ್ಟ ಸಾಮರ್ಥ್ಯ ತೋರಿದ ರಾಣಿ ರಾಂಪಾಲ್ ಬಳಗ ದ್ವಿತೀಯಾರ್ಧದಲ್ಲಿ ಸಂಪೂರ್ಣವಾಗಿ ಮಂಕಾಯಿತು.

ನೆದರ್ಲೆಂಡ್ಸ್ 6ನೇ ನಿಮಿಷದಲ್ಲಿ ಖಾತೆ ತೆರೆಯಿತು. ಫೆಲಿಸ್ ಅಲ್ಬರ್ಸ್ ಗೋಲು ಬಾರಿಸಿದರು. ಇದರ ಬೆನ್ನಲ್ಲೇ (10ನೇ ನಿಮಿಷ) ಕೈಚಳಕ ತೋರಿದ ರಾಣಿ ರಾಂಪಾಲ್ ಸಮಬಲಕ್ಕೆ ಕಾರಣರಾದರು. ದ್ವಿತೀಯಾರ್ಧದಲ್ಲಿ ನೆದರ್ಲೆಂಡ್ಸ್ ಪೂರ್ಣ ಪ್ರಾಬಲ್ಯ ಮೆರೆದು ಸಂಭ್ರಮಿಸಿತು.

ಗೋಲು ಗಳಿಸಿದ ಖುಷಿಯಲ್ಲಿ ರಾಣಿ ರಾಂಪಾಲ್

ಸುಮಿತ್ ಐತಿಹಾಸಿಕ ಸಾಧನೆ

ಟೋಕಿಯೊ (ಪಿಟಿಐ): ಅಮೋಘ ಆಟವಾಡಿದ ಟೆನಿಸ್ ಆಟಗಾರ ಸುಮಿತ್ ನಗಾಲ್ ಟೋಕಿಯೊ ಕ್ರೀಡಾಕೂಟದಲ್ಲಿ ಐತಿಹಾಸಿಕ ಸಾಧನೆ ಮಾಡಿದ್ದಾರೆ. ಪುರುಷರ ಸಿಂಗಲ್ಸ್ ವಿಭಾಗದ ಮೊದಲ ಸುತ್ತಿನಲ್ಲಿ ಜಯ ಸಾಧಿಸುವುದರೊಂದಿಗೆ ಒಲಿಂಪಿಕ್ಸ್‌ನಲ್ಲಿ ಈ ಶ್ರೇಯ ಗಳಿಸಿದ ಭಾರತದ ಮೂರನೇ ಆಟಗಾರ ಎನಿಸಿಕೊಂಡಿದ್ದಾರೆ.

ಭಾರತದ ಆಟಗಾರ 6-4 6-7(6) 6-4ರಿಂದ ಉಜ್ಬೆಕಿಸ್ತಾನದ ಡೆನಿಸ್ ಇಸ್ತೊಮಿನ್ ಸವಾಲು ಮೀರಿದರು. ಇದರೊಂದಿಗೆ 25 ವರ್ಷಗಳ ಬಳಿಕ ಒಲಿಂಪಿಕ್ಸ್ ಸಿಂಗಲ್ಸ್ ವಿಭಾಗದಲ್ಲಿ ಮೊದಲ ಸುತ್ತಿನ ತಡೆ ದಾಟಿದ ಮೊದಲ ಭಾರತೀಯ ಎಂಬ ಶ್ರೇಯವೂ ಅವರದಾಯಿತು. ಎರಡನೇ ಸುತ್ತಿನ ಹಣಾಹಣಿಯಲ್ಲಿ ಅವರಿಗೆ ಕಠಿಣ ಸವಾಲು ಎದುರಾಗಿದ್ದು, ರಷ್ಯಾದ ಡೇನಿಯಲ್ ಮೆಡ್ವೆಡೆವ್ ಅವರನ್ನು ಎದುರಿಸಬೇಕಿದೆ.

1996ರ ಅಟ್ಲಾಂಟ ಒಲಿಂಪಿಕ್ಸ್‌ನ ಸಿಂಗಲ್ಸ್ ವಿಭಾಗದಲ್ಲಿ ಲಿಯಾಂಡರ್ ಪೇಸ್ ಕಂಚಿನ ಪದಕ ಗೆದ್ದ ಬಳಿಕ ಯಾರೂ ಮೊದಲ ಸುತ್ತಿನಲ್ಲಿ ಜಯಿಸಿರಲಿಲ್ಲ.

23 ವರ್ಷದ ನಗಾಲ್, ಮೊದಲ ಸುತ್ತಿನ ಆರನೇ ಗೇಮ್‌ನಲ್ಲಿ ಸಿಕ್ಕ ಬ್ರೇಕ್ ಅವಕಾಶವನ್ನು ಪಾಯಿಂಟ್ಸ್ ಆಗಿ ಪರಿವರ್ತಿಸುವಲ್ಲಿ ವಿಫಲರಾದರು. ಆದರೂ ಅದ್ಭುತ ಆಟವಾಡಿ ಸೆಟ್ ವಶಪಡಿಸಿಕೊಂಡರು. ಎರಡನೇ ಸೆಟ್‌ನಲ್ಲಿ ಭಾರತದ ಆಟಗಾರನಿಗೆ 4–1ಮುನ್ನಡೆ ಸಿಕ್ಕಿತು. ತಿರುಗೇಟು ನೀಡಿದ ಇಸ್ತೊಮಿನ್ ಟೈಬ್ರೇಕ್‌ವರೆಗೆ ಸೆಟ್ ಕೊಂಡೊಯ್ದು ತಮ್ಮದಾಗಿಸಿಕೊಂಡರು. 3ನೇ ಮತ್ತು ಅಂತಿಮ ಸೆಟ್‌ನಲ್ಲಿ ಲಯಕ್ಕೆ ಮರಳಿದ ಭಾರತದ ಆಟಗಾರ ಪಂದ್ಯ ಗೆದ್ದುಕೊಂಡರು.

ಜೊಕೊವಿಚ್ ಶುಭಾರಂಭ: 'ಗೋಲ್ಡನ್ ಗ್ರ್ಯಾನ್‌ಸ್ಲಾಮ್' ಮೇಲೆ ಕಣ್ಣಿಟ್ಟಿರುವ ವಿಶ್ವದ ಅಗ್ರಕ್ರಮಾಂಕದ ಆಟಗಾರ ಸರ್ಬಿಯದ ನೊವಾಕ್ ಜೊಕೊವಿಚ್, ಮೊದಲ ಪಂದ್ಯದಲ್ಲಿ 6-2, 6-2ರಿಂದ ಬೊಲಿವಿಯಾದ ಹ್ಯೂಗೊ ಡೆಲಿಯನ್ ಎದುರು ಗೆದ್ದರು.

ಸುಮಿತ್ ನಗಾಲ್

ಸಿಂಗಲ್ಸ್ ವಿಭಾಗದ ಮೊದಲ ಪಂದ್ಯ ಗೆದ್ದ ಭಾರತದ ಆಟಗಾರರು

ಆಟಗಾರ	ಒಲಿಂಪಿಕ್ಸ್	ಹಂತ
ಜೀಶನ್ ಅಲಿ	1988 ಸೋಲ್	ಮೊದಲ ಸುತ್ತಿನಲ್ಲಿ ಜಯ
ಲಿಯಾಂಡರ್ ಪೇಸ್	1996 ಅಟ್ಲಾಂಟ	ಕಂಚಿನ ಪದಕ
ಸುಮಿತ್ ನಗಾಲ್	ಟೋಕಿಯೊ 2021	ಮೊದಲ ಸುತ್ತಿನಲ್ಲಿ ಜಯ*

ಚೀನಾಕ್ಕೆ ಮೊದಲ ಚಿನ್ನ

ಟೋಕಿಯೊ (ಪಿಟಿಐ): ಈ ಸಲದ ಕೂಟದಲ್ಲಿ ಮೊದಲ ಚಿನ್ನ ಗೆದ್ದ ದೇಶ ಎಂಬ ಹಿರಿಮೆಗೆ ಚೀನಾ ಪಾತ್ರವಾಯಿತು.

ಮಹಿಳೆಯರ 10 ಮೀ. ಏರ್ ರೈಫಲ್‌ನಲ್ಲಿ ಸ್ಪರ್ಧಿಸಿದ್ದ ಈ ದೇಶದ ಶೂಟರ್ ಕ್ವಿಯಾನ್ ಯಾಂಗ್ ಚಿನ್ನಕ್ಕೆ ಗುರಿ ಇಟ್ಟರು. 251.8 ಸ್ಕೋರ್ ಗಳಿಸಿದ ಅವರು ಒಲಿಂಪಿಕ್ ದಾಖಲೆಯನ್ನೂ ನಿರ್ಮಿಸಿದರು. ರಷ್ಯಾ ಒಲಿಂಪಿಕ್ ಸಮಿತಿಯ ಅನಸ್ತೇಸಿಯಾ ಗಲಶಿನಾ (251.1) ಬೆಳ್ಳಿ ಗೆದ್ದರೆ, ಸ್ವಿಟ್ಜರ್ಲೆಂಡ್‌ನ ನಿನಾ ಕ್ರಿಸ್ಟಿನ್ (230.6) ಕಂಚು ಪಡೆದರು.

ಚಿನ್ನಕ್ಕೆ ಮುತ್ತಿಟ್ಟ ಕ್ವಿಯಾನ್ ಯಾಂಗ್ –ರಾಯಿಟರ್ಸ್ ಚಿತ್ರ

ಪದಕ ಪಟ್ಟಿ

ದೇಶ	ಚಿನ್ನ	ಬೆಳ್ಳಿ	ಕಂಚು	ಒಟ್ಟು
ಚೀನಾ	3	0	1	4
ಇಟಲಿ	1	1	0	2
ಜಪಾನ್	1	1	0	2
ಕೊರಿಯಾ	1	0	2	3
ಈಕ್ವೆಡಾರ್	1	0	0	1
ಭಾರತ (12ನೇ ಸ್ಥಾನ)	0	1	0	1

ಜಪಾನ್‌ಗೆ ಚಿನ್ನ ತಂದ ನೊಹಿಸಾ ಟಕಾಟೊ

ಟೋಕಿಯೊ (ರಾಯಿಟರ್ಸ್): ಆತಿಥೇಯ ಜಪಾನ್ ದೇಶಕ್ಕೆ ಮೊದಲ ದಿನವೇ ಚಿನ್ನದ ಪದಕ ಒಲಿಯಿತು.

ಪುರುಷರ 60 ಕೆಜಿ ವಿಭಾಗದ ಜುಡೊ ಸ್ಪರ್ಧೆಯಲ್ಲಿ ನೊಹಿಸಾ ಟಕಾಟೊ ಚಿನ್ನ ಗೆದ್ದರು. ಜಪಾನಿನಲ್ಲಿ 140 ವರ್ಷಗಳ ಹಿಂದೆ ಜುಡೊ ಪ್ರವರ್ಧಮಾನಕ್ಕೆ ಬಂದಿತ್ತು. ಟಕಾಟೊ ಫೈನಲ್‌ನಲ್ಲಿ ಯಾಂಗ್ ಯುಂಗ್ ವಿ ಎದುರು ಗೆದ್ದರು.

ಆರ್ಚರಿ: ಎಂಟರಘಟ್ಟದಲ್ಲಿ ಎಡವಿದ ದೀಪಿಕಾ–ಪ್ರವೀಣ್

ಟೋಕಿಯೊ (ಪಿಟಿಐ): ಆರ್ಚರಿ ಸ್ಪರ್ಧೆಯ ಮಿಶ್ರ ತಂಡ ವಿಭಾಗದಲ್ಲಿ ಭಾರತದ ಪದಕದ ಕನಸು ಕಮರಿತು.

ದೀಪಿಕಾ ಕುಮಾರಿ ಹಾಗೂ ಪ್ರವೀಣ್ ಜಾಧವ್, ಬಲಿಷ್ಠ ದಕ್ಷಿಣ ಕೊರಿಯಾ ವಿರುದ್ಧದ ಕ್ವಾರ್ಟರ್ ಫೈನಲ್‌ನಲ್ಲಿ ಶನಿವಾರ 2–6ರಿಂದ ಸೋತರು.

ದೀಪಿಕಾ ಮತ್ತು ಪ್ರವೀಣ್ ಅಂತರರಾಷ್ಟ್ರೀಯ ಕೂಟದಲ್ಲಿ ಮೊದಲ ಬಾರಿ ಜೊತೆಯಾಗಿ ಕಣಕ್ಕಿಳಿದಿದ್ದರು.

ಯುಮೆನೊಶಿಮಾ ಪಾರ್ಕ್‌ನಲ್ಲಿ ನಡೆದ ಪೈಪೋಟಿಯಲ್ಲಿ ಕೊರಿಯಾದ ಆ್ಯನ್ ಸಾನ್ ಮತ್ತು ಕಿಮ್ ಜೆ ಡಿಯೊಕ್ ನಿಖರ ಗುರಿ ಹಿಡಿದು 35–32ರಿಂದ ಮೊದಲ ಸೆಟ್ ಜಯಿಸಿದರು.

ಎರಡನೇ ಸೆಟ್‌ನಲ್ಲಿ ಪ್ರವೀಣ್ ಮಿಂಚಿದರು. ಎರಡು ಬಾರಿಯೂ 10 ಪಾಯಿಂಟ್ಸ್‌ಗೆ ಗುರಿ ಇಟ್ಟರು. ಆದರೆ ದೀಪಿಕಾ ಬಿಟ್ಟ ಬಾಣಗಳು 8 ಮತ್ತು 9ನೇ ಪಾಯಿಂಟ್ಸ್‌ನ ವೃತ್ತದೊಳಗೆ ನಾಟಿದವು. ಹೀಗಾಗಿ ಭಾರತದ ಜೋಡಿ ಒಂದು ಪಾಯಿಂಟ್‌ನಿಂದ (37–38) ಸೆಟ್ ಸೋತಿತು.

ಮೂರನೇ ಸೆಟ್‌ನಲ್ಲಿ ಭಾರತದ ಜೋಡಿ ಮೂರು ಬಾರಿ 9 ಹಾಗೂ ಒಮ್ಮೆ 8 ಪಾಯಿಂಟ್ಸ್‌ಗೆ ಗುರಿ ಇಟ್ಟಿತು. ಹೀಗಾಗಿ ಸೆಟ್ ಭಾರತದ ತೆಕ್ಕೆಗೆ ಜಾರಿತು.

ನಾಲ್ಕನೇ ಸೆಟ್‌ನಲ್ಲೂ ದೀಪಿಕಾ ಮತ್ತು ಪ್ರವೀಣ್ ಮಿಂಚಬಹುದೆಂಬ ನಿರೀಕ್ಷೆ ಹುಸಿಯಾಯಿತು.

ಆ್ಯನ್ ಸಾನ್ ಮತ್ತು ಕಿಮ್ ಜೆ ಡಿಯೊಕ್ ವಿಜಯ ವೇದಿಕೆಯಲ್ಲಿ ಪರಸ್ಪರ ಚಿನ್ನದ ಪದಕ ಕೊರಳಿಗೆ ಹಾಕಿಕೊಂಡರು –ಎಎಫ್‌ಪಿ ಚಿತ್ರ

ದಕ್ಷಿಣ ಕೊರಿಯಾ ಜೋಡಿಗೆ ಚಿನ್ನ

ಆ್ಯನ್ ಸಾನ್ ಮತ್ತು ಕಿಮ್ ಜೆ ಡಿಯೊಕ್ ಸೆಮಿಫೈನಲ್ ಮತ್ತು ಫೈನಲ್‌ನಲ್ಲೂ ಪ್ರಾಬಲ್ಯ ಮೆರೆದು ಚಿನ್ನದ ಪದಕ ಪಡೆದರು.

ಫೈನಲ್‌ನಲ್ಲಿ ಇವರು 5–3ರಿಂದ ನೆದರ್ಲೆಂಡ್ಸ್‌ನ ಗೇಬ್ರಿಯೆಲಾ ಮತ್ತು ಸ್ಟೀವ್ ವಿಜ್ಲರ್ ಅವರನ್ನು ಮಣಿಸಿದರು. ಕಂಚಿನ ಪದಕದ ಪೈಪೋಟಿಯಲ್ಲಿ ಮೆಕ್ಸಿಕೊ 6–2ರಿಂದ ಟರ್ಕಿ ಎದುರು ಜಯಿಸಿತು.

ಬ್ಯಾಡ್ಮಿಂಟನ್: ಪ್ರಣೀತ್‌ಗೆ ನಿರಾಸೆ

ಟೋಕಿಯೊ (ಪಿಟಿಐ): ಪುರುಷರ ಸಿಂಗಲ್ಸ್‌ನಲ್ಲಿ ಕಣದಲ್ಲಿದ್ದ ಬಿ.ಸಾಯಿಪ್ರಣೀತ್, ಚೊಚ್ಚಲ ಒಲಿಂಪಿಕ್ಸ್‌ನಲ್ಲಿ ಹೆಜ್ಜೆಗುರುತು ಮೂಡಿಸಲು ವಿಫಲರಾದರು.

'ಡಿ' ಗುಂಪಿನ ಮೊದಲ ಹಣಾಹಣಿಯಲ್ಲೇ ಪ್ರಣೀತ್ 17–21,15–21ರಿಂದ ಇಸ್ರೇಲ್‌ನ ಜಿಲ್‌ಬರ್ಮನ್ ಮಿಶಾ ಎದುರು ಮಣಿದರು. ಈ ಹೋರಾಟ 41 ನಿಮಿಷಗಳಲ್ಲೇ ಮುಗಿಯಿತು.

ಬ್ಯಾಡ್ಮಿಂಟನ್: ವಿಶ್ವ ರ್‍ಯಾಂಕಿಂಗ್‌ನಲ್ಲಿ 3ನೇ ಸ್ಥಾನದಲ್ಲಿದ್ದ ಜೋಡಿಗೆ ಆಘಾತ ನೀಡಿದ ಆಟಗಾರರು

ಜಯದ ಮುನ್ನುಡಿ ಬರೆದ ಸಾತ್ವಿಕ್–ಚಿರಾಗ್

ಚಿರಾಗ್ ಶೆಟ್ಟಿ ಷಟಲ್ ಹಿಂತಿರುಗಿಸಲು ಪ್ರಯತ್ನಿಸಿದರು. ಸಾತ್ವಿಕ್ ಸಾಯಿರಾಜ್ (ಹಿಂಬದಿ) ಇದ್ದಾರೆ –ರಾಯಿಟರ್ಸ್ ಚಿತ್ರ

ಪಂದ್ಯದ ವಿವರ

ಚಿರಾಗ್/ಸಾತ್ವಿಕ್		ಯಾಂಗ್/ವಾಂಗ್
21	ಮೊದಲ ಗೇಮ್	16
16	ಎರಡನೇ ಗೇಮ್	21
27	ಮೂರನೇ ಗೇಮ್	25
ಅವಧಿ: 1 ಗಂಟೆ 6 ನಿಮಿಷ.		

ಟೋಕಿಯೊ (ಪಿಟಿಐ): ಭಾರತದ ಭರವಸೆಯ ಜೋಡಿ ಚಿರಾಗ್ ಶೆಟ್ಟಿ ಹಾಗೂ ಸಾತ್ವಿಕ್ ಸಾಯಿರಾಜ್ ರಣಕಿರೆಡ್ಡಿ ಗೆಲುವಿನೊಂದಿಗೆ ಒಲಿಂಪಿಕ್ಸ್ ಅಭಿಯಾನ ಆರಂಭಿಸಿದೆ.

ಮೊದಲ ಬಾರಿ ಕೂಟಕ್ಕೆ ಅಡಿ ಇಟ್ಟಿರುವ ಯುವ ತಾರೆಯರು 'ಎ' ಗುಂಪಿನ ಮೊದಲ ಸುತ್ತಿನ ಹಣಾಹಣಿಯಲ್ಲೇ ವಿಶ್ವ ರ್‍ಯಾಂಕಿಂಗ್‌ನಲ್ಲಿ 3ನೇ ಸ್ಥಾನದಲ್ಲಿರುವ ಯಾಂಗ್ ಲೀ ಹಾಗೂ ಚಿ ಲಿನ್ ವಾಂಗ್‌ಗೆ ಆಘಾತ ನೀಡಿದರು.

ಶನಿವಾರದ ಈ ಪೈಪೋಟಿ ರೋಚಕತೆಗೆ ಸಾಕ್ಷಿಯಾಯಿತು. ಕ್ಷಣ ಕ್ಷಣಕ್ಕೂ ತಿರುವು ಪಡೆಯುತ್ತಿದ್ದ ಮೂರನೇ ಗೇಮ್‌ನಲ್ಲಿ ಚೀನಾ ತೈಪೆ ಆಟಗಾರರ ಸದ್ದಡಗಿಸಿದ ಭಾರತದ ಆಟಗಾರರು ಖುಷಿಯಿಂದ ಬೀಗಿದರು.

ಆಕ್ರಮಣ ಮತ್ತು ರಕ್ಷಣೆಗೆ ಒತ್ತು ನೀಡಿದ ಸಾತ್ವಿಕ್ ಮತ್ತು ಚಿರಾಗ್ ಮೊದಲ ಗೇಮ್‌ನ ಶುರುವಿನಲ್ಲೇ 7–2 ಮುನ್ನಡೆ ಪಡೆದರು. ನಂತರವೂ ಗುಣಮಟ್ಟದ ಆಟಕ್ಕೆ ಒತ್ತು ನೀಡಿ ಮುನ್ನಡೆಯನ್ನು 11–7ಕ್ಕೆ ಹೆಚ್ಚಿಸಿಕೊಂಡು ವಿರಾಮಕ್ಕೆ ಹೋದರು. ದ್ವಿತೀಯಾರ್ಧದಲ್ಲೂ ಪ್ರಾಬಲ್ಯ ಮುಂದುವರಿಸಿ ಗೇಮ್ ಗೆದ್ದರು.

ಎರಡನೇ ಗೇಮ್‌ನಲ್ಲಿ ಲೀ ಮತ್ತು ವಾಂಗ್ ಲಯ ಕಂಡುಕೊಂಡರು. ಸಿಕ್ಕ ಅವಕಾಶಗಳನ್ನೆಲ್ಲಾ ಪಾಯಿಂಟ್ಸ್‌ಗಳನ್ನಾಗಿ ಪರಿವರ್ತಿಸಿ 10–8 ಮುನ್ನಡೆ ಗಳಿಸಿದರು. ಎರಡನೇ ಅವಧಿಯಲ್ಲೂ ಪರಿಣಾಮಕಾರಿಯಾಗಿ ಆಡಿದ ಈ ಜೋಡಿ ಗೇಮ್ ಜಯಿಸಿ 1–1 ಸಮಬಲ ಸಾಧಿಸಿತು.

ಮೂರನೇ ಗೇಮ್‌ನ ಆರಂಭದಲ್ಲೇ ಚಿರಾಗ್ ಮತ್ತು ಸಾತ್ವಿಕ್ 2–0 ಮುನ್ನಡೆ ತಮ್ಮದಾಗಿಸಿಕೊಂಡರು. ನಂತರ ಉಭಯ ಜೋಡಿಯೂ ಜಿದ್ದಾಜಿದ್ದಿನಿಂದ ಸೆಣಸಿತು. ಹೀಗಾಗಿ 10–10ರಲ್ಲಿ ಸಮಬಲ ಕಂಡುಬಂತು. ಈ ಹಂತದಲ್ಲಿ ಸಾತ್ವಿಕ್ ಎಸಗಿದ ತಪ್ಪಿನಿಂದಾಗಿ ಚೀನಾ ತೈಪೆ ಆಟಗಾರರ ಖಾತೆಗೆ ಪಾಯಿಂಟ್ ಸೇರ್ಪಡೆಯಾಯಿತು.

ವಿರಾಮದ ನಂತರ ಹುಮ್ಮಸ್ಸಿನಿಂದ ಹೋರಾಡಿ 13–13ರಲ್ಲಿ ಸಮಬಲ ಸಾಧಿಸಿದ ಭಾರತದ ಜೋಡಿ ನಂತರ ಹಲವು ತಪ್ಪುಗಳನ್ನು ಮಾಡಿ ಪಾಯಿಂಟ್ಸ್ ಬಿಟ್ಟುಕೊಟ್ಟಿತು. 18–15ರಿಂದ ಮುನ್ನಡೆ ಕಾಯ್ದುಕೊಂಡಿದ್ದ ಲೀ ಮತ್ತು ವಾಂಗ್ ಸುಲಭವಾಗಿ ಪಂದ್ಯ ಗೆಲ್ಲುತ್ತಾರೆ ಎಂದು ಅಂದಾಜಿಸಲಾಗಿತ್ತು. ಆದರೆ ಚಿರಾಗ್ ಮತ್ತು ಸಾತ್ವಿಕ್ ಎದುರಾಳಿಗಳಿಗೆ ಪ್ರಬಲ ಪ್ರತಿರೋಧ ಒಡ್ಡಿದರು. ಹೀಗಾಗಿ ಪಂದ್ಯದಲ್ಲಿ 20–20, 24–24ರ ಸಮಬಲ ಕಂಡುಬಂತು. ರೋಚಕ ಘಟ್ಟದಲ್ಲಿ ಭಾರತದ ಜೋಡಿ ಮೊದಲ 'ಮ್ಯಾಚ್ ಪಾಯಿಂಟ್' ಕೈಚೆಲ್ಲಿತು. ಹೀಗಾಗಿ ಟಿ.ವಿ.ಎದುರು ಕುಳಿತು ಪಂದ್ಯ ವೀಕ್ಷಿಸುತ್ತಿದ್ದವರ ಎದೆಬಡಿತವೂ ಜೋರಾಗಿತ್ತು. ನಂತರ ಚೀನಾ ತೈಪೆ ಆಟಗಾರರು ಎಡವಟ್ಟು ಮಾಡಿ ಕೈಸುಟ್ಟುಕೊಂಡರು.

ಇಂದು ಸಿಂಧು ಪಂದ್ಯ

ಮಹಿಳಾ ಸಿಂಗಲ್ಸ್‌ನಲ್ಲಿ ಭಾರತದ ಭರವಸೆಯಾಗಿರುವ ಪಿ.ವಿ. ಸಿಂಧು ಭಾನುವಾರ ಒಲಿಂಪಿಕ್ಸ್ ಅಭಿಯಾನ ಆರಂಭಿಸಲಿದ್ದಾರೆ.

'ಜೆ' ಗುಂಪಿನ ಮೊದಲ ಹಣಾಹಣಿಯಲ್ಲಿ ಸಿಂಧು, ಇಸ್ರೇಲ್‌ನ ಸೆನಿಯಾ ಪೊಲಿಕರ್ಪೊವಾ ಎದುರು ಹೋರಾಡಲಿದ್ದಾರೆ.

ವೇಟ್‌ಲಿಫ್ಟಿಂಗ್: 21 ವರ್ಷಗಳ ನಂತರ ಒಲಿದ ಪದಕ; ದಾಖಲೆ ಬರೆದ ಚೀನಾದ ಹೌ ಜಿಹುಯಿ

ಮೀರಾಬಾಯಿ ಕೊರಳಿಗೆ ಬೆಳ್ಳಿ ಹಾರ

ಮೀರಾಬಾಯಿ ಚಾನು –ಎಎಫ್‌ಪಿ ಚಿತ್ರ

ಟೋಕಿಯೊ (ಪಿಟಿಐ): ಒಲಿಂಪಿಕ್ಸ್ ವೇಟ್‌ಲಿಫ್ಟಿಂಗ್‌ನಲ್ಲಿ ಪದಕ ಗೆಲ್ಲುವ ಎರಡು ದಶಕಗಳ ಭಾರತದ ಕಾಯುವಿಕೆಗೆ ಮೀರಾಬಾಯಿ ಚಾನು ಶನಿವಾರ ಕೊನೆ ಹಾಡಿದರು. ಮಹಿಳೆಯರ 49 ಕೆಜಿ ವಿಭಾಗದ ಸ್ಪರ್ಧೆಯಲ್ಲಿ ಅವರು ಬೆಳ್ಳಿ ಪದಕ ತಮ್ಮದಾಗಿಸಿಕೊಂಡರು. ಒಲಿಂಪಿಕ್ ದಾಖಲೆಯೊಂದಿಗೆ ಚೀನಾದ ಹೌ ಜಿಹುಯಿ ಚಿನ್ನ ಗೆದ್ದರೆ, ಕಂಚಿನ ಪದಕ ಇಂಡೊನೇಷ್ಯಾದ ಐಸಹಾ ವಿಂಡಿ ಕಾಂಟಿಕಾ ಅವರ ಪಾಲಾಯಿತು.

26 ವರ್ಷದ ಮೀರಾಬಾಯಿ ಒಟ್ಟು 202 ಕೆಜಿ (87 ಕೆಜಿ ಸ್ನ್ಯಾಚ್ ಮತ್ತು 115 ಕೆಜಿ ಕ್ಲೀನ್ ಆ್ಯಂಡ್ ಜರ್ಕ್) ಭಾರ ಎತ್ತಿದರು. 2000ನೇ ಇಸವಿಯಲ್ಲಿ ಸಿಡ್ನಿ ಒಲಿಂಪಿಕ್ಸ್‌ನಲ್ಲಿ ಕರ್ಣಂ ಮಲ್ಲೇಶ್ವರಿ ಕಂಚು ಗೆದ್ದ ನಂತರ ಭಾರತಕ್ಕೆ ಪದಕ ಸಿಗುತ್ತಿರುವುದು ಇದೇ ಮೊದಲು. ಕಳೆದ ಬಾರಿ ರಿಯೊ ಡಿ ಜನೈರೊದಲ್ಲಿ ಮೀರಾಬಾಯಿ ನಿರಾಸೆ ಅನುಭವಿಸಿದ್ದರು. ಹೌ ಜಿಹುಯಿ ಒಟ್ಟು 210 ಕೆಜಿ (94 ಕೆಜಿ ಮತ್ತು 116 ಕೆಜಿ) ಭಾರ ಎತ್ತಿದರು. ಇಂಡೊನೇಷ್ಯಾ ವೇಟ್‌ಲಿಫ್ಟರ್ 194 ಕೆಜಿ (84 ಕೆಜಿ ಮತ್ತು 110 ಕೆಜಿ) ಸಾಧನೆ ಮಾಡಿದರು. ಸ್ನ್ಯಾಚ್‌ನ ಮೊದಲ ಪ್ರಯತ್ನದಲ್ಲಿ 84 ಕೆಜಿ ಎತ್ತಿದ ಮೀರಾಬಾಯಿ ನಂತರ ಅದನ್ನು 87 ಕೆಜಿ ಏರಿಸಿದರು. ಮೂರನೇ ಪ್ರಯತ್ನದಲ್ಲಿ ವೈಫಲ್ಯ ಕಂಡರು. 94 ಕೆಜಿ ಎತ್ತಿದ ಚೀನಾದ ಕ್ರೀಡಾಪಟು ಒಲಿಂಪಿಕ್ಸ್ ದಾಖಲೆ ಬರೆದರು. ಕ್ಲೀನ್ ಆ್ಯಂಡ್ ಜರ್ಕ್‌ನಲ್ಲಿ ವಿಶ್ವ ದಾಖಲೆ ಹೊಂದಿರುವ ಮೀರಾಬಾಯಿ ಮೊದಲ ಎರಡು ಪ್ರಯತ್ನಗಳಲ್ಲಿ ಕ್ರಮವಾಗಿ 110 ಮತ್ತು 115 ಕೆಜಿ ಸಾಧನೆ ಮಾಡಿದರು. ಮೂರನೇ ಸುತ್ತಿನಲ್ಲಿ ವೈಫಲ್ಯ ಕಂಡರು. ಆದರೆ ಅಷ್ಟರಲ್ಲಿ ಬೆಳ್ಳಿ ಪದಕ ಖಚಿತಪಡಿಸಿಕೊಂಡಿದ್ದರು.

ಪದಕ ಘೋಷಣೆ ಆದ ಕೂಡಲೇ ಕುಣಿದಾಡಿದ ಮೀರಾಬಾಯಿ ಕೋಚ್ ವಿಜಯ ಶರ್ಮಾ ಅವರನ್ನು ಅಪ್ಪಿಹಿಡಿದುಕೊಂಡು ಸಂಭ್ರಮಿಸಿದರು.

ಮೀರಾಬಾಯಿ

ಸ್ನ್ಯಾಚ್

84 ಮೊದಲ ಪ್ರಯತ್ನ
87 ಎರಡನೇ ಪ್ರಯತ್ನ
89* ಮೂರನೇ ಪ್ರಯತ್ನ

ಕ್ಲೀನ್ ಆ್ಯಂಡ್ ಜರ್ಕ್

ಮೊದಲ ಪ್ರಯತ್ನ 110
ಎರಡನೇ ಪ್ರಯತ್ನ 115
ಮೂರನೇ ಪ್ರಯತ್ನ 117*

(* ವಿಫಲ ಯತ್ನ)



ಹೌ ಜಿಹುಯಿ –ಎಎಫ್‌ಪಿ ಚಿತ್ರ

ಪದಕ ಗೆದ್ದ ಮೂವರ ಸಾಧನೆಯ ವಿವರ

ಲಿಫ್ಟರ್	ದೇಶ	ಸ್ನ್ಯಾಚ್	ಕ್ಲೀನ್/ಜರ್ಕ್	ಒಟ್ಟು
ಹೌ ಜಿಹುಯಿ	ಚೀನಾ	94	116	210
ಮೀರಾಬಾಯಿ	ಭಾರತ	87	115	202
ಐಸಾಹ್	ಇಂಡೊನೇಷ್ಯಾ	84	110	194

> ನಾನು ಕೇವಲ ಮಣಿಪುರಕ್ಕೆ ಸೀಮಿತವಲ್ಲ. ಭಾರತದ ಪ್ರಜೆ. ಈ ಕೂಟದಲ್ಲಿ ದೇಶಕ್ಕಾಗಿ ಮೊದಲ ಪದಕ ಗೆದ್ದುಕೊಡಲು ಸಾಧ್ಯವಾದದ್ದು ಅತ್ಯಂತ ಖುಷಿ ತಂದಿದೆ. ಈ ಗಳಿಗೆಗಾಗಿ ಐದು ವರ್ಷಗಳಿಂದ ಕಾಯುತ್ತಿದ್ದೆ. ಇದು ಅಭಿಮಾನಪಟ್ಟುಕೊಳ್ಳುವ ಸಮಯ. ಚಿನ್ನಕ್ಕಾಗಿ ಪ್ರಯತ್ನಿಸಿದ್ದೆ. ಬೆಳ್ಳಿ ಲಭಿಸಿದೆ. ಇದು ಸಣ್ಣ ಸಾಧನೆಯೇನೂ ಅಲ್ಲ ಎಂಬುದರ ಅರಿವಿದೆ.
> **ಮೀರಾಬಾಯಿ ಚಾನು**

ಒಲಿಂಪಿಕ್ಸ್‌ನಲ್ಲಿ ಉತ್ತಮ ಆರಂಭ. ಮೀರಾಬಾಯಿ ಅವರ ಅಮೋಘ ಸಾಧನೆಗೆ ಭಾರತ ಪುಳಕಗೊಂಡಿದೆ. ಅವರು ಗಳಿಸಿಕೊಟ್ಟಿರುವ ಬೆಳ್ಳಿ ಪದಕ ದೇಶದ ಪ್ರತಿಯೊಬ್ಬ ಪ್ರಜೆಗೂ ಪ್ರೇರಕವಾಗಲಿದೆ.
ನರೇಂದ್ರ ಮೋದಿ ಪ್ರಧಾನಮಂತ್ರಿ



ಮೀರಾಬಾಯಿ ಅವರಿಗೆ ಹಾರ್ದಿಕ ಅಭಿನಂದನೆಗಳು. ಇದು ಅತ್ಯಮೋಘ ಸಾಧನೆ. ಈ ಪದಕದ ಸಿಹಿ ಸಂಭ್ರಮವನ್ನು ದೇಶವು ಅನೇಕ ವರ್ಷಗಳ ನೆನಪಿನಲ್ಲಿಟ್ಟುಕೊಳ್ಳಲಿದೆ
ಅಭಿನವ್ ಬಿಂದ್ರಾ ಒಲಿಂಪಿಕ್ಸ್‌ನಲ್ಲಿ ಚಿನ್ನ ಗೆದ್ದ ಶೂಟರ್

ಮಣಿಪುರದ ಪ್ರತಿಭೆ

- ಜನನ ಆಗಸ್ಟ್ 8, 1994
- ವಯಸ್ಸು 26
- ಜನಿಸಿದ ಸ್ಥಳ ಇಂಫಾಲ್
- ಉದ್ಯೋಗ ಈಶಾನ್ಯ ರೈಲ್ವೆಯಲ್ಲಿ ಟಿಕೆಟ್ ಕಂಟ್ರೋಲರ್
- ಮಾದರಿ ಕುಂಜರಾಣಿ ದೇವಿ
- ವೃತ್ತಿಪರ ಕ್ರೀಡಾಪಟು 2008ರಿಂದ
- ವಿಭಾಗ 49 ಕೆಜಿ
- ಕೋಚ್ ವಿಜಯ ಶರ್ಮಾ
- ವಿಶ್ವ ದಾಖಲೆ 119 ಕೆಜಿ (ಏಪ್ರಿಲ್ 2021, ತಾಷ್ಕಂಟ್)

ಪದಕಗಳು

- ವಿಶ್ವ ಚಾಂಪಿಯನ್‌ಷಿಪ್ ಚಿನ್ನ (2017, 48 ಕೆಜಿ)
- ಕಾಮನ್ವೆಲ್ತ್ ಗೇಮ್ಸ್ ಚಿನ್ನ (2018, 48 ಕೆಜಿ)
- ಕಾಮನ್ವೆಲ್ತ್ ಗೇಮ್ಸ್ ಬೆಳ್ಳಿ (2014, 48 ಕೆಜಿ)
- ಏಷ್ಯನ್ ಚಾಂಪಿಯನ್‌ಷಿಪ್ ಕಂಚು (2020, 49 ಕೆಜಿ)
- ರಾಷ್ಟ್ರೀಯ ಚಾಂಪಿಯನ್‌ಷಿಪ್ ಚಿನ್ನ (2020, 49 ಕೆಜಿ)

ಕೋಚ್‌ಗೆ ₹ 10 ಲಕ್ಷ ಮೊತ್ತ

ಮೀರಾಬಾಯಿ ಅವರ ಕೋಚ್‌ಗೆ ₹ 10 ಲಕ್ಷ ನೀಡಲು ಭಾರತ ಒಲಿಂಪಿಕ್ ಸಂಸ್ಥೆ ನಿರ್ಧರಿಸಿದೆ. ಒಲಿಂಪಿಕ್ಸ್‌ನಲ್ಲಿ ಚಿನ್ನ ಗಳಿಸುವ ಕ್ರೀಡಾಪಟುವಿನ ಕೋಚ್‌ಗೆ ₹ 12.5 ಲಕ್ಷ ಮತ್ತು ಕಂಚಿನ ಪದಕ ಗಳಿಸುವ ಅಥ್ಲೀಟ್‌ನ ಕೋಚ್‌ಗೆ ₹ 7.5 ಲಕ್ಷ ನೀಡಲಾಗುವುದು ಎಂದು ತಿಳಿಸಲಾಗಿದೆ.

ಅಭಿನಂದನೆಯ ಹೂಮಳೆ: ಮೀರಾಬಾಯಿ ಅವರ ಮೇಲೆ ಅಭಿನಂದನೆಯ ಮಳೆ ಸುರಿಸಲಾಗಿದೆ. ರಾಷ್ಟ್ರಪತಿ ರಾಮನಾಥ ಕೋವಿಂದ್, ಕ್ರೀಡಾ ಸಚಿವರಾದ ಅನುರಾಗ್ ಠಾಕೂರ್, ಕಿರಣ್ ರಿಜಿಜು, ಕ್ರಿಕೆಟಿಗರಾದ ಸಚಿನ್ ತೆಂಡೂಲ್ಕರ್, ವೀರೇಂದ್ರ ಸೆಹ್ವಾಗ್, ವಿವಿಎಸ್ ಲಕ್ಷ್ಮಣ್, ಗೌತಮ್ ಗಂಭೀರ್, ಒಲಿಂಪಿಕ್ಸ್‌ನಲ್ಲಿ ಪದಕ ಗೆದ್ದಿರುವ ಕುಸ್ತಿಪಟು ಸಾಕ್ಷಿ ಮಲಿಕ್, ಕಾಮನ್ವೆಲ್ತ್ ಗೇಮ್ಸ್‌ನಲ್ಲಿ ಎರಡು ಚಿನ್ನ ಗೆದ್ದಿರುವ ಸತೀಶ್ ಶಿವಲಿಂಗಂ ಮುಂತಾದವರು ಅವರನ್ನು ಕೊಂಡಾಡಿದ್ದಾರೆ.

ಭಾರತದ ಸ್ಪರ್ಧಾ ಸಮಯ

ಬ್ಯಾಡ್ಮಿಂಟನ್

ಸಮಯ	ಸ್ಪರ್ಧೆ
ಬೆಳಿಗ್ಗೆ 7.10	ಮಹಿಳಾ ಸಿಂಗಲ್ಸ್ ಗುಂಪು ಹಂತ (ಪಿ.ವಿ.ಸಿಂಧು)

ಬಾಕ್ಸಿಂಗ್

ಸಮಯ	ಸ್ಪರ್ಧೆ
ಬೆಳಿಗ್ಗೆ 7.30	ಮಹಿಳೆಯರ ಫ್ಲೈವೇಟ್ ರೌಂಡ್ 32 (ಮೇರಿ ಕೋಮ್)
ಬೆಳಿಗ್ಗೆ 8.48	ಪುರುಷರ ಲೈಟ್‌ವೇಟ್ ರೌಂಡ್ 32 (ಮನೀಷ್ ಕೌಶಿಕ್)

ಜಿಮ್ನಾಸ್ಟಿಕ್ಸ್

ಸಮಯ	ಸ್ಪರ್ಧೆ
ಬೆಳಿಗ್ಗೆ 6.30	ಮಹಿಳೆಯರ ಆರ್ಟಿಸ್ಟಿಕ್ ಜಿಮ್ನಾಸ್ಟಿಕ್ಸ್ ಅರ್ಹತಾ ಸುತ್ತು (ಪ್ರಣತಿ ನಾಯಕ್)

ಸೇಲಿಂಗ್

ಸಮಯ	ಸ್ಪರ್ಧೆ
ಬೆಳಿಗ್ಗೆ 8.35	ಮಹಿಳೆಯರ ಲೇಸರ್ ರೇಡಿಯಲ್–ರೇಸ್ 1 (ನೇತ್ರಾ ಕುಮನನ್)
ಬೆಳಿಗ್ಗೆ 11.05	ಪುರುಷರ ಲೇಸರ್ ರೇಸ್ 1 (ವಿಷ್ಣು ಸರವಣನ್)

ಶೂಟಿಂಗ್

ಸಮಯ	ಸ್ಪರ್ಧೆ
ಬೆಳಿಗ್ಗೆ 5.30	ಮಹಿಳೆಯರ 10 ಮೀ. ಏರ್ ಪಿಸ್ತೂಲ್ ಅರ್ಹತಾ ಸುತ್ತು (ಮನು ಭಾಕರ್, ಯಶಸ್ವಿನಿ ಸಿಂಗ್ ದೇಸ್ವಾಲ್)
ಬೆಳಿಗ್ಗೆ 6 ಗಂಟೆ	ಪುರುಷರ ಸ್ಕೀಟ್ ಅರ್ಹತಾ ಸುತ್ತು ಮೊದಲ ದಿನ (ಅಂಗದ್ ಬಾಜ್ವಾ, ಮೈರಾಜ್ ಅಹಮದ್ ಖಾನ್)
ಬೆಳಿಗ್ಗೆ 7.45	ಮಹಿಳೆಯರ 10 ಮೀ. ಏರ್ ಪಿಸ್ತೂಲ್ ಫೈನಲ್
ಬೆಳಿಗ್ಗೆ 9.30	ಪುರುಷರ 10 ಮೀ. ಏರ್ ರೈಫಲ್ ಅರ್ಹತಾ ಸುತ್ತು (ದೀಪಕ್ ಕುಮಾರ್, ದಿವ್ಯಾಂಶ್ ಸಿಂಗ್ ಪನ್ವರ್)
ಮಧ್ಯಾಹ್ನ 12 ಗಂಟೆ	ಪುರುಷರ 10 ಮೀ. ಏರ್ ರೈಫಲ್ ಫೈನಲ್

ಈಜು

ಸಮಯ	ಸ್ಪರ್ಧೆ
ಮಧ್ಯಾಹ್ನ 3.32	ಮಹಿಳೆಯರ 100 ಮೀ.ಬ್ಯಾಕ್‌ಸ್ಟ್ರೋಕ್ ಹೀಟ್ಸ್ (ಮಾನಾ ಪಟೇಲ್)
ಮಧ್ಯಾಹ್ನ 3.50	ಪುರುಷರ 200 ಮೀ. ಫ್ರೀಸ್ಟೈಲ್ ಹೀಟ್ಸ್ (ಸಜನ್ ಪ್ರಕಾಶ್)
ಸಂಜೆ 4.26	ಪುರುಷರ 100 ಮೀ. ಬ್ಯಾಕ್‌ಸ್ಟ್ರೋಕ್ ಹೀಟ್ಸ್ (ಶ್ರೀಹರಿ ನಟರಾಜ್)

ಟೇಬಲ್ ಟೆನಿಸ್

ಸಮಯ	ಸ್ಪರ್ಧೆ
ಬೆಳಿಗ್ಗೆ 10.30	ಪುರುಷ ಮತ್ತು ಮಹಿಳೆಯರ ಸಿಂಗಲ್ಸ್ ವಿಭಾಗದ ಎರಡು ಮತ್ತು ಮೂರನೇ ಸುತ್ತಿನ ಪಂದ್ಯಗಳು (ಮಣಿಕಾ ಬಾತ್ರಾ ಮತ್ತು ಜಿ.ಸತ್ಯನ್)

ಟೆನಿಸ್

ಸಮಯ	ಸ್ಪರ್ಧೆ
ಬೆಳಿಗ್ಗೆ 7.30	ಮಹಿಳಾ ಡಬಲ್ಸ್ ಮೊದಲ ಸುತ್ತು (ಸಾನಿಯಾ ಮಿರ್ಜಾ ಮತ್ತು ಅಂಕಿತಾ ರೈನಾ)

ಹಾಕಿ (ಪುರುಷರ ತಂಡ)

ಸಮಯ	ಸ್ಪರ್ಧೆ
ಮಧ್ಯಾಹ್ನ 3 ಗಂಟೆ	ಭಾರತ–ಆಸ್ಟ್ರೇಲಿಯಾ

ಭಾರತೀಯ ಕಾಲಮಾನ | ಲೈವ್ ಸೋನಿ ನೆಟ್‌ವರ್ಕ್

2016ರ ಆಲ್‌ರೌಂಡ್ ವಿಭಾಗದಲ್ಲಿ ಪದಕ ಜಯಿಸಿದವರು

ಸ್ಪರ್ಧಿ	ದೇಶ	ಪದಕ
ಸಿಮೊನಾ ಬೈಲ್ಸ್	ಅಮೆರಿಕ	ಚಿನ್ನ
ಆ್ಯಲಿ ರೈಸಮನ್	ಅಮೆರಿಕ	ಬೆಳ್ಳಿ
ಅಲಿಯಾ ಮುಸ್ತಫಿನಾ	ರಷ್ಯಾ	ಕಂಚು

ಪ್ರಣತಿ ಸ್ಪರ್ಧಿಸುತ್ತಿರುವ ವಿಭಾಗಗಳು

- ಬ್ಯಾಲನ್ಸ್ ಬೀಮ್
- ಫ್ಲೋರ್
- ಅನ್‌ಇವನ್ ಬಾರ್ಸ್
- ವೈಯಕ್ತಿಕ ಆಲ್‌ರೌಂಡ್
- ವಾಲ್ಟ್

ಪ್ರಣತಿ ನಾಯಕ್ – ಪಿಟಿಐ ಚಿತ್ರ

ಜಿಮ್ನಾಸ್ಟಿಕ್ಸ್ ಬೆಳಗುವರೇ ಪ್ರಣತಿ?

ಟೋಕಿಯೊ: ಜಿಮ್ನಾಸ್ಟಿಕ್ಸ್ ಕ್ರೀಡೆಯಲ್ಲಿ ಒಲಿಂಪಿಕ್ಸ್ ಅರ್ಹತೆ ಗಿಟ್ಟಿಸಿದ ಭಾರತದ ಎರಡನೇ ಮಹಿಳಾ ಸ್ಪರ್ಧಿ ಪ್ರಣತಿ ನಾಯಕ್. 2016ರ ರಿಯೊ ಒಲಿಂಪಿಕ್ಸ್‌ನಲ್ಲಿ ದೀಪಾ ಕರ್ಮಾಕರ್ ಬಿತ್ತಿದ ಕನಸಿಗೆ ಬಣ್ಣ ತುಂಬುವ ತವಕದಲ್ಲಿದ್ದಾರೆ ಪಶ್ಚಿಮ ಬಂಗಾಳದ ಪ್ರಣತಿ.

ತ್ರಿಪುರಾದ ದೀಪಾ, ರಿಯೊ ಕೂಟದಲ್ಲಿ ಮಹಿಳೆಯರ ವಾಲ್ಟ್ ವಿಭಾಗದಲ್ಲಿ ಅಲ್ಪ ಅಂತರದಲ್ಲಿ ಕಂಚಿನ ಪದಕ ತಪ್ಪಿಸಿಕೊಂಡಿದ್ದರು. ನಾಲ್ಕನೇ ಸ್ಥಾನ ಗಳಿಸಿದ್ದರು. ಆದರೆ ಗಾಯದಿಂದಾಗಿ ಅವರು ಈ ಬಾರಿಯ ಒಲಿಂಪಿಕ್ಸ್‌ನಲ್ಲಿ ಭಾಗವಹಿಸುತ್ತಿಲ್ಲ.

ಪಶ್ಚಿಮ ಬಂಗಾಳದ ಪಿಂಗ್ಲಾದ ಹುಡುಗಿ ಪ್ರಣತಿ ಮೇಲೆ ಈಗ ಪದಕದ ನಿರೀಕ್ಷೆಯಿದೆ. ಏಷ್ಯನ್ ಕೋಟಾದಡಿ ಒಲಿಂಪಿಕ್ಸ್ ಟಿಕೆಟ್ ಗಿಟ್ಟಿಸಿರುವ ಅವರು, ಭಾನುವಾರ ಅರಿಯೇಕ್ ಜಿಮ್ನಾಸ್ಟಿಕ್ಸ್ ಕೇಂದ್ರದಲ್ಲಿ ನಡೆಯುವ ಅರ್ಹತಾ ಸುತ್ತಿನಲ್ಲಿ ಸ್ಪರ್ಧಿಸುತ್ತಿದ್ದಾರೆ.

26 ವರ್ಷದ ಪ್ರಣತಿಗೆ ಮಿನಾರಾ ಬೇಗಂ ಅವರು ಹಲವು ವರ್ಷಗಳ ಕಾಲ ತರಬೇತಿ ನೀಡಿದ್ದಾರೆ. ಅವರ ಮಾರ್ಗದರ್ಶನದಲ್ಲಿ ಪ್ರಣತಿ, ವಾಲ್ಟ್‌ನಲ್ಲಿ ಪರಿಣತಿ ಸಾಧಿಸಿದ್ದಾರೆ. ಭಾರತ ಕ್ರೀಡಾ ಪ್ರಾಧಿಕಾರದ (ಸಾಯ್) ಕೋಚ್ ಲಖನ್ ಶರ್ಮಾ ಕೂಡ ಪ್ರಣತಿ ಅಭ್ಯಾಸಕ್ಕೆ ನೀರೆರೆದಿದ್ದಾರೆ. ಪ್ರಣತಿ ಬಡತನ ಕುಟುಂಬದ ಹಿನ್ನೆಲೆಯಿಂದ ಬಂದವರು. ತಂದೆ ಶ್ರೀಮಂತ ನಾಯಕ್ ಬಸ್ ಚಾಲಕ ವೃತ್ತಿ ಮಾಡುತ್ತಿದ್ದವರು. ಅವರಿಗೆ ಮೂವರು ಪುತ್ರಿಯರು. ಬಾಲ್ಯದಿಂದಲೇ ಕ್ರೀಡಾಪ್ರೇಮ ಬೆಳೆಸಿಕೊಂಡ ಪ್ರಣತಿಯ ಪ್ರತಿಭೆಯನ್ನು ತಂದೆ ಶ್ರೀಮಂತಗೊಳಿಸಿದರು.

2019ರಲ್ಲಿ ಉಲಾನ್‌ಬಾತರ್‌ನಲ್ಲಿ ನಡೆದಿದ್ದ ಏಷ್ಯನ್ ಚಾಂಪಿಯನ್‌ಷಿಪ್‌ನ ವಾಲ್ಟ್ ಪ್ರಣತಿ ಕಂಚಿನ ಪದಕ ಜಯಿಸಿದ್ದರು. ಅದೇ ವರ್ಷ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಒಟ್ಟು 45.832 (ವಾಲ್ಟ್ 14.200, ಫ್ಲೋರ್ ಎಕ್ಸೈಜ್ 11.133, ಬಾರ್ 10.566 ಮತ್ತು ಬೀಮ್‌ನಲ್ಲಿ 9.933) ಪಾಯಿಂಟ್‌ಗಳನ್ನು ಗಳಿಸಿದ್ದರು.

ರಿಯೊ ಒಲಿಂಪಿಕ್ಸ್‌ನಲ್ಲಿ ನಾಲ್ಕು ಚಿನ್ನದ ಪದಕ ಜಯಿಸಿದ್ದ ಅಮೆರಿಕದ ಸಿಮೊನಾ ಬೈಲ್ಸ್ ಈ ಬಾರಿಯೂ ಫೇವರಿಟ್ ಆಗಿದ್ದಾರೆ. ಚೀನಾ, ರಷ್ಯಾ ಸ್ಪರ್ಧಿಗಳು ಕಠಿಣ ಸ್ಪರ್ಧೆ ನೀಡಬಲ್ಲರು.

ಟೇಬಲ್ ಟೆನಿಸ್: ಮಿಶ್ರ ಡಬಲ್ಸ್‌ನಲ್ಲಿ ಶರತ್ ಕಮಲ್ ಜೋಡಿಗೆ ನಿರಾಶೆ

ಭರವಸೆ ಉಳಿಸಿದ ಮಣಿಕಾ, ಸುತೀರ್ಥ

ಮಣಿಕಾ ಬಾತ್ರಾ ಆಟದ ವೈಖರಿ –ರಾಯಿಟರ್ಸ್ ಚಿತ್ರ

ಸುತೀರ್ಥ ಮುಖರ್ಜಿ –ಎಎಫ್‌ಪಿ ಚಿತ್ರ

ಟೋಕಿಯೊ(ಪಿಟಿಐ): ಭಾರತದ ಮಣಿಕಾ ಬಾತ್ರಾ ಮತ್ತು ಸುತೀರ್ಥ ಮುಖರ್ಜಿ ಶನಿವಾರ ನಡೆದ ಟೇಬಲ್ ಟೆನಿಸ್ ಮಹಿಳೆಯರ ಸಿಂಗಲ್ಸ್‌ನಲ್ಲಿ ಗೆಲುವಿನ ಆರಂಭ ಮಾಡಿ ಭರವಸೆ ಮೂಡಿಸಿದರು.

62ನೇ ಶ್ರೇಯಾಂಕದ ಮಣಿಕಾ 4–0ಯಿಂದ 94ನೇ ಶ್ರೇಯಾಂಕದ, ಬ್ರಿಟನ್ ಆಟಗಾರ್ತಿ ಟಿನ್ ಟಿನ್ ಹೊ ವಿರುದ್ಧ ನಿರಾಯಾಸವಾಗಿ ಜಯ ಗಳಿಸಿದರು.

ಇನ್ನೊಂದು ಪಂದ್ಯದಲ್ಲಿ 98ನೇ ಶ್ರೇಯಾಂಕದ ಸುತೀರ್ಥ 5-11, 11-9, 11-13, 9-11, 11-3, 11-9, 11-5 ರಿಂದ ಸ್ವೀಡನ್‌ನ 78ನೇ ರ‍್ಯಾಂಕ್‌ನ ಲಿಂಡಾ ಬರ್ಗ್‌ಸ್ಟ್ರಾಮ್ ವಿರುದ್ಧ ರೋಚಕ ಜಯ ಸಾಧಿಸಿದರು. ಸುತೀರ್ಥಗೆ ಇದು ಚೊಚ್ಚಲ ಒಲಿಂಪಿಕ್ಸ್.

ಅವರು ಎರಡನೇ ಸುತ್ತಿನಲ್ಲಿ ಪೋರ್ಚುಗಲ್‌ನ ಫೂ ಯು ವಿರುದ್ಧ ಮತ್ತು ಮಣಿಕಾ ಉಕ್ರೇನ್‌ನ ಮಾರ್ಗರೀಟಾ ಪೆಸೋಸ್ಕಾ ವಿರುದ್ಧ ಆಡುವರು.

ಮಿಶ್ರ ಡಬಲ್ಸ್ ನಿರಾಶೆ: ಬೆಳಿಗ್ಗೆ ನಡೆದ ಮಿಶ್ರ ಡಬಲ್ಸ್‌ನಲ್ಲಿ ಮಣಿಕಾ ಮತ್ತು ಅಚಂತಾ ಶರತ್ ಕಮಲ್ ಜೋಡಿಯು ನಿರಾಶೆ ಅನುಭವಿಸಿತು.

ಭಾರತದ ಜೋಡಿಯು 16ರ ಘಟ್ಟದಲ್ಲಿ 0–4ರಿಂದ ಮೂರನೇ ಶ್ರೇಯಾಂಕದ, ತೈಪೆಯ ಲಿನ್ ಯುನ್ ಜು ಮತ್ತು ಚೆಂಗ್ ಐ ಚಿಂಗ್ ಎದುರು ಸೋತರು.

‘ಬಾಲಕಿ’ ಟೇಬಲ್ ಟೆನಿಸ್ ಪಟು

ಟೋಕಿಯೊ (ಎಎಫ್‌ಪಿ): ಮೊದಲ ಸುತ್ತಿನಲ್ಲೇ ಸೋತರೂ ಬಾಲಕಿ, ಟೇಬಲ್ ಟೆನಿಸ್ ಆಟಗಾರ್ತಿ ಹೇಂಡ್ ಜಾಜಾ ಅವರು ಒಲಿಂಪಿಕ್ಸ್ ಅಂಗಣದಲ್ಲಿ ಗಮನ ಸೆಳೆದರು. ಯುದ್ಧಪೀಡಿತ ಸಿರಿಯಾದಿಂದ ಒಲಿಂಪಿಕ್ಸ್‌ಗೆ ಆಯ್ಕೆಯಾಗಿ ಕಳೆದ ವರ್ಷ ಅವರು ಅಚ್ಚರಿ ಮೂಡಿಸಿದ್ದ ಅವರಿಗೆ ಈಗ ಬರೀ 12 ವರ್ಷ ವಯಸ್ಸು.

ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಪಾಲ್ಗೊಂಡಿರುವ ಅತಿ ಕಿರಿಯ ಮತ್ತು ಒಟ್ಟಾರೆ ಒಲಿಂಪಿಕ್ಸ್‌ನಲ್ಲಿ ಪಾಲ್ಗೊಳ್ಳುತ್ತಿರುವ ಎರಡನೇ ಅತಿ ಕಿರಿಯ ಕ್ರೀಡಾಪಟು ಹೇಂಡ್ ಜಾಜಾ. ಒಲಿಂಪಿಕ್ಸ್‌ನಲ್ಲಿ ಆಡಲು ಅವಕಾಶ ಸಿಕ್ಕಿದ್ದೇ ದೊಡ್ಡ ಗೌರವ ಎಂಬುದು ಅವರ ಅಭಿಪ್ರಾಯ.

ಶನಿವಾರ ನಡೆದ ಪಂದ್ಯದಲ್ಲಿ ಆಸ್ಟ್ರಿಯಾದ ಲಿಯು ಜಿಯಾ ಎದುರು 4–11, 9–11, 3–11, 5–11ರಲ್ಲಿ ಸೋತರು. 1968ರ ಒಲಿಂಪಿಕ್ಸ್‌ನಲ್ಲಿ ಪಾಲ್ಗೊಂಡಿದ್ದ 11 ವರ್ಷದ ರೊಮೇನಿಯಾ ಸ್ಕೇಟಿಂಗ್‌ಪಟು ಬೀಟ್ರಿಸ್ ಜಗತ್ತಿನ ಕ್ರೀಡಾಹಬ್ಬದಲ್ಲಿ ಪಾಲ್ಗೊಂಡ ಅತಿ ಕಿರಿಯರಾಗಿದ್ದಾರೆ.

ಸರ್ಕಾರದ ವಿರುದ್ಧ 2011ರಲ್ಲಿ ಆರಂಭಗೊಂಡಿರುವ ಯುದ್ಧ ಸಿರಿಯಾದಲ್ಲಿ ಲಕ್ಷಾಂತರ ನಾಗರಿಕರನ್ನು ಬಲಿ ಪಡೆದಿದೆ. ಲಕ್ಷಗಟ್ಟಲೆ ಮಂದಿ ನಾಪತ್ತೆಯಾಗಿದ್ದಾರೆ. ಅಂಥ ದೇಶದಿಂದ ಬಂದಿರುವ ಜಾಜಾ ಶುಕ್ರವಾರ ನಡೆದ ಉದ್ಘಾಟನಾ ಸಮಾರಂಭದಲ್ಲಿ ರಾಷ್ಟ್ರಧ್ವಜ ಹಿಡಿದುಕೊಂಡು ಹೆಜ್ಜೆ ಹಾಕಿದ್ದರು.

‘12 ವರ್ಷದ ಬಾಲಕಿಯೊಬ್ಬಳು 39 ವರ್ಷದ ಅನುಭವಿ ಆಟಗಾರ್ತಿಯ ಎದುರು ಪೈಪೋಟಿ ನಡೆಸಿ ಒಂಬತ್ತೊ ಹತ್ತೊ ಪಾಯಿಂಟ್ ಗಳಿಸುವುದೆಂದರೆ ಸಣ್ಣ ವಿಷಯವಲ್ಲ. ಆದ್ದರಿಂದ ಈ ಕೂಟದಿಂದ ಹುಮ್ಮಸ್ಸು ಹೆಚ್ಚಿದೆ’ ಎಂದು ಜಾಜಾ ಅಭಿಪ್ರಾಯಪಟ್ಟರು.

ಹೇಂಡ್ ಜಾಜಾ –ಎಎಫ್‌ಪಿ ಚಿತ್ರ

ಪದಕಗಳೊಂದಿಗೆ ಆಗ್ನೆಷ್ ಕೆಲೆಟಿ

ಶತಾಯುಷಿ ಒಲಿಂಪಿಯನ್!

ಬೆಂಗಳೂರು: ಆಗ್ನೇಷ್ ಕೆಲೆಟಿಗೆ ಈಗ 100ರ ಸಂಭ್ರಮ. ಪ್ರಸ್ತುತ ಬದುಕಿರುವ ಒಲಿಂಪಿಯನ್ ಕ್ರೀಡಾಪಟುಗಳಲ್ಲಿ ಅತ್ಯಂತ ಹಿರಿಯ ವಯಸ್ಸಿನವರು.

ಈ ಸುದೀರ್ಘ ಜೀವನದಲ್ಲಿ ಅವರ ಮನದಲ್ಲಿ ಮಡುಗಟ್ಟಿದ ನೋವುಗಳಿಗೆ ಲೆಕ್ಕವಿಲ್ಲ. ಎದುರಿಸಿದ ಸವಾಲುಗಳು ಒಂದೆರಡಲ್ಲ. ಮಹಾಯುದ್ಧದ ಭೀಕರತೆ, ಧರ್ಮ ಸಂಘರ್ಷದ ಕಾವು, ದೇಶಾಂತರದ ನೋವು ಉಂಡರು. ಆದರೆ, ಅವೆಲ್ಲವನ್ನೂ ದಾಟಿಕೊಂಡೇ ಸಾಧನೆಯ ಶಿಖರ ಏರಿದರು.

ನಾಲ್ಕನೇ ವಯಸ್ಸಿನಲ್ಲಿ ಜಿಮ್ನಾಸ್ಟಿಕ್ಸ್ ಕಲಿಯಲು ಆರಂಭಿಸಿದ ಕೆಲೆಟಿ ಒಲಿಂಪಿಕ್ಸ್‌ನ ಅಪ್ರತಿಮ ಜಿಮ್ನಾಸ್ಟ್‌ಗಳಲ್ಲಿ ಅಗ್ರಗಣ್ಯರು. ಹಂಗರಿಯ ಬುಡಾಪೆಸ್ಟ್‌ನಲ್ಲಿ ಜೂಯಿಷ್ ಕುಟುಂಬದಲ್ಲಿ ಜನಿಸಿದ ಆಗ್ನೇಷ್ ನಾಲ್ಕನೇ ವಯಸ್ಸಿನಲ್ಲಿ ಜಿಮ್ನಾಸ್ಟಿಕ್ಸ್ ಕಲಿಕೆ ಆರಂಭಿಸಿದರು. ಒಲಿಂಪಿಕ್ಸ್‌ನಲ್ಲಿ ಐದು ಚಿನ್ನ, ಮೂರು ಬೆಳ್ಳಿ ಮತ್ತು ಎರಡು ಕಂಚಿನ ಪದಕಗಳನ್ನು ಗೆದ್ದು ದಾಖಲೆ ಬರೆದರು. ಟೋಕಿಯೊದಲ್ಲಿ ಅವರನ್ನು ಗೌರವಿಸಲಾಗುತ್ತಿದೆ.

ಸ್ಥಳೀಯ ಕ್ರೀಡಾಪಟುವಿಗೆ ಮಣಿದ ಬಾಕ್ಸರ್: ಸ್ಪರ್ಧೆಯಿಂದ ಹೊರಗೆ

ವಿಕಾಸ್‌ಗೆ ಒಕಜಾವ ‘ಪಂಚ್’

ಟೋಕಿಯೊ (ಪಿಟಿಐ): ಪದಕದ ಭರವಸೆ ಮೂಡಿಸಿದ್ದ ಭಾರತದ ವಿಕಾಸ್ ಕೃಷನ್ ಅವರು ಒಲಿಂಪಿಕ್ಸ್ ಬಾಕ್ಸಿಂಗ್‌ನ ಮೊದಲ ಸುತ್ತಿನಲ್ಲೇ ಸೋತು ಹೊರಬಿದ್ದರು. ಸ್ಥಳೀಯ ಬಾಕ್ಸರ್ ಸೆವೊನ್ರೆಟ್ಸ್ ಕ್ವಿನ್ಸಿ ಮೆನ್ಸಾ ಒಕಜಾವ ಎದುರು ಶನಿವಾರ ನಡೆದ 69 ಕೆಜಿ ವಿಭಾಗದ ಹಣಾಹಣಿಯಲ್ಲಿ ವಿಕಾಸ್ 0–5 ಅಂತರದಿಂದ ಸೋತರು.

ಭಾರತದಿಂದ ಒಂಬತ್ತು ಬಾಕ್ಸರ್‌ಗಳು ಒಲಿಂಪಿಕ್ಸ್‌ನಲ್ಲಿ ಪಾಲ್ಗೊಳ್ಳುತ್ತಿದ್ದು ಇದು ಮೊದಲ ಬೌಟ್ ಆಗಿತ್ತು. ಜಿದ್ದಾಜಿದ್ದಿಯ ಸ್ಪರ್ಧೆಯ ನಡುವೆ 29 ವರ್ಷದ ವಿಕಾಸ್ ಅವರ ಎಡಗಣ್ಣಿನ ಅಂಚಿನಲ್ಲಿ ಗಾಯವಾಗಿ ರಕ್ತ ಚಿಮ್ಮಿತು. ಅವರು ಭುಜದ ನೋವಿನಿಂದ ಬಳಲುತ್ತಿದ್ದರು ಎಂದು ತಂಡದ ಮೂಲಗಳು ತಿಳಿಸಿವೆ.

2019ರ ಏಷ್ಯನ್ ಚಾಂಪಿಯನ್‌ಷಿಪ್‌ನಲ್ಲಿ ಬೆಳ್ಳಿ ಗೆದ್ದಿದ್ದ ಒಕಜಾವ ಅದೇ ವರ್ಷ ನಡೆದಿದ್ದ ವಿಶ್ವ ಚಾಪಿಯನ್‌ಷಿಪ್‌ನಲ್ಲಿ ಕ್ವಾರ್ಟರ್ ಫೈನಲ್ ತಲುಪಿದ್ದರು. ಶನಿವಾರದ ಬೌಟ್‌ನಲ್ಲಿ ಆರಂಭದಿಂದ ಅಂತ್ಯದ ವರೆಗೂ ಆಧಿಪತ್ಯ ಸ್ಥಾಪಿಸಿದ ಒಕಜಾವ ತುದಿಗಾಲಲ್ಲಿ ಕುಣಿಯುವ ನೃತ್ಯಪಟುವಿನಂತೆ ರಿಂಗ್‌ನಲ್ಲಿ ಓಡಾಡಿದರು.

ಪ್ರೀ ಕ್ವಾರ್ಟರ್ ಫೈನಲ್ ಹಂತದ ಬೌಟ್‌ನಲ್ಲಿ ಅವರು ಮೂರನೇ ಶ್ರೇಯಾಂಕಿತ, ಕ್ಯೂಬಾದ ರೊನೀಲ್ ಇಗ್ಲೇಸಿಯಸ್ ಎದುರು ಸೆಣಸುವರು. ಇಗ್ಲೇಸಿಯಸ್ 2012ರ ಒಲಿಂಪಿಕ್ಸ್‌ನಲ್ಲಿ ಚಿನ್ನ ಗೆದ್ದಿದ್ದು ಒಂದು ಬಾರಿ ವಿಶ್ವ ಚಾಂಪಿಯನ್ ಕೂಡ ಆಗಿದ್ದರು.

ವಿಕಾಸ್ ಕೃಷನ್ ಮತ್ತು ಮೆನ್ಸಾ ಒಕಜಾವ ನಡುವಿನ ಪೈಪೋಟಿ –ರಾಯಿಟರ್ಸ್ ಚಿತ್ರ

ವಿಷ್ಣು, ನೇತ್ರಾ ಅಭಿಯಾನ ಇಂದಿನಿಂದ

ಸೇಲಿಂಗ್

ಟೋಕಿಯೊ: ಒಲಿಂಪಿಕ್ಸ್‌ನಲ್ಲಿ ಭಾರತ ಸೇಲಿಂಗ್ ಪಟುಗಳ ಅಭಿಯಾನ ಭಾನುವಾರ ಆರಂಭವಾಗಲಿದೆ. ಇದೇ ಮೊದಲ ಬಾರಿ ದೇಶದ ನಾಲ್ವರು ಸ್ಪರ್ಧಿಗಳು ಕ್ರೀಡಾಕೂಟಕ್ಕೆ ಟಿಕೆಟ್ ಗಿಟ್ಟಿಸಿದ್ದು ಉತ್ತಮ ಸಾಮರ್ಥ್ಯ ತೋರುವ ನಿರೀಕ್ಷೆ ಮೂಡಿಸಿದ್ದಾರೆ.

ಭಾನುವಾರ ನೇತ್ರಾ ಕುಮನನ್ ಅವರು ಲೇಸರ್ ರೇಡಿಯಲ್ ರೇಸ್‌ನಲ್ಲಿ ಕಣಕ್ಕಿಳಿಯಲಿದ್ದರೆ, ವಿಷ್ಣು ಸರವಣನ್ ಅವರು ಲೇಸರ್ ಒಂದನೇ ರೇಸ್‌ನಲ್ಲಿ ಸ್ಪರ್ಧಿಸಲಿದ್ದಾರೆ.

ಕರ್ನಾಟಕದ ಗಣಪತಿ ಚೆಂಗಪ್ಪ ಮತ್ತು ವರುಣ್ ಥಕ್ಕರ್ ಕ್ರೀಡಾಕೂಟಕ್ಕೆ ಅರ್ಹತೆ ಗಳಿಸಿರುವ ಇನ್ನಿಬ್ಬರು ಸ್ಪರ್ಧಿಗಳು. ಕೇಂದ್ರ ಸರ್ಕಾರದ ಟಾಪ್ಸ್ ಯೋಜನೆಯಡಿ ಯೂರೋಪ್‌ನ ವಿವಿಧ ದೇಶಗಳಲ್ಲಿ ಸೇಲಿಂಗ್ ಪಟುಗಳು ತರಬೇತಿ ಪಡೆದಿದ್ದಾರೆ.

ರಿಪೇಚ್ ಸುತ್ತಿಗೆ ಅರವಿಂದ್, ಅರ್ಜುನ್: ಅರವಿಂದ್ ಸಿಂಗ್ ಮತ್ತು ಅರ್ಜುನ್ ಲಾಲ್ ಜಾಟ್ ಅವರನ್ನೊಳಗೊಂಡ ಭಾರತದ ರೋಯಿಂಗ್ ತಂಡ ಒಲಿಂಪಿಕ್ಸ್‌ನ ಲೈಟ್‌ವೇಟ್ ಡಬಲ್ ಸ್ಕಲ್ಸ್ ವಿಭಾಗದಲ್ಲಿ ರಿಪೇಚ್ ಸುತ್ತು ಪ್ರವೇಶಿಸಿದೆ. ಶನಿವಾರ ನಡೆದ ಹೀಟ್ಸ್‌ನಲ್ಲಿ ಐದನೇ ಸ್ಥಾನ ಗಳಿಸಿರುವ ತಂಡವು ಪದಕದ ಭರವಸೆಯನ್ನು ಕೈಬಿಟ್ಟಿಲ್ಲ. ಭಾರತ ಜೋಡಿಯು 6 ನಿಮಿಷ 40.33 ಸೆಕೆಂಡುಗಳಲ್ಲಿ ಗುರಿ ತಲುಪಿತು.

ನೇತ್ರಾ ಕುಮನನ್– ಫೇಸ್‌ಬುಕ್ ಚಿತ್ರ

ಕೋಚ್ ರಾಹುಲ್ ದ್ರಾವಿಡ್ ಜೊತೆ ವರುಣ್ ಚಕ್ರವರ್ತಿ –ಟ್ವಿಟರ್ ಚಿತ್ರ

ಟಿ20 ಸರಣಿ ಶಿಖರ್ ಧವನ್–ದಸುನ್ ಬಳಗಗಳ ಮುಖಾಮುಖಿ ಇಂದು

ವರುಣ್ ಪದಾರ್ಪಣೆ ಸಾಧ್ಯತೆ

ಕೊಲಂಬೊ (ಪಿಟಿಐ): ಸ್ಪಿನ್ನರ್ ವರುಣ್ ಚಕ್ರವರ್ತಿ ಭಾನುವಾರ ಇಲ್ಲಿ ಆರಂಭವಾಗಲಿರುವ ಶ್ರೀಲಂಕಾ ಎದುರಿನ ಟಿ20 ಸರಣಿಯಲ್ಲಿ ಭಾರತ ತಂಡಕ್ಕೆ ಪದಾರ್ಪಣೆ ಮಾಡುವ ಸಾಧ್ಯತೆ ಇದೆ. ಶಿಖರ್ ಧವನ್ ಬಳಗ ಮೂರು ಪಂದ್ಯಗಳ ಸರಣಿಲ್ಲಿ ಗೆಲುವು ಸಾಧಿಸುವ ನೆಚ್ಚಿನ ತಂಡ ಎನಿಸಿದೆ.

ಶುಕ್ರವಾರ ಮುಕ್ತಾಯಗೊಂಡ ಏಕದಿನ ಸರಣಿಯ ಮೊದಲ ಎರಡು ಪಂದ್ಯಗಳಲ್ಲಿ ಭಾರತ ಭರ್ಜರಿ ಜಯ ಗಳಿಸಿತ್ತು. ಕೊನೆಯ ಪಂದ್ಯದಲ್ಲಿ ಪ್ರಯೋಗಗಳನ್ನು ಮಾಡಿ, ಆರು ಮಂದಿ ಹೊಸಬರಿಗೆ ಅವಕಾಶ ನೀಡಿತ್ತು. ಮೂರು ವಿಕೆಟ್‌ಗಳಿಂದ ಸೋಲನುಭವಿಸಿತ್ತು.

ಇಂಡಿಯನ್ ಪ್ರೀಮಿಯರ್ ಲೀಗ್ ಟೂರ್ನಿಯಲ್ಲಿ ಮಿಂಚಿದ ಯುವ ಆಟಗಾರರ ಪೈಕಿ ಕೆಲವರು ರಾಷ್ಟ್ರೀಯ ತಂಡಕ್ಕೆ ಆಯ್ಕೆಯಾಗಿದ್ದು ಟಿ20 ಸರಣಿಯಲ್ಲಿ ಕಣಕ್ಕೆ ಇಳಿಯುವ ಸಾಧ್ಯತೆ ಇದೆ. ಆಫ್ ಬ್ರೇಕ್ ಮತ್ತು ಕೇರಂ ಬಾಲ್ ಎಸೆತಗಳನ್ನು ಹಾಕಬಲ್ಲ ವರುಣ್ ಚಕ್ರವರ್ತಿ ಅವರಿಗೆ ಈ ಪೈಕಿ ಆದ್ಯತೆ ಸಿಗುವುದು ಖಚಿತ. ಗಾಯ ಮತ್ತು ಫಿಟ್‌ನೆಸ್ ಸಮಸ್ಯೆಯಿಂದಾಗಿ ಅವರಿಗೆ ಆಸ್ಟ್ರೇಲಿಯಾ ಹಾಗೂ ಇಂಗ್ಲೆಂಡ್ ಎದುರಿನ ಸರಣಿಗಳಲ್ಲಿ ಆಡಲು ಅವಕಾಶ ಸಿಕ್ಕಿರಲಿಲ್ಲ.

ಶಿಖರ್ ಧವನ್

ದೇವದತ್ತ ಪಡಿಕ್ಕಲ್ ಮತ್ತು ಋತುರಾಜ್ ಗಾಯಕವಾಡ್ ಅವರ ಪೈಕಿ ಒಬ್ಬರಿಗೆ ಅವಕಾಶ ಸಿಗುವ ಸಾಧ್ಯತೆ ಇದೆ. ಪೃಥ್ವಿ ಶಾ ಮತ್ತು ಸೂರ್ಯಕುಮಾರ್ ಯಾದವ್ ಟೆಸ್ಟ್ ಸರಣಿಯಲ್ಲಿ ಆಡಲು ಇಂಗ್ಲೆಂಡ್‌ಗೆ ಪ್ರಯಾಣಿಸಲಿದ್ದಾರೆ. ಆದ್ದರಿಂದ ಅವರಿಗೆ ವಿಶ್ರಾಂತಿ ನೀಡಲು ತಂಡದ ಆಡಳಿತ ಮುಂದಾಗಲಿದೆ.

ಇಶಾನ್ ಕಿಶನ್ ಮತ್ತು ಸಂಜು ಸ್ಯಾಮ್ಸನ್ ಅವರನ್ನು ಆಡುವ 11ರ ಬಳಗದಲ್ಲಿ ಸೇರಿಸಿದರೆ ಮನೀಷ್ ಪಾಂಡೆ ಸ್ಥಾನ ಕಳೆದುಕೊಳ್ಳುವುದು ಖಚಿತ. ಹಾರ್ದಿಕ್ ಪಾಂಡ್ಯ ಮತ್ತು ಕೃಣಾಲ್ ಪಾಂಡ್ಯ ಸಹೋದರರ ಸ್ಥಾನಕ್ಕೆ ಧಕ್ಕೆಯಾಗುವ ಸಾಧ್ಯತೆ ಕಡಿಮೆ.

ತಂಡಗಳು: ಭಾರತ: ಶಿಖರ್ ಧವನ್ (ನಾಯಕ), ಪೃಥ್ವಿ ಶಾ, ದೇವದತ್ತ ಪಡಿಕ್ಕಲ್, ಋತುರಾಜ್ ಗಾಯಕವಾಡ್, ಸೂರ್ಯಕುಮಾರ್ ಯಾದವ್, ಭುವನೇಶ್ವರ್ ಕುಮಾರ್ (ಉಪನಾಯಕ), ಮನೀಷ್ ಪಾಂಡೆ, ಹಾರ್ದಿಕ್ ಪಾಂಡ್ಯ, ನಿತೀಶ್ ರಾಣಾ, ಇಶಾನ್ ಕಿಶನ್ (ವಿಕೆಟ್ ಕೀಪರ್), ಸಂಜು ಸ್ಯಾಮ್ಸನ್ (ವಿಕೆಟ್ ಕೀಪರ್), ಯಜುವೇಂದ್ರ ಚಾಹಲ್, ರಾಹುಲ್ ಚಾಹರ್, ಕೃಷ್ಣಪ್ಪ ಗೌತಮ್, ಕೃಣಾಲ್ ಪಾಂಡ್ಯ, ಕುಲದೀಪ್ ಯಾದವ್, ವರುಣ್ ಚಕ್ರವರ್ತಿ, ದೀಪಕ್ ಚಾಹರ್, ನವದೀಪ್ ಸೈನಿ, ಚೇತನ್ ಸಕಾರಿಯ.

ಶ್ರೀಲಂಕಾ: ದಸುನ್ ಶನಕ (ನಾಯಕ), ಧನಂಜಯ ಡಿ'ಸಿಲ್ವ, ಆವಿಷ್ಕ ಫರ್ನಾಂಡೊ, ಭಾನುಕ ರಾಜಪಕ್ಸ, ಪಾಥುಮ್ ನಿಸಾಂಕ, ಚರಿತ್ ಅಸಲಂಕ, ವನಿಂದು ಹಸರಂಗ, ಅಶೇನ್ ಬಂಡಾರ, ಮಿನೋದ್ ಭಾನುಕ, ಲಾಹಿರು ಉದಾರ, ರಮೇಶ್ ಮೆಂಡಿಸ್, ಚಮಿಕ ಕರುಣರತ್ನೆ, ಬಿನೂರ ಫರ್ನಾಂಡೊ, ದುಷ್ಮಂತ ಚಮೀರ, ಲಕ್ಷನ್ ಸಂಡಗನ್, ಅಕಿಲ ಧನಂಜಯ, ಶಿರಾನ್ ಫರ್ನಾಂಡೊ, ಧನಂಜಯ ಲಕ್ಷನ್, ಇಶಾನ್ ಜಯರತ್ನೆ, ಪ್ರವೀಣ್ ಜಯವಿಕ್ರಮ, ಅಸಿತ ಫರ್ನಾಂಡೊ, ಕಾಸುನ್ ರಜಿತ, ಲಾಹಿರು ಕುಮಾರ, ಇಸುರು ಉಡಾನ.

ಪಂದ್ಯ ಆರಂಭ: ರಾತ್ರಿ 8.00
ನೇರ ಪ್ರಸಾರ: ಸೋನಿ ನೆಟ್‌ವರ್ಕ್

'ದ ಹಂಡ್ರೆಡ್': ಜೆಮಿಮಾ 92

ಲೀಡ್ಸ್ (ಪಿಟಿಐ): ಸ್ಫೋಟಕ ಶೈಲಿಯ ಆಟವಾಡಿದ ಭಾರತ ಕ್ರಿಕೆಟ್ ತಂಡದ ಜೆಮಿಮಾ ರಾಡ್ರಿಗಸ್, ನಾರ್ತರ್ನ್ ಸೂಪರ್ ಚಾರ್ಜರ್ಸ್‌ಗೆ ಜಯ ತಂದುಕೊಟ್ಟರು.

ಅವರು ಔಟಾಗದೆ ಗಳಿಸಿದ 92 ರನ್‌ಗಳಿಂದ 'ದ ಹಂಡ್ರೆಡ್' ಟೂರ್ನಿಯಲ್ಲಿ ಸೂಪರ್ ಚಾರ್ಜರ್ಸ್ ತಂಡವು ವೆಲ್ಶ್ ಫೈರ್ ತಂಡದ ಎದುರು ಆರು ವಿಕೆಟ್‌ಗಳ ಜಯ ಸಾಧಿಸಿತು. 43 ಎಸೆತಗಳನ್ನು ಎದುರಿಸಿದ ಜೆಮಿಮಾ, ಅಮೋಘ 17 ಬೌಂಡರಿ ಮತ್ತು ಒಂದು ಸಿಕ್ಸರ್ ಸಿಡಿಸಿದರು.

ಜೆಮಿಮಾ– ಪಿಟಿಐ ಚಿತ್ರ

ವೆಲ್ಶ್ ಫೈರ್ 100 ಎಸೆತಗಳಲ್ಲಿ 8 ವಿಕೆಟ್ ಕಳೆದುಕೊಂಡು 130 ರನ್ ಗಳಿಸಿತ್ತು. ಸೂಪರ್ ಚಾರ್ಜರ್ಸ್ 85 ಎಸೆತಗಳಲ್ಲಿ 4 ವಿಕೆಟ್ ಕಳೆದುಕೊಂಡು ಗೆದ್ದಿತು.

ಕೆಎಸ್‌ಸಿಎ ಕ್ರಿಕೆಟ್: ನಾಗಭರತ್, ಆದಿತ್ಯ ಶತಕ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು
- ಐದು ವಿಕೆಟ್ ಗಳಿಸಿದ ಸ್ಟಾಲಿನ್ ಹೂವರ್
- ಸೋಷಿಯಲ್ ಕ್ರಿಕೆಟರ್ಸ್‌ಗೆ ಗೆಲುವು

ಬೆಂಗಳೂರು: ನಾಗಭರತ್ (120, 121 ಎಸೆತ, 7 ಬೌಂಡರಿ, 5 ಸಿಕ್ಸರ್) ಅವರು ಗಳಿಸಿದ ಭರ್ಜರಿ ಶತಕದ ನೆರವಿನಿಂದ ಸ್ವಸ್ತಿಕ್ ಯೂನಿಯನ್ ಕ್ರಿಕೆಟ್ ಕ್ಲಬ್(2) ತಂಡವು ಜಯ ಗಳಿಸಿತು. ಮಿರ್ಜಾ ಇಸ್ಮಾಯಿಲ್ ಟ್ರೋಫಿಗಾಗಿ ನಡೆಯುತ್ತಿರುವ ಕೆಎಸ್‌ಸಿಎ ಒಂದನೇ ಗುಂಪು ಎರಡನೇ ಡಿವಿಷನ್ ಕ್ರಿಕೆಟ್ ಲೀಗ್ ಪಂದ್ಯದಲ್ಲಿ ಶನಿವಾರ ಉತ್ತಮ ರನ್‌ರೇಟ್ ಆಧಾರದಲ್ಲಿ ಸ್ವಸ್ತಿಕ್ ಯೂನಿಯನ್ ಕ್ರಿಕೆಟ್ ಕ್ಲಬ್ (1) ತಂಡವನ್ನು ಪರಾಭವಗೊಳಿಸಿತು. ಮಳೆಯಿಂದಾಗಿ ಪಂದ್ಯವನ್ನು ಪೂರ್ಣಗೊಳಿಸಲಾಗಲಿಲ್ಲ.

ಮತ್ತೊಂದು ಪಂದ್ಯದಲ್ಲಿ ಆದಿತ್ಯ ಸೋಮಣ್ಣ (ಔಟಾಗದೆ 106, 99 ಎಸೆತ, 5 ಬೌಂಡರಿ, 7 ಸಿಕ್ಸರ್) ಅವರು ಗಳಿಸಿದ ಶತಕವು ಮೌಂಟ್ ಜಾಯ್ ಕ್ರಿಕೆಟ್ ಕ್ಲಬ್ ತಂಡಕ್ಕೆ ಚಿಂತಾಮಣಿ ಸ್ಪೋರ್ಟ್ಸ್ ಅಸೋಸಿಯೇಷನ್ ಎದುರು 145 ರನ್‌ಗಳ ಜಯ ತಂದುಕೊಟ್ಟಿತು.

ಇನ್ನೊಂದು ಪಂದ್ಯದಲ್ಲಿ ಸ್ಟಾಲಿನ್ ಹೂವರ್ ಗಳಿಸಿದ ಐದು ವಿಕೆಟ್‌ಗಳ ಬಲದಿಂದ ಫ್ರೆಂಡ್ಸ್ ಯೂನಿಯನ್ (1) ತಂಡವು ಮಾಡರ್ನ್ ಕ್ರಿಕೆಟ್ ಕ್ಲಬ್ ಎದುರು ಜಯ ಸಾಧಿಸಿತು.

ಸಂಕ್ಷಿಪ್ತ ಸ್ಕೋರು: ಸ್ವಸ್ತಿಕ್ ಯೂನಿಯನ್ ಸಿಸಿ (2): 50 ಓವರ್‌ಗಳಲ್ಲಿ 9 ವಿಕೆಟ್‌ಗೆ 255 (ನಾಗ ಭರತ್ 120, ಚಿನ್ಮಯ್ ಎನ್.ಎ. 68; ಕೆ.ಎಸ್.ದೇವಯ್ಯ 25ಕ್ಕೆ2, ನವೀನ್ ಎಂ.ಜಿ. 58ಕ್ಕೆ 4, ಶ್ರೇಯಸ್ ಗೋಪಾಲ್ 43ಕ್ಕೆ 2). **ಸ್ವಸ್ತಿಕ್ ಯೂನಿಯನ್ ಸಿಸಿ (1):** 29.1 ಓವರ್‌ಗಳಲ್ಲಿ 116 (ಸಮರ್ಥ್ ಆರ್. 25, ರಕ್ಷಿತ್ ಎಸ್. ಔಟಾಗದೆ 41, ರಾಜ್ ಅತುಲ್ ಗಾಲ 34ಕ್ಕೆ 2, ಕಾರ್ತಿಕ್ ಸಿ.ಎ. 26ಕ್ಕೆ 3). ಫಲಿತಾಂಶ: ಸ್ವಸ್ತಿಕ್ ಯೂನಿಯನ್ ಸಿಸಿಗೆ (2) ಉತ್ತಮ ರನ್‌ರೇಟ್ ಆಧಾರದಲ್ಲಿ ಗೆಲುವು.

ಮೌಂಟ್ ಜಾಯ್ ಕ್ರಿಕೆಟ್ ಕ್ಲಬ್: 50 ಓವರ್‌ಗಳಲ್ಲಿ 5 ವಿಕೆಟ್‌ಗೆ 279 (ಶರತ್ ಬೇಲೂರು ರವಿ 37, ಅರುಣ್ ಮೊನ್ನಪ್ಪ ಪಿ.ಸಿ. 26, ಭರತನ್ ಧುರಿ 36, ಆದಿತ್ಯ ಸೋಮಣ್ಣ ಔಟಾಗದೆ 106;ಅಭಿಷೇಕ್ ಪ್ರಭಾಕರ್ 26ಕ್ಕೆ 2). **ಚಿಂತಾಮಣಿ ಸ್ಪೋರ್ಟ್ಸ್ ಅಸೋಸಿಯೇಷನ್ (ಚಿಂತಾಮಣಿ):** 32 ಓವರ್‌ಗಳಲ್ಲಿ 134 (ಅಬ್ದುಲ್ ಮಜೀದ್ 42; ಅಜಯ್ ಕೃಷ್ಣನ್ 27ಕ್ಕೆ 3, ಶೀತಲ್ ಕುಮಾರ್ 23ಕ್ಕೆ 4). ಫಲಿತಾಂಶ: ಮೌಂಟ್ ಜಾಯ್ ಕ್ರಿಕೆಟ್ ಕ್ಲಬ್‌ಗೆ 145 ರನ್‌ಗಳ ಜಯ.

ಮಾಡರ್ನ್ ಕ್ರಿಕೆಟ್ ಕ್ಲಬ್: 48.2 ಓವರ್‌ಗಳಲ್ಲಿ 184 (ಅನೀಶ್ವರ್ ಗೌತಮ್ 21, ಪೃಥ್ವಿ ಸದಾನಂದ 86; ಸ್ಟಾಲಿನ್ ಹೂವರ್ 32ಕ್ಕೆ 5, ರಿಷಿ ಬೋಪಣ್ಣ ಎಸ್.ಎ. 35ಕ್ಕೆ 3). **ಫ್ರೆಂಡ್ಸ್ ಯೂನಿಯನ್ ಕ್ರಿಕೆಟ್ ಕ್ಲಬ್ (1):** 33 ಓವರ್‌ಗಳಲ್ಲಿ 6 ವಿಕೆಟ್‌ಗೆ 172 (ವಿನಯ್ ಎನ್.ಸಾಗರ್ 44, ಶಶೀಂದ್ರ ಕೆ. 40, ಮಿಥುನ್ ಭಟ್ ಔಟಾಗದೆ 37, ಶಶಾಂಕ್ ಕೆ. 49ಕ್ಕೆ 2, ಅಶ್ವಿನಿ ಕುಮಾರ್ 39ಕ್ಕೆ 2). ಫಲಿತಾಂಶ: ಮಳೆಯಿಂದಾಗಿ ಪೂರ್ಣಗೊಳ್ಳದ ಪಂದ್ಯ, ಉತ್ತಮ ರನ್‌ರೇಟ್ ಆಧಾರದಲ್ಲಿ ಫ್ರೆಂಡ್ಸ್ ಯೂನಿಯನ್ ಸಿಸಿಗೆ (1) ಗೆಲುವು.

ಸೋಷಿಯಲ್ ಕ್ರಿಕೆಟರ್ಸ್: 50 ಓವರ್‌ಗಳಲ್ಲಿ 9 ವಿಕೆಟ್‌ಗೆ 338 (ಆದರ್ಶ್ ಪ್ರಜ್ವಲ್ ಎಸ್. 50, ಅನೀಶ್ ಕೆ.ವಿ. 65, ಆಕರ್ಷ್ ಬಲ್ಲಾಳ್ 32, ವೈಶಾಖ್ ವಿ. 52, ಪೃಥ್ವಿರಾಜ್ 80; ಗೌತಮ್ ಸಾಗರ್ 54ಕ್ಕೆ2, ಕೆ.ಆದಿತ್ಯನ್ 54ಕ್ಕೆ 2, ಮೆಕ್‌ನೀಲ್ ನೊರೊನ್ಹಾ 31ಕ್ಕೆ2). **ಕೆಂಬ್ರಿಡ್ಜ್ ಕ್ರಿಕೆಟ್ ಕ್ಲಬ್:** 31.1 ಓವರ್‌ಗಳಲ್ಲಿ 4 ವಿಕೆಟ್‌ಗೆ 173 (ಮೆಕ್‌ನೀಲ್ ಹ್ಯಾಡ್ಲಿ 30, ಜಸ್ವಂತ್ ಆಚಾರ್ಯ 69, ಶುಭಾಂಗ್ ಹಗ್ಡೆ 32; ಪೃಥ್ವಿರಾಜ್ 18ಕ್ಕೆ 2). ಫಲಿತಾಂಶ: ಮಳೆಯಿಂದಾಗಿ ಪೂರ್ಣಗೊಳ್ಳದ ಪಂದ್ಯ, ಉತ್ತಮ ರನ್‌ರೇಟ್ ಆಧಾರದಲ್ಲಿ ಸೋಷಿಯಲ್ ಕ್ರಿಕೆಟರ್ಸ್‌ಗೆ ಜಯ.

ಆಟಗಾರರು, ತಾಂತ್ರಿಕ ಸಿಬ್ಬಂದಿಗೆ ಎಐಎಫ್‌ಎಫ್‌ನಿಂದ ನೆರವು

ನವದೆಹಲಿ (ಪಿಟಿಐ): ರಾಷ್ಟ್ರೀಯ ಫುಟ್‌ಬಾಲ್ ತಂಡವನ್ನು ಪ್ರತಿನಿಧಿಸಿದ ಆಟಗಾರರು, ತಾಂತ್ರಿಕ ಸಿಬ್ಬಂದಿಗೆ ವೈದ್ಯಕೀಯ ನೆರವು ನೀಡಲು ಅಖಿಲ ಭಾರತ ಫುಟ್‌ಬಾಲ್ ಫೆಡರೇಷನ್ (ಎಐಎಫ್‌ಎಫ್) ಮುಂದಾಗಿದೆ. ಈ ಕಾರಣಕ್ಕಾಗಿ ನೀತಿಯೊಂದನ್ನು ರೂಪಿಸಲು ಫೆಡರೇಷನ್ ಯೋಜಿಸಿದೆ.

ಆಟಗಾರರು ಅಥವಾ ಸಿಬ್ಬಂದಿ ನಾನಾ ಕಾರಣಗಳಿಂದಾಗಿ ಆಸ್ಪತ್ರೆಗೆ ದಾಖಲಾದರೆ ಅಥವಾ ಒಂದು ವೇಳೆ ಸಾವು ಸಂಭವಿಸಿದಲ್ಲಿ ಅಂತಹವರ ಕುಟುಂಬಗಳಿಗೆ ಅನುದಾನ ನೀಡುವುದಕ್ಕೆ ಫೆಡರೇಷನ್ ಚಿಂತನೆ ನಡೆಸಿದೆ. ಮುಖ್ಯ ಕೋಚ್, ಸಹಾಯಕ ಕೋಚ್, ಗೋಲ್‌ಕೀಪಿಂಗ್ ತರಬೇತುದಾರ, ಫಿಫಾ ರೆಫರಿಗಳು ಮತ್ತು ಸಹಾಯಕ ರೆಫರಿಗಳು ಈ ಪರಿಧಿಗೆ ಸೇರಲಿದ್ದಾರೆ.

ಹಣಕಾಸಿನ ನೆರವು ಪಡೆಯಲು ಅರ್ಜಿ ಸಲ್ಲಿಸಲು ಎಐಎಫ್‌ಎಫ್ ಕೆಲವು ಮಾರ್ಗಸೂಚಿಗಳನ್ನು ರೂಪಿಸಿದೆ. 1950ರಿಂದ ದೇಶವನ್ನು ಪ್ರತಿನಿಧಿಸಿದ ಎಲ್ಲಾ ಆಟಗಾರರು ಮತ್ತು ತಾಂತ್ರಿಕ ಸಿಬ್ಬಂದಿ ಅರ್ಜಿ ಸಲ್ಲಿಸಲು ಅರ್ಹರಾಗಿದ್ದಾರೆ. ಪ್ರತಿ ಅರ್ಜಿಗಳನ್ನು ನಿಗದಿಪಡಿಸಿದ ಮಾರ್ಗಸೂಚಿಗಳ ಆಧಾರದ ಮೇಲೆಯೇ ಪರಿಶೀಲನೆ ಮಾಡಲಾಗುತ್ತದೆ. ಈ ಕುರಿತು ಎಐಎಫ್‌ಎಫ್ ವೆಬ್‌ಸೈಟ್‌ನಲ್ಲಿ ಮಾಹಿತಿ ನೀಡಲಾಗಿದೆ.

ಕುಶಲ್ ದಾಸ್

'ದೇಶಕ್ಕೆ ಹೆಮ್ಮೆ ತಂದ ಆಟಗಾರರು ಹಾಗೂ ಅವರ ಕೊಡುಗೆಯನ್ನು ನಾವು ಗೌರವಿಸುತ್ತೇವೆ. ಫೆಡರೇಷನ್ ಈ ಹಿಂದೆಯೂ ಆಟಗಾರರು ಹಾಗೂ ಸಿಬ್ಬಂದಿಗೆ ನೆರವು ನೀಡಿದೆ. ಆದರೆ ಅದನ್ನು ಈಗ ಅಧಿಕೃತಗೊಳಿಸುತ್ತಿದ್ದೇವೆ' ಎಂದು ಎಐಎಫ್‌ಎಫ್ ಪ್ರಧಾನ ಕಾರ್ಯದರ್ಶಿ ಕುಶಲ್ ದಾಸ್ ಹೇಳಿದ್ದಾರೆ.